
# ಇತಿಹಾಸ ಮತ್ತು ನಾಗರಿಕಶಾಸ್ತ್ರ

## ಏಳನೆಯ ಇಯತ್ತೆ



# ಭಾರತದ ಸಂವಿಧಾನ

### ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ - 2116/(ಪ್ರ.ಕ್ರ. 43/16) ಎಸ್‌ಡಿ-4 ದಿನಾಂಕ 25.4.2016 ಅನ್ವಯ ಸ್ಥಾಪಿಸಲಾದ
ಸಮನ್ವಯ ಸಮಿತಿಯು ದಿ. 3.3.2017ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ನಿರ್ಧಾರಿತಗೊಳಿಸಲು ಮಾನ್ಯತೆ ಕೊಡಲಾಗಿದೆ.

# ಇತಿಹಾಸ ಮತ್ತು ನಾಗರಿಕಶಾಸ್ತ್ರ

## ಏಳನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

8VVQJ4

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ: 2017
ಪುನರ್ಮುದ್ರಣ:
ಅಕ್ಟೋಬರ್ 2021

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ 411004.
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಕಡೆಗೆ ಈ ಪುಸ್ತಕದ ಎಲ್ಲ ಹಕ್ಕುಗಳು ಇರುತ್ತವೆ. ಈ ಪುಸ್ತಕದಲ್ಲಿಯ ಯಾವುದೇ ಭಾಗವನ್ನು ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಉದ್ಧೃತಗೊಳಿಸಬಾರದು.

**ಇತಿಹಾಸ ವಿಷಯ ಸಮಿತಿ:**

ಡಾ. ಸದಾನಂದ ಮೋರೆ, ಅಧ್ಯಕ್ಷ
ಶ್ರೀ. ಮೋಹನ ಶೇಟೆ, ಸದಸ್ಯ
ಶ್ರೀ. ಪಾಂಡುರಂಗ ಬಲಕವಡೆ, ಸದಸ್ಯ
ಡಾ. ಅಭಿರಾಮ ದೀಕ್ಷಿತ, ಸದಸ್ಯ
ಶ್ರೀ. ಬಾಪುಸಾಹೇಬ ಸಿಂದೆ, ಸದಸ್ಯ
ಶ್ರೀ. ಬಾಳಕೃಷ್ಣ ಚೋಪಡೆ, ಸದಸ್ಯ
ಶ್ರೀ. ಪ್ರಶಾಂತ ಸರೂಡಕರ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ,-ಸಚಿವ

**ನಾಗರಿಕ ಶಾಸ್ತ್ರ ವಿಷಯ ಸಮಿತಿ:**

ಡಾ. ಶ್ರೀಕಾಂತ ಪರಾಂಜಪೆ, ಅಧ್ಯಕ್ಷ
ಪ್ರಾ. ಸಾಧನಾ ಕುಲಕರ್ಣಿ, ಸದಸ್ಯ
ಡಾ. ಮೋಹನ ಕಾಶೀಕರ, ಸದಸ್ಯ
ಶ್ರೀ. ವೈಜನಾಥ ಕಾಳೆ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ-ಸಚಿವ

**ಇತಿಹಾಸ ಮತ್ತು ನಾಗರಿಕಶಾಸ್ತ್ರ ಅಭ್ಯಾಸಗಟ :**

ಶ್ರೀ. ರಾಹುಲ ಪ್ರಭು
ಶ್ರೀ ಸಂಜಯ ವಜ್ರೇಕರ
ಶ್ರೀ. ಸುಭಾಷ ರಾಠೋಡ
ಸೌ. ಸುನೀತಾ ದಳವಿ
ಡಾ. ಶಿವಾನಿ ಲಿಮಯೆ
ಶ್ರೀ. ಭಾವುಸಾಹೇಬ ಉಮಾಟೆ
ಡಾ. ನಾಗನಾಥ ಯೆವಲೆ
ಶ್ರೀ. ಸದಾನಂದ ಡೊಂಗರೆ
ಶ್ರೀ. ರವೀಂದ್ರ ಪಾಟೀಲ
ಶ್ರೀ. ವಿಕ್ರಮ ಅಡಸೂಳ
ಸೌ. ರೂಪಾಲಿ ಗಿರಕರ
ಡಾ. ಮೀನಾಕ್ಷಿ ಉಪಾಧ್ಯಾಯ
ಸೌ. ಕಾಂಚನ ಕೇತಕರ
ಸೌ. ಶಿವಕನ್ಯಾ ಪಟವೆ
ಡಾ. ಅನಿಲ ಸಿಂಗಾರೆ
ಡಾ. ರಾವಸಾಹೇಬ ಶೆಳಕೆ
ಶ್ರೀ. ಮರೀಬಾ ಚಂದನಶಿವೆ
ಶ್ರೀ. ಸಂತೋಷ ಶಿಂದೆ
ಡಾ. ಸತೀಶ ಚಾಪಲೆ
ಶ್ರೀ. ವಿಶಾಲ ಕುಲಕರ್ಣಿ
ಶ್ರೀ. ಶೇಖರ ಪಾಟೀಲ
ಶ್ರೀ. ಸಂಜಯ ಮೆಹತಾ
ಶ್ರೀ. ರಾಮದಾಸ ಠಾಕರ
ಡಾ. ಅಜಿತ ಆಪಟೆ
ಡಾ. ಮೋಹನ ಖಡಸೆ
ಸೌ. ಶಿವಕನ್ಯಾ ಕದೇರಕರ
ಶ್ರಿ. ಗೌತಮ ಡಾಂಗೆ
ಡಾ. ವೆಂಕಟೇಶ ಖರಾತ
ಶ್ರಿ. ರವಿಂದ್ರ ಜಿಂದೆ
ಡಾ. ಪ್ರಭಾಕರ ಲೊಂಡೆ

**ನಿಮಂತ್ರಿತ**

ಡಾ. ಸೋಮನಾಥ ರೋಡೆ
ಡಾ. ಗಣೇಶ ರಾವೂತ

**ಮುಖಪುಟ ಮತ್ತು ಅಲಂಕಾರ :**

ಶ್ರೀ. ದೇವದತ್ತ ಪ್ರಕಾಶ ಬಲಕವಡೆ

**ಕೋಟೆಗಳ ಛಾಯಾಚಿತ್ರಗಳು**– ಶ್ರೀ ಪ್ರವೀಣ ಭೋಸಲೆ

**ನಕಾಶೆಕಾರ :**

ಶ್ರೀ. ರವಿಕಿರಣ ಜಾಧವ

**ಅಕ್ಷರಜೋಡಣೆ**

ಕ್ವಿಂಟಕ್ಸ್, ಮುಂಬಯಿ – 400 001

**ಕಾಗದ**

70 ಜಿ.ಎಸ್.ಎಮ್. ಕ್ರಿಮವೋವ್ಹ

**ಮುದ್ರಣಾದೇಶ**

N/PB/2022-23/Qty.- 2,000

**ಮುದ್ರಕ**

M/s. S Graphix (India) Pvt. Ltd., Thane

**ಸಂಯೋಜಕರು:**

ಡಾ. ಸದಾನಂದ ಎಂ. ಬಿಳ್ಳೂರ
ವಿಶೇಷಾಧಿಕಾರಿ, ಕನ್ನಡ
ಆರ್.ಎಮ್. ಗಣಾಚಾರಿ
ವಿಷಯ ಸಹಾಯಕ, ಕನ್ನಡ ಪಾಠ್ಯಪುಸ್ತಕ ಮಂಡಳ, ಪುಣೆ.

ಭಾಷಾಂತರ: ಎನ್.ಎಮ್. ಕುಲಕರ್ಣಿ
ಸಮೀಕ್ಷೆ: ಆರ್.ಎಸ್. ಪಾಟೀಲ

**ನಿರ್ಮಿತಿ :**

ಶ್ರೀ. ಸಚ್ಚಿತಾನಂದ ಆಫಳೆ,
ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ಪ್ರಭಾಕರ ಪರಬ– ನಿರ್ಮಿತಿ ಅಧಿಕಾರಿ
ಶ್ರೀ. ಶಶಾಂಕ ಕಣಿಕದಳೆ– ನಿರ್ಮಿತಿ ಸಹಾಯಕ

**ಪ್ರಕಾಶಕ :**

**ಶ್ರೀ. ವಿವೇಕ ಉತ್ತಮ ಗೋಸಾವಿ,** ನಿಯಂತ್ರಕ,
ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ-25.

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ

ಮತ್ತು ಉಪಾಸನಾ **ಸ್ವಾತಂತ್ರ್ಯ;**

ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು

ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು

ಆಶ್ವಾಸನೆ ನೀಡುವ **ಬಂಧುತ್ವವನ್ನು**

ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**

ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ

**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

ವಿದ್ಯಾರ್ಥಿ ಗಳೆಯರೆ,

ಮೂರನೆಯ ಇಯತ್ತೆಯಿಂದ ಐದನೆಯ ಇಯತ್ತೆಯವರೆಗೆ ಇತಿಹಾಸ ಹಾಗೂ ನಾಗರಿಕಶಾಸ್ತ್ರ ಈ ವಿಷಯದ ಅಧ್ಯಯನವನ್ನು ನೀವು 'ಪರಿಸರ ಅಭ್ಯಾಸ ಭಾಗ-1' ಮತ್ತು 'ಪರಿಸರ ಅಭ್ಯಾಸ ಭಾಗ-2' ರಲ್ಲಿ ಮಾಡಿದ್ದೀರಿ. ಆರನೆಯ ಇಯತ್ತೆಯಿಂದ ಅಭ್ಯಾಸಕ್ರಮದಲ್ಲಿ ಇತಿಹಾಸ ಮತ್ತು ನಾಗರಿಕ ಶಾಸ್ತ್ರ ಇದು ಸ್ವತಂತ್ರ ವಿಷಯವಿದೆ. ಆರನೆಯ ಇಯತ್ತೆಯಿಂದ ಈ ಎರಡೂ ವಿಷಯಗಳನ್ನು ಒಂದೇ ಪಠ್ಯಪುಸ್ತಕದಲ್ಲಿ ಸಮಾವೇಶ ಮಾಡಲಾಗಿದೆ. ಏಳನೆಯ ಇಯತ್ತೆಯ ಪಠ್ಯಪುಸ್ತಕವನ್ನು ತಮ್ಮ ಕೈಯಲ್ಲಿಡಲು ನಮಗೆ ಆನಂದವೆನಿಸುತ್ತದೆ.

ಈ ವಿಷಯ ಸರಿಯಾಗಿ ತಿಳಿಯಲು, ಮನರಂಜನೆವಾಗಲು, ನಮ್ಮ ಪೂರ್ವಜರು ಮಾಡಿದ ಕಾರ್ಯಗಳ ಪ್ರೇರಣೆ ದೊರೆಯಲು ಈ ಉದ್ದೇಶದಿಂದ ಪಠ್ಯಪುಸ್ತಕದ ರಚನೆಯನ್ನು ಮಾಡಲಾಗಿದೆ. ಈ ಪಠ್ಯಪುಸ್ತಕದ ಅಭ್ಯಾಸದಿಂದ ಜ್ಞಾನದೊಂದಿಗೆ ನಿಮಗೆ ಆನಂದ ದೊರೆಯುತ್ತದೆಂಬುದು ನಮಗನಿಸುತ್ತದೆ. ಅದಕ್ಕಾಗಿ ಪಠ್ಯಪುಸ್ತಕದಲ್ಲಿ ಬಣ್ಣದ ಚಿತ್ರಗಳು, ನಕಾಶೆಗಳನ್ನು ಕೊಡಲಾಗಿದೆ. ಪಠ್ಯಪುಸ್ತಕದಲ್ಲಿಯ ಪ್ರತಿಯೊಂದು ಪಾಠವನ್ನು ಲಕ್ಷ್ಯಪೂರ್ವಕವಾಗಿ ಅಭ್ಯಾಸಮಾಡಿರಿ. ಅದರಲ್ಲಿಯ ಯಾವ ಭಾಗ ನಿಮಗೆ ತಿಳಿಯುವುದಿಲ್ಲವೋ ಆ ಭಾಗವನ್ನು ನೀವು ಶಿಕ್ಷಕ, ಪಾಲಕ ಇವರಿಂದ ತಿಳಿದುಕೊಳ್ಳಿರಿ. ಕೊಟ್ಟ ಚೌಕಟ್ಟಿನಲ್ಲಿಯ ವಿಷಯವು ನಿಮ್ಮ ಜ್ಞಾನದಲ್ಲಿ ವೃದ್ಧಿಯಾಗುವುದು. ಇತಿಹಾಸ ಈ ವಿಷಯವು ರಂಜಕವಾಗಿದ್ದು ಅದು ನಮ್ಮ ಮಿತ್ರವಾಗಿದೆ, ಹೀಗೆ ಈ ಪುಸ್ತಕ ತಿಳಿದುಕೊಂಡು ಅಭ್ಯಾಸ ಮಾಡಿದರೆ ನಿಮಗೆ ಅದರ ರುಚಿಯು ನಿಶ್ಚಿತವಾಗಿ ಹತ್ತುತ್ತದೆ.

ಇತಿಹಾಸದ ಭಾಗದಲ್ಲಿ 'ಮಧ್ಯಯುಗದ ಭಾರತದ ಇತಿಹಾಸ' ಕೊಡಲಾಗಿದೆ. ಮಧ್ಯಯುಗದ ಭಾರತದ ಆಗು-ಹೋಗುಗಳಲ್ಲಿ ಮಹಾರಾಷ್ಟ್ರದ ಸ್ಥಾನ ಮತ್ತು ಭೂಮಿಕೆ ಕೇಂದ್ರದಲ್ಲಿಟ್ಟುಕೊಂಡು ಪಠ್ಯಪುಸ್ತಕದ ರಚನೆಯನ್ನು ಮಾಡಲಾಗಿದೆ. ಅದರಲ್ಲಿಯ ನಿಮಗೆ ನಾವು ಭಾರತದ ನಾಗರಿಕರಾಗಿರುವ ಅರಿವಿನೊಂದಿಗೆ ಕರ್ತವ್ಯದ ಅರಿವು ಆಗುವುದು ಅಪೇಕ್ಷಿತವಾಗಿದೆ.

ನಾಗರಿಕ ಶಾಸ್ತ್ರದ ಭಾಗದಲ್ಲಿ ಭಾರತೀಯ ಸಂವಿಧಾನದ ಪರಿಚಯ ಮಾಡಿ ಕೊಡಲಾಗಿದೆ. ಭಾರತದ ಸಂವಿಧಾನ ನಿರ್ಮಿತಿಯ ಪಾರ್ಶ್ವಭೂಮಿ, ಸಂವಿಧಾನದ ಉದ್ದೇಶಗಳು, ಸಂವಿಧಾನದಲ್ಲಿಯ ಮೂಲಭೂತ ಹಕ್ಕು ಮತ್ತು ಮಾರ್ಗದರ್ಶಕ ತತ್ವಗಳ ಈ ಆಶಯವನ್ನು ಮಂಡಿಸಲಾಗಿದೆ. ನಮ್ಮ ದೇಶದಲ್ಲಿಯ ಆಡಳಿತದ ಸಂವಿಧಾನ, ಕಾಯ್ದೆ ಮತ್ತು ನಿಯಮ ಇವುಗಳಿಗನುಸಾರ ನಡೆಯುತ್ತದೆ. ಇದನ್ನು ಸರಳ ಭಾಷೆಯಲ್ಲಿ ಹೇಳಲಾಗಿದೆ. ನಿಮ್ಮ ಅಧ್ಯಯನ ಹೆಚ್ಚು ಹೆಚ್ಚು ಕೃತಿ ಪ್ರಧಾನವಾಗುವ ಸಲುವಾಗಿ ಉಪಕ್ರಮಗಳನ್ನು ಕೊಡಲಾಗಿದೆ. ನಾವು ದೇಶದ ಭಾವಿ ನಾಗರಿಕರಾಗಿದ್ದು, ದೇಶದ ಭವಿಷ್ಯವನ್ನು ನಿರ್ಮಿಸುವರಿದ್ದೇವೆ. ಈ ಮನವರಿಕೆ ಮಾಡಿಕೊಂಡು ನೀವು ಮುಂದಿನ ತರಗತಿಯಲ್ಲಿ ಪ್ರವೇಶ ಮಾಡಬೇಕಾಗುತ್ತದೆ.

ಇತಿಹಾಸದ ಅಭ್ಯಾಸದಿಂದ ನಮ್ಮ ಪೂರ್ವಜರ ಕಾರ್ಯಕ್ಷಮತೆಯ ಜ್ಞಾನವಾಗುತ್ತದೆ. ಅದಕ್ಕೆ ನಾಗರಿಕ ಶಾಸ್ತ್ರದ ಅಭ್ಯಾಸದ ಜೊತೆ ದೊರೆಯುವುದೆ ಅಂದರೆ ರಾಷ್ಟ್ರದ ಮತ್ತು ಸಮಾಜದ ಭವಿಷ್ಯವನ್ನು ನಿರ್ಮಿಸುವ ದಿಶೆಯಿಂದ ನಮ್ಮ ಕರ್ತವ್ಯ ಏನಿದೆ ಇದನ್ನು ತಿಳಿಯುತ್ತದೆ. ಅದರ ಸಲುವಾಗಿ ಈ ಸಂಯುಕ್ತ ಅಭ್ಯಾಸದ ಉಪಕ್ರಮವಾಗಿದೆ.



(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

ಪುಣೆ
ದಿನಾಂಕ: 28 ಮಾರ್ಚ 2017

# ಶಿಕ್ಷಕರಿಗಾಗಿ

ಆರನೆಯ ಇಯತ್ತೆಯ ಸಲುವಾಗಿ ಇತಿಹಾಸ ಮತ್ತು ನಾಗರಿಕಶಾಸ್ತ್ರ ಈ ವಿಷಯಗಳ ಪಠ್ಯಪುಸ್ತಕದಲ್ಲಿ ನಾವು ಕಲಿಸಿದ್ದೇವೆ. ಪ್ರಸ್ತುತ ಏಳನೆಯ ಇಯತ್ತೆಯ ಪಠ್ಯಪುಸ್ತಕದಲ್ಲಿ ಮಧ್ಯಯುಗೀನ ಭಾರತದ ಇತಿಹಾಸದ ರಚನೆಯನ್ನು ಮಾಡಲಾಗಿದೆ.

ಇತಿಹಾಸದ ಈ ರಚನೆ ಅಂದರೆ ಅದು ಮಹಾರಾಷ್ಟ್ರ ಕೇಂದ್ರವಾಗಿದೆ. ನಮ್ಮ ಪ್ರಾಂತ ಭಾರತೀಯ ಸಂಘ ರಾಜ್ಯದ ಘಟಕವಿದ್ದರೂ ಇತಿಹಾಸವನ್ನು ತಿಳಿದುಕೊಳ್ಳುವಾಗ ಮಹಾರಾಷ್ಟ್ರದ ದೃಷ್ಟಿಯಿಂದ ಅಂದರೇನೆ ಭಾರತದ ಇತಿಹಾಸ ಮಹಾರಾಷ್ಟ್ರದ ಸ್ಥಾನ, ಪಾತ್ರ ಮತ್ತು ಯೋಗದಾನ ಮುಂದಿಟ್ಟು ತಿಳಿದುಕೊಳ್ಳುವುದಾದರೆ ವಿದ್ಯಾರ್ಥಿಗಳ ರಾಷ್ಟ್ರಭಾವನೆಯು ಹೆಚ್ಚು ಪರಿಪಕ್ವವಾಗುವುದು. ಅದರಲ್ಲಿ ನಮ್ಮ ಪೂರ್ವಜರು ರಾಷ್ಟ್ರದ ಸಲುವಾಗಿ ಏನು ಮಾಡಿದ್ದಾರೆ ಇದು ತಿಳಿಯಲು ಮತ್ತು ಅದರಲ್ಲಿಯ ನಮ್ಮ ಇಂದಿನ ರಾಷ್ಟ್ರೀಯ ಜವಾಬ್ದಾರಿಯ ಮತ್ತು ಕರ್ತವ್ಯದ ಅರಿವು ವಿಕಸಿತವಾಗುವುದು.

ಈ ಸಂದರ್ಭದಲ್ಲಿ ಸಹಜವಾಗಿ ಹದಿನೇಳಯ ಶತಮಾನದ ಶಿವ ಛತ್ರಪತಿ ಶಿವಾಜಿ ಮಹಾರಾಜರು ಸ್ಥಾಪನೆ ಮಾಡಿದ ಸ್ವರಾಜ್ಯವು ಮಹತ್ವದ್ದಾಗಿದೆ. ಸ್ವರಾಜ್ಯ ನಿರ್ಮಿತಿಯ ಆಕಲನವಾಗುವ ಸಲುವಾಗಿ ಶಿವಾಜಿ ಮಹಾರಾಜರ ಜನಿಸುವ ಪೂರ್ವ ಭಾರತದಲ್ಲಿಯ ಮತ್ತು ಮಹಾರಾಷ್ಟ್ರದಲ್ಲಿಯ ಪರಿಸ್ಥಿತಿ ತಿಳಿದುಕೊಳ್ಳಬೇಕು. ಅಂದರೇನೆ ಭಾರತದ ಇತಿಹಾಸ ತಿಳಿಯಬೇಕು. ಈ ಧೋರಣೆಯಿಂದ ಅದರ ರಚನೆಯನ್ನು ಮಾಡಲಾಗಿದೆ. ಶಿವಾಜಿ ಮಹಾರಾಜರು ಸ್ಥಾಪನೆ ಮಾಡಿದ ಸ್ವರಾಜ್ಯದ ಮೇಲೆ ಶಿವಾಜಿ ಮಹಾರಾಜರ ಮೃತ್ಯು ನಂತರ ಉತ್ತರ ಕಡೆಯಿಂದ ಬಂದ ಆಕ್ರಮಣಗಳಿಗೆ ಮಹಾರಾಷ್ಟ್ರವು ಹೇಗೆ ಎದುರಿಸಿತು ಮತ್ತು ಸ್ವರಾಜ್ಯದ ರಕ್ಷಣೆ ಹೇಗೆ ಮಾಡಿತು, ಇದರ ಚರ್ಚೆಯನ್ನು ಮಾಡಲಾಗಿದೆ. ಈ ಆಕ್ರಮಣವನ್ನು ಹಿಮ್ಮೆಟ್ಟಿಸಲು ಮರಾಠರು ಮಹಾರಾಷ್ಟ್ರದ ಸೀಮೆಯ ವಿಸ್ತಾರ ಮಾಡಿ ಕೆಲವಷ್ಟುಭಾಗ ಭಾರತ ವ್ಯಾಪಿಸಿತು. ಸ್ವರಾಜ್ಯದ ಸಾಮ್ರಾಜ್ಯದಲ್ಲಿಯ ರೂಪಾಂತರದ ವಿವೇಚನೆಯು ಇದು ಆ ಮುಂದಿನ ಭಾಗ. ಬ್ರಿಟಿಷರು ಭಾರತಗೆದ್ದರು ಮತ್ತು ಅದರ ಮೇಲೆ ರಾಜ್ಯ ಮಾಡಿದರು ಇದು ಎಲ್ಲರಿಗೂ ತಿಳಿದೇ ಇದೆ. ಆದರೆ ಈ ಪ್ರಕ್ರಿಯೆಯಲ್ಲಿ ಬ್ರಿಟಿಷರನ್ನು ತಡೆಯಲು ಮಹಾರಾಷ್ಟ್ರ ಹೇಗೆ ಅಗ್ರೇಸರವಾಗಿತ್ತು ಇದನ್ನು ತಿಳಿಯುವುದು ಅಷ್ಟೇ ಮಹತ್ವದ್ದಾಗಿದೆ. ಬ್ರಿಟಿಷರ ಸ್ಪರ್ಧೆ ಮರಾಠರೊಂದಿಗೆ ಇತ್ತು ಮತ್ತು ಅವರು ಮರಾಠರೊಂದಿಗೆ ಯುದ್ಧ ಮಾಡಿಯೇ ಭಾರತವನ್ನು ಗೆದ್ದುಕೊಂಡರು. ಈ ಅರಿವು ನಮ್ಮ ಸಾಮರ್ಥ್ಯದ ಮತ್ತು ಕರ್ತವ್ಯದ್ದಾಗಿದೆ. ಅಧ್ಯಯನ-ಅಧ್ಯಾಪನ ಮಾಡುವಾಗ ಈ ಭಾವನೆಯು ವಿದ್ಯಾರ್ಥಿಗಳ ಮನಸ್ಸಿನಲ್ಲಿ ನಿರ್ಮಾಣವಾಗುವುದು ಅಪೇಕ್ಷಿತವಾಗಿದೆ. ಪಾಠ್ಯಪುಸ್ತಕದ ಹಿಂದಿನ ಈ ಪಾತ್ರವು ಚಿತ್ರರೂಪದಿಂದ ವ್ಯಕ್ತವಾಗುವ ಮುಖಪುಟದ ಮೇಲೆ ಮರಾಠರ ಅಧಿಕಾರ ತೋರಿಸುವ ಸಲುವಾಗಿ ಭಾರತದ ಸ್ಥೂಲ ನಕಾಶೆಯ ಉಪಯೋಗ ಮಾಡಲಾಗಿದೆ.

ನಾಗರಿಕ ಶಾಸ್ತ್ರದ ಭಾಗದಲ್ಲಿ ಭಾರತದ ಸಂವಿಧಾನದ ಪರಿಚಯ ಮಾಡಿಕೊಡಲಾಗಿದೆ. ಈ ವಿಷಯವು ಒಂದೇ ಶೈಕ್ಷಣಿಕ ವರ್ಷದಲ್ಲಿ ಕಲಿಸಲು ಶಕ್ಯವಾಗದ ಕಾರಣ ಎರಡು ಇಯತ್ತೆಗಳಲ್ಲಿ ಅದರ ವಿಭಾಗಿಸಲಾಗಿದೆ. ಈ ಇಯತ್ತೆಯಲ್ಲಿ ಸಂವಿಧಾನದ ಅವಶ್ಯಕತೆ, ಸಂವಿಧಾನದ ಮೂಲ್ಯ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳು ಮತ್ತು ಮಾರ್ಗದರ್ಶಕ ತತ್ವಗಳು ಇವುಗಳ ಸಂಬಂಧವು ಆಶೆಯದ ಮೇಲೆ ಒತ್ತು ಕೊಡಲಾಗಿದೆ. ಸಂವಿಧಾನದಲ್ಲಿಯ ಸರಕಾರ ಯಂತ್ರಣದ ಸ್ವರೂಪ ಮತ್ತು ಅದರ ಮೇಲೆ ಆಧರಿಸಿದ ರಾಜಕೀಯ ಪ್ರಕ್ರಿಯೆಯ ಅಭ್ಯಾಸ ಇಯತ್ತೆ ಎಂಟರಲ್ಲಿ ಮಾಡುವುದಿದೆ. ಅದಕ್ಕನುಗುಣವಾಗಿ ಏಳನೆಯ ಇಯತ್ತೆ ಮತ್ತು ಎಂಟನೆಯ ಇಯತ್ತೆಯಲ್ಲಿ ನಾಗರಿಕಶಾಸ್ತ್ರ ವಿಷಯದ ಆಶೆಯ ಪರಸ್ಪರ ಪೂರಕವಾಗಿದೆ ವಿದ್ಯಾರ್ಥಿಗಳಿಗೆ ಅವುಗಳ ಒಳ್ಳೆಯ ರೀತಿಯಿಂದ ಆಕಲನವಾಗಬಹುದು. ಅದು ಜ್ಞಾನರಚನೆಯ ಮೇಲೆ ಆಧಾರಿತವಾಗಿರುತ್ತದೆ. ಆದರೆ ಅದಕ್ಕಿಂತ ಮುಂದೆ ಹೋಗಿ ರಾಜಕೀಯ ವ್ಯವಸ್ಥೆ ವಿಷಯದ ಉದಾಸೀನತೆ ದೂರು ಮಾಡಿ, ವಿದ್ಯಾರ್ಥಿಗಳಿಗೆ ತಿಳಿಯುವ ಘಟಕ ತಯಾರಿಸಲು ಪ್ರಾಧಾನ್ಯ ಕೊಡಲಾಗಿದೆ. ಆಶಯದ ರಚನೆಯು ಸರಳ ಭಾಷೆಯಲ್ಲಿ ಮಾಡಲಾಗಿದೆ. ಪಠ್ಯಪುಸ್ತಕವನ್ನು ಓದಲು ಅದರ ಸಹಾಯ ವಾಗಬಹುದು.

ಶಿಕ್ಷಕರು ಪ್ರಸ್ತುತ ಪಠ್ಯಪುಸ್ತಕ ಕಲಿಸುವಾಗ, ವರ್ತಮಾನ ಪತ್ರಗಳು, ದೂರದರ್ಶನದ ಮೇಲಿನ ಸುದ್ದಿಗಳು, ತಜ್ಞರು ಮಾಡಿದ ಚಿಕಿತ್ಸೆ ಇವುಗಳ ಉಪಯೋಗ ಮಾಡಿಕೊಂಡು ವಿದ್ಯಾರ್ಥಿಗಳಲ್ಲಿ ಸಮಗ್ರ ದೃಷ್ಟಿಕೋನವು ವಿಕಾಸವಾಗಲು ಸಹಾಯವಾಗುವುದು. ಇತಿಹಾಸ ಮತ್ತು ನಾಗರಿಕ ಶಾಸ್ತ್ರದ ಅಧ್ಯಯನ ಮತ್ತು ಅಧ್ಯಾಪನ ಈಗಿನ ಆಗು-ಹೋಗುಗಳ ಸಂದರ್ಭದಲ್ಲಿ ಮಾಡಿಕೊಂಡಾಗ ಅವು ಹೆಚ್ಚು ಅರ್ಥಪೂರ್ಣವಾಗಬಹುದು. ಆದರೆ ಅದರೊಂದಿಗೆ ವಿದ್ಯಾರ್ಥಿಗಳಿಗೆ ಮೂಲ್ಯವು ಮೈಗೂಡಿಸಿ ಕೊಳ್ಳಲು ಅವು- ಸಹಾಯವಾಗಬಹುದು.

# ಅನುಕ್ರಮಣಿಕೆ

## ಮಧ್ಯಯುಗೀನ ಭಾರತದ ಇತಿಹಾಸ


| ಕ್ರ. | ಪಾಠದ ಹೆಸರು | ಪುಟ ಸಂಖ್ಯೆ |
|---|---|---|
| 1. | ಇತಿಹಾಸದ ಸಾಧನಗಳು | 1 |
| 2. | ಶಿವಪೂರ್ವಕಾಲದ ಭಾರತ | 5 |
| 3. | ಧಾರ್ಮಿಕ ಸಮನ್ವಯ | 11 |
| 4. | ಶಿವಪೂರ್ವಕಾಲದ ಮಹಾರಾಷ್ಟ್ರ | 14 |
| 5. | ಸ್ವರಾಜ್ಯ ಸ್ಥಾಪನೆ | 19 |
| 6. | ಮುಘಲರೊಡನೆ ಹೋರಾಟ | 24 |
| 7. | ಸ್ವರಾಜ್ಯದ ಆಡಳಿತ | 29 |
| 8. | ಆದರ್ಶ ರಾಜ | 33 |
| 9. | ಮರಾಠರ ಸ್ವಾತಂತ್ರ್ಯ ಸಂಗ್ರಾಮ | 37 |
| 10. | ಮರಾಠರ ಆಡಳಿತದ ವಿಸ್ತಾರ | 44 |
| 11. | ರಾಷ್ಟ್ರರಕ್ಷಕ ಮರಾಠರು | 47 |
| 12. | ಸಾಮ್ರಾಜ್ಯದ ಮುನ್ನಡೆ | 53 |
| 13. | ಮಹಾರಾಷ್ಟ್ರದಲ್ಲಿಯ ಸಮಾಜ ಜೀವನ | 57 |



**S.O.I. Note :** The following foot notes are applicable : (1) © Government of India, Copyright : 2017. (2) The responsibility for the correctness of internal details rests with the publisher. (3) The territorial waters of India extend into the sea to a distance of twelve nautical miles measured from the appropriate base line. (4) The administrative headquarters of Chandigarh, Haryana and Punjab are at Chandigarh. (5) The interstate boundaries amongst Arunachal Pradesh, Assam and Meghalaya shown on this map are as interpreted from the "North-Eastern Areas (Reorganisation) Act. 1971," but have yet to be verified. (6) The external boundaries and coastlines of India agree with the Record/Master Copy certified by Survey of India. (7) The state boundaries between Uttarakhand & Uttar Pradesh, Bihar & Jharkhand and Chattisgarh & Madhya Pradesh have not been verified by the Governments concerned. (8) The spellings of names in this map, have been taken from various sources.

| ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆ | ಅಧ್ಯಯನದ ನಿಷ್ಪತ್ತಿ |
|---|---|
| **ಅಧ್ಯಯನಕ್ಕಾಗಿ ಜೊತೆಗೂಡಿ/ಗುಂಪಿನಲ್ಲಿ/ವೈಯಕ್ತಿಕ ರೀತಿಯಲ್ಲಿ ಅಧ್ಯಯನದ ಸಂಧಿ ಕೊಡುವುದು ಹಾಗೂ ಅವುಗಳಿಗೆ- ಮುಂದಿನ ವಿಷಯಕ್ಕಾಗಿ ಪ್ರವೃತ್ತರನ್ನಾಗಿ ಮಾಡುವುದು.**<br>• ಪುಸ್ತಕಗಳು ಹಾಗೂ ಸ್ಥಾನಿಕ ಪರಿಸರದಲ್ಲಿಯ ಉಪಲಬ್ಧ ಐತಿಹಾಸಿಕ ಸಾಧನಗಳು ಉದಾ- ಹಸ್ತಲಿಖಿತಗಳು/ ನಕಾಶೆಗಳು/ಸ್ಪಷ್ಟೀಕರಣ/ಚಿತ್ರ/ಐತಿಹಾಸಿಕ ವಾಸ್ತು/ಚಿತ್ರಪಟ/ ಚಾರಿತ್ರಿಕ ನಾಟಕಗಳು/ದೂರದರ್ಶನಗಳ ಮೇಲೆ ಧಾರಾವಾಹಿ, ಜನಪದಕಲೆ/ನಾಟಕಗಳನ್ನು ಗುರುತಿಸುವುದು ಹಾಗೂ ಅವರ ಆಯಾ ಕಾಲದ ಕಾಲಖಂಡದಲ್ಲಿಯ ಇತಿಹಾಸ ತಿಳಿದುಕೊಳ್ಳುವ ಸಲುವಾಗಿ ಅನ್ವಯಾರ್ಥಗಳನ್ನು ಹಚ್ಚುವುದು.<br>• ಆ ಕಾಲದಲ್ಲಿಯ ಮನೆತನಗಳು/ರಾಜವಂಶಗಳ ಉದಯದ ಪರಿಚಯವಾಗುವುದು ಮತ್ತು ಆ ಕಾಲಖಂಡದಲ್ಲಿಯ ಮಹತ್ವದ ಘಟನೆಗಳ ಸಿಂಹಾವಲೋಕನ ಕಾಲರೇಷೆಯ ಸಹಾಯದಿಂದ ತೆಗೆದುಕೊಳ್ಳುವುದು.<br>• ಕೊಟ್ಟ ಕಾಲಖಂಡದಲ್ಲಿಯ ಮುಖ್ಯ ಐತಿಹಾಸಿಕ ಘಟನೆ/ವ್ಯಕ್ತಿ ಮಹತ್ವದ ನಾಟೀಕರಣ/ಸಾದರಿಕರಣ ಮಾಡುವುದು. ಉದಾ. ಸಾಮ್ರಾಟ ಅಕಬರ, ಛತ್ರಪತಿ ಶಿವಾಜಿ ಮಹಾರಾಜ, ಮೊದಲನೆಯ ಬಾಜೀರಾವ, ಮಹಾರಾಣಿ ತಾರಾಬಾಯಿ ಇತ್ಯಾದಿ.<br>• ಮಧ್ಯಯುಗಿನ ಕಾಲಖಂಡದಲ್ಲಿ ಸಮಾಜದಲ್ಲಿ ಆಗಿರುವ ಬದಲಾವಣೆಯ ಮೇಲೆ ಮತ ವ್ಯಕ್ತ ಪಡಿಸುವುದು ಮತ್ತು ವರ್ತಮಾನ ಕಾಲದಲ್ಲಿಯ ಸಮಾಜದೊಂದಿಗೆ ತುಲನೆ ಮಾಡುವುದು.<br>• ಪ್ರಕಲ್ಪ: ಮನೆತನ/ರಾಜ್ಯಗಳು/ಆಡಳಿತ ಸುಧಾರಣೆ/ವಿಶಿಷ್ಟ ಕಾಲಖಂಡದಲ್ಲಿಯ ಸ್ಥಾಪತ್ಯದಲ್ಲಿಯ ವೈಶಿಷ್ಟ್ಯಗಳು. ಉದಾ. ಭೋಸಲೆ, ಶಿಂದೆ, ಹೋಳಕರ ಇತ್ಯಾದಿಗಳ ಮೇಲೆ ಪ್ರಕಲ್ಪ ಮಾಡುವುದು.<br>• ಸಂತರ ಅಭಂಗ, ಭಜನೆಗಳು, ಕೀರ್ತನೆಗಳು, ಕವ್ವಾಲಿ ಈ ಮಾಧ್ಯಮಗಳಿಂದ ಅವರ ವಿಚಾರಗಳಿಗೆ ಮಾಹಿತಿ ಮಾಡಿಕೊಡುವುದು. ಸಮೀಪದ ಪರಿಸರದಲ್ಲಿಯ ದರ್ಗಾ, ಗುರುದ್ವಾರ, ಮಂದಿರ, ಭಕ್ತಿ ಚಳವಳಿ/ಸೂಫಿ ಪಂಥಕ್ಕೆ ಸಂಬಂಧಿತವಿದೆ, ಅವರ ಮಾಹಿತಿ ದೊರಕಿಸುವುದು ಮತ್ತು ವಿವಿಧ ಧರ್ಮದ ತತ್ವಗಳ ಮೇಲೆ ಚರ್ಚೆ ಮಾಡುವುದು.<br>• ಶಿವಪೂರ್ವಕಾಲದ ಭಾರತ, ಶಿವಪೂರ್ವಕಾಲದ ಮಹಾರಾಷ್ಟ್ರ, ಸ್ವಾತಂತ್ರ್ಯ ಸಂಗ್ರಾಮ, ಪೇಶ್ವೆ ಕಾಲ ಮತ್ತು ಮರಾಠಿ ಸತ್ತೆಯ ವಿಸ್ತಾರ ಈ ವಿಷಯಗಳ ಮಾಹಿತಿ ತೆಗೆದುಕೊಳ್ಳುವುದು. | **ಅಧ್ಯಯನಾರ್ಥಿ**<br>07.73H.01 ಇತಿಹಾಸದ ವಿವಿಧ ಸಾಧನೆಗಳು, ಗುರುತಿಸುವರು ಮತ್ತು ಅವುಗಳ ಈ ಕಾಲದಲ್ಲಿಯ ಇತಿಹಾಸದ ಪುನರಲೇಖನಕ್ಕಾಗಿ ಉಪಯೋಗ ಸ್ಪಷ್ಟಪಡಿಸುವನು.<br>07.73H.02 ಇತಿಹಾಸದಲ್ಲಿಯ ವಿವಿಧ ಕಾಲಖಂಡಗಳ ಅಭ್ಯಾಸ ಮಾಡುವುದಕ್ಕಾಗಿ ಉಪಯುಕ್ತ ಸಾಧನಗಳ ಉದಾಹರಣೆ ಕೊಡುವನು.<br>07.73H.03 ಮರಾಠರ ಹಾಗೂ ಮುಘಲರ ಸಂಘರ್ಷವನ್ನು ಚಿಕಿತ್ಸಕ ಬುದ್ಧಿಯಿಂದ ಅಭ್ಯಸಿಸುವನು.<br>07.73H.04 ಶಿವರಾಯನ ರಾಜ್ಯಾಭಿಷೇಕದ ಹಿಂದಿನ ಕಾರಣ ಸ್ಪಷ್ಟಪಡಿಸುತ್ತಾನೆ.<br>07.73H.05 ಮಧ್ಯಯುಗೀನ ಕಾಲದ ಒಂದು ಸ್ಥಳದ ಸ್ಪಷ್ಟವಾಗಿ ಐತಿಹಾಸಿಕ ಘಟನೆಗೆ ಸಂಬಂಧಿಸಿದ ಎರಡನೆಯ ಸ್ಥಳದೊಂದಿಗಿನ ಘಟನೆಯೊಂದಿಗೆ ಅರ್ಥೈಸುವನು.<br>07.73H.06 ಮಧ್ಯಯುಗೀನ ಕಾಲದ ಸಾಮಾಜಿಕ ರಾಜಕೀಯ ಹಾಗೂ ಆರ್ಥಿಕ ಬದಲಾವಣೆಗಳ ವಿಶ್ಲೇಷಣೆ ಮಾಡುವನು.<br>07.73H.07 ಛತ್ರಪತಿ ಶಿವಾಜಿ ಮಹಾರಾಜರು ಸೈನಿಕ ನಿಯಂತ್ರಣ ಸಲುವಾಗಿ ಉಪಯೋಗಿಸಿದ ಆಡಳಿತದ ಮಾರ್ಗ ಮತ್ತು ವ್ಯೂಹರಚನೆಯ ವಿಶ್ಲೇಷಣೆ ಮಾಡುವನು.<br>07.73H.08 ಮಂದಿರಗಳ ಸ್ಥಾಪತ್ಯ, ಸಮಾಧಿ/ಥಡಿಗೆ, ಮಶೀದ ಇವುಗಳ ಶೈಲಿ ಮತ್ತು ತಂತ್ರದ ವಿಕಾಸದ ಸೋದಾಹರಣ ಸ್ಪಷ್ಟೀಕರಣ ಮಾಡುವನು.<br>07.73H.09 ಸಂತರ ಉಪದೇಶಗಳಲ್ಲಿಯ ಸಾಮ್ಯ ಗುರುತಿಸುವನು.<br>07.73H.10 ಭಕ್ತಿ ಚಳುವಳಿ ಹಾಗೂ ಸೂಫಿ ಪಂಥದಲ್ಲಿಯ ಕವಿತೆ, ಅಭಂಗ, ಇವುಗಳ ಸಧ್ಯದ ಸಾಮಾಜಿಕ ಸ್ಥಿತಿ ಮೇಲಿನ ನಿಷ್ಕರ್ಷ ತೆಗೆಯುವನು.<br>07.73H.11 ಪಾಣಿಪತ್ತ ಯುದ್ಧದ ಕಾರಣಮೀಮಾಂಸೆ ಮಾಡುವನು.<br>07.73H.12 ಮರಾಠಿ ಆಡಳಿತ ಅಖಿಲಭಾರತೀಯ ಮಟ್ಟದಲ್ಲಿ ಪ್ರಬಲ ಆಡಳಿತವೆಂದು ಅಂದರೆ ಉದಯಕ್ಕೆ ಬಂದ ಈ ತತ್ಕಾಲೀನ ಐತಿಹಾಸಿಕ ಘಟನೆಗಳ ಸಹಾಯದಿಂದ ಸ್ಪಷ್ಟಪಡಿಸುವನು. |

# 1. ಇತಿಹಾಸದ ಸಾಧನೆಗಳು

ಭಾರತದ ಪ್ರಾಚೀನ ಕಾಲಖಂಡದ ಅಭ್ಯಾಸವನ್ನು ನಾವು ಹಿಂದಿನ ವರ್ಷ ಮಾಡಿದ್ದೇವೆ. ಈ ವರ್ಷ ನಾವು ಮಧ್ಯಯುಗೀನ ಕಾಲಖಂಡದ ಅಭ್ಯಾಸ ಮಾಡುವವರಿದ್ದೇವೆ. ಕ್ರಿ.ಶ. 9ನೆಯ ಶತಮಾನದಿಂದ ಹಿಡಿದು 18ನೆಯ ಶತಮಾನದ ವರೆಗಿನ ಕಾಲಾವಧಿಯನ್ನು ಸ್ಥೂಲವಾಗಿ ಭಾರತೀಯ ಇತಿಹಾಸದಲ್ಲಿಯ ಮಧ್ಯಯುಗದ ಕಾಲಾವಧಿಯೆಂದು ತಿಳಿಯಲಾಗುತ್ತದೆ. ಈ ಪಾಠದಲ್ಲಿ ನಾವು ಮಧ್ಯಯುಗೀನ ಇತಿಹಾಸದ ಸಾಧನಗಳ ಅಭ್ಯಾಸ ಮಾಡುವವರಿದ್ದೇವೆ.

ಭೂತಕಾಲದಲ್ಲಿ ಸಂಭವಿಸಿದ ಘಟನೆಗಳ ಕಾಲಾನುಕ್ರಮವಾಗಿ, ಶಾಸ್ತ್ರಶುದ್ಧವಾಗಿ ಹಾಗೂ ಸುಸಂಗತವಾಗಿ ಕೊಡಲಾದ ಮಾಹಿತಿಗೆ ಇತಿಹಾಸವೆನ್ನುವರು.

**ನಿಮಗೆ ಗೊತ್ತಿದೆಯೇ?**

ಇತಿಹಾಸ ಈ ಶಬ್ದವು 'ಇತಿ+ಹ+ಆಸ್' ಹೀಗೆ ಉತ್ಪತ್ತಿಯಾಗಿದೆ. ಈ ಶಬ್ದದ ಅರ್ಥವು 'ಹೀಗೆ ಸಂಭವಿಸಿತು' ಎಂದಾಗುತ್ತದೆ.


ವ್ಯಕ್ತಿ, ಸಮಾಜ, ಸ್ಥಳ ಹಾಗೂ ಕಾಲ ಈ ನಾಲ್ಕು ಘಟಕಗಳು ಇತಿಹಾಸದ ದೃಷ್ಟಿಯಿಂದ ತುಂಬಾ ಮಹತ್ವದ್ದಾಗಿವೆ. ಇತಿಹಾಸವು ವಿಶ್ವಾಸಾರ್ಹ ಸಾಕ್ಷ್ಯಾಧಾರಗಳ ಮೇಲೆ ಆಧಾರಿತವಾಗಿರಬೇಕಾಗುತ್ತದೆ. ಈ ಸಾಕ್ಷ್ಯಾಧಾರಗಳಿಗೆ ಇತಿಹಾಸದ ಸಾಧನಗಳು ಎನ್ನುತ್ತಾರೆ.

ಈ ಸಾಧನಗಳನ್ನು ಭೌತಿಕ ಸಾಧನಗಳು, ಲಿಖಿತ ಸಾಧನಗಳು ಮತ್ತು ಮೌಖಿಕ ಸಾಧನಗಳು ಎಂದು ವರ್ಗೀಕರಿಸಿ ನಾವು ಅವುಗಳ ಮಾಹಿತಿ ಪಡೆಯೋಣ. ಅದೇ ರೀತಿ ಇತಿಹಾಸದ ಸಾಧನಗಳ ಮೌಲ್ಯಮಾಪನವನ್ನೂ ಮಾಡೋಣ.

ಯಾವ ಐತಿಹಾಸಿಕ ಘಟನೆಯ ಅಭ್ಯಾಸ ಮಾಡುವುದಿರುತ್ತದೆಯೋ ಅದಕ್ಕೆ ಸಂಬಂಧಿತವಾದ ಅನೇಕ ಅಂಶಗಳ ವಿಚಾರ ಮಾಡಬೇಕಾಗುತ್ತದೆ. ಅದಕ್ಕಾಗಿ ಐತಿಹಾಸಿಕ ಸಾಧನಗಳ ಆಧಾರ ಪಡೆಯ ಬೇಕಾಗುತ್ತದೆ. ಈ ಸಾಧನಗಳನ್ನು ಪರೀಕ್ಷಿಸಿ ನೋಡುವುದು ಅವಶ್ಯಕವಾಗಿರುತ್ತದೆ. ಅದರ ನೈಜತೆಯನ್ನು ಪರೀಕಿಸಬೇಕಾಗುತ್ತದೆ. ಈ ಸಾಧನಗಳನ್ನು ವಿವೇಚನೆಯಿಂದ ಹಾಗೂ ಚಿಕಿತ್ಸಕವಾಗಿ ಬಳಸುವುದು ಅವಶ್ಯಕವಾಗಿರುತ್ತದೆ.

ಕೆಳಗಿನ ವಸ್ತುಗಳು ಹಾಗೂ ಕಟ್ಟಡಗಳು ಇಲ್ಲವೆ ಅವುಗಳ ಅವಶೇಷಗಳಿಗೆ ಇತಿಹಾಸದ 'ಭೌತಿಕ ಸಾಧನಗಳು' ಎನ್ನುತ್ತಾರೆ.

## ಭೌತಿಕ ಸಾಧನಗಳು:




ಭೌತಿಕ ಸಾಧನಗಳಲ್ಲಿ ಕೋಟೆಗಳಿಗೆ ಮಹತ್ವದ ಸ್ಥಾನವಿರುತ್ತದೆ. ಕೋಟೆಗಳಲ್ಲಿ ಗಿರಿದುರ್ಗ, ವನದುರ್ಗ, ಜಲದುರ್ಗ, ಭೂಕೋಟೆ ಎಂಬ ಕೆಲವು ಮಹತ್ವದ ಪ್ರಕಾರಗಳಿವೆ. ಅದರಂತೆ ಸ್ಮಾರಕಗಳಲ್ಲಿ ಸಮಾಧಿ, ಗೋರಿ, ವೀರಗಲ್ಲುಗಳು ಹಾಗೂ ಕಟ್ಟಡಗಳಲ್ಲಿ ಅರಮನೆ, ಮಂತ್ರಿನಿವಾಸ, ಅಂತಃಪುರ, ಜನಸಾಮಾನ್ಯರ ಮನೆಗಳು ಮುಂತಾದವುಗಳ ಸಮಾವೇಶವಾಗುತ್ತದೆ. ಇದರ ಮೇಲಿಂದ ನಮಗೆ ಆ ಕಾಲಖಂಡದ ಪರಿಚಯವಾಗುತ್ತದೆ. ಸ್ಥಾಪತ್ಯಕಲೆಯ ಪ್ರಗತಿ ತಿಳಿಯುತ್ತದೆ. ಆ ಕಾಲದಲ್ಲಿಯ ಆರ್ಥಿಕ ಸ್ಥಿತಿ, ಕಲೆಯ ದರ್ಜೆ, ಕಟ್ಟಡದ ಶೈಲಿ, ಜನರ ಜೀವನ ಮಟ್ಟ ಇತ್ಯಾದಿಗಳ ಮಾಹಿತಿ ದೊರೆಯುತ್ತದೆ.

**ಹೇಳಿ ನೋಡೋಣ!**

ನಾಣ್ಯಗಳು ಇತಿಹಾಸವನ್ನು ಹೇಗೆ ಹೇಳುತ್ತವೆ?

**ತಿಳಿದುಕೊಳ್ಳೋಣ ಬನ್ನಿ.**

ಪ್ರಾಚೀನ ಕಾಲದಿಂದಲೂ ಕವಡೆ, ದಮಡಿ, ಅದ್ದೇಲಿ, ಪೈ, ದುಡ್ಡು, ಆಣೆ, ರೂಪಾಯಿ ಈ ನಾಣ್ಯಗಳು ಬಳಕೆಯಲ್ಲಿದ್ದವು. ನಾಣ್ಯಗಳ ಮೇಲಿಂದ ಕೆಲವು ಗಾದೆ ಮಾತುಗಳು, ನುಡಿಗಟ್ಟುಗಳು ಪ್ರಚಲಿತವಾಗಿವೆ.

* ಒಂದು ಒಡಕು ದಮಡಿಯನ್ನೂ ಕೊಡುವುದಿಲ್ಲ.
* ಚಮಡಿ ಜಾಯ್ ಪರ ದಮಡಿ ನ ಜಾಯೆ!
* ಪೈ-ಪೈ ಲೆಕ್ಕ ಇಡುವುದು.
* ಸೋಲಹ ಆಣೆ ಸಚ್!

ವಿವಿಧ ರಾಜರು ಬಂಗಾರ, ಬೆಳ್ಳಿ, ತಾಮ್ರ. ಈ ಲೋಹಗಳನ್ನು ಬಳಸಿ ತಯಾರಿಸಿದ ನಾಣ್ಯಗಳು ಇತಿಹಾಸದ ಸಾಧನಗಳೆಂದು ಮಹತ್ವದ್ದಾಗಿವೆ. ನಾಣ್ಯಗಳ ಮೇಲಿಂದ ರಾಜರ ಹೆಸರು, ಅವರ



ವೀರಗಲ್ಲು

ಕಾಲ, ರಾಜ್ಯಾಡಳಿತ, ಧಾರ್ಮಿಕ ಕಲ್ಪನೆ, ವೈಯಕ್ತಿಕ ವಿವರಗಳು ಮುಂತಾದವುಗಳ ಮಾಹಿತಿ ದೊರೆಯುತ್ತದೆ. ಅದೇ ರೀತಿ ಆರ್ಥಿಕ ವ್ಯವಹಾರ ಮತ್ತು ಆರ್ಥಿಕ ಸ್ಥಿತಿ ಇವುಗಳ ಮಾಹಿತಿ ದೊರೆಯುತ್ತದೆ. ಆ ಕಾಲದಲ್ಲಿಯ ಲೋಹಶಾಸ್ತ್ರದ ಪ್ರಗತಿಯು ತಿಳಿಯುತ್ತದೆ. ಸಾಮ್ರಾಟ ಅಕಬರನ ನಾಣ್ಯಗಳ ಮೇಲಿನ ರಾಮಸೀತೆಯ ಚಿತ್ರ ಅಥವಾ ಹೈದರ ಅಲಿಯ ನಾಣ್ಯಗಳ ಮೇಲಿನ ಶಿವಪಾರ್ವತಿಯ ಪ್ರತಿಮೆಗಳ ಮೇಲಿಂದ ಆ ಕಾಲದಲ್ಲಿಯ ಧಾರ್ಮಿಕ ಸಮನ್ವಯದ ಅರಿವಾಗುತ್ತದೆ. ಪೇಶವೆಗಳ ನಾಣ್ಯಗಳ ಮೇಲೆ ಅರೇಬಿಕ್ ಇಲ್ಲವೆ ಪರ್ಶಿಯನ್ ಭಾಷೆಯ ಬಳಕೆಯಾಗುತ್ತಿತ್ತು. ಇದರ ಮೇಲಿಂದ ಆಕಾಲದಲ್ಲಿಯ ಭಾಷಾ ವ್ಯವಹಾರವು ತಿಳಿಯುತ್ತದೆ.

ಶಿಲಾಲೇಖವೆಂದರೆ ಕಲ್ಲಿನ ಮೇಲೆ ಅಥವಾ ಗೋಡೆಯ ಮೇಲೆ ಕೊರೆದ ಲೇಖ. ಉದಾ., ತಂಜಾವೂರದಲ್ಲಿಯ ಬೃಹದೀಶ್ವರ ದೇವಾಲಯ. ಚಾಲುಕ್ಯ, ರಾಷ್ಟ್ರಕೂಟ, ಚೋಳ, ಯಾದವ ಈ ರಾಜರುಗಳ ಕಾಲದಲ್ಲಿ ಕೊರೆದ ಅನೇಕ ಶಿಲಾಲೇಖಗಳು ದೊರೆತಿವೆ. ಶಿಲಾಲೇಖವನ್ನು ಇತಿಹಾಸ



ಪೇಶ್ವೆಕಾಲದ ನಾಣ್ಯಗಳು



ಹೈದರ ಅಲಿಯ ನಾಣ್ಯಗಳು

ಲೇಖನದ ಅತ್ಯಂತ ಮಹತ್ವದ ಹಾಗೂ ವಿಶ್ವಸನೀಯ ಸಾಕ್ಷ್ಯಾಧಾರವೆಂದು ತಿಳಿಯಲಾಗುತ್ತದೆ. ಅದರಿಂದ ಭಾಷೆ, ಲಿಪಿ, ಸಮಾಜ ಜೀವನ ಮುಂತಾದ ಅಂಶಗಳನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ. ತಾಮ್ರದ ತಗಡಿನ ಮೇಲೆ ಕೊರೆದ ಲೇಖಗಳಿಗೆ 'ತಾಮ್ರಪಟ' ಎನ್ನುತ್ತಾರೆ. ತಾಮ್ರಪಟಗಳ ಮೇಲೆ ರಾಜಾಜ್ಞೆಗಳು, ತೀರ್ಪುಗಳು ಮುಂತಾದವುಗಳ ಮಾಹಿತಿಯನ್ನು ಕೊರೆಯಲಾಗುತ್ತಿತ್ತು.



**ನಿಮಗೆ ಗೊತ್ತಿದೆಯೇ ?**

ಚೈತ್ಯಗಳು, ವಿಹಾರಗಳು, ಮಂದಿರಗಳು, ಚರ್ಚುಗಳು, ಮಸೀದೆಗಳು, ಅಗ್ಯಾರಿಗಳು, ದರ್ಗಾಗಳು, ಗೋರಿಗಳು, ಗುರುದ್ವಾರಗಳು, ಛತ್ರಗಳು, ಶಿಲ್ಪಗಳು, ಬಾವಿಗಳು, ಪಾವಟಿಗೆಗಳಿದ್ದ ಬಾವಿಗಳು, ಗುಮ್ಮಟಗಳು, ಸುತ್ತುಗೋಡೆಗಳು, ಪ್ರವೇಶದ್ವಾರಗಳು, ಶಸ್ತ್ರಾಸ್ತ್ರಗಳು, ಪಾತ್ರೆಗಳು, ಆಭರಣಗಳು, ಬಟ್ಟೆಗಳು, ಕಲಾ ಕುಸುರಿನ ವಸ್ತುಗಳು, ಆಟಿಗೆಗಳು, ಆಯುಧಗಳು, ವಾದ್ಯಗಳು- ಇವೆಲ್ಲವುಗಳು ಭೌತಿಕ ಸಾಧನಗಳು.

**ಲಿಖಿತ ಸಾಧನಗಳು:** ಆ ಕಾಲದಲ್ಲಿಯ ದೇವನಾಗರಿ, ಅರೇಬಿಯನ್, ಪರ್ಶಿಯನ್, ಮೋಡಿ, ಮುಂತಾದ ಲಿಪಿಯಲ್ಲಿಯ ಬರಹಗಳು, ವಿವಿಧ ಭಾಷೆಗಳ ರೂಪಗಳು, ಭೂರ್ಜಪತ್ರಗಳು, ಪ್ರತಿಗಳು, ಗ್ರಂಥಗಳು, ಆಜ್ಞೆಗಳು, ಚರಿತ್ರೆಗಳು, ಚಿತ್ರಗಳು ಇತ್ಯಾದಿಗಳ ಮೇಲಿಂದ ನಮಗೆ ಮಧ್ಯಯುಗದಲ್ಲಿಯ ಮಹತ್ವದ ಐತಿಹಾಸಿಕ ಘಟನೆಗಳ ಮಾಹಿತಿ ದೊರೆಯುತ್ತದೆ. ಅದರಂತೆ ತಿಂಡಿ-ತಿನಿಸುಗಳು, ಜನಜೀವನ, ವೇಷಭೂಷಣಗಳು, ಆಚಾರ-ವಿಚಾರಗಳು, ಹಬ್ಬ-ಹರಿದಿನಗಳು ಇತ್ಯಾದಿಗಳ ಮಾಹಿತಿಯೂ ದೊರೆಯುತ್ತದೆ.

ಈ ಎಲ್ಲ ಸಾಹಿತ್ಯಕ್ಕೆ ಇತಿಹಾಸದ 'ಲಿಖಿತ ಸಾಧನಗಳು' ಎನ್ನುತ್ತಾರೆ.

ಈ ಕಾಲದಲ್ಲಿ ವಿದೇಶಿ ಪ್ರವಾಸಿಗರು ಭಾರತಕ್ಕೆ ಬಂದರು. ಅವರು ತಮ್ಮ ಪ್ರವಾಸ ವರ್ಣನೆಗಳನ್ನು ಬರೆದಿದ್ದಾರೆ. ಅವರಲ್ಲಿ ಅಲ್ಬೇರುನಿ, ಇಬ್ನಬತುತಾ, ನಿಕೋಲಸ್ ಮನುಚಿ ಇವರ ಸಮಾವೇಶವಾಗುತ್ತದೆ. ಬಾಬರನ ಚರಿತ್ರೆ, ಕವಿ ಪರಮಾನಂದರು ಸಂಸ್ಕೃತದಲ್ಲಿ ಬರೆದ 'ಶ್ರೀಶಿವಭಾರತ' ಈ ಶಿವಚರಿತ್ರೆ. ಅದರಂತೆ

**ಲಿಖಿತ ಸಾಧನಗಳು**

- ರಾಜದರ್ಬಾರಿನಲ್ಲಿಯ ಕಾರ್ಯಕಲಾಪದ ಕಾಗದ ಪತ್ರಗಳು
- ವಂಶಾವಳಿ ಶಕಾವಳಿ
- ಪತ್ರವ್ಯವಹಾರ, ಗುಪ್ತ ಪತ್ರಗಳು
- ನ್ಯಾಯಾಲಯದ ತೀರ್ಪುಗಳು ಆಜ್ಞಾಪತ್ರಗಳು
- ಗ್ರಂಥಗಳು ಚರಿತ್ರೆಗಳು
- ವಿದೇಶಿ ಪ್ರವಾಸ ಪ್ರವಾಸಿಗರ
- ಬಖರಗಳು ತವಾರಿಖಗಳು

ವಿವಿಧ ರಾಜರುಗಳ ಚರಿತ್ರೆಗಳು ಮತ್ತು ಪತ್ರವ್ಯವಹಾರಗಳ ಮೇಲಿಂದ ನಮಗೆ ಅವರ ಧೋರಣೆಗಳು, ಆಡಳಿತ ವ್ಯವಸ್ಥೆ, ರಾಜಕೀಯ ಸಂಬಂಧಗಳನ್ನು ಬಿಡಿಸಿ ಹೇಳಲು ಸಾಧ್ಯವಾಗುತ್ತದೆ.

ತವಾರಿಖ ಅಥವಾ ತಾರೀಖ ಎಂದರೆ ಘಟನಾಕ್ರಮ. ಅಲ್ಬೇರುನಿ, ಝಿಯಾವುದ್ದೀನ ಬರ್ನಿ, ಮೌಲಾನಾ ಅಹಮದ, ಯಾಹ್ಯಾಬಿನ್ ಅಹಮದ, ಮಿರ್ಝಾಹೈದರ, ಭೀಮಸೇನ ಸಕ್ಸೇನಾ ಮುಂತಾದವರು ಬರೆದ ತವಾರಿಖಾಗಳು ದೊರಕಿವೆ.

ಬಕರ ಈ ಶಬ್ದವು ಖಬರ ಎಂಬ ಶಬ್ದದಿಂದ ಬಂದಿದೆ. ಖಬರ ಎಂದರೆ ಸಮಾಚಾರ. ಬಖರ ಇದು ಮಹಾರಾಷ್ಟ್ರದಲ್ಲಿ ನಿರ್ಮಾಣವಾದ ಇತಿಹಾಸ ಲೇಖನದ ಒಂದು ಪ್ರಕಾರವಾಗಿದೆ. ಬಖರಗಳಿಂದ ಆ ಕಾಲದ ರಾಜಕೀಯ ಘಟನೆಗಳು, ಭಾಷಾ ವ್ಯವಹಾರ, ಸಾಂಸ್ಕೃತಿಕ ಜೀವನ, ಸಾಮಾಜಿಕ ಪರಿಸ್ಥಿತಿ ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳಲು ಬರುತ್ತದೆ. ಮರಾಠಿಯಲ್ಲಿಯ ಅನೇಕ ಬಖರಗಳು ಘಟನೆ ಸಂಭವಿಸಿದ ಅನೇಕ ವರ್ಷಗಳ ನಂತರ ಬರೆಯಲ್ಪಟ್ಟಿದ್ದರಿಂದ ಅವುಗಳಲ್ಲಿ ಅನೇಕ ಸಲ ಕೇಳಿಕೆಯ ಮಾಹಿತಿಗೆ ಮಹತ್ವ ಕೊಟ್ಟದ್ದು ಕಂಡುಬರುತ್ತದೆ. ಮಹಿಕಾವತಿಯ ಬಖರ, ಸಭಾಸದ ಬಖರ, ಎಕ್ಕ್ಯಾಣ್ಣವ ಕಲಮಿ ಬಖರ, ಚಿಟಣೀಸರ ಬಖರ, ಭಾವೂಸಾಹೇಬರ ಬಖರ, ಖರ್ಡಾದ ಯುದ್ಧದ ಬಖರ ಇವು ಕೆಲವು ಮಹತ್ವದ ಬಖರಗಳಾಗಿವೆ. ರಾಬರ್ಟ್ ಆರ್ಮ್, ಎಮ್.ಸಿ. ಸ್ಪ್ರಿಂಗಲ್ ಮತ್ತು ಗ್ರ್ಯಾಂಟ್ ಡಫ್ ಈ ಸಮಕಾಲೀನ ಪಾಶ್ಚಾತ್ಯ ಇತಿಹಾಸಕಾರರ ಗ್ರಂಥಗಳೂ ಮಹತ್ವದ್ದಾಗಿವೆ.




**ಮಾಡಿ ನೋಡಿರಿ.**

- ಲಾವಣಿ ಪದಗಳು, ಆದಿವಾಸಿ ಗೀತೆಗಳು-ಇವುಗಳನ್ನು ಸಂಗ್ರಹಿಸಿರಿ.
- ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವುಗಳನ್ನು ಸಾದರಪಡಿಸಿರಿ.

**ಮೌಖಿಕ ಸಾಧನಗಳು:** ಅನೇಕ ತಲೆಮಾರುಗಳವರೆಗೆ ಕಾಯ್ದುಕೊಂಡ ಬರಲಾದ ಬೀಸುವಕಲ್ಲಿನ ಹಾಡುಗಳು, ಜಾನಪದ ಗೀತೆಗಳು, ಲಾವಣಿ ಪದಗಳು, ಕತೆಗಳು, ದಂತಕತೆಗಳು ಇವುಗಳಿಂದ ನಮಗೆ ಜನರ ಜೀವನದ ವಿವಿಧ ಆಯಾಮಗಳು ತಿಳಿಯುತ್ತವೆ. ಇಂಥ ಸಾಧನಗಳಿಗೆ ಇತಿಹಾಸದ ಆ 'ಮೌಖಿಕ ಸಾಧನಗಳು' ಎಂದು ಕರೆಯುತ್ತಾರೆ.

ಕೆಳಗಿನ ಮೂರು ಪ್ರಕಾರದ ಸಾಧನಗಳ ಆಧಾರದಿಂದ ಇತಿಹಾಸದ ಲೇಖನವನ್ನು ಮಾಡಲಾಗುತ್ತದೆ. ಇತಿಹಾಸದ ಲೇಖನವನ್ನು ಒಮ್ಮೆ ಮಾಡಿದರೂ ಆ ವಿಷಯದ ಸಂಶೋಧನೆಯು ಅವಿರತವಾಗಿ ನಡೆದೇ ಇರುತ್ತದೆ. ಈ ಸಂಶೋಧನೆಯಿಂದ ಹೊಸ ಸಾಧನಗಳು ಹಾಗೂ ಹೊಸ ಮಾಹಿತಿ ದೊರೆಯುತ್ತದೆ. ಅದಕ್ಕನುಸಾರವಾಗಿ ಇತಿಹಾಸದ ಪುನರ್ಲೇಖನ ಮಾಡಬೇಕಾಗುತ್ತದೆ. ಉದಾ. ನಮ್ಮ ಅಜ್ಜ -ಅಜ್ಜಿಯರ




ಕಾಲದಲ್ಲಿಯ, ತಾಯಿ-ತಂದೆಯ ಕಾಲದಲ್ಲಿಯ ಹಾಗೂ ನಮ್ಮ ಕಾಲದಲ್ಲಿಯ ಇತಿಹಾಸದ ಪುಸ್ತಕಗಳಲ್ಲಿ ಕೆಲವು ಪ್ರಮಾಣದಲ್ಲಿ ವ್ಯತ್ಯಾಸವಾಗಿರುವುದು ಕಂಡುಬರುತ್ತದೆ.

**ಐತಿಹಾಸಿಕ ಸಾಧನಗಳ ಮೌಲ್ಯಮಾಪನ:** ಈ ಎಲ್ಲ ಸಾಧನಗಳನ್ನು ಬಳಸುವ ಮೊದಲು ದಕ್ಷತೆ ವಹಿಸುವುದು



**ನಿಮಗೆ ಗೊತ್ತಿದೆಯೇ ?**

**ತಾನಾಜಿಯ- ಲಾವಣಿ:** ಈ ಲಾವಣಿಯನ್ನು ತುಳಶೀದಾಸ ಶಾಹೀರ ಇವರು ಬರೆದಿದ್ದಾರೆ. ಈ ಲಾವಣಿಯಲ್ಲಿ ಸಿಂಹಗಡದ ಮೇಲಿನ ದಾಳಿಯ ವರ್ಣನೆ ಇದೆ. ಲಾವಣಿಯಲ್ಲಿ ತಾನಾಜಿ, ಶೇಲಾರಮಾಮಾ, ಶಿವಾಜಿ ಮಹಾರಾಜ, ವೀರಮಾತೆ ಜಿಜಾಬಾಯಿ ಇವರ ಸುಂದರ ಸ್ವಭಾವಚಿತ್ರ (ವೈಶಿಷ್ಟ್ಯ)ಗಳನ್ನು ಕೊಡಲಾಗಿದೆ. ಆ ಲಾವಣಿಯಲ್ಲಿಯ ಸ್ವಲ್ಪಭಾಗವನ್ನು ಇಲ್ಲಿ ಕೊಡಲಾಗಿದೆ.

ಮಾಮಾ ಬೋಲಾಯಾ ತೊ ಲಾಗಲಾ ‖ ಐಂಶಿ ವರ್ಷೀಚಾ ಮ್ಹಾತಾರಾ ‖
''ಲಗೀನ ರಾಹಿಲೆ ರಾಯಬಾಚೆ ತೊ ಮಜಲಾ ಸಾಂಗಾವಿ ‖
ಮಾಝ್ಯಾ ತಾನಾಜಿ ಸುಭೇದಾರಾ | ಜೆ ಗೇಲೆ ಸಿಂಹಗಡಾಲಾ ‖
ತ್ಯಾಚೆ ಪಾಠಿರೆ ಪಾಹಿಲೆ | ನಾಹಿ ಪುಢಾರೆ ಪಾಹಿಲೆ ‖
ಜ್ಯಾನೆ ಆಂಬಾರೆ ಖಈಲಾ | ಬಾತಾ ಬುಜರಾ ಲಾವಿಲಾ ‖
ತ್ಯಾಚೆ ಝೂಡ ಹೋವುನಿ ಆಂಬೆ ಬಾಂಧಲೆ |
ಕಿಲ್ಲಾ ಹಾತೀ ನಾಹೀ ಆಲಾ ‖
ಸಿಂಹಗಡ ಕಿಲ್ಲ್ಯಾಚಿ ವಾರ್ತಾ |
ಕಾಢೂ ನಕೊ ತಾನಾಜಿ ಸುಭೇದಾರಾ ‖
ಜೆ ಗೇಲೆ ಸಿಂಹಗಡಾಲಾ | ತೇ ಮರೂನಶಾನಿ ಗೇಲೆ ‖
ತುಮಚಾ ಸಪಾಟಾ ಹೋಯಿೀಲ | ಅಸೆ ಬೋಲೂ ನ ಕೋರೆ ಮಾಮಾ ‖
ಆಮ್ಹಿ ಸೂರಮರ್ದ ಕ್ಷತ್ರೀ | ನಾಹೀ ಭಿಣಾರ ಮರಣಾಲಾ ‖''
(ಎಂಭತ್ತು ವರ್ಷದ ವೃದ್ಧ ಶೇಲಾರಮಾಮಾ ಮಾತನಾಡ ತೊಡಗಿದನು.
ರಾಯಬಾನ ಮದುವೆಯಾಗಲಿಲ್ಲ. ಸುಭೇದಾರನಾದ ನನ್ನ ತಾನಾಜಿ
ಸಿಂಹಗಡದ ರಕ್ಷಣೆಗಾಗಿ ಕಾದಾಡಲು ಹೋದನು.
ಅವನ ಬೆನ್ನು ನೋಡಿದೆ ಆದರೆ ಮುಖನೋಡಲಿಲ್ಲ.
ಅವನು ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದನು.
ಹೋದವನು ಬರಲಿಲ್ಲ. ಕೋಟೆ ಕೈವಶವಾಗಲಿಲ್ಲ.
ಸಿಂಹಗಡ ಕೋಟೆಯ ಸುದ್ದಿಯನ್ನು ತೆಗೆಯಬೇಡ.
ಸಿಂಹಗಡದ ರಕ್ಷಣೆಗಾಗಿ ಹೋದವರು ವೀರಮರಣಹೊಂದಿದರು.
ನೀವೂ ಕೂಡ ನಷ್ಟವಾಗಲಿದ್ದೀರಿ.
ಮಾಮಾ ಹೀಗೆ ಮಾತನಾಡಬೇಡ. ನಾವು ಶೂರರೂ, ಪರಾಕ್ರಮಶಾಲಿಗಳೂ
ಆದ ಕ್ಷತ್ರಿಯರಾಗಿದ್ದು ಮರಣಕ್ಕೆ ಅಂಜುವವರಲ್ಲ)



**ಮಾತನಾಡಿರಿ.**

ಐತಿಹಾಸಿಕ ಸಾಧನಗಳ ಸಂರಕ್ಷಣೆ ಉಪಾಯಗಳನ್ನು ಸೂಚಿಸಿರಿ.

ಅವಶ್ಯಕವಾಗಿರುತ್ತದೆ. ಅದರ ವಿಶ್ವಾಸಾರ್ಹತೆಯನ್ನು ಪರಿಶೀಲಿಸಬೇಕಾಗುತ್ತದೆ. ಅವುಗಳಲ್ಲಿ ನೈಜವಾದ ಸಾಧನಗಳು ಯಾವವು ಹಾಗೂ ಕೃತ್ರಿಮ ಸಾಧನಗಳು ಯಾವವು ಎಂಬುದನ್ನು ಪರಿಶೋಧಿಸಬೇಕಾಗುತ್ತದೆ. ಅಂತರ್ಗತ ಸಾಕ್ಷ್ಯಾಧಾರಗಳನ್ನು ನೋಡಿ ಅವುಗಳ ದರ್ಜೆಯನ್ನು ನಿರ್ಧರಿಸಲು ಬರುತ್ತದೆ. ಲೇಖಕರ ಸತ್ಯಾಸತ್ಯತೆ, ಅವರ ವೈಯಕ್ತಿಕ ಹಿತಸಂಬಂಧ, ಕಾಲ, ರಾಜಕೀಯ ಒತ್ತಡ ಮುಂತಾದವುಗಳ ಅಭ್ಯಾಸವನ್ನೂ ಮಾಡಬೇಕಾಗುತ್ತದೆ. ಈ ಮಾಹಿತಿಯು ಕೇಳಿಕೆಯದಾಗಿದೆಯೋ ಅಥವಾ ಅವರು ಸ್ವತ: ನೋಡಿದ್ದಾರೆಯೋ ಎಂಬುದಕ್ಕೂ ಮಹತ್ವವಿರುತ್ತದೆ. ಲೇಖನದಲ್ಲಿಯ ಅತಿಶಯೋಕ್ತಿ, ಪ್ರತಿಮೆ, ಪ್ರತೀಕ, ಅಲಂಕಾರಗಳು- ಇವುಗಳ ವಿಚಾರವನ್ನೂ ಮಾಡಬೇಕಾಗುತ್ತದೆ. ಇತರ ಸಮಕಾಲೀನ ಸಾಧನಗಳ ಜೊತೆಗೆ ಆ ಮಾಹಿತಿಯನ್ನು ಪರಸ್ಪರ ಹೋಲಿಸಿ ನೋಡಬೇಕಾಗುತ್ತದೆ. ನಮಗೆ ದೊರೆತ ಮಾಹಿತಿಯು ಏಕಾಂಗಿ, ಅಸಂಬದ್ಧ ಇಲ್ಲವೆ ಅತಿರಂಜಿತವಾಗಿರುವ ಸಾಧ್ಯತೆಯನ್ನು ನಿರಾಕರಿಸಲಾಗುವುದಿಲ್ಲ. ಅದಕ್ಕಾಗಿ ಅವುಗಳನ್ನು ಬಳಸುವಾಗ ವಿವೇಚನೆಯನ್ನು ಮಾಡಬೇಕಾಗುತ್ತದೆ. ಯಾವತ್ತೂ ಪರಿಶೀಲನೆಯನ್ನು ಮಾಡಿಯೇ ಈ ಸಾಧನಗಳನ್ನು ಬಳಸುವ ಎಚ್ಚರಿಕೆ ವಹಿಸುವುದು ಅವಶ್ಯಕವಾಗಿರುತ್ತದೆ. ಇತಿಹಾಸ ಲೇಖನದಲ್ಲಿ ಲೇಖಕನ ನಿಷ್ಪಕ್ಷಪಾತತನ ಹಾಗೂ ತಟಸ್ಥತೆ ಈ ಗುಣಗಳು ತುಂಬಾ ಮಹತ್ವದ್ದಾಗಿರುತ್ತವೆ.



## ಅಭ್ಯಾಸ

**1. ಕೆಳಗಿನ ಚೌಕಟ್ಟಿನಲ್ಲಿ ಅಡಗಿದ ಐತಿಹಾಸಿಕ ಸಾಧನಗಳ ಹೆಸರುಗಳನ್ನು ಹುಡುಕಿ ಬರೆಯಿರಿ.**

| | | | | | |
|---|---|---|---|---|---|
| ತಾ | ದಂ | ತ | ಕ | ಥೆ | ರ್ಜು |
| ರ | ನಾ | ಲಾ | ವಾ | ದ್ಯ | ಚ |
| ಖಿ | ಣ್ಯ | ಗ್ರಂ | ಕ | ಚಿ | ಅ |
| ಬ | ಮು | ಥ | ಶ್ಲೋ | ತ್ರ | ಭಂ |
| ಲಾ | ವ | ಣಿ | ಪ | ದ | ಗ |
| ಶಿ | ಲಾ | ಲೇ | ಪ | ಕ | ತೆ |

**2. ಉತ್ತರ ಬರೆಯಿರಿ.**

(1) ಸ್ಮಾರಕಗಳಲ್ಲಿ ಯಾವ ಯಾವ ವಸ್ತುಗಳು ಸಮಾವೇಶವಾಗುತ್ತದೆ ?

(2) ತವಾರಿಖ ಎಂದರೇನು ?

(3) ಇತಿಹಾಸ ಲೇಖನದಲ್ಲಿ ಲೇಖಕರ ಯಾವ ಗುಣಗಳು ಮಹತ್ವದ್ದಾಗಿರುತ್ತವೆ ?

**3. ಗುಂಪಿನಲ್ಲಿಯ ಬೇರೆ ಶಬ್ದವನ್ನು ಹುಡುಕಿ ಬರೆಯಿರಿ.**

(1) ಭೌತಿಕ ಸಾಧನಗಳು, ಲಿಖಿತ ಸಾಧನಗಳು, ಅಲಿಖಿತ ಸಾಧನಗಳು, ಮೌಖಿಕ ಸಾಧನಗಳು

(2) ಸ್ಮಾರಕಗಳು, ನಾಣ್ಯಗಳು, ಗುಹೆಗಳು, ಕಥೆಗಳು

(3) ಭೂರ್ಜಪತ್ರಗಳು, ಮಂದಿರಗಳು, ಗ್ರಂಥಗಳು, ಚಿತ್ರಗಳು

(4) ಬೀಸುವ ಕಲ್ಲಿನ ಹಾಡುಗಳು, ತವಾರಿಖ, ಕಥೆಗಳು, ಮಿಥಿಕಗಳು

**4. ಕೆಳಗಿನ ಕಲ್ಪನೆಗಳನ್ನು ಸ್ಪಷ್ಟಪಡಿಸಿರಿ.**

(1) ಭೌತಿಕ ಸಾಧನಗಳು

(2) ಲಿಖಿತ ಸಾಧನಗಳು

(3) ಮೌಖಿಕ ಸಾಧನಗಳು

**5.** ಐತಿಹಾಸಿಕ ಸಾಧನಗಳ ಮೌಲ್ಯಮಾಪನ ಮಾಡುವುದು ಅವಶ್ಯಕವಾಗಿರುತ್ತದೆಯೇ? ನಿಮ್ಮ ಅಭಿಪ್ರಾಯವನ್ನು ಹೇಳಿರಿ.

**6. ನಿಮ್ಮ ಅಭಿಪ್ರಾಯ ಬರೆಯಿರಿ.**

(1) ಶಿಲಾಲೇಖವನ್ನು ಇತಿಹಾಸ ಲೇಖನದ ವಿಶ್ವಾಸಾರ್ಹ ಸಾಕ್ಷ್ಯಾಧಾರವೆಂದು ತಿಳಿಯಲಾಗುತ್ತದೆ.

(2) ಮೌಖಿಕ ಸಾಧನಗಳ ಆಧಾರದಿಂದ ಜನರ ಜೀವನದ ವಿವಿಧ ಆಯಾಮಗಳು ತಿಳಿಯುತ್ತವೆ.

**ಉಪಕ್ರಮ:**

ಸಮೀಪದ ಯಾವುದೇ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿರಿ. ನೀವು ಅಭ್ಯಾಸ ಮಾಡುತ್ತಿರುವ ಕಾಲಖಂಡದಲ್ಲಿಯ ಇತಿಹಾಸದ ಸಾಧನಗಳ ಮಾಹಿತಿಯನ್ನು ಪಡೆಯಿರಿ. ನಿಮ್ಮ ಉಪಕ್ರಮದ ನೋಟಬುಕ್ಕಿನಲ್ಲಿ ಅದನ್ನು ಬರೆಯಿರಿ.

▪ ▪ ▪

BH5LKR

# 2. ಶಿವಪೂರ್ವಕಾಲದ ಭಾರತ

ಈ ಪಾಠದಲ್ಲಿ ನಾವು ಶಿವಪೂರ್ವಕಾಲದಲ್ಲಿಯ ಭಾರತದಲ್ಲಿಯ ವಿವಿಧ ರಾಜಪ್ರಭುತ್ವಗಳ ಅಭ್ಯಾಸ ಮಾಡುವವರಿದ್ದೇವೆ. ಈ ಕಾಲದಲ್ಲಿ ಭಾರತದಲ್ಲಿ ವಿವಿಧ ರಾಜಪ್ರಭುತ್ವಗಳು ಅಸ್ತಿತ್ವದಲ್ಲಿದ್ದವು.

ಎಂಟನೆಯ ಶತಮಾನದಲ್ಲಿ ಬಂಗಾಲದಲ್ಲಿ 'ಪಾಲ' ಎಂಬ ಪ್ರಸಿದ್ಧ ರಾಜಮನೆತನವಿತ್ತು. ಮಧ್ಯ ಭಾರತದಲ್ಲಿ ಗುರ್ಜರ-ಪ್ರತಿಹಾರ ರಾಜರು ಆಂಧ್ರ, ಕಲಿಂಗ, ವಿದರ್ಭ, ಪಶ್ಚಿಮ ಕಾಠೇವಾಡ, ಕನೋಜ ಹಾಗೂ ಗುಜರಾತವರೆಗೆ ರಾಜ್ಯವಿಸ್ತಾರ ಮಾಡಿದರು.

ಉತ್ತರ ಭಾರತದಲ್ಲಿಯ ರಾಜಪೂತ ಮನೆತನಗಳಲ್ಲಿ ಗಾಹಡವಾಲ ಮನೆತನ ಮತ್ತು ಪರಮಾರ ಮನೆತನಗಳು ಮಹತ್ವದ್ದಾಗಿದ್ದವು. ರಾಜಪೂತರಲ್ಲಿ ಚೌಹಾನ ಮನೆತನದಲ್ಲಿಯ ಪೃಥ್ವಿರಾಜ ಚೌಹಾನ ಇವನು ಪರಾಕ್ರಮಶಾಲಿಯಾದ ರಾಜನಾಗಿದ್ದನು. ತರಾಯಿ ಎಂಬಲ್ಲಿಯ ಮೊದಲನೆಯ ಯುದ್ಧದಲ್ಲಿ ಪೃಥ್ವಿರಾಜ ಚೌಹಾನ ಇವನು ಮುಹಮ್ಮದ ಘೋರಿಯನ್ನು ಸೋಲಿಸಿದ್ದನು. ಆದರೆ ತರಾಯಿಯ ಎರಡನೆಯ ಯುದ್ಧದಲ್ಲಿ ಮುಹಮ್ಮದ ಘೋರಿಯು ಪೃಥ್ವಿರಾಜ ಚೌಹಾನನನ್ನು ಸೋಲಿಸಿದನು.

ತಮಿಳುನಾಡಿನ ಚೋಳ ಮನೆತನದಲ್ಲಿ ಒಂದನೆಯ ರಾಜರಾಜ ಹಾಗೂ ಒಂದನೆಯ ರಾಜೇಂದ್ರ ಇವರು ಪ್ರಸಿದ್ಧ ರಾಜರಾಗಿದ್ದರು. ಚೋಳರು ನೌಕಾಪಡೆಯ ನೆರವಿನಿಂದ ಮಾಲದೀವ ದ್ವೀಪ ಹಾಗೂ ಶ್ರೀಲಂಕಾಗಳನ್ನು ಗೆದ್ದುಕೊಂಡರು. ಕರ್ನಾಟಕದಲ್ಲಿಯ ಹೊಯ್ಸಳ ಮನೆತನದಲ್ಲಿಯ ವಿಷ್ಣುವರ್ಧನ ಎಂಬ ರಾಜನು ಸಂಪೂರ್ಣ ಕರ್ನಾಟಕವನ್ನು ಗೆದ್ದುಕೊಂಡನು.

ಮಹಾರಾಷ್ಟ್ರದಲ್ಲಿಯ ರಾಷ್ಟ್ರಕೂಟ ಮನೆತನದ ಮೂರನೆಯ ಗೋವಿಂದನ ಆಡಳಿತದಲ್ಲಿ ರಾಷ್ಟ್ರಕೂಟರ ರಾಜ್ಯವು ಕನೋಜದಿಂದ ರಾಮೇಶ್ವರದ ವರೆಗೆ ಹರಡಿತು. ಮುಂದೆ ಮೂರನೆಯ ಕೃಷ್ಣನು ಅಲಹಾಬಾದ ವರೆಗಿನ ಪ್ರದೇಶವನ್ನು ಗೆದ್ದುಕೊಂಡನು.

ಶಿಲಾಹಾರರ ಮೂರು ಮನೆತನಗಳು ಪಶ್ಚಿಮ ಮಹಾರಾಷ್ಟ್ರದಲ್ಲಿ ಉದಯವಾದವು. ಮೊದಲನೆಯ ಮನೆತನವು ಉತ್ತರ ಕೊಂಕಣದ ಠಾಣೆ ಮತ್ತು ರಾಯಗಡಗಳಲ್ಲಿ, ಎರಡನೆಯ ಮನೆತನವು ದಕ್ಷಿಣ ಕೊಂಕಣದಲ್ಲಿ ಹಾಗೂ ಮೂರನೆಯ ಮನೆತನವು ಕೊಲ್ಹಾಪೂರ, ಸಾತಾರಾ, ಸಾಂಗಲಿ ಮತ್ತು ಬೆಳಗಾವಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ರಾಜ್ಯವಾಳುತ್ತಿದ್ದವು.

ಶಿವಪೂರ್ವ ಕಾಲದಲ್ಲಿಯ ಕೊನೆಯ ವೈಭವಶಾಲಿ ರಾಜಪ್ರಭುತ್ವವೆಂದರೆ ಮಹಾರಾಷ್ಟ್ರದಲ್ಲಿಯ ಯಾದವರ ರಾಜಪ್ರಭುತ್ವ, ಯಾದವ ಮನೆತನದಲ್ಲಿಯ ಐದನೆಯ ಭಿಲ್ಲಮನ ರಾಜಧಾನಿಯು ಔರಂಗಾಬಾದ್ ಹತ್ತಿರದ ದೇವಗಿರಿ ಎಂಬಲ್ಲಿ ಇತ್ತು. ಅವನು ಕೃಷ್ಣಾನದಿಯ ಆಚೆಕಡೆ ರಾಜ್ಯವಿಸ್ತಾರ ಮಾಡಿದನು.

ಯಾದವರ ಕಾಲವನ್ನು ಮರಾಠಿ ಭಾಷೆ ಮತ್ತು ಸಾಹಿತ್ಯಗಳ ಸುವರ್ಣಯುಗವೆಂದೇ ತಿಳಿಯಬೇಕಾಗುತ್ತದೆ. ಇದೇ ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಮಹಾನುಭಾವ ಮತ್ತು ವಾರಕರಿ ಸಂಪ್ರದಾಯಗಳ ಉದಯವಾಯಿತು.

## ವಾಯುವ್ಯದ ಕಡೆಯ ಆಕ್ರಮಣಗಳು

ಮಹಾರಾಷ್ಟ್ರದಲ್ಲಿ ರಾಷ್ಟ್ರಕೂಟ, ಯಾದವ ಹೀಗೆ ಸ್ಥಾನಿಕ ಮನೆತನಗಳ ಆಡಳಿತವಿದ್ದರೂ ಉತ್ತರದಲ್ಲಿ ಮಾತ್ರ ವಾಯವ್ಯ ಕಡೆಯಿಂದ ಬಂದ ಆಕ್ರಮಣಕಾರರು ಅಲ್ಲಿಯ ಸ್ಥಾನಿಕ ಆಡಳಿತವನ್ನು ಗೆದ್ದುಕೊಂಡು ತಮ್ಮ ಆಡಳಿತವನ್ನು ಸ್ಥಾಪಿಸಿದರು.

ನಡುವಿನ ಕಾಲದಲ್ಲಿ ಮಧ್ಯ ಪೂರ್ವದಲ್ಲಿ ಅರಬ ಆಡಳಿತವು ಉದಯಕ್ಕೆ ಬಂದಿತು. ಸಾಮ್ರಾಜ್ಯದ ವಿಸ್ತಾರ ಮಾಡುವ ಸಲುವಾಗಿ ಅರಬ ಆಡಳಿತಗಾರರು ಭಾರತದ ಕಡೆಗೆ ತಿರುಗಿದರು. ಎಂಟನೆಯ ಶತಮಾನದಲ್ಲಿ ಮುಹಮ್ಮದ ಬಿನ ಕಾಸಿಮ ಎಂಬ ಅರಬ ಸೇನಾನಿಯು ಸಿಂಧ ಪ್ರಾಂತದ ಮೇಲೆ ದಾಳಿ ಮಾಡಿದನು. ಅಲ್ಲಿಯ ದಾಹೀರ ರಾಜನ ವಿರೋಧವನ್ನು ಅಡಗಿಸಿ ಅವನು ಸಿಂಧ ಪ್ರಾಂತವನ್ನು ಗೆದ್ದು ಕೊಂಡನು. ಈ ದಾಳಿಯಿಂದಾಗಿ ಭಾರತೀಯರ ಜೊತೆ ಅರಬರ ರಾಜಕೀಯ ಸಂಬಂಧ ಪ್ರಥಮವಾಗಿ ಬಂದಿತು. ಈ ಮಂದಿನ ಕಾಲದಲ್ಲಿ ಮಧ್ಯ ಏಶಿಯಾದಲ್ಲಿಯ ತುರ್ಕ, ಅಫಗಾಣ, ಮುಘಲ ಈ ಜನರು ಭಾರತದಲ್ಲಿ ಬಂದರು ಮತ್ತು ಅವರು ಭಾರತದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು.

ಕ್ರಿಸ್ತಶಕ ಹನ್ನೊಂದನೆಯ ಶತಮಾನದಲ್ಲಿ ಭಾರತದ ಮೇಲೆ ತುರ್ಕರ ಆಕ್ರಮಣವಾಗತೊಡಗಿದವು. ಅವರು ತಮ್ಮ ರಾಜ್ಯವನ್ನು ವಿಸ್ತರಿಸುತ್ತ ಭಾರತದ ವಾಯವ್ಯ ಸರಹದ್ದಿನ ವರೆಗೆ ಬಂದರು. ಗಝನಿಯ ಸುಲ್ತಾನನಾದ ಮಹಮೂದ ಇವನು ಭಾರತದ ಮೇಲೆ ಅನೇಕ ದಾಳಿಗಳನ್ನು ಮಾಡಿದನು. ಈ ದಾಳಿಗಳಲ್ಲಿ ಅವನು ಮಥುರಾ, ವೃಂದಾವನ, ಕನೋಜ, ಸೋಮನಾಥಗಳಲ್ಲಿಯ ಸಮೃದ್ಧ ಮಂದಿರಗಳನ್ನು ಲೂಟಿ ಮಾಡಿ ಅಲ್ಲಿಯ ಅಪಾರ ಸಂಪತ್ತನ್ನು ತನ್ನ ಜೊತೆ ಒಯ್ದನು. ಬಖ್ತ್ಯಾರ ಖಲ್ಜಿ ಇವರು ಜಗತ್ಪ್ರಸಿದ್ಧವಾದ ನಾಲಂದಾ ವಿಶ್ವವಿದ್ಯಾಲಯದಲ್ಲಿಯ ಸಮೃದ್ಧ ಗ್ರಂಥಾಲಯ ಸುಟ್ಟು ಹಾಕಿದರು.

## ಉತ್ತರದಲ್ಲಿಯ ಸುಲ್ತಾನ ಶಾಹಿ

ಕ್ರಿ.ಶ. 1175 ಹಾಗೂ 1178 ರಲ್ಲಿ ಅಫಗಾಣಿಸ್ತಾನದ ಘೂರ ಎಂಬಲ್ಲಿಯ ಸುಲ್ತಾನ ಮುಹಮ್ಮದ ಘೋರಿ ಇವನು ಭಾರತದ ಮೇಲೆ ಆಕ್ರಮಣ ಮಾಡಿದನು. ಭಾರತದಲ್ಲಿಯ ಗೆದ್ದುಕೊಂಡ ಪ್ರದೇಶಗಳ ಆಡಳಿತವನ್ನು ನೋಡಿಕೊಳ್ಳುವ

ಸಲುವಾಗಿ ಅವನು ಕುತುಬುದ್ದೀನ ಐಬಕ ಇವನ ನೇಮಕಮಾಡಿದನು. ಮುಂದೆ ಕ್ರಿ.ಶ. 1206 ರಲ್ಲಿ ಮುಹಮ್ಮದ ಘೋರಿಯ ಮರಣದ ನಂತರ ಐಬಕನು ತನ್ನ ಪ್ರಭುತ್ವದಲ್ಲಿ ಭಾರತದಲ್ಲಿಯ ಪ್ರದೇಶಗಳ ಆಡಳಿತವನ್ನು ಸ್ವತಂತ್ರವಾಗಿ ನೋಡಿಕೊಳ್ಳಲು ಆರಂಭಿಸಿದನು. ಮೂಲತ: ಗುಲಾಮನಾಗಿದ್ದ ಐಬಕನು ದಿಲ್ಲಿಯ ಆಡಳಿತಗಾರನಾದನು. ಕ್ರಿ.ಶ. 1210 ರಲ್ಲಿ ಅವನು ಮರಣ ಹೊಂದಿದನು.

**ನಿಮಗೆ ಗೊತ್ತಿದೆಯೇ ?**

ಕುತುಬುದ್ದೀನ ಐಬಕನ ನಂತರ ಅಲ್ತಮಶ, ರಝಿಯಾ, ಬಲ್ಬನ್, ಅಲ್ಲಾವುದ್ದೀನ ಖಿಲ್ಜಿ, ಮುಹಮ್ಮದ ತುಘಲಕ, ಫಿರೋಜ ತುಘಲಕ, ಇಬ್ರಾಹಿಂ ಲೋದಿ ಮುಂತಾದ ಸುಲ್ತಾನರು ಭಾರತದಲ್ಲಿ ರಾಜ್ಯಭಾರ ಮಾಡಿದರು.

ಇಬ್ರಾಹಿಂ ಲೋದಿ ಇವನು ಕೊನೆಯ ಸುಲ್ತಾನನು. ಅವನ ಸ್ವಭಾವದೋಷದಿಂದಾಗಿ ಅವನಿಗೆ ಅನೇಕ ಶತ್ರುಗಳು ನಿರ್ಮಾಣವಾದರು. ಪಂಜಾಬದ ಸುಭೇದಾರನಾದ ದೌಲತಖಾನ ಲೋದಿ ಇವನು ಕಾಬೂಲ ಎಂಬಲ್ಲಿಯ ಮುಘಲ ರಾಜನಾದ ಬಾಬರನಿಗೆ ಇಬ್ರಾಹಿಂ ಲೋದಿಯ ವಿರುದ್ಧ ಹೋರಾಡಲು ಕರೆ ನೀಡಿದನು. ಈ ಯುದ್ಧದಲ್ಲಿ ಬಾಬರನು ಇಬ್ರಾಹಿಂಲೋದಿಯನ್ನು ಪರಭಾವಗೊಳಿಸಿದನು ಹಾಗೂ ಅದರ ಜೊತೆ ಸುಲ್ತಾನಶಾಹಿಯು ಕೊನೆಗೊಂಡಿತು.

## ವಿಜಯನಗರದ ರಾಜ್ಯ

ದಿಲ್ಲಿಯ ಸುಲ್ತಾನನಾದ ಮುಹಮ್ಮದ ತುಘಲಕನ ಆಡಳಿತ ಕಾಲದಲ್ಲಿ ದಿಲ್ಲಿಯ ಕೇಂದ್ರಾಡಳಿತದ ವಿರುದ್ಧ ದಕ್ಷಿಣದಲ್ಲಿ ಬಂಡಾಯಗಳಾದವು. ಅದರೊಳಗಿಂದ ವಿಜಯನಗರ ಮತ್ತು ಬಹಮನಿ ಎಂಬ ಎರಡು ಪ್ರಬಲ ರಾಜ್ಯಗಳು ಉದಯವಾದವು.

ದಕ್ಷಿಣ ಭಾರತದಲ್ಲಿಯ ಹರಿಹರ ಮತ್ತು ಬುಕ್ಕ ಎಂಬ ಇಬ್ಬರು ಸಹೋದರರು ದಿಲ್ಲಿಯ ಸುಲ್ತಾನಶಾಹಿಯ ಸೇವೆಯಲ್ಲಿ ಸರದಾರರಾಗಿದ್ದರು. ಮುಹಮ್ಮದ ತುಘಲಕನ ಕಾಲದಲ್ಲಿ ದಕ್ಷಿಣದಲ್ಲಿಯ ರಾಜಕೀಯ ಅಸ್ಥಿರತೆಯ ಲಾಭವನ್ನು ಪಡೆದು ಅವರು ಕ್ರಿ.ಶ. 1336 ರಲ್ಲಿ ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಮಾಡಿದರು. ಇಂದಿನ ಕರ್ನಾಟಕದಲ್ಲಿಯ 'ಹಂಪಿ' ಇದು ಈ ರಾಜ್ಯದ ರಾಜಧಾನಿಯಾಗಿತ್ತು. ಹರಿಹರ ಈತನು ವಿಜಯನಗರದ ಮೊದಲನೆಯ ರಾಜನಾಗಿದ್ದನು.

ಹರಿಹರನ ನಂತರ ಅವನ ತಮ್ಮ ಬುಕ್ಕನು ಅಧಿಕಾರಕ್ಕೆ ಬಂದನು. ಬುಕ್ಕನು ರಾಮೇಶ್ವರದ ವರೆಗಿನ ಪ್ರದೇಶವನ್ನು ತನ್ನ ಅಧಿಪತ್ಯಕ್ಕೆ ಸೇರಿಸಿದನು.



ಕೃಷ್ಣದೇವರಾಯ

## ಕೃಷ್ಣದೇವರಾಯ:

ಕೃಷ್ಣದೇವರಾಯನು ಕ್ರಿ.ಶ. 1509 ರಲ್ಲಿ ವಿಜಯನಗರ ಸಾಮ್ರಾಜ್ಯದ ಪಟ್ಟಕ್ಕೆ ಬಂದನು. ಅವನು ವಿಜಯವಾಡಾ ಮತ್ತು ರಾಜಮಹೇಂದ್ರಿ ಎಂಬ ಪ್ರದೇಶಗಳನ್ನು ಗೆದ್ದು ತನ್ನ ಸಾಮ್ರಾಜ್ಯಕ್ಕೆ ಜೋಡಿಸಿದನು. ಬಹಮನಿ ಸುಲ್ತಾನ ಮಹಮೂದಶಾಹ ಇವನ ನೇತೃತ್ವದಲ್ಲಿ ಒಂದುಗೂಡಿದ ಸುಲ್ತಾನರ ಸಂಯುಕ್ತ ಸೈನ್ಯವನ್ನು ಅವನು ಸೋಲಿಸಿದನು. ಕೃಷ್ಣದೇವರಾಯನ ಆಡಳಿತದಲ್ಲಿ ವಿಜಯನಗರ ಸಾಮ್ರಾಜ್ಯವು ಪೂರ್ವದಲ್ಲಿ ಕಟಕದಿಂದ ಹಿಡಿದು ಪಶ್ಚಿಮದಲ್ಲಿ ಗೋವಾದ ವರೆಗೆ ಹಾಗೂ ಉತ್ತರದಲ್ಲಿ ರಾಯಚೂರ ದೋಆಬದಿಂದ ಹಿಡಿದು ದಕ್ಷಿಣದಲ್ಲಿ ಹಿಂದೀ ಮಹಾಸಾಗರದವರೆಗೆ ಹಬ್ಬಿತ್ತು. ಕ್ರಿ.ಶ. 1530 ರಲ್ಲಿ ಅವನು ಮರಣಹೊಂದಿದನು.

ಕೃಷ್ಣೇವರಾಯನು ವಿದ್ವಾಂಸನಾಗಿದ್ದನು. ಅವನು ತೆಲುಗು ಭಾಷೆಯಲ್ಲಿ 'ಆಮುಕ್ತಮಾಲ್ಯದಾ' ಎಂಬ ರಾಜನೀತಿಗೆ ಸಂಬಂಧಿಸಿದ ಗ್ರಂಥವನ್ನು ಬರೆದನು. ಅವನ ಆಡಳಿತಾವಧಿಯಲ್ಲಿ ವಿಜಯನಗರದಲ್ಲಿ ಹಜಾರರಾಮ ಮಂದಿರ ಮತ್ತು ವಿಠ್ಠಲ ಮಂದಿರಗಳ ನಿರ್ಮಾಣವಾಯಿತು.

ಕೃಷ್ಣದೇವರಾಯನ ನಂತರ ವಿಜಯನಗರ ಸಾಮ್ರಾಜ್ಯದ ಅವನತಿ ಆರಂಭವಾಯಿತು. ಇಂದಿನ ಕರ್ನಾಟಕ ರಾಜ್ಯದ ತಾಳಿಕೋಟೆ ಎಂಬಲ್ಲಿ ಇನ್ನೊಂದು ಕಡೆ ಆದಿಲಶಾಹಿ, ನಿಜಾಮಶಾಹಿ, ಕುತುಬಶಾಹಿ, ಬರೀದಶಾಹಿ ಹಾಗೂ ಎರಡನೆಯ ಬದಿಗೆ ವಿಜಯನಗರದ ರಾಜನಾದ ರಾಮರಾಯನ ನಡುವೆ ಕ್ರಿ.ಶ. 1565ರಲ್ಲಿ ಯುದ್ಧವಾಯಿತು. ಈ ಯುದ್ಧದಲ್ಲಿ ಅವರ ಪರಾಭವವಾಯಿತು. ಅದರ ನಂತರ ವಿಜಯನಗರ ಸಾಮ್ರಾಜ್ಯವು ಕೊನೆಗೊಂಡಿತು.

## ಬಹಮನಿ ರಾಜ್ಯ

ಮುಹಮ್ಮದ ತುಘಲಕನ ದಬ್ಬಾಳಿಕೆಯನ್ನು ಪ್ರತಿಭಟಿಸುವ ಸಲುವಾಗಿ ದಕ್ಷಿಣದಲ್ಲಿ ಸರದಾರರು ಬಂಡುಹೂಡಿದರು. ಈ ಸರದಾರರ ಪ್ರಮುಖನಾದ ಹಸನ ಗಂಗೂ ಇವನು ದಿಲ್ಲಿಯ ಸುಲ್ತಾನನ ಸೈನ್ಯವನ್ನು ಸೋಲಿಸಿದನು. ಕ್ರಿ.ಶ. 1347 ರಲ್ಲಿ ಹೊಸ ರಾಜ್ಯವು ಅಸ್ತಿತ್ವದಲ್ಲಿ ಬಂದಿತು. ಇದಕ್ಕೆ ಬಹಮನಿ ರಾಜ್ಯ ಎಂದು ಕರೆಯುತ್ತಾರೆ. ಹಸನ ಗಂಗೂ ಇವನು ಬಹಮನಿ ರಾಜ್ಯದ ಮೊದಲನೆಯ ಸುಲ್ತಾನನಾದನು. ಅವನು ಕರ್ನಾಟಕ ರಾಜ್ಯದ 'ಗುಲಬರ್ಗಾ' ಎಂಬಲ್ಲಿ ತನ್ನ ರಾಜಧಾನಿಯನ್ನು ಸ್ಥಾಪಿಸಿದನು.

**ಮಹಮೂದ ಗಾವಾನ್:** ಇವನು ಬಹಮನಿ ರಾಜ್ಯದ ಪ್ರಧಾನ ಮಂತ್ರಿಯಾಗಿದ್ದು ಉತ್ತಮ ಆಡಳಿತಗಾರನಾಗಿದ್ದನು. ಅವನು ಬಹಮನಿ ರಾಜ್ಯಕ್ಕೆ ಆರ್ಥಿಕ ಸಾಮರ್ಥ್ಯವನ್ನು ದೊರಕಿಸಿಕೊಟ್ಟನು. ಸೈನಿಕರಿಗೆ ಜಹಗೀರುಗಳನ್ನು ನೀಡುವ ಬದಲಾಗಿ ನಗದು ಸಂಬಳ ನೀಡಲು ಆರಂಭಿಸಿದನು. ಸೈನ್ಯದಲ್ಲಿ ಶಿಸ್ತು ಸ್ಥಾಪಿಸಿದನು. ಭೂಕಂದಾಯ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಿದನು. ಅವನು ಬೀದರನಲ್ಲಿ ಅರಬಿ ಮತ್ತು ಫಾರ್ಸಿ ಭಾಷೆಗಳ ಅಭ್ಯಾಸಕ್ಕಾಗಿ ಮದರಸಾ ಸ್ಥಾಪಿಸಿದನು.

ಮಹಮೂದ ಗಾವಾನನ ನಂತರ ಬಹಮನಿ ಸರದಾರರಲ್ಲಿ ಗುಂಪುಗಾರಿಕೆಹೆಚ್ಚಿತು. ವಿಜಯನಗರಮತ್ತು ಬಹಮನಿಗಳಲ್ಲಿಯ ಸಂಘರ್ಷದ ಪ್ರತಿಕೂಲ ಪರಿಣಾಮವು ಬಹಮನಿ ರಾಜ್ಯದ ಮೇಲಾಯಿತು. ವಿವಿಧ ಪ್ರಾಂತಗಳಲ್ಲಿಯ ಅಧಿಕಾರಿಗಳು ಸ್ವತಂತ್ರವಾಗಿ ವರ್ತಿಸತೊಡಗಿದರು. ಬಹಮನಿ ರಾಜ್ಯವು ಒಡೆಯಿತು. ಅದರೊಳಗಿಂದ ವರ್‍ಹಾಡದ ಇಮಾದಶಾಹಿ, ಬೀದರದ ಬರೀದಶಾಹಿ, ವಿಜಾಪುರದ ಆದಿಲಶಾಹಿ, ಅಹಮದನಗರದ ನಿಜಾಮಶಾಹಿ ಮತ್ತು ಗೋವಳಕೊಂಡದ ಕುತುಬಶಾಹಿ. ಈ ರೀತಿ ಬಹಮನಿ ರಾಜ್ಯದ ಐದು ಶಾಖೆಗಳಾದವು.

## ಮುಘಲ ಸಾಮ್ರಾಜ್ಯ

ಕ್ರಿ.ಶ. 1526ರಲ್ಲಿ ದಿಲ್ಲಿಯಲ್ಲಿಯ ಸುಲ್ತಾನಶಾಹಿಯು ಕೊನೆಗೊಂಡಿತು. ಅಲ್ಲಿ ಮುಘಲ ಸಾಮ್ರಾಜ್ಯದ ಸ್ಥಾಪನೆಯಾಯಿತು.

**ಬಾಬರ:** ಬಾಬರನು ಮುಘಲ ಸಾಮ್ರಾಜ್ಯದ ಸಂಸ್ಥಾಪಕನು. ಅವನು ಮಧ್ಯ ಏಷ್ಯಾದಲ್ಲಿಯ ಈಗಿನ ಉಝುಬೇಕಿಸ್ತಾನದಲ್ಲಿರುವ ಫರ್ಘಾನಾ ರಾಜ್ಯದ ರಾಜನಾಗಿದ್ದನು. ಭಾರತದಲ್ಲಿಯ ಸಂಪತ್ತಿನ ಬಗೆಗಿನ ವರ್ಣನೆಯನ್ನು ಅವನು ಕೇಳಿದ್ದನು. ಆದ್ದರಿಂದಲೇ ಅವನು ಭಾರತದ ಮೇಲಿನ ದಾಳಿಯ ರೂಪುರೇಷೆಯನ್ನು ತಯಾರಿಸಿದನು.

ದಿಲ್ಲಿಯಲ್ಲಿ ಆ ಸಮಯದಲ್ಲಿ ಇಬ್ರಾಹಿಂ ಲೋದಿ ಎಂಬ ಸುಲ್ತಾನನು ರಾಜ್ಯಾಡಳಿತ ಮಾಡುತ್ತಿದ್ದನು. ಸುಲ್ತಾನಶಾಹಿಯ ಪಂಜಾಬಿನ ಪ್ರದೇಶದಲ್ಲಿ ದೌಲತಖಾನ್ ಲೋದಿ ಎಂಬ ಪ್ರಮುಖ ಅಧಿಕಾರಿಯು ಇದ್ದನು. ಇಬ್ರಾಹಿಂ ಲೋದಿ ಮತ್ತು ದೌಲತಖಾನ ಲೋದಿ ಇವರು ಸಂಬಂಧಗಳಲ್ಲಿ ಸಂಘರ್ಷ ನಿರ್ಮಾಣವಾಯಿತು. ಭಾರತದ ಮೇಲೆ ಆಕ್ರಮಣ ಮಾಡುವ ಸಲುವಾಗಿ ದೌಲತಖಾನನು ಬಾಬರನನ್ನು ಆಮಂತ್ರಿಸಿದನು. ಈ ಅವಕಾಶದ ಲಾಭ ಪಡೆದು ಬಾಬರನು ಭಾರತದ ಮೇಲೆ ಆಕ್ರಮಣ ಮಾಡಿದನು. ಬಾಬರನ ಆಕ್ರಮಣವನ್ನು ವಿರೋಧಿಸುವ ಸಲುವಾಗಿ ಇಬ್ರಾಹಿಂ ಲೋದಿಯು ಸೈನ್ಯದೊಂದಿಗೆ ಹೊರಟನು 21 ಎಪ್ರಿಲ 1526 ರಂದು ಇಬ್ರಾಹಿಂ ಲೋದಿ ಮತ್ತು ಬಾಬರ ಇವರ ನಡುವೆ ಪಾನಿಪತ ಎಂಬಲ್ಲಿ ಯುದ್ಧವಾಯಿತು. ಈ ಯುದ್ಧದಲ್ಲಿ ಬಾಬರನು ಭಾರತದಲ್ಲಿ ಮೊದಲಬಾರಿಗೆ ಪರಿಣಾಮಕಾರಿಯಾಗಿ ತೋಪುಗಳ ಉಪಯೋಗವನ್ನು ಮಾಡಿದನು. ಅವನು ಇಬ್ರಾಹಿಂ ಲೋದಿಯ ಸೈನ್ಯವನ್ನು ಸೋಲಿಸಿದನು. ಇದು 'ಮೊದಲನೆಯ ಪಾನಿಪತ್ ಯುದ್ಧ' ವಾಗಿದೆ.

ಈ ಯುದ್ಧದ ನಂತರ ಮೇವಾಡದ ರಾಣಾಸಂಗನು ರಜಪೂತ ರಾಜರನ್ನು ಒಂದುಗೂಡಿಸಿದನು. ಬಾಬರ ಮತ್ತು ರಾಣಾಸಂಗ ಇವರ ನಡುವೆ ಖಾನುಆ ಎಂಬ ಸ್ಥಳದಲ್ಲಿ ಯುದ್ಧವಾಯಿತು. ಈ ಯುದ್ಧದಲ್ಲಿ ಬಾಬರನ ಫಿರಂಗಿ ಪಡೆ ಮತ್ತು ಮೀಸಲು ಸೈನ್ಯವು ಪ್ರಭಾವಶಾಲಿಯಾದ ಕಾರ್ಯವನ್ನು ಮಾಡಿದವು. ರಾಣಾಸಂಗನ ಸೈನ್ಯದ ಪರಾಭವವಾಯಿತು. ಕ್ರಿ.ಶ. 1520 ರಲ್ಲಿ ಬಾಬರನು ಮರಣಹೊಂದಿದನು.



### ನಿಮಗೆ ಗೊತ್ತಿದೆಯೇ ?

ಬಾಬರನ ನಂತರ ಹುಮಾಯೂನನು (ಕ್ರಿ.ಶ. 1530 ರಿಂದ ಕ್ರಿ.ಶ. 1539 ಮತ್ತು ಕ್ರಿ.ಶ. 1555 ರಿಂದ ಕ್ರಿ.ಶ. 1556) ಪಟ್ಟಕ್ಕೆ ಬಂದನು. ಹುಮಾಯೂನನ ಆಡಳಿತಾವಧಿಯಲ್ಲಿ ಶೇರಶಾಹನು ಅವನನ್ನು ಸೋಲಿಸಿದನು ಮತ್ತು ದಿಲಿಯಲ್ಲಿ ಸೂರ ಮನೆತನದ ಆಡಳಿತವನ್ನು ಸ್ಥಾಪಿಸಿದನು. ಹುಮಾಯೂನನ ನಂತರ ಅಕಬರನು (ಕ್ರಿ.ಶ. 1556 ರಿಂದ ಕ್ರಿ.ಶ. 1605) ಪಟ್ಟಕ್ಕೆ ಬಂದನು. ಅಕಬರ ಮತ್ತು ಹೇಮೂ ಇವರ ನಡುವೆ ಕ್ರಿ.ಶ. 1556 ರಲ್ಲಿ ಪಾನಿಪತ್ ಎಂಬಲ್ಲಿ ಯುದ್ಧವಾಯಿತು. ಇದು ಎರಡನೆಯ ಪಾನಿಪತ್ ಯುದ್ಧವಾಗಿದೆ. ಸಂಪೂರ್ಣ ಭಾರತದಲ್ಲಿ ಏಕಚಕ್ರಾಧಿಪತ್ಯವನ್ನು ಸ್ಥಾಪಿಸುವ ಮಹತ್ವಾಕಾಂಕ್ಷೆ ಅವನದಾಗಿತ್ತು. ಅಕಬರನ ನಂತರ ಜಹಾಂಗೀರನು (ಕ್ರಿ.ಶ. 1605 ರಿಂದ ಕ್ರಿ.ಶ. 1628) ಸಾಮ್ರಾಟನಾದನು. ಅವನ ಆಡಳಿತದ ಕಾಲದಲ್ಲಿ ಅವನ ಹೆಂಡತಿ ನೂರಜಹಾನಳು ಪ್ರಭಾವಶಾಲಿಯಾದ ಕಾರ್ಯವನ್ನು ಮಾಡಿದಳು. ಜಹಾಂಗೀರನ ನಂತರ ಶಹಾಜಹಾನನು (ಕ್ರಿ.ಶ. 1628 ರಿಂದ ಕ್ರಿ.ಶ. 1658) ಸಾಮ್ರಾಟನಾದನು. ಶಹಾಜಹಾನನ ನಂತರ ಔರಂಗಜೇಬನು (ಕ್ರಿ.ಶ. 1658 ರಿಂದ ಕ್ರಿ.ಶ. 1707) ದೀರ್ಘಕಾಲದವರೆಗೆ ಸಾಮ್ರಾಟನಾಗಿದ್ದನು. ಅವನ ಮರಣದ ನಂತರ ಮುಘಲ ಸಾಮ್ರಾಜ್ಯವು ದುರ್ಬಲವಾಯಿತು.

ಅಕಬರನು ಮುಘಲ ಮನೆತನದಲ್ಲಿಯ ಅತ್ಯಂತ ಸಮರ್ಥ ಆಡಳಿತಗಾರನಾಗಿದ್ದನು. ಅವನು ಭಾರತದಲ್ಲಿ ಏಕಚಕ್ರಾಧಿಪತ್ಯವನ್ನು ಸ್ಥಾಪಿಸುವ ಪ್ರಯತ್ನ ಮಾಡಿದನು. ಆಗ ಅವನಿಗೆ ವಿರೋಧ ಉಂಟಾಯಿತು. ಮಹಾರಾಣಾ ಪ್ರತಾಪ, ಚಾಂದಬೀಬಿ, ರಾಣಿ ದುರ್ಗಾವತಿ ಇವರು ಅಕಬರನ ವಿರುದ್ಧ ಮಾಡಿದ ಸಂಘರ್ಷವು ಉಲ್ಲೇಖನಿಯವಾಗಿರುತ್ತದೆ.



ಮಹಾರಾಣಾ ಪ್ರತಾಪ

**ಮಹಾರಾಣಾ ಪ್ರತಾಪ:** ಉದಯ ಸಿಂಹನ ಮರಣದ ನಂತರ ಮಹಾರಾಣಾ ಪ್ರತಾಪ ಸಿಂಹ ಇವರು ಮೇವಾಡದ ಗದ್ದುಗೆಯ-ನ್ನೇರಿದರು. ಮೇವಾಡದ ಅಸ್ತಿತ್ವಕ್ಕಾಗಿ ಅವರು ಸಂಘರ್ಷವನ್ನು ಮುಂದುವರಿಸಿದರು. ಮಹಾರಾಣಾ ಪ್ರತಾಪ ಇವರು ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಸಲುವಾಗಿ ಅಕಬರನೊಡನೆ ಕೊನೆಯವರೆಗೆ ಸಂಘರ್ಷ ಮಾಡಿದರು. ಪರಾಕ್ರಮ, ಧೈರ್ಯ, ಸ್ವಾಭಿಮಾನ, ತ್ಯಾಗ ಇತ್ಯಾದಿ ಗುಣಗಳಿಂದಾಗಿ ಅವರು ಇತಿಹಾಸದಲ್ಲಿ ಅಜರಾಮರನಾಗಿದ್ದಾರೆ.

**ಚಾಂದಬೀಬಿ:** ಕ್ರಿ.ಶ. 1595ರಲ್ಲಿ ಮುಘಲರು ನಿಜಾಮಶಾಹಿಯ ರಾಜಧಾನಿಯಾದ ಅಹಮದನಗರದ ಮೇಲೆ ದಾಳಿ ಮಾಡಿದರು. ಮುಘಲ ಸೈನ್ಯವು ಅಹಮದನಗರದ ಕೋಟೆಗೆ ಮುತ್ತಿಗೆ ಹಾಕಿತು. ಅಹಮದನಗರದ ಹುಸೇನ ನಿಜಾಮಶಾಹನ ಸಾಮರ್ಥ್ಯಶಾಲಿ ಮಗಳಾದ ಚಾಂದಬೀಬಿ ಇವಳು ಅತ್ಯಂತ ಧೈರ್ಯದಿಂದ ಮುಘಲ ಸೈನಿಕರ ವಿರುದ್ಧ ಹೋರಾಡಿದಳು. ಆ ಸಮಯದಲ್ಲಿ ನಿಜಾಮಶಾಹಿಯಲ್ಲಿಯ ಸರದಾರರಲ್ಲಿ ಒಡಕು ನಿರ್ಮಾಣವಾಯಿತು. ಈ ಅಂತಃಕಲಹಗಳಿಂದ ಚಾಂದಬೀಬಿಯನ್ನು ಕೊಲ್ಲಲಾಯಿತು. ನಂತರ ಮುಘಲರು ಅಹಮದನಗರದ ಕೋಟೆಯನ್ನು ಗೆದ್ದುಕೊಂಡರು. ಆದರೆ ಸಂಪೂರ್ಣ ನಿಜಾಮಶಾಹಿಯ ರಾಜ್ಯವು ಮುಘಲರ ಕೈವಶವಾಗಲಿಲ್ಲ.



ಚಾಂದಬೀಬಿ

**ರಾಣಿ ದುರ್ಗಾವತಿ:** ವಿದರ್ಭದ ಪೂರ್ವಭಾಗ, ಅದರ ಉತ್ತರದ ಕಡೆಯ ಮಧ್ಯ ಪ್ರದೇಶದ ಭಾಗ, ಇಂದಿನ ಛತ್ತಿಸಗಡದ ಪಶ್ಚಿಮ ಭಾಗ, ಆಂಧ್ರಪ್ರದೇಶದ ಉತ್ತರ ಭಾಗ ಹಾಗೂ ಒಡಿಶಾದ ಪಶ್ಚಿಮ ಭಾಗ ಇದು ಸ್ಥೂಲವಾಗಿ ಗೊಂಡವನದ ವಿಸ್ತಾರವಾಗಿತ್ತು. ಚಂದೇಲ ರಾಜಪೂತ ಮನೆತನದಲ್ಲಿ ಜನಿಸಿದ ದುರ್ಗಾವತಿಯು ಮದುವೆಯ ನಂತರ ಗೊಂಡವನದ ರಾಣಿಯಾದಳು. ಅವಳು ಉತ್ತಮ ರೀತಿಯಿಂದ ರಾಜ್ಯಾಡಳಿತ ಮಾಡಿದಳು. ಮಧ್ಯಯುಗೀನ ಇತಿಹಾಸದಲ್ಲಿ ಗೊಂಡವನದ ರಾಣಿ ದುರ್ಗಾವತಿಯು ಮುಘಲರ ವಿರುದ್ಧ ಮಾಡಿದ ಹೋರಾಟವು ತುಂಬಾ ಮಹತ್ವದ್ದಾಗಿದೆ. ದುರ್ಗಾವತಿಯು ಪತಿಯ ನಿಧನದ ನಂತರ ಅಕಬರನ ವಿರುದ್ಧ ಹೋರಾಡುವಾಗ ಪ್ರಾಣಾರ್ಪಣೆ ಮಾಡಿದಳು, ಆದರೆ ಅವನಿಗೆ ಶರಣಾಗಲಿಲ್ಲ.



ರಾಣಿ ದುರ್ಗಾವತಿ

ಅಕಬರನು ಒಬ್ಬ ಸುಜ್ಞಾನ ಮತ್ತು ಜಾಗರೂಕ ಆಡಳಿತಗಾರನಾಗಿದ್ದನು. ಅವನ ಧಾರ್ಮಿಕ ಧೋರಣೆಯು ಉದಾರ ಮತ್ತು ಸಹಿಷ್ಣುವಾಗಿತ್ತು. ಅವನು ಎಲ್ಲ ಧರ್ಮದಲ್ಲಿಯ ಪ್ರಜೆಗಳೊಂದಿಗೆ ಒಂದೇ ತೇರನಾಗಿ ನಡೆದುಕೊಳ್ಳುತ್ತಿದ್ದನು. ಎಲ್ಲ ಧರ್ಮಗಳಲ್ಲಿಯ ಉದಾತ್ತ ತತ್ವಗಳನ್ನು ಸಮೀಕರಿಸಿ ಅಕಬರನು 'ದೀನ-ಇ-ಇಲಾಹಿ' ಈ ಧರ್ಮ ಸ್ಥಾಪನೆ ಮಾಡಿದನು. ಆದರೆ ಅವನು ದೀನ-ಇ-ಇಲಾಹಿ ಸ್ವೀಕರಿಸಲು ಯಾರಿಗೂ ಒತ್ತಾಯ ಮಾಡಲಿಲ್ಲ.

**ಔರಂಗಜೇಬ:** ಶಾಹಜಹಾನ ಬಾದಶಾಹನ ಮಕ್ಕಳಲ್ಲಿ ಔರಂಗಜೇಬನು ಆಡಳಿತ ಸ್ಪರ್ಧೆಯಲ್ಲಿ ಯಶಸ್ವಿಯಾಗಿ ತಂದೆಯನ್ನು ಪದಚ್ಯುತಗೊಳಿಸಿ ಕ್ರಿ.ಶ. 1658ರಲ್ಲಿ ಬಾದಶಾಹನಾದನು. ಶಾಹಜಹಾನನ ದೊಡ್ಡ ಮಗ ದಾರಾ ಶುಕೊಹ ಧಾರ್ಮಿಕ ಸಹಿಷ್ಣುತೆಗೆ ಪ್ರಸಿದ್ಧನಾಗಿದ್ದನು. ಅವನು ಐವತ್ತಕ್ಕಿಂತ ಹೆಚ್ಚು ಸಂಸ್ಕೃತ ಉಪನಿಷತ್ತನ್ನು ಫಾರಸಿ ಭಾಷೆಗೆ ಅನುವಾದಿಸಿದನು. ಔರಂಗಜೇಬ ಬಾದಶಾಹನಾದನು. ಆ ಸಮಯದಲ್ಲಿ ಮುಘಲ ಸಾಮ್ರಾಜ್ಯವು ಉತ್ತರಕ್ಕೆ ಕಾಶ್ಮೀರದಿಂದ ಹಿಡಿದು ದಕ್ಷಿಣಕ್ಕೆ ಅಹಮದನಗರದ ವರೆಗೆ ಹಾಗೂ ಪಶ್ಚಿಮಕ್ಕೆ ಕಾಬೂಲದಿಂದ ಹಿಡಿದು ಪೂರ್ವಕ್ಕೆ ಬಂಗಾಲದವರೆಗೆ ಹರಡಿತ್ತು. ಔರಂಗಜೇಬನು ತನ್ನ ಆಡಳಿತ ಕಾಲದಲ್ಲಿ ಪೂರ್ವದ ಕಡೆಯ ಆಸಾಮ, ದಕ್ಷಿಣದ ಕಡೆಯ ವಿಜಾಪೂರದ ಆದಿಲಶಾಹಿ ಮತ್ತು ಗೋವಳಕೊಂಡದ ಕುತುಬಶಾಹಿಗಳನ್ನು ನಷ್ಟಪಡಿಸಿ ಅವರ ಪ್ರದೇಶಗಳನ್ನು ತನ್ನ ಸಾಮ್ರಾಜ್ಯಕ್ಕೆ ಜೋಡಿಸಿದನು.



ಔರಂಗಜೇಬ

**ಆಹೋಮರೊಡನೆ ಸಂಘರ್ಷ:** ಕ್ರಿಸ್ತಶಕ ಹದಿಮೂರನೆಯ ಶತಮಾನದಲ್ಲಿ ಶಾನ ಪಂಗಡದ ಜನರು ಬ್ರಹ್ಮಪುತ್ರಾ ನದಿಯ ಕೊಳ್ಳದ ಪ್ರದೇಶದಲ್ಲಿ ನೆಲೆ ನಿಂತರು. ಅಲ್ಲಿ ಅವರು ತಮ್ಮ ರಾಜ್ಯವನ್ನು ಸ್ಥಾಪಿಸಿದರು. ಸ್ಥಳೀಯ ಜನರು ಅವರನ್ನು ಆಹೋಮರೆಂದು ಕರೆಯುತ್ತಿದ್ದರು.

ಔರಂಗಜೇಬನ ಕಾಲದಲ್ಲಿ ದೀರ್ಘಕಾಲದವರೆಗೆ ಮುಘಲರೊಡನೆ ಆಹೋಮರ ಸಂಘರ್ಷ ನಡೆಯಿತು. ಮುಘಲರು ಆಹೋಮರ ಪ್ರದೇಶಗಳ ಮೇಲೆ ಆಕ್ರಮಣ ಮಾಡಿದರು. ಗದಾಧರಸಿಂಹನ ನೇತೃತ್ವದಲ್ಲಿ ಆಹೋಮರು

ಸಂಘಟಿತರಾದರು. ಲಾಚ್ಚಿತ ಬಡಫೂಕನ್ ಎಂಬ ಸೇನಾನಿಯು ವಿರುದ್ಧ ತೀವ್ರ ಸಂಘರ್ಷ ಮಾಡಿದನು. ಆಹೋಮರು ಮುಘಲರ ವಿರುದ್ಧದ ಸಂಘರ್ಷದಲ್ಲಿ ಕೂಟ ಯುದ್ಧನೀತಿಯನ್ನು ಅವಲಂಬಿಸಿದರು. ಮುಘಲರಿಗೆ ಆಸಾಮದಲ್ಲಿ ತಮ್ಮ ಆಡಳಿತವನ್ನು ಸ್ಥಿರಪಡಿಸುವುದು ಅಸಾಧ್ಯವಾಯಿತು.

**ಶಿಖರೊಡನೆ ಸಂಘರ್ಷ:** ಶಿಖರ ಒಂಬತ್ತನೆಯ ಗುರುಗಳಾದ ಗುರು ತೇಘಬಹಾದ್ದರ ಇವರು ಔರಂಗಜೇಬನ ಅಸಹಿಷ್ಣುತೆಯ ಧಾರ್ಮಿಕ ನೀತಿಯ ವಿರುದ್ಧ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದರು. ಔರಂಗಜೇಬನು ಅವರನ್ನು ಬಂಧಿಸಿ ಕ್ರಿ.ಶ. 1675 ರಲ್ಲಿ ಅವರ ಶಿರಚ್ಛೇದ ಮಾಡಿದನು. ನಂತರ ಗುರು ಗೋವಿಂದ ಸಿಂಗ್ ಇವರು ಶೀಖರ ಗುರುವಾದರು.


ಗುರು ಗೋವಿಂದ ಸಿಂಗ

ಗುರು ಗೋವಿಂದ ಸಿಂಗರು ತಮ್ಮ ಅನುಯಾಯಿಗಳನ್ನು ಸಂಘಟಿಸಿ ಅವರಲ್ಲಿಯ ಹೋರಾಟ ಪ್ರವೃತ್ತಿಯನ್ನು ಪ್ರೋತ್ಸಾಹಿಸಿದರು. ಅವರು ತರುಣ ಶಿಖ ಹೋರಾಟಗಾರರ ಒಂದು ದಳವನ್ನು ಸ್ಥಾಪಿಸಿದರು. ಅದಕ್ಕೆ 'ಖಾಲಸಾದಳ' ಎನ್ನುತ್ತಾರೆ. ಆನಂದಪೂರ ಇದು ಅವರ ಪ್ರಮುಖ ಕೇಂದ್ರವಾಗಿತ್ತು. ಔರಂಗಜೇಬನ್ನು ಶೀಖರ ವಿರುದ್ಧ ಸೈನ್ಯವನ್ನು ಕಳುಹಿಸಿದನು. ಅವನು ಪಡೆಗಳು ಆನಂದಪೂರದ ಮೇಲೆ ದಾಳಿ ಮಾಡಿದವು. ಆ ಸಮಯದಲ್ಲಿ ಶೀಖರು ಅದನ್ನು ತೀವ್ರವಾಗಿ ಪ್ರತಿಭಟಿಸಿದರು. ಆದರೆ ಅವರಿಗೆ ಇದರಲ್ಲಿ ಯಶಸ್ಸು ದೊರೆಯಲಿಲ್ಲ. ಅದರ ನಂತರ ಗುರುಗೋವಿಂದ ಸಿಂಗರು ದಕ್ಷಿಣದ ಕಡೆಗೆ ಬಂದರು. ಕ್ರಿ.ಶ. 1708 ರಲ್ಲಿ ನಾಂದೇಡದಲ್ಲಿರುವಾಗ ಅವರ ಮೇಲೆ ಹಲ್ಲೆ ಮಾಡಲಾಯಿತು. ನಂತರ ಅದರಿಂದಲೇ ಅವರ ನಿಧನವಾಯಿತು.

**ರಜಪೂತರೊಡನೆ ಸಂಘರ್ಷ:** ಅಕಬರನು ಸೌಹಾರ್ದ ನೀತಿಯನ್ನು ಅನುಸರಿಸಿ ರಜಪೂತರ ಸಹಕಾರವನ್ನು ಪಡೆದಿದ್ದನು. ಆದರೆ ಔರಂಗಜೇಬನಿಗೆ ರಜಪೂತರ ಸಹಕಾರವನ್ನು ಪಡೆಯಲಾಗಲಿಲ್ಲ. ಮಾರವಾಡದ ರಾಣಾ ಜಸವಂತಸಿಂಗನ ಮರಣದ ನಂತರ ಅವನ ರಾಜ್ಯವನ್ನು ಔರಂಗಜೇಬನು ಮುಘಲ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ದುರ್ಗಾದಾಸ ರಾಠೋಡನು ಜಸವಂತ ಸಿಂಗನ ಚಿಕ್ಕ ವಯಸ್ಸಿನ ಮಗನಾದ ಅಜಿತಸಿಂಹನನ್ನು ಮಾರವಾಡದ ಸಿಂಹಾಸನದ ಮೇಲೆ ಕೂಡಿಸಿದನು. ದುರ್ಗಾದಾಸ ರಾಠೋಡನು ಮುಘಲರ ವಿರುದ್ಧ ತೀವ್ರ ಸಂಘರ್ಷ ಮಾಡಿದನು. ದುರ್ಗಾದಾಸನನ್ನು ಎದುರಿಸುವ ಸಲುವಾಗಿ ಔರಂಗಜೇಬನು ರಾಜಕುಮಾರ ಅಕಬರನನ್ನು ಮಾರವಾಡಕ್ಕೆ ಕಳುಹಿಸಿದನು. ರಾಜಕುಮಾರ ಅಕಬರನು ರಜಪೂತರನ್ನು ಕೂಡಿಕೊಂಡನು. ಅವನು ಔರಂಗಜೇಬನ ವಿರುದ್ಧ ಬಂಡುಹೂಡಿದನು. ಈ ಬಂಡಿನಲ್ಲಿ ಮಹಾರಾಷ್ಟ್ರದಲ್ಲಿಯ ಮರಾಠರ ಸಹಾಯವನ್ನು ಪಡೆಯುವ ಪ್ರಯತ್ನ ಮಾಡಲಾಯಿತು. ದುರ್ಗಾದಾಸ ರಾಠೋಡನು ಮಾರವಾಡದ ಅಸ್ತಿತ್ವಕ್ಕಾಗಿ ಮುಘಲರ ವಿರುದ್ಧ ಸಂಘರ್ಷವನ್ನು ಮುಂದುವರಿಸಿದನು.

**ಮರಾಠರೊಡನೆ ಸಂಘರ್ಷ:** ಮಹಾರಾಷ್ಟ್ರದಲ್ಲಿ ಶಿವಾಜಿ ಮಹಾರಾಜರ ನೇತೃತ್ವದಲ್ಲಿ ಸ್ವರಾಜ್ಯದ ಸ್ಥಾಪನೆಯಾಯಿತು. ಸ್ವರಾಜ್ಯ ಸ್ಥಾಪನೆಯ ಪ್ರಯತ್ನದಲ್ಲಿ ಅವರು ಇತರ ಶತ್ರುಗಳ ಜೊತೆಗೆ ಮುಘಲರೊಡನೆಯೂ ಸಂಘರ್ಷ ಮಾಡಬೇಕಾಯಿತು. ಶಿವಾಜಿ ಮಹಾರಾಜರ ಮರಣದ ನಂತರ ಸಂಪೂರ್ಣ ದಕ್ಷಿಣ ಭಾರತವನ್ನು ಗೆದ್ದುಕೊಳ್ಳುವ ಉದ್ದೇಶದಿಂದ ಔರಂಗಜೇಬನು ದಕ್ಷಿಣ ಭಾರತಕ್ಕೆ ಬಂದನು. ಆದರೆ ಮರಾಠರು ಔರಂಗಜೇಬನೊಡನೆ ತೀವ್ರ ಸಂಘರ್ಷ ಮಾಡಿ ತಮ್ಮ ಸ್ವಾತಂತ್ರ್ಯದ ರಕ್ಷಣೆ ಮಾಡಿದರು. ಈ ಎಲ್ಲ ಸಂಘರ್ಷದ ಮಾಹಿತಿಯನ್ನು ನಾವು ಮುಂದೆ ಪಡೆಯುವವರಿದ್ದೇವೆ.

## ಅಭ್ಯಾಸ

**1. ಹೆಸರು ಬರೆಯಿರಿ.**

(1) ಗೊಂಡವನದ ರಾಣಿ
(2) ಉದಯಸಿಂಹನ ಮಗ
(3) ಮುಘಲ ಸಾಮ್ರಾಜ್ಯದ ಸಂಸ್ಥಾಪಕ
(4) ಬಹಮನಿ ರಾಜ್ಯದ ಮೊದಲನೆಯ ಸುಲ್ತಾನ
(5) ಗುರು ಗೋವಿಂದಸಿಂಗರು ಸ್ಥಾಪಿಸಿದ ದಳ

**2. ಗುಂಪಿನಲ್ಲಿ ಸೇರದ ಪರ್ಯಾಯವನ್ನು ಬರೆಯಿರಿ.**

(1) ಸುಲ್ತಾನ ಮುಹಮ್ಮದ, ಕುತುಬುದ್ದೀನ ಐಬಕ, ಮುಹಮ್ಮದ ಘೋರಿ, ಬಾಬರ
(2) ಆದಿಲಶಾಹಿ, ನಿಜಾಮಶಾಹಿ, ಸುಲ್ತಾನಶಾಹಿ, ಬರೀದಶಾಹಿ
(3) ಅಕಬರ, ಹುಮಾಯೂನ, ಶೇರಶಾಹ, ಔರಂಗಜೇಬ

**3. ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) ವಿಜಯನಗರ ಮತ್ತು ಬಹಮನಿ ಈ ರಾಜ್ಯಗಳು ಏಕೆ ಉದಯವಾದವು?
(2) ಮಹಮೂದ ಗಾವಾನನು ಮಾವನುಧಾರಾಗೊಂಳನ್ನು ಮಾಡಿದನು?
(3) ಮುಘಲರಿಗೆ ಆಸಾಮದಲ್ಲಿ ತಮ್ಮ ಆಡಳಿತವನ್ನು ಸ್ಥಿರ ಪಡಿಸುವುದು ಏಕೆ ಅಸಾಧ್ಯವಾಯಿತು?

**4. ನಿಮ್ಮ ಶಬ್ದಗಳಲ್ಲಿ ಸ್ವಲ್ಪದರಲ್ಲಿ ಬರೆಯಿರಿ.**

(1) ಕೃಷ್ಣದೇವರಾಯ
(2) ಚಾಂದಬೀಬಿ
(3) ರಾಣಿ ದುರ್ಗಾವತಿ

**5. ಕಾರಣಸಹಿತ ಬರೆಯಿರಿ.**

(1) ಬಹಮನಿ ರಾಜ್ಯದ ಐದು ಶಾಖೆಗಳಾದವು

(2) ರಾಣಾಸಂಗನ ಸೈನ್ಯದ ಪರಾಭವವಾಯಿತು

(3) ರಾರಾಪ್ರತಾಪಸಿಂಹನು ಇತಿಹಾಸದಲ್ಲಿ ಅಜರಾಮರನಾಗಿದ್ದಾರೆ.

(4) ಔರಂಗಜೇಬನು ಗುರು ತೇಗಬಹಾದ್ದೂರರನ್ನು ಬಂಧಿಸಿದನು

(5) ರಜಪೂತರು ಮುಘಲರ ವಿರುದ್ಧ ಸಂಘರ್ಷ ಮಾಡಿದರ.

**6. ಕಾಲರೇಷೆಯನ್ನು ಪೂರ್ಣಮಾಡಿರಿ.**

| ಕ್ರಿ.ಶ. 1336 | ಕ್ರಿ.ಶ. ....... | ಕ್ರಿ.ಶ. 1509 | ಕ್ರಿ.ಶ. ....... |
|---|---|---|---|
| ↓ | ↓ | ↓ | ↓ |
| ವಿಜಯನಗರ ಸಾಮ್ರಾಜ್ಯದ ಸ್ಥಾಪನೆ | ಬಹಮನಿ ರಾಜ್ಯದ ಸ್ಥಾಪನೆ | .................. | ಮುಘಲ ಸಾಮ್ರಾಜ್ಯದ ಸ್ಥಾಪನೆ |

**7.** ಇಂಟರ್ನೆಟ್ ಸಹಾಯದಿಂದ ನಿಮ್ಮ ಮೆಚ್ಚಿನ ಯಾವುದೇ ಒಬ್ಬ ವ್ಯಕ್ತಿಯ ಮಾಹಿತಿಯನ್ನು ಪಡೆದು ಅದನ್ನು ಕೆಳಗಿನ ಚೌಕಟ್ಟಿನಲ್ಲಿ ಬರೆಯಿರಿ.

ನನಗೆ ಇದು ಗೊತ್ತಿದೆ

______________________

______________________

______________________

______________________

**ಉಪಕ್ರಮ:**

ಪಾಠಗಳಲ್ಲಿ ಬಂದ ವ್ಯಕ್ತಿಗಳ ವಿಷಯವಾಗಿ ಹೆಚ್ಚಿನ ಮಾಹಿತಿಯನ್ನು ಸಂದರ್ಭ ಪುಸ್ತಕಗಳು, ಇಂಟರ್ನೆಟ್, ವರ್ತಮಾನ ಪತ್ರ ಇತ್ಯಾದಿಗಳ ಸಹಾಯದಿಂದ ಪಡೆಯಿರಿ. ಉಪಕ್ರಮದ ನೋಟಬುಕ್ಕಿನಲ್ಲಿ ಚಿತ್ರ ಮಾಹಿತಿಯ ಕೊಲಾಜ್ ತಯಾರಿಸಿರಿ ಮತ್ತು ಇತಿಹಾಸದ ಕೋಣೆಯಲ್ಲಿ ಪ್ರದರ್ಶನವನ್ನು ಏರ್ಪಡಿಸಿರಿ.



ದೇವಗಿರಿ ಕೋಟೆ

# 3. ಧಾರ್ಮಿಕ ಸಮನ್ವಯ

ಭಾಷೆ ಮತ್ತು ಧರ್ಮಗಳ ವಿವಿಧತೆಯು ಭಾರತೀಯ ಸಮಾಜದ ಒಂದು ಮಹತ್ವದ ವೈಶಿಷ್ಟ್ಯವಾಗಿದೆ. ಈ ವೈಶಿಷ್ಟ್ಯವನ್ನು ಗಮನಿಸಿ ಭಾರತೀಯ ಸಂವಿಧಾನವು ಸರ್ವಧರ್ಮ ಸಮಭಾವದ ತತ್ವವನ್ನು ಸ್ವೀಕರಿಸಿದೆ. ಮಧ್ಯಯುಗೀನ ಭಾರತದಲ್ಲಿಯ ಸಮಾಜ ಜೀವನದಲ್ಲಿಯೂ ಈ ತತ್ವದ ಆಧಾರದಿಂದ ಧಾರ್ಮಿಕ ಸಮನ್ವಯದ ಪ್ರಯತ್ನಗಳಾಗಿದ್ದವು. ಈ ಪ್ರಯತ್ನಗಳಲ್ಲಿ ಭಕ್ತಿ ಚಳವಳಿ, ಶೀಖಧರ್ಮ ಮತ್ತು ಸೂಫಿ ಪಂಥಗಳಿಗೆ ನಮ್ಮ ಸಮಾಜದಲ್ಲಿ ವೈಶಿಷ್ಟ್ಯಪೂರ್ಣ ಸ್ಥಾನವಿದೆ. ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಈ ವಿವಿಧ ವಿಚಾರ ಪ್ರವಾಹಗಳು ನಿರ್ಮಾಣವಾದವು. ಅವು ಈಶ್ವರ ಭಕ್ತಿಯ ಜೊತೆಗೆ ಧಾರ್ಮಿಕ ಮತ್ತು ಸಾಂಪ್ರದಾಯಿಕ ಸಮನ್ವಯಗಳಿಗೆ ಮಹತ್ವ ನೀಡಿದವು. ಈ ವಿಷಯದ ಮಾಹಿತಿಯನ್ನು ನಾವು ಈ ಪಾಠದಲ್ಲಿ ಪಡೆಯುವವರಿದ್ದೇವೆ.

ಭಾರತೀಯ ಧರ್ಮಜೀವನದಲ್ಲಿ ಆರಂಭದಲ್ಲಿ ಕರ್ಮಕಾಂಡ ಮತ್ತು ಬ್ರಹ್ಮಜ್ಞಾನ ಇವುಗಳಿಗೆ ವಿಶೇಷ ಮಹತ್ವವಿತ್ತು. ಮಧ್ಯಯುಗದಲ್ಲಿ ಕರ್ಮಕಾಂಡ ಬ್ರಹ್ಮಜ್ಞಾನಗಳು ಹಿಂದೆಬಿದ್ದು, ಭಕ್ತಿ ಮಾರ್ಗಕ್ಕೆ ಮಹತ್ವ ದೊರೆಯಿತು. ಈ ಮಾರ್ಗದಲ್ಲಿ ಅಧಿಕಾರಭೇದಗಳಿಗೆ ಅತಿಯಾದ ಮಹತ್ವವಿಲ್ಲದಿರುವುದಿಂದ ಧಾರ್ಮಿಕ ಸಮನ್ವಯಕ್ಕೆ ಹೆಚ್ಚು ಚಾಲನೆ ದೊರೆಯಿತು. ಭಾರತದಲ್ಲಿಯ ಬೇರೆ ಬೇರೆ ಪ್ರಾಂತಗಳಲ್ಲಿ ಸ್ಥಾನಿಕ ಪರಿಸ್ಥಿತಿಗೆ ಅನುಸಾರವಾಗಿ ಭಕ್ತಿ ಪಂಥದ ವಿವಿಧ ಆವಿಷ್ಕಾರಗಳು ಕಂಡುಬರುತ್ತವೆ. ಈ ಪಂತಗಳು ಸಂಸ್ಕೃತ ಭಾಷೆಯ ಬದಲಾಗಿ ಜನಸಾಮಾನ್ಯರ ಭಾಷೆಯನ್ನು ಅವಲಂಬಿಸಿದವು. ಹೀಗಾಗಿ ಇಂಥ ಭಾಷೆಗಳ ವಿಕಾಸಕ್ಕಾಗಿ ಈ ಧಾರ್ಮಿಕ ಚಳುವಳಿಗಳ ಸಹಾಯ ದೊರಕಿತು.

**ಭಕ್ತಿ ಚಳುವಳಿ:** ಭಕ್ತಿ ಚಳುವಳಿಯ ಉಗಮವು ದಕ್ಷಿಣ ಭಾರತದಲ್ಲಿ ಆಯಿತೆಂದು ತಿಳಿಯಲಾಗುತ್ತದೆ. ಈ ಭಾಗದಲ್ಲಿ ನಾಯನಾರ ಮತ್ತು ಆಳ್ವಾರ ಎಂಬ ಭಕ್ತಿಪಂಥಗಳು ಉದಯವಾದವು. ನಾಯನಾರ ಇವರು ಶಿವಭಕ್ತರಾಗಿದ್ದು ಆಳ್ವಾರ ಇವರು ವಿಷ್ಣುಭಕ್ತರಾಗಿದ್ದರು. ಶಿವ ಮತ್ತು ವಿಷ್ಣು ಒಂದೇ ಇದ್ದಾರೆ ಎಂದು ತಿಳಿದು ಅವರಲ್ಲಿ ಸಮನ್ವಯವನ್ನುಂಟು ಮಾಡುವ ಪ್ರಯತ್ನವನ್ನೂ ಮಾಡಲಾಯಿತು. ವಿಷ್ಣುವಿನ ಅರ್ಧ ಶರೀರ ಹಾಗೂ ಶಿವನ ಅರ್ಧ ಶರೀರಗಳನ್ನು ತೋರಿಸಿ 'ಹರಿಹರ' ರೂಪದಲ್ಲಿಯ ಮೂರ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ನಿರ್ಮಾಣ ಮಾಡಲಾಯಿತು. ಈ ಭಕ್ತಿಚಳುವಳಿಯಲ್ಲಿ ಸಮಾಜದ ಎಲ್ಲ ವರ್ಗದ ಜನರು ಭಾಗವಹಿಸಿದ್ದರು. ಈಶ್ವರ ಪ್ರೇಮ, ಮಾನವೀಯತೆ, ಭೂತದಯೆ, ಕರುಣೆ ಇತ್ಯಾದಿ ಮೌಲ್ಯಗಳನ್ನು ಅವರು ಬೋಧಿಸಿದರು. ದಕ್ಷಿಣ ಭಾರತದಲ್ಲಿ ರಾಮಾನುಜ ಮತ್ತು ಇತರ ಆಚಾರ್ಯರು ಭಕ್ತಿಚಳುವಳಿಯ ಅಡಿಪಾಯವನ್ನು ಭದ್ರಗೊಳಿಸಿದರು. ದೇವರು ಎಲ್ಲರಿಗಾಗಿ ಇದ್ದಾನೆ. ದೇವರು ಭೇದಭಾವ ಮಾಡುವುದಿಲ್ಲ ಎಂದು ಅವರು ಹೇಳಿದರು. ರಾಮಾನುಜರ ಉಪದೇಶದ ಪ್ರಭಾವವು ಉತ್ತರ ಭಾರತದಲ್ಲಿಯೂ ವ್ಯಾಪಕವಾಗಿ ಆಯಿತು.



ಸಂತ ಕಬೀರ

ಉತ್ತರ ಭಾರತದಲ್ಲಿ ಸಂತ ರಾಮಾನಂದರು ಭಕ್ತಿಯ ಮಹತ್ವವನ್ನು ತಿಳಿಸಿದರು. ಸಂತ ಕಬೀರ ಇವರು ಭಕ್ತಿ ಚಳುವಳಿಯಲ್ಲಿಯ ಒಬ್ಬ ಪ್ರಸಿದ್ಧ ಸಂತರಾಗಿದ್ದರು. ಅವರು ತೀರ್ಥಕ್ಷೇತ್ರ, ವ್ರತ ಮತ್ತು ಮೂರ್ತಿ ಪೂಜೆಗಳಿಗೆ ಮಹತ್ವ ನೀಡಲಿಲ್ಲ, ಅವರು ಸತ್ಯವನ್ನೇ ಈಶ್ವರನೆಂದು ತಿಳಿದರು. ಎಲ್ಲ ಮಾನವರು ಒಂದೇ ಎಂಬ ಉಪದೇಶ ನೀಡಿದರು. ಜಾತಿಭೇದ, ಪಂಥಭೇದ, ಧರ್ಮಭೇದಗಳು ಅವರಿಗೆ ಮಾನ್ಯವಿರಲಿಲ್ಲ, ಅವರಿಗೆ ಹಿಂದೂ-ಮುಸ್ಲಿಮರಲ್ಲಿ ಐಕ್ಯವನ್ನುಂಟು ಮಾಡಬೇಕಾಗಿತ್ತು. ಅವರು ಹಿಂದೂ ಮತ್ತು ಮುಸ್ಲಿಂ ಧರ್ಮದಲ್ಲಿಯ ಧರ್ಮನಿಷ್ಠ ಜನರನ್ನು ಕಠೋರ ಶಬ್ದಗಳಲ್ಲಿ ನಿಂದಿಸಿದರು.

ಬಂಗಾಲದಲ್ಲಿ ಚೈತನ್ಯ ಮಹಾಪ್ರಭುಗಳು ಕೃಷ್ಣಭಕ್ತಿಯ ಮಹತ್ವವನ್ನು ತಿಳಿಸಿದರು. ಅವರ ಉಪದೇಶದಿಂದಾಗಿ ಜನರು ಜಾತಿ, ಪಂಥಗಳ ಬಂಧನಗಳನ್ನು ದಾಟಿ ಭಕ್ತಿಚಳುವಳಿಯಲ್ಲಿ ಭಾಗವಹಿಸಿದರು. ಚೈತನ್ಯ ಮಹಾಪ್ರಭುಗಳ ಪ್ರಭಾವದಿಂದ ಶಂಕರ ದೇವ ಇವರು ಆಸಾಮದಲ್ಲಿ ಕೃಷ್ಣಭಕ್ತಿಯ ಪ್ರಸಾರ ಮಾಡಿದರು. ಗುಜರಾತದಲ್ಲಿ ಸಂತ ನರಸೀ ಮೆಹತಾ ಎಂಬ ಪ್ರಸಿದ್ಧ ವೈಷ್ಣವ ಸಂತರು ಆಗಿ ಹೋದರು. ಅವರು ನಿಸ್ಸೀಮ ಕೃಷ್ಣಭಕ್ತರಾಗಿದ್ದರು. ಅವರು ಸಮತೆಯ ಸಂದೇಶವನ್ನು ನೀಡಿದರು. ಅವರನ್ನು ಗುಜರಾತಿ ಭಾಷೆಯ ಆದ್ಯಕವಿ ಎಂದು ತಿಳಿಯಲಾಗುತ್ತದೆ.

ಸಂತ ಮೀರಾಬಾಯಿಯವರು ಕೃಷ್ಣಭಕ್ತಿಯ ಮಹಿಮೆಯನ್ನು ತಿಳಿಸಿದರು. ಅವರು ಮೇವಾಡದ

ರಾಜಮನೆತನದವರಾಗಿದ್ದರು. ರಾಜಮನೆತನದಲ್ಲಿಯ ಸುಖವನ್ನು ತ್ಯಜಿಸಿ ಅವರು ಕೃಷ್ಣಭಕ್ತಿಯಲ್ಲಿ ತಲ್ಲೀನರಾದರು. ಅವರು ರಾಜಸ್ಥಾನ ಮತ್ತು ಗುಜರಾತಿ ಭಾಷೆಗಳಲ್ಲಿ ಭಕ್ತಿಗೀತೆಗಳನ್ನು ರಚಿಸಿದರು. ಅವರು ಭಕ್ತಿಗೀತೆಗಳು ಭಕ್ತಿ, ಸಹಿಷ್ಣುತೆ ಮತ್ತು ಮಾನವತೆಗಳ ಸಂದೇಶವನ್ನು ನೀಡುತ್ತವೆ. ಸಂತ ರೋಹಿದಾಸರು ಒಬ್ಬ ಮಹಾನ್ ಸಂತರಾಗಿದ್ದರು. ಅವರು ಸಮತೆಯ ಹಾಗೂ ಮಾನವತೆಯ ಸಂದೇಶವನ್ನು ನೀಡಿದರು. ಸಂತ ಸೇನಾ ಎಂಬ ಒಬ್ಬ ಪ್ರಭಾವಶಾಲಿ ಸಂತರು ಆಗಿಹೋದರು. ಹಿಂದಿ ಸಾಹಿತ್ಯದಲ್ಲಿಯ ಮಹಾಕವಿ ಸೂರದಾಸ ಇವರು 'ಸೂರಸಾಗರ' ಎಂಬ ಕಾವ್ಯವನ್ನು ಬರೆದರು. ಕೃಷ್ಣಭಕ್ತಿಯು ಅವರ ಕಾವ್ಯದ ವಿಷಯವಾಗಿದೆ. ಮುಸ್ಲಿಂ ಸಂತ ರಸಖಾನ ಇವರು ಬರೆದ ಕೃಷ್ಣಭಕ್ತಿಯ ಗೀತೆಗಳು ಮಧುರವಾಗಿವೆ. ಸಂತ ತುಳಸೀದಾಸರ 'ರಾಮಚರಿತ ಮಾನಸ' ಎಂಬ ಗ್ರಂಥದಲ್ಲಿ ರಾಮಭಕ್ತಿಯ ಸುಂದರ ಆವಿಷ್ಕಾರವು ಕಂಡುಬರುತ್ತದೆ.


ಮಹಾತ್ಮಾ ಬಸವೇಶ್ವರರು

ಕರ್ನಾಟಕದಲ್ಲಿ ಮಹಾತ್ಮಾ ಬಸವೇಶ್ವರರು ಲಿಂಗಾಯತ ವಿಚಾರಸರಣಿಯ ಪ್ರಸಾರ ಮಾಡಿದರು. ಅವರು ಜಾತಿಭೇದವನ್ನು ವಿರೋಧಿಸಿದರು. ಶ್ರಮ ಪ್ರತಿಷ್ಠೆಯ ಮಹತ್ವವನ್ನು ತಿಳಿಸಿದರು. 'ಕಾಯಕವೇ ಕೈಲಾಸ' ಎಂಬುದು ಅವರ ಪ್ರಸಿದ್ಧ ವಚನವಾಗಿದೆ. ಅದರ ಅರ್ಥವು ಶ್ರಮವೇ ಕೈಲಾಸ ಎಂದಾಗುತ್ತದೆ. ಅವರ ಚಳುವಳಿಯಲ್ಲಿ ಸ್ತ್ರೀಯರಿಗೂ ಮುಕ್ತ ಪ್ರವೇಶವಿತ್ತು. 'ಅನುಭವ ಮಂಟಪ' ಎಂಬ ಸಭಾಂಗಣದಲ್ಲಿ ನಡೆಯುವ ಧರ್ಮ ಚರ್ಚೆಗಳಲ್ಲಿಎಲ್ಲ ಜಾತಿಯ ಸ್ತ್ರೀ-ಪುರುಷರು ಭಾಗವಹಿಸತೊಡಗಿದರು. ಅವರು ತಮ್ಮ ಉಪದೇಶಗಳನ್ನು ಕನ್ನಡ ಭಾಷೆಯಲ್ಲಿ ವಚನ ಸಾಹಿತ್ಯದ ಮುಖಾಂತರ ನೀಡಿದರು. ಸಮಾಜದ ಮೇಲೆ ಅವರ ಕಾರ್ಯಗಳು ತುಂಬಾ ಪ್ರಭಾವವನ್ನು ಬೀರಿದವು. ಮಹಾತ್ಮಾ ಬಸವೇಶ್ವರರ ಅನುಯಾಯಿಗಳು ಮರಾಠಿ ಭಾಷೆಯಲ್ಲಿಯೂ ಸಾಹಿತ್ಯ ರಚನೆ ಮಾಡಿದ್ದಾರೆ. ಅವುಗಳಲ್ಲಿ ಮನ್ಮಥ ಸ್ವಾಮಿಯವರು ಬರೆದ 'ಪರಮ ರಹಸ್ಯ' ಎಂಬ ಗ್ರಂಥವು ಪ್ರಸಿದ್ಧವಾಗಿದೆ. ಕರ್ನಾಟಕದಲ್ಲಿ ಪಂಪ, ಪುರಂದರದಾಸ ಮುಂತಾದ ಮಹಾನ್ ಸಂತರು ಆಗಿಹೋದರು. ಅವರು ಕನ್ನಡ ಭಾಷೆಯಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದರು.

**ಮಹಾನುಭಾವ ಪಂಥ:** ಹದಿಮೂರನೆಯ ಶತಮಾನದಲ್ಲಿ ಚಕ್ರಧರ ಸ್ವಾಮಿಗಳು ಮಹಾರಾಷ್ಟ್ರದಲ್ಲಿ 'ಮಹಾನುಭಾವ' ಪಂಥವನ್ನು ಆರಂಭಿಸಿದರು. ಇದು ಕೃಷ್ಣಭಕ್ತಿಯನ್ನು ಉಪದೇಶಿಸುವ ಪಂಥವಾಗಿದೆ. ಶ್ರೀ ಗೋವಿಂದ ಪ್ರಭು ಇವರು ಚಕ್ರಧರ ಸ್ವಾಮಿಗಳ ಗುರುಗಳಾಗಿದ್ದರು. ಚಕ್ರಧರ ಸ್ವಾಮಿಗಳ ಶಿಷ್ಯಂದಿರಲ್ಲಿ ಎಲ್ಲ ಜಾತಿ-ಪಂಗಡಗಳ ಸ್ತ್ರೀ - ಪುರುಷರ ಸಮಾವೇಶವಿತ್ತು.


ಚಕ್ರಧರ ಸ್ವಾಮಿ

ಈ ಪಂಥದ ಪ್ರಸಾರವು ಮಹಾರಾಷ್ಟ್ರದಲ್ಲಿ ಪ್ರಾಮುಖ್ಯವಾಗಿ ವಿದರ್ಭ ಹಾಗೂ ಮರಾಠವಾಡಾ ಭಾಗಗಳಲ್ಲಿ ಆಯಿತು. ವಿದರ್ಭದಲ್ಲಿಯ ಋದ್ಧಿಪೂರ ಇದು ಈ ಪಂಥದ ಮುಖ್ಯ ಸ್ಥಳವಾಗಿದೆ. ಅದೇರೀತಿ ಈ ಪಂಥವು ಪಂಜಾಬ, ಅಫಗಾನಿಸ್ತಾನ, ಗಳಂತಹ ದೂರದ ಪ್ರದೇಶಗಳ ವರೆಗೂ ತಲುಪಿತ್ತು.

**ನಿಮಗೆ ಗೊತ್ತಿದೆಯೇ ?**

ಮಹಾನುಭಾವ ಪಂಥದ ಅನುಯಾಯಿಗಳು ರಚಿಸಿದ ಗ್ರಂಥಗಳು ಕೆಳಗಿನಂತಿವೆ: ಮ್ಹಾಯಿಂಭಟ್ಟ ಇವರು ಸಂಪಾದಿಸಿದ ಚಕ್ರಧರರ ಲೀಲೆಯನ್ನು ವರ್ಣಿಸುವ 'ಲೀಳಾಚರಿತ್ರ' ಎಂಬ ಗ್ರಂಥ, ಆದ್ಯ ಮರಾಠಿ ಕವಯಿತ್ರಿಯಾದ ಮಹದಂಬಾ ಇವರು 'ಧವಳೆ', ಎಂಬ ಗ್ರಂಥ, ಕೇಶೋಬಾಸ ಇವರು, ಸಂಪಾದಿಸಿರುವ 'ಸೂತ್ರಪಾಠ ಮತ್ತು ದೃಷ್ಟಾಂತಪಾಠ', ದಾಮೋದರ ಪಂಡಿತರ 'ವಚ್ಛಾಹರಣ', ಭಾಸ್ಕರಭಟ್ಟ ಬೋರಿಕರ ಇವರ 'ಶಿಶುಪಾಲವಧೆ', ನರೇಂದ್ರರ 'ರುಕ್ಮಿಣೀ ಸ್ವಯಂವರ.

**ನಿಮಗೆ ಗೊತ್ತಿದೆಯೇ ?**

ಮಹಾರಾಷ್ಟ್ರದಲ್ಲಿ ಸಂತ ಏಕನಾಥರು ಬರೆದ ಹಿಂದೂ ಮತ್ತು ಮುಸಲ್ಮಾನರೊಳಗಿನ ಸಂವಾದವು ಧಾರ್ಮಿಕ ಸಮನ್ವಯದ ದೃಷ್ಟಿಯಿಂದ ಮಹತ್ವದ್ದಾಗಿದೆ. ಸಂತ ಶೇಖ ಮಹಮ್ಮದ ಇವರ 'ಶೇಖ ಮಹಮ್ಮದ ಅವಿಂಧ - ತ್ಯಾಚೆ ಹೃದಯಿ ಗೋವಿಂದ॥' (ಇದರರ್ಥ- ಶೇಖ ಮಹಮ್ಮದನು ಅಹಿಂದುವಾಗಿದ್ದಾನೆ. ಆದರೆ ಅವನ ಹೃದಯದಲ್ಲಿ ಗೋವಿಂದನಿದ್ದಾನೆ) ಎಂಬ ಪ್ರಸಿದ್ಧ ವಚನವು ಈ ಸಮನ್ವಯದ ಉದಾಹರಣೆ ಹೌದು.

**ಗುರುನಾನಕ:** ಗುರುನಾನಕ ಇವರು ಶೀಖಧರ್ಮದ ಸಂಸ್ಥಾಪಕರು ಹಾಗೂ ಪ್ರಥಮ ಗುರುಗಳಾಗಿದ್ದರು. ಧಾರ್ಮಿಕ ಸಮನ್ವಯದ ದೊಡ್ಡ ಪ್ರಯತ್ನ ಎಂಬ ಶಬ್ದಗಳಲ್ಲಿ ಅವರ

ಕಾರ್ಯವನ್ನು ಉಲ್ಲೇಖಿಸಬಹುದು. ಅವರು ಹಿಂದೂ ಮತ್ತು ಮುಸ್ಲಿಂ ಈ ಎರಡೂ ಧರ್ಮಗಳ ವಿವಿಧ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡಿದರು. ಅವರು ಮಕ್ಕಾ ಕ್ಷೇತ್ರಕ್ಕೂ ಹೋಗಿದ್ದರು.

ಭಕ್ತಿಭಾವನೆಯು ಎಲ್ಲಕಡೆಗೆ ಸಮಾನವಾಗಿರುತ್ತದೆ ಎಂಬ ಸಂಗತಿಯು ಅವರ ಗಮನಕ್ಕೆ ಬಂದಿತು. ಎಲ್ಲರ ಜೊತೆ ಸಮಾನವಾಗಿ ವರ್ತಿಸಬೇಕು ಎಂಬುದು ಅವರ ಉಪದೇಶವಾಗಿತ್ತು. ಹಿಂದೂ ಮತ್ತು ಮುಸ್ಲಿಮರಲ್ಲಿ ಐಕ್ಯತೆ ನಿರ್ಮಾಣವಾಗಬೇಕು ಎಂಬುದರ ಸಲುವಾಗಿ ಅವರು ಉಪದೇಶ ಮಾಡಿದರು. ಅವರು ಶುದ್ಧ ಆಚರಣೆಗೆ ಮಹತ್ವ ನೀಡಿದರು.



ಗುರುನಾನಕರು

ಗುರುನಾನಕರ ನಂತರ ಶೀಖರಲ್ಲಿ ಒಂಬತ್ತು ಗುರುಗಳು ಆಗಿ ಹೋದರು. ಗುರು ಗೋವಿಂದ ಸಿಂಗರು ಶೀಖರ ಹತ್ತನೆಯ ಗುರುವಾಗಿದ್ದಾರೆ. ಅವರ ನಂತರ ಎಲ್ಲ ಶೀಖರು ಗುರು ಗೋವಿಂದಸಿಂಗರ ಆಜ್ಞೆಯಂತೆ 'ಗುರುಗ್ರಂಥಸಾಹಿಬ' ಎಂಬ ಗ್ರಂಥವನ್ನೇ ಗುರುವೆಂದು ಮನ್ನಿಸ ತೊಡಗಿದರು.

**ಸೂಫಿ ಪಂಥ:** ಸೂಫಿ ಇದು ಇಸ್ಲಾಮದಲ್ಲಿಯ ಒಂದು ಪಂಥ. ಪರಮೇಶ್ವರನ್ನು ಪ್ರೇಮಮಯಿಯಾಗಿದ್ದಾನೆ. ಪ್ರೇಮ ಮತ್ತು ಭಕ್ತಿಯ ಮಾರ್ಗದಿಂದಲೇ ಪರಮೇಶ್ವರನನ್ನು ಕಾಣಬಹುದು ಎಂಬುದು ಸೂಫಿ ಸಾಧುಗಳ ನಂಬಿಕೆಯಾಗಿತ್ತು. ಎಲ್ಲ ಪ್ರಾಣಿಗಳನ್ನು ಪ್ರೀತಿಸಬೇಕು, ಪರಮೇಶ್ವರನ ಧ್ಯಾನ ಮಾಡಬೇಕು. ಸರಳ ಜೀವನ ನಡೆಸಬೇಕು ಮುಂತಾದವುಗಳು ಅವರ ಉಪದೇಶಗಳಾಗಿದ್ದವು. ಖ್ವಾಜಾ ಮೊಯಿನುದ್ದೀನ ಚಿಸ್ತಿ, ಶೇಖ ನಿಜಾಮುದ್ದೀನ ಅವಲಿಯಾ ಇವರು ಮಹಾನ್ ಸೂಫಿ ಸಂತರಾಗಿದ್ದರು. ಸೂಫಿ ಸಂತರ ಉಪದೇಶದಿಂದಾಗಿ ಹಿಂದೂ-ಮುಸಲ್ಮಾನ ಸಮಾಜಗಳಲ್ಲಿ ಐಕ್ಯತೆ ನಿರ್ಮಾಣವಾಯಿತು. ಭಾರತೀಯ ಸಂಗೀತಕ್ಕೆ ಸೂಫಿ ಸಂಗೀತ ಪರಂಪರೆಯು ಅಮೂಲ್ಯವಾದ ಕೊಡುಗೆಯನ್ನು ನೀಡಿದೆ.

ಸಂತರು ತೋರಿಸಿದ ಭಕ್ತಿ ಮಾರ್ಗವು ಸರ್ವಸಾಮಾನ್ಯರಿಗೆ ಆಚರಿಸಲು ಸುಲಭವಾಗಿತ್ತು. ಎಲ್ಲ ಸ್ತ್ರೀ-ಪುರುಷರಿಗೆ ಭಕ್ತಿ ಚಳವಳಿಯಲ್ಲಿ ಪ್ರವೇಶವಿತ್ತು. ಸಂತರು ತಮ್ಮ ವಿಚಾರಗಳನ್ನು ಜನಸಾಮಾನ್ಯರ ಭಾಷೆಯಲ್ಲಿ ಮಂಡಿಸಿದರು. ಜನಸಾಮಾನ್ಯರಿಗೆ ಅದು ಬಹುವಾಗಿ ಹಿಡಿಸಿತು. ಭಾರತೀಯ ಸಂಸ್ಕೃತಿಯ ನಿರ್ಮಾಣಕಾರ್ಯದಲ್ಲಿ ಭಕ್ತಿ ಮಾರ್ಗವು ತುಂಬಾ ಮಹತ್ವದ ಪಾತ್ರವನ್ನು ವಹಿಸುತ್ತದೆ.

8ANDP2

## ಅಭ್ಯಾಸ

**1. ಪರಸ್ಪರ ಸಂಬಂಧವನ್ನು ಹುಡುಕಿ ಬರೆಯಿರಿ.**

(1) ಮಹಾತ್ಮಾ ಬಸವೇಶ್ವರರು: ಕರ್ನಾಟಕ, ಸಂತ ಮೀರಾಬಾಯಿ: ....

(2) ರಾಮಾನಂದ: ಉತ್ತರ ಭಾರತ, ಚೈತನ್ಯ ಮಹಾಪ್ರಭು: ........

(3) ಚಕ್ರಧರ: ............ ಶಂಕರದೇವ: .........

**2. ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ.**

| | ಪ್ರಸಾರಕರು | ಗ್ರಂಥ |
|---|---|---|
| (1) ಭಕ್ತಿ ಚಳವಳಿ | | |
| (2) ಮಹಾನುಭಾವ ಪಂಥ | | |
| (3) ಶೀಖ ಧರ್ಮ | | |

**3. ಉತ್ತರ ಬರೆಯಿರಿ.**

(1) ಸಂತಕಬೀರ ಇವರು ಭಕ್ತಿ ಚಳವಳಿಯಲ್ಲಿ ಒಬ್ಬ ಪ್ರಸಿದ್ಧ ಸಂತರಾಗಿದ್ದರು.

(2) ಸಮಾಜದ ಮೇಲಾದ ಮಹಾತ್ಮಾ ಬಸವೇಶ್ವರರ ಕಾರ್ಯಗಳ ಪ್ರಭಾವ.

**4. ಕೆಳಗಿನ ಚೌಕಟ್ಟಿನಲ್ಲಿ ಅಡಗಿದ ನಂತರ ಹೆಸರುಗಳನ್ನು ಹುಡಿಕಿರಿ.**

| | | | | | | | | |
|---|---|---|---|---|---|---|---|---|
| ಗು | ರು | ಗೋ | ವಿಂ | ದ | ಸಿಂ | ಗ | ಸ | ಸ |
| ರು | ರಾ | ಮಾ | ನಂ | ನ | ಸೂ | ರ | ದಾ | ಸ |
| ನಾ | ಸೇ | ತ | ಸಂ | ರ | ಲ | ರ | ಹೀ | ದಾ |
| ನ | ಚ | ಸ | ಸಾ | ತ | ದ | ಬೀ | ರೋ | ರ |
| ಕ | ನ | ಕ | ದಾ | ಸ | ರ | ಹೀ | ಮ | ದ |
| ಬ | ಸ | ವೇ | ಶ್ವ | ರ | ಚೈ | ತ | ನ್ಯ | ರಂ |
| ಮ | ನ್ಮ | ಥ | ಸ್ವಾ | ಮೀ | ರಾ | ಬಾ | ಯಿ | ಪು |

**ಉಪಕ್ರಮ:**

ಸೂಫಿ ಸಂಗೀತ ಪರಂಪರೆಯಲ್ಲಿಯ ಯಾವುದಾದರೊಂದು ಭಜನೆಯನ್ನು ಪಡೆದು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಾದರಪಡಿಸಿರಿ.

# 4. ಶಿವಪೂರ್ವಕಾಲದ ಮಹಾರಾಷ್ಟ್ರ

ಹದಿನೇಳನೆಯ ಶತಮಾನದ ಆರಂಭದಲ್ಲಿ ಮಹಾರಾಷ್ಟ್ರದ ಬಹುತಾಂಶ ಪ್ರದೇಶವು ಅಹಮದನಗರದ ನಿಜಾಮಶಾಹ ಮತ್ತು ವಿಜಾಪೂರದ ಆದಿಲಶಾಹ ಇವರ ಅಂಕಿತದಲ್ಲಿತ್ತು. ಮುಘಲರು ಖಾನ ದೇಶವನ್ನು ಪ್ರವೇಶಿಸಿದ್ದರು. ದಕ್ಷಿಣದಲ್ಲಿ ಸಾಮ್ರಾಜ್ಯ ವಿಸ್ತಾರ ಮಾಡುವುದೇ ಅವರ ಉದ್ದೇಶವಾಗಿತ್ತು. ಕೊಂಕಣದ ಕರಾವಳಿ ತೀರದಲ್ಲಿ ಆಫ್ರಿಕೆಯಿಂದ ಬಂದ ಸಿದ್ದೀ ಜನರ ವಸತಿಗಳಿದ್ದವು. ಇದೇ ಕಾಲದಲ್ಲಿ ಯುರೋಪ್‌ನಿಂದ ಬಂದ ಪೋರ್ತುಗೀಜ, ಇಂಗ್ಲಿಷ, ಫ್ರೆಂಚ್ ಮತ್ತು ಡಚ್ ಆಡಳಿತಗಾರರಲ್ಲಿ ಸಾಗರ ಸ್ಪರ್ಧೆ ಮತ್ತು ಸಂಘರ್ಷಗಳು ತೀವ್ರವಾಗುತ್ತಿದ್ದವು. ವ್ಯಾಪಾರಕ್ಕಾಗಿ ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ತೀವ್ರ ಸ್ಪರ್ಧೆ ಆರಂಭವಾಗಿತ್ತು. ಪಶ್ಚಿಮ ಕರಾವಳಿ ತೀರದ ಗೋವಾದಲ್ಲಿ ಹಾಗೂ ವಸಯಿಯಲ್ಲಿ ಪೋರ್ತುಗೀಜರು ಮೊದಲೇ ರಾಜ್ಯಸ್ಥಾಪನೆ ಮಾಡಿದ್ದರು. ಆದರೆ ಇಂಗ್ಲಿಷರು, ಡಚ್ಚರು ಹಾಗೂ ಫ್ರೆಂಚರು ವ್ಯಾಪಾರಿ ಕಂಪನಿಗಳ ಮುಖಾಂತರ ಮಳಿಗೆಗಳ ರೂಪದಲ್ಲಿ ಮೆಲ್ಲಗೆ ಪ್ರವೇಶ ಮಾಡಿದ್ದರು. ಈ ಎಲ್ಲ ಆಡಳಿತಗಾರರು ಪರಸ್ಪರರನ್ನು ಅಜಮಾಯಿಸುತ್ತ ತಾವು ಮಾತ್ರ ಸುರಕ್ಷಿತವಾಗಿದ್ದರು. ಅದೇರೀತಿ ಸಾಧ್ಯವಾದಷ್ಟು ವರ್ಚಸ್ಸನ್ನು ಸ್ಥಾಪಿಸುವ ಪ್ರಯತ್ನದಲ್ಲಿದ್ದರು. ಈ ಸಂಘರ್ಷಗಳಿಂದಾಗಿ ಮಹಾರಾಷ್ಟ್ರದಲ್ಲಿ ಅಸ್ಥಿರತೆ ಹಾಗೂ ಅಸುರಕ್ಷತೆ ನಿರ್ಮಾಣವಾಗಿದ್ದವು. ಯುರೋಪ್‌ನಲ್ಲಿಯ ಈ ವಿವಿಧ ಜನರಿಗೆ ಅವರ ಶಿರಸ್ತ್ರಾಣಗಳಿಂದಾಗಿ 'ಟೋಪಕರ' ಎನ್ನುತ್ತಿದ್ದರು.

ಶಿವಪೂರ್ವ ಕಾಲದಲ್ಲಿಯ ಜನವಸತಿ, ಪ್ರಜೆಗಳು ಹಾಗೂ ಆಡಳಿತಗಾರರ ನಡುವೆ ಕೊಂಡಿಯಂತೆ ಕಾರ್ಯ ಮಾಡುವ ಅಧಿಕಾರಿಗಳು, ಮಾರುಕಟ್ಟೆ, ಕುಶಲಕರ್ಮಿಗಳು ಇತ್ಯಾದಿಗಳ ಸ್ವರೂಪವನ್ನು ತಿಳಿದುಕೊಳ್ಳುವ ಸಲುವಾಗಿ ಊರು (ಮೌಜಾ), ಕಸಬಾ ಮತ್ತು ಪರಗಣಾ ಈ ಭೌಗೋಲಿಕ ಸ್ಥಳಗಳ ಪರಿಚಯ ಮಾಡಿಕೊಳ್ಳುವುದು ಅವಶ್ಯಕವಾಗಿದೆ. ಅನೇಕ ಊರುಗಳು ಕೂಡಿ ಪರಗಣಾ ಆಗುತ್ತಿತ್ತು. ಸಾಮಾನ್ಯವಾಗಿ ಪರಗಣಾದ ಮುಖ್ಯ ಕೇಂದ್ರಕ್ಕೆ ಕಸಬಾ ಎನ್ನುತ್ತಿದ್ದರು. 'ಕಸಬಾ' ಕ್ಕಿಂತ ಚಿಕ್ಕದಾದ ಊರಿಗೆ ಮೌಜಾ ಎಂದು ಕರೆಯುತ್ತಿದ್ದರು. ಈಗ ನಾವು ಊರು, ಕಸಬಾ ಮತ್ತು ಪರಗಣಾ ಇವುಗಳ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳೋಣ.

**ಊರು (ಮೌಜಾ):** ಬಹುತಾಂಶ ಜನರು ಊರಲ್ಲಿಯೇ ಇರುತ್ತಿದ್ದರು. ಊರಿಗೆ ಮೌಜಾ ಎಂದೂ ಕರೆಯುತ್ತಿದ್ದರು. ಪಾಟೀಲನು ಊರಿನ ಪ್ರಮುಖನಾಗಿದ್ದನು. ಊರಿನಲ್ಲಿಯ ಹೆಚ್ಚಿಗೆ ಹೆಚ್ಚು ಭೂಮಿಯನ್ನು ಸಾಗುವಳಿ ಮಾಡುವ ಸಲುವಾಗಿ ಪಾಟೀಲನು ಪ್ರಯತ್ನ ಮಾಡುತ್ತಿದ್ದನು. ಯಾವಾಗ ಊರಲ್ಲಿ ತಂಟೆಗಳಾಗುತ್ತಿದ್ದವೋ ಆಗ ಶಾಂತತೆಯನ್ನು ನಿರ್ಮಿಸುವ ಕಾರ್ಯವನ್ನು ಪಾಟೀಲನು ಮಾಡುತ್ತಿದ್ದನು. ಪಾಟೀಲನಿಗೆ ಅವನ ಕಾರ್ಯದಲ್ಲಿ ಕುಲಕರ್ಣಿಯು ಸಹಾಯಮಾಡುತ್ತಿದ್ದನು. ಸಂಗ್ರಹವಾದ ಕಂದಾಯದ ನೋಂದಣಿ ಮಾಡುವ ಕಾರ್ಯವನ್ನು ಕುಲಕರ್ಣಿ ಮಾಡುತ್ತಿದ್ದನು. ಊರಿನಲ್ಲಿ ವಿವಿಧ ಕರಕುಶಲ ಕೆಲಸಗಾರರು ಇರುತ್ತಿದ್ದರು. ವಂಶಪಾರಂಪರ್ಯವಾಗಿ ಅವರಿಗೆ ತಮ್ಮ ಕಸಬಿನ ಹಕ್ಕು ದೊರೆಯುತ್ತಿತ್ತು. ಊರಲ್ಲಿ ಕೆಲಸಗಾರರು ಸಲ್ಲಿಸುವ ಸೇವೆಗಾಗಿ ಭೂಹಿಡುವಳಿದಾರರಿಂದ ಅವರಿಗೆ ಕೃಷಿ ಉತ್ಪನ್ನದ ಸ್ವಲ್ಪ ಭಾಗವು ದೊರೆಯುತ್ತಿತ್ತು. ಅದಕ್ಕೆ ಬಲೂತೆ ಎನ್ನುತ್ತಿದ್ದರು.

**ಕಸಬಾ:** ಕಸಬಾ ಇದೊಂದು ದೊಡ್ಡ ಹಳ್ಳಿಯೇ ಆಗಿರುತ್ತಿತ್ತು. ಸಾಮಾನ್ಯವಾಗಿ ಅದು ಪರಗಣಾದ ಮುಖ್ಯ ಕೇಂದ್ರವಾಗಿರುತ್ತಿತ್ತು. ಉದಾ., ಇಂದಾಪೂರ ಪರಗಣಾದ ಮುಖ್ಯ ಕೇಂದ್ರ ಇಂದಾಪೂರ ಕಸಬಾ, ವಾಯಿ ಪರಗಣಾದ ಮುಖ್ಯ ಕೇಂದ್ರ ವಾಯಿ ಕಸಬಾ. ಊರಿನಂತೆ ಕಸಬಾದಲ್ಲಿಯೂ ಬೇಸಾಯವು ಮುಖ್ಯ ಉದ್ಯೋಗವಾಗಿತ್ತು. ಅಲ್ಲಿ ಬಡಿಗರು, ಕಮ್ಮಾರರು ಇತ್ಯಾದಿ ಕರಕುಶಲ ಕೆಲಸಗಾರರು ಇರುತ್ತಿದ್ದರು. ಕಸಾಬಾಕ್ಕೆ ಹೊಂದಿಕೊಂಡೇ ಮಾರುಕಟ್ಟೆ ಇರುತ್ತಿತ್ತು. ಶೇಟೆ ಮತ್ತು ಮಹಾಜನ ಇವರು ಮಾರುಕಟ್ಟೆಯ ವತನದಾರರಾಗಿದ್ದರು. ಪ್ರತಿಯೊಂದು ಊರಿನಲ್ಲಿ ಪೇಟೆ ಇರಲಿಲ್ಲ, ಆದರೆ ಊರಲ್ಲಿ ಪೇಟೆಯನ್ನು ನಿರ್ಮಿಸುವ ಕಾರ್ಯವು ಶೇಟೆ ಮತ್ತು ಮಹಾಜನರದಾಗಿತ್ತು. ಅದಕ್ಕಾಗಿ ಅವರಿಗೆ ಸರಕಾರದಿಂದ ಭೂಮಿ ಮತ್ತು ಊರಜನರ ಕಡೆಯಿಂದ ಕೆಲವು ಹಕ್ಕುಗಳು ದೊರೆಯುತ್ತಿದ್ದವು. ಪೇಟೆಯ ಲೆಕ್ಕ ಪತ್ರವನ್ನಿಡುವ ಕಾರ್ಯವನ್ನು ಮಹಾಜನರು ಮಾಡುತ್ತಿದ್ದರು.



**ನಿಮಗೆ ಗೊತ್ತಿದೆಯೇ ?**

ವೀರಮಾತಾ ಜಿಜಾಬಾಯಿಯವರ ಆಜ್ಞೆಯಂತೆ ಪುಣೆಯ ಹತ್ತಿರದ ಪಾಷಾಣ ಎಂಬಲ್ಲಿ ಒಂದು ಪೇಟೆಯನ್ನು ನಿರ್ಮಿಸಲಾಯಿತು. ಅದಕ್ಕೆ 'ಜಿಜಾಪೂರ' ಎನ್ನುತ್ತಾರೆ. ಮಾಲಪುರಾ, ಖೇಲಪುರಾ, ಪರಸಪುರಾ, ವಿಠಾಪುರಾ ಇವು ಕೂಡ ಮಾಲೋಜಿ, ಖೇಲೋಜಿ, ಪರಸೋಜಿ ಮತ್ತು ವಿಠೋಜಿ ಇವರ ಹೆಸರಿನಲ್ಲಿ ಔರಂಗಾಬಾದ್‌ನಲ್ಲಿ ನಿರ್ಮಿಸಲಾದ ಹೊಸ ಪೇಟೆಗಳಾಗಿವೆ. 'ಖೇಡ' ಊರಿಗೆ ಹೊಂದಿಕೊಂಡೇ ಇದ್ದ 'ಶಿವಾಪೂರ' ಇದು ಶಿವಾಜಿ ಮಹಾರಾಜರ ಹೆಸರಿನಲ್ಲಿ ನಿರ್ಮಿಸಿದ ಪೇಟೆಯಾಗಿತ್ತು.



**ಇದನ್ನು ತಿಳಿದುಕೊಳ್ಳೋಣ ಬನ್ನಿ.**

ಎರಡು ಹಳ್ಳಿಗಳು ಸ್ವತಂತ್ರವಾಗಿವೆಯೆಂಬುದನ್ನು ತೋರಿಸುವ ಸಲುವಾಗಿ 'ಬುದ್ರುಕ' ಮತ್ತು 'ಖುರ್ದ' ಎಂಬ ಹೆಸರುಗಳನ್ನು ಬಳಸಲಾಗುತ್ತದೆ. ಮೂಲ ಊರು 'ಬುದ್ರುಕ' ಹಾಗೂ ಹೊಸ ಊರು 'ಖುರ್ದ'. ಉದಾಹರಣೆಗಾಗಿ: ವಡಗಾವ ಬುದ್ರುಕ ಮತ್ತು ವಡಗಾವ ಖುರ್ದ.

**ಪರಗಣಾ:** ಅನೇಕ ಊರುಗಳು ಕೂಡಿ ಪರಗಣಾ ಆಗುತ್ತಿದ್ದರೂ ಎಲ್ಲ ಪರಗಣಾಗಳಲ್ಲಿಯ ಊರುಗಳ ಸಂಖ್ಯೆ ಸಮಾನವಾಗಿರಲಿಲ್ಲ, ಉದಾ., ಪುಣೆ ಪರಗಣಾ. ಇದು ದೊಡ್ಡ ಪರಗಣಾ ಆಗಿತ್ತು. ಇದರಲ್ಲಿ 290 ಊರುಗಳು ಇದ್ದವು. ಚಾಕಣ ಪರಗಣಾದಲ್ಲಿ 64 ಊರುಗಳು ಇದ್ದವು. ಶಿರವಳ ಪರಗಣಾ ಚಿಕ್ಕದಾಗಿತ್ತು. ಅದರಲ್ಲಿ 40 ಊರುಗಳು ಇದ್ದವು. ದೇಶಮುಖ ಇವನು ಪರಗಣಾದಲ್ಲಿ ಪಾಟೀಲನ ಪ್ರಮುಖನಾಗಿದ್ದನು. ಊರಿನ ಮಟ್ಟದಲ್ಲಿ ಪಾಟೀಲನು ಮಾಡುವ ಕಾರ್ಯವನ್ನು ಪರಗಣಾ ಮಟ್ಟದಲ್ಲಿ ದೇಶಮುಖನು ಮಾಡುತ್ತಿದ್ದನು. ಅದರಂತೆ ದೇಶಪಾಂಡೆ ಇವನು ಪರಗಣಾದಲ್ಲಿಯ ಎಲ್ಲ ಕುಲಕರ್ಣಿಗಳ ಪ್ರಮುಖನಾಗಿದ್ದನು. ಊರಿನ ಮಟ್ಟದಲ್ಲಿ ಕುಲಕರ್ಣಿಯು ಮಾಡುವ ಕಾರ್ಯವನ್ನು ಪರಗಣಾ ಮಟ್ಟದಲ್ಲಿ ದೇಶಪಾಂಡೆ ಮಾಡುತ್ತಿದ್ದನು. ಈ ವತನದಾರ ಅಧಿಕಾರಿಗಳು ಜನತೆ ಮತ್ತು ಸರಕಾರಗಳ ನಡುವಿನ ಸಂಬಂಧ ಸಾಧಿಸುವ ಕೊಂಡಿಯಾಗಿದ್ದರು.

ಪರಗಣಾದಲ್ಲಿಯ ಊರುಗಳ ಮೇಲೆ ಬೇರೆ ರಾಜರ ಆಕ್ರಮಣವಾದರೆ ಇಲ್ಲವೆ ಬರಗಾಲದಂತಹ ಪರಿಸ್ಥಿತಿ ನಿರ್ಮಾಣವಾದರೆ ಅಂಥ ಸಮಯದಲ್ಲಿ ಜನತೆಯ ವಿಚಾರಗಳನ್ನು ಸರಕಾರದ ಮುಂದೆ ಮಂಡಿಸುವ ಕಾರ್ಯವನ್ನು ಈ ವತನದಾರ ಅಧಿಕಾರಿಗಳು ಮಾಡುತ್ತಿದ್ದರು. ಕೆಲವು ಸಲ ಈ ಅಧಿಕಾರಿಗಳು ತಮ್ಮ ಅಧಿಕಾರದ ದುರುಪಯೋಗ ಮಾಡುತ್ತಿದ್ದರು. ಕೆಲವೊಮ್ಮೆ ಜನರ ಕಡೆಯಿಂದ ಅಧಿಕ ಹಣವನ್ನು ಸಂಗ್ರಹಿಸುತ್ತಿದ್ದರು. ಹಾಗೂ ಕೆಲವೊಮ್ಮೆ ಜನರಿಂದ ಸಂಗ್ರಹಿಸಿದ ಹಣವನ್ನು ಸರಕಾರಕ್ಕೆ ತುಂಬಲು ತಡಮಾಡುತ್ತಿದ್ದರು. ಇಂಥ ಸಮಯದಲ್ಲಿ ಪ್ರಜೆಗಳು ಕಷ್ಟಕ್ಕೀಡಾಗುತ್ತಿದ್ದರು.



**ನಿಮಗೆ ಗೊತ್ತಿದೆಯೇ ?**

ವತನ ಇದು ಅರೇಬಿಕ್ ಶಬ್ದವಾಗಿದ್ದು ಮಹಾರಾಷ್ಟ್ರದಲ್ಲಿ ಅದನ್ನು ವಂಶಪರಂಪರೆಯಿಂದ ಮತ್ತು ಶಾಶ್ವತರೂಪದಲ್ಲಿ ಉಪಯೋಗಿಸಲಾಗುವ ಕಂದಾಯಮುಕ್ತ ಭೂಮಿ ಎಂಬ ಅರ್ಥದಲ್ಲಿ ಬಳಸಲಾಗುತ್ತದೆ.

**ಬರಗಾಲದ ಸಂಕಟ:** ಕೃಷಿಯು ಮಳೆಯ ನೀರಿನ ಮೇಲೆ ಅವಲಂಬಿಸಿತ್ತು. ಮಳೆ ಬಾರದಿದ್ದರೆ ಹೊಲದಲ್ಲಿ ಬೆಳೆಗಳು ಬೆಳೆಯುತ್ತಿರಲಿಲ್ಲ. ಆಗ ಅನ್ನಧಾನ್ಯಗಳ ಬೆಲೆಗಳು ಹೆಚ್ಚುತ್ತಿದ್ದವು. ಜನರಿಗೆ ಅನ್ನಧಾನ್ಯ ದೊರೆಯುವುದು ಕಷ್ಟವಾಗುತ್ತಿತ್ತು. ದನಗಳಿಗೆ ಮೇವು ದೊರೆಯುತ್ತಿರಲಿಲ್ಲ, ನೀರಿನ ತೀವ್ರ ಕೊರತೆ ನಿರ್ಮಾಣವಾಗುತ್ತಿತ್ತು. ಜನರಿಗೆ ಊರಲ್ಲಿರುವುದೇ ಕಠಿಣವಾಗುತ್ತಿತ್ತು. ಜನರು ಊರನ್ನು ಬಿಡುತ್ತಿದ್ದರು. ಜನರಿಗೆ ಊರುಬಿಟ್ಟು ಓಡಿಹೋಗುವ ಪ್ರಸಂಗ ಬರುತ್ತಿತ್ತು. ಬರಗಾಲವು ಜನರಿಗೆ ಬಹುದೊಡ್ಡ ಸಂಕಟವೆನಿಸುತ್ತಿತ್ತು.

ಮಹಾರಾಷ್ಟ್ರದಲ್ಲಿ ಕ್ರಿ.ಶ. 1630 ರಲ್ಲಿ ಇದೇ ರೀತಿ ದೊಡ್ಡ ಪ್ರಮಾಣದಲ್ಲಿ ಬರಗಾಲವು ತಲೆದೋರಿತ್ತು. ಈ ಕ್ಷಾಮದಿಂದಾಗಿ ಜನರಿಗೆ ದಿಕ್ಕು ತೋಚದಂತಾಯಿತು. ಧಾನ್ಯದ ತೀವ್ರ ಕೊರತೆ ನಿರ್ಮಾಣವಾಯಿತು. ತುಣುಕು ರೊಟ್ಟಿಗಾಗಿ ಜನರು ತಮ್ಮನ್ನು ತಾವು ಮಾರಿಕೊಳ್ಳಲು ಸಿದ್ಧರಾಗಿದ್ದರು. ಆದರೆ ಕೊಂಡುಕೊಳ್ಳುವವರೇ ಯಾರೂ ಇರಲಿಲ್ಲ, ಎಂಬ ವರ್ಣನೆಯು ಓದಲು ದೊರೆಯುತ್ತದೆ. ಕುಟುಂಬಗಳು ನಷ್ಟವಾದವು, ದನಕರುಗಳು ಸತ್ತುಹೋದವು. ಕೃಷಿ ಉದ್ಯೋಗವು ನಿಂತುಹೋಯಿತು. ಉದ್ಯೋಗ ವ್ಯವಸಾಯಗಳು ಮುಳುಗಿದವು. ಆರ್ಥಿಕ ವ್ಯವಹಾರಗಳು ಸ್ಥಗಿತಗೊಂಡವು. ಜನರು ಊರನ್ನು ಬಿಟ್ಟು ಅಲೆದಾಡತೊಡಗಿದರು. ಇಂಥ ಅಸ್ತವ್ಯಸ್ತವಾದ ಜನಜೀವನವನ್ನು ಪೂರ್ವ ಸ್ಥಿತಿಗೆ ತರುವುದೊಂದು ದೊಡ್ಡ ಆಹ್ವಾನವಾಗಿತ್ತು.

**ವಾರಕರಿ ಪಂಥದ ಕಾರ್ಯಗಳು:** ಸಮಾಜದ ಮೇಲೆ ಅಂಧಶ್ರದ್ಧೆ ಮತ್ತು ಕರ್ಮಕಾಂಡಗಳ ಬಲವಾದ ಪ್ರಭಾವವಿತ್ತು. ಜನರು ದೈವವಾದಕ್ಕೆ ಬಲಿಯಾಗಿದ್ದರು. ಅವರ ಪ್ರಯತ್ನಶೀಲತೆಯು ಕುಗ್ಗಿಹೋಗಿತ್ತು. ಜನಸಾಮಾನ್ಯರ ಸ್ಥಿತಿ ತುಂಬಾ ಚಿಂತಾಜನಕವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಸಮಾಜದಲ್ಲಿ ಚೈತನ್ಯವನ್ನು ನಿರ್ಮಾಣ ಮಾಡುವ ಪ್ರಯತ್ನವನ್ನು ಮಹಾರಾಷ್ಟ್ರದಲ್ಲಿಯ ವಾರಕರಿ ಪಂಥವು ಮಾಡಿತು.

ಮಹಾರಾಷ್ಟ್ರದಲ್ಲಿ ಸಂತ ನಾಮದೇವ, ಸಂತ ಜ್ಞಾನೇಶ್ವರ ಇವರಿಂದ ಆರಂಭವಾದ ಸಂತರ ಪರಂಪರೆಯನ್ನು ಸಮಾಜದ ವಿವಿಧ ಸ್ತರಗಳಿಂದ ಬಂದ ಸಂತರು ಮುಂದುವರಿಸಿದರು. ಈ ಸಂತಪರಂಪರೆಯಲ್ಲಿ ಸಮಾಜದ ಎಲ್ಲ ವರ್ಗಗಳಲ್ಲಿಯ ಜನರು ಇದ್ದರು. ಉದಾ., ಸಂತ ಚೋಖಾಮೇಳಾ, ಸಂತ ಗೋರೋಬಾ, ಸಂತ ಸಾವತಾ, ಸಂತ ನರಹರಿ, ಸಂತ ಸೇನಾ, ಸಂತ ಶೇಖ ಮಹಮ್ಮದ ಇತ್ಯಾದಿ. ಅದೇರೀತಿ ಈ ಸಂತರಲ್ಲಿ ಸಂತ ಚೋಖಾಮೇಳಾನ ಹೆಂಡತಿ ಸಂತ ಸೋಯರಾಬಾಯಿ ಮತ್ತು ಸಹೋದರಿ ಸಂತ ನಿರ್ಮಲಾಬಾಯಿ ಸಂತ ಮುಕ್ತಾಬಾಯಿ. ಜನಾಬಾಯಿ, ಸಂತ ಕಾನ್ಹೋಪಾತ್ರಾ, ಸಂತ ಬಹಿಣಾಬಾಯಿ ಸಿವೂರಕರ ಮುಂತಾದ ಮಹಿಳೆಯರೂ ಇದ್ದರು. ಪಂಢರಪುರವು ಈ ಸಂತ ಚಳವಳಿಯ ಕೇಂದ್ರವಾಗಿತ್ತು. ವಿಠ್ಠಲನು ಅವರ ದೈವನಾಗಿದ್ದನು. ಪಂಢರಪುರವು ಚಂದ್ರಭಾಗದ ತೀರದಲ್ಲಿ ಈ ಎಲ್ಲ ಸಂತರು ಮತ್ತು ವಾರಕರಿಗಳು ಭಕ್ತಿರಸದಲ್ಲಿ

ಮೀಯುತ್ತಿದ್ದರು. ಅಲ್ಲಿ ಭಜನೆ, ಕೀರ್ತನೆ, ಸಹಭೋಜನ (ಕಾಲಾ) ಇವುಗಳ ಮುಖಾಂತರ ಸಮತೆಯ ಪ್ರಸಾರವಾಗುತ್ತಿತ್ತು.


ಸಂತ ನಾಮದೇವ

**ಸಂತ ನಾಮದೇವ:** ಇವರು ವಾರಕರಿ ಸಂಪ್ರದಾಯದಲ್ಲಿಯ ಒಬ್ಬ ಶ್ರೇಷ್ಠ ಸಂತರಾಗಿದ್ದರು. ಅವರು ಕುಶಲ ಸಂಘಟಕರಾಗಿದ್ದರು. ಅವರು ಉತ್ತಮ ಕೀರ್ತನಕಾರರೂ ಆಗಿದ್ದರು. ಕೀರ್ತನೆಗಳ ಮೂಲಕ ಅವರು ಎಲ್ಲ ಜಾತಿ ಪಂಗಡಗಳಲ್ಲಿಯ ಸ್ತ್ರೀ – ಪುರುಷರನ್ನು ಒಂದುಗೂಡಿಸಿ ಅವರಲ್ಲಿ ಸಮತೆಯ ಭಾವನೆಯನ್ನು ಜಾಗೃತಗೊಳಿಸಿದರು. **'ನಾಚೂ ಕೀರ್ತನಾಚೆ ರಂಗೀ, ಜ್ಞಾನದೀಪ ಲಾವೂ ಜಗೀ'** (ಕೀರ್ತನೆಯ ಆನಂದದಲ್ಲಿ ತಲ್ಲೀನರಾಗಿ ಕುಣಿಯೋಣ. ಜಗತ್ತಿನಲ್ಲಿ ಜ್ಞಾನದೀಪವನ್ನು ಹಚ್ಚೋಣ) ಎಂಬುದು ಅವರ ಪ್ರತಿಜ್ಞೆಯಾಗಿತ್ತು. ಅವರ ಅಭಂಗಗಳು ಪ್ರಸಿದ್ಧವಾಗಿವೆ. ಅನೇಕ ಸಂತರು ಹಾಗೂ ಸರ್ವಸಾಮಾನ್ಯ ಜನರ ಮೇಲೆ ಅವರ ಉಪದೇಶಗಳ ಪ್ರಭಾವವುಂಟಾಯಿತು. ಅವರು ತಮ್ಮ ವಿಚಾರಗಳನ್ನು ಪ್ರಸಾರ ಮಾಡುತ್ತ ಪಂಜಾಬ ವರೆಗೆ ಹೋಗಿದ್ದರು. ಅವರ ಅಭಂಗಗಳು ಶೀಖರ 'ಗುರುಗ್ರಂಥಸಾಹಿಬ' ಎಂಬ ಗ್ರಂಥದಲ್ಲಿ ಸಮಾವೇಶವಾಗಿವೆ. ಅವರ ಭಾಗವತ ಧರ್ಮದ ಸಂದೇಶವನ್ನು ಊರೂರಿಗೆ ತಲುಪಿಸುವ ಕಾರ್ಯ ಮಾಡಿದರು. ಅವರು ಪಂಢರಪುರದಲ್ಲಿ ವಿಠ್ಠಲ ಮಂದಿರದ ಮಹಾದ್ವಾರದ ಮುಂದೆ ಸಂತ ಚೋಖಾಮೇಳಾ ಇವರ ಸಮಾಧಿಯನ್ನು ನಿರ್ಮಿಸಿದರು. ಅವರ ಈ ಕಾರ್ಯವು ಅವಿಸ್ಮರಣೀಯವಾಗಿದೆ.


ಸಂತ ಜ್ಞಾನೇಶ್ವರ

**ಸಂತ ಜ್ಞಾನೇಶ್ವರ:** ಇವರು ವಾರಕರಿ ಸಂಪ್ರದಾಯದಲ್ಲಿಯ ಒಬ್ಬ ವಿಖ್ಯಾತ ಸಂತರಾಗಿದ್ದರು. ಅವರು 'ಭಗವದ್ಗೀತಾ' ಈ ಸಂಸ್ಕೃತ ಗ್ರಂಥದ ಅರ್ಥವನ್ನು ಮರಾಠಿಯಲ್ಲಿ ಸ್ಪಷ್ಟಪಡಿಸುವ 'ಭಾವಾರ್ಥದೀಪಿಕಾ' ಅರ್ಥಾತ್ 'ಜ್ಞಾನೇಶ್ವರಿ' ಎಂಬ ಗ್ರಂಥವನ್ನು ರಚಿಸಿದರು. ಅದರಂತೆಯೇ ಅವರು 'ಅಮೃತಾನುಭವ' ಎಂಬ ಗ್ರಂಥವನ್ನು ರಚಿಸಿದರು. ಅವರು ತಮ್ಮ ಗ್ರಂಥಗಳಲ್ಲಿ ಮತ್ತು ಅಭಂಗಗಳಲ್ಲಿ ಭಕ್ತಿಮಾರ್ಗದ ಮಹತ್ವವನ್ನು ವಿವರಿಸಿದ್ದಾರೆ. ಜನಸಾಮಾನ್ಯರಿಗೆ ಆಚರಿಸಲು ಸುಲಭವಾದ ಆಚಾರಧರ್ಮವನ್ನು ಅವರು ತಿಳಿಸಿದರು. ಅವರು ವಾರಕರಿ ಸಂಪ್ರದಾಯಕ್ಕೆ ಧರ್ಮದ ಪ್ರತಿಷ್ಠೆಯನ್ನು ದೊರಕಿಸಿಕೊಟ್ಟರು. ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ಜೀವನವನ್ನು ಸಾಗಿಸುವ ಪ್ರಸಂಗ ಬಂದರೂ ಅವರು ತಮ್ಮ ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳಲಿಲ್ಲ, ಹಾಗೂ ಯಾರನ್ನೂ ದ್ವೇಷಿಸಲೂ ಇಲ್ಲ. 'ಜ್ಞಾನೇಶ್ವರಿ'ಯಲ್ಲಿಯ 'ಪಸಾಯದಾನ'ವು ಉದಾತ್ತವಾದ ಸಂಸ್ಕಾರ ಮಾಡುವಂತಹದಾಗಿದೆ. ಅವರ ಸಹೋದರರಾದ ಸಂತ ನಿವೃತ್ತಿನಾಥ ಮತ್ತು ಸಂತ ಸೋಪಾನದೇವ ಹಾಗೂ ಸಹೋದರಿ ಮುಕ್ತಾಬಾಯಿ ಇವರ ಕಾವ್ಯರಚನೆಗಳೂ ಪ್ರಸಿದ್ಧವಾಗಿವೆ.


ಸಂತ ಏಕನಾಥ

**ಸಂತ ಏಕನಾಥ:** ಇವರು ಮಹಾರಾಷ್ಟ್ರದ ಭಕ್ತಿ ಚಳವಳಿಯಲ್ಲಿಯ ಮಹಾನ್ ಸಂತರಾಗಿದ್ದರು. ಅವರ ಸಾಹಿತ್ಯವು ವಿಪುಲವಾಗಿದ್ದು ಅದು ವಿವಿಧ ಪ್ರಕಾರದ್ದಾಗಿದೆ. ಅದರಲ್ಲಿ ಅಭಂಗ, ಗೌಳಣಿ, ಭಾರೂಡ ಮುಂತಾದವುಗಳ ಸಮಾವೇಶವಾಗುತ್ತದೆ. ಅವರು ಭಾಗವತ ಧರ್ಮದ ರಚನೆಯನ್ನು ಸುಲಭವಾಗಿ ಮತ್ತು ಸವಿಸ್ತಾರವಾಗಿ ಮಾಡಿದ್ದಾರೆ. ಅವರು ತಮ್ಮ ಭಾವಾರ್ಥ ರಾಮಾಯಣದಲ್ಲಿ ರಾಮಕಥೆಯ ನಿಮಿತ್ತವಾಗಿ ಜಾನಪದ ಜೀವನದ ಚಿತ್ರವನ್ನು ಮೂಡಿಸಿದ್ದಾರೆ.ಅವರು ಭಾಗವತ ಎಂಬ ಸಂಸ್ಕೃತ ಗ್ರಂಥದಲ್ಲಿಯ ಭಕ್ತಿಗೆ ಸಂಬಂಧಿಸಿದ ಭಾಗದ ಅರ್ಥವನ್ನು ಮರಾಠಿಯಲ್ಲಿ ವಿವರಿಸಿದ್ದಾರೆ. ಅವರ ಅಭಂಗಗಳಲ್ಲಿ ವಾತ್ಸಲ್ಯವಿದೆ. ಪರಮಾರ್ಥದ ಪ್ರಾಪ್ತಿಗಾಗಿ ಪ್ರಪಂಚವನ್ನು ತೊರೆಯುವ ಅವಶ್ಯಕತೆಯಿಲ್ಲವೆಂಬುದನ್ನು ಅವರು ತಮ್ಮ ಆಚರಣೆಯಿಂದ ತೋರಿಸಿಕೊಟ್ಟರು. ಅವರು ನಿಜವಾದ ಅರ್ಥದಲ್ಲಿ ಜನತೆಯ ಶಿಕ್ಷಕರಾಗಿದ್ದರು. ನಮ್ಮ ಮರಾಠಿ ಭಾಷೆಯು ಯಾವುದೇ ಭಾಷೆಗಿಂತ ಕಡಿಮೆಯಿಲ್ಲ ಎಂದು ಅವರು ತಿಳಿಯುತ್ತಿದ್ದರು. **'ಸಂಸ್ಕೃತ ವಾಣಿ ದೇವೆ ಕೇಲಿ. ತರಿ ಪ್ರಾಕೃತಿ ಕಾಯ ಚೋರಾಪಾಸುನಿ ಝಾಲಿ?'** (ಸಂಸ್ಕೃತ ಭಾಷೆಯನ್ನು ದೇವರು ನಿರ್ಮಾಣ ಮಾಡಿದನು. ಆದರೆ ಪ್ರಾಕೃತವೇನು ಕಳ್ಳರಿಂದ ನಿರ್ಮಾಣವಾಯಿತೇ?) ಎಂದು ಅವರು ಸಂಸ್ಕೃತ ಪಂಡಿತರನ್ನು ಸ್ಪಷ್ಟವಾಗಿ ಕೇಳಿದರು. ಇತರ ಧರ್ಮಗಳ ತಿರಸ್ಕಾರ ಮಾಡುವವರನ್ನು ಅವರು ಕಟುವಾಗಿ ಟೀಕಿಸಿದರು.


ಸಂತ ತುಕಾರಾಮ:

**ಸಂತ ತುಕಾರಾಮ:** ಇವರು ಪುಣೆಯ ಹತ್ತಿರದ ದೇವುಗಾಂವ ಊರಿನವರು. ಅವರ ಅಭಂಗಗಳು ಪ್ರಸನ್ನ ಮತ್ತು ಪ್ರಾಸಾದಿಕವಾಗಿವೆ. ಅವರ ಅಭಂಗಗಳಿಗೆ ಶ್ರೇಷ್ಠ ಕಾವ್ಯದ ದರ್ಜೆ ಲಭಿಸಿದೆ. ಸಂತ

ತುಕಾರಾಮರ 'ಗಾಥಾ' ಇದು ಮರಾಠಿ ಭಾಷೆಯ ಅಮೂಲ್ಯ ಸಂಪತ್ತಾಗಿದೆ. ಅವರು ದುಃಖಿತರಲ್ಲಿ, ಪೀಡಿತರಲ್ಲಿ ದೇವತ್ವವನ್ನು ಕಾಣಬೇಕೆಂದು ಹೇಳುವಾಗ ಹೀಗೆ ಹೇಳುತ್ತಾರೆ, **'ಜೆಕಾ ರಂಜಲೆ ಗಾಂಜಲೆ, ತ್ಯಾಸಿ ಮ್ಹಣೆ ಜೋ ಆಪುಲೆ. ತೋಚಿ ಸಾಧು ಓಳಖಾವಾ, ದೇವ ತೇಥೇಚಿ ಜಾಣಾವಾ.** (ದುಃಖಿತರನ್ನು, ಪೀಡಿತರನ್ನು ಯಾರು ತನ್ನವರೆಂದು ತಿಳಿಯುತ್ತಾರೋ ಅವರನ್ನೇ ಸಾಧು ಸಂತರೆಂದು ತಿಳಿಯಬೇಕು. ಅವರಲ್ಲಿಯೇ ದೇವರನ್ನು ಕಾಣಬೇಕು) ಅವರ ಈ ದೃಷ್ಟಿಕೋನದಿಂದಾಗಿಯೇ ಅವರು ಜನರಿಗೆ ನೀಡಿದ ಸಾಲದ ಕಾಗದಪತ್ರಗಳನ್ನು ಇಂದ್ರಾಯಣಿ ನದಿಯ ಮಡುವಿನಲ್ಲಿ ಮುಳುಗಿಸಿ ಅನೇಕ ಕುಟುಂಬಗಳನ್ನು ಸಾಲಮುಕ್ತರನ್ನಾಗಿ ಮಾಡಿದರು. ಅವರು ಸಮಾಜದಲ್ಲಿಯ ಡಾಂಭಿಕತೆ ಮತ್ತು ಅಂಧಶ್ರದ್ಧೆಗಳನ್ನು ಕಟುವಾಗಿ ಟೀಕಿಸಿದರು. ಭಕ್ತಿಯ ಜೊತೆ ನೀತಿಗೆ ಅವರು ಮಹತ್ವ ನೀಡಿದರು. **'ಜೋಡೊನಿಯಾ ಧನ ಉತ್ತಮ ವ್ಯವಹಾರೆ, ಉದಾಸ ವಿಚಾರೆ ವೇಚಕರಿ,** (ಉತ್ತಮ ವ್ಯವಹಾರದಿಂದ ಹಣವನ್ನು ಗಳಿಸಬೇಕು, ಉದಾತ್ತ ವಿಚಾರದಿಂದ ಅದನ್ನು ಖರ್ಚು ಮಾಡಬೇಕು) ಈ ರೀತಿ ಅವರ ಉಪದೇಶಗಳ ಸಾರವನ್ನು ಹೇಳಬಹುದು. ಸಮಾಜದಲ್ಲಿಯ ಕೆಲವು ಕರ್ಮಠ ಜನರು ತುಕಾರಾಮರು ಮಾಡುತ್ತಿದ್ದ ಜನಜಾಗೃತಿಯ ಕಾರ್ಯವನ್ನು ವಿರೋಧಿಸಿದರು. ಅವರಿಗೆ ಅಭಂಗಗಳನ್ನು ರಚಿಸುವ ಅಧಿಕಾರವೇ ಇಲ್ಲವೆಂದು ಹೇಳಿ ಆ ಜನರು ತುಕಾರಾಮರು ರಚಿಸಿದ ಅಭಂಗಗಳ ಟಿಪ್ಪಣಿ ಪುಸ್ತಕಗಳನ್ನು ಇಂದ್ರಾಯಣಿ ನದಿಯಲ್ಲಿ ಮುಳುಗಿಸಿದರು. ಇವರೆಲ್ಲರ ವಿರೋಧವನ್ನು ತುಕಾರಾಮರು ಧೈರ್ಯದಿಂದ ಎದುರಿಸಿದರು.

ಸಂತ ತುಕಾರಾಮರ ಶಿಷ್ಯರು ಮತ್ತು ಸಹಕಾರಿಗಳು ವಿವಿಧ ಜಾತಿ ಪಂಗಡದವರಾಗಿದ್ದರು. ಉದಾ., ನಾವಜಿ ಮಾಳಿ, ಗವನರ ಶೇಟ ವಾಣಿ, ಸಂತಾಜಿ ಜಗನಾಡೆ, ಶಿವಬಾ ಕಾಸಾರ, ಬಹಿಣಾಬಾಯಿ ಶಿವೂರಕರ, ಮಹಾದಜಿಪಂತ ಕುಲಕರ್ಣಿ ಇತ್ಯಾದಿ. ಗಂಗಾರಾಮಪಂತ ಮವಾಳ ಮತ್ತು ಸಂತಾಜಿ ಜಗನಾಡೆ ಇವರು ಸಂತ ತುಕಾರಾಮರ ಅಭಂಗಗಳನ್ನು ಬರೆದಿಡುವ ಮಹತ್ವದ ಕಾರ್ಯವನ್ನು ಮಾಡಿದರು.

**ಸಂತರ ಕಾರ್ಯಗಳ ಫಲಶ್ರುತಿ:** ಸಂತರು ಜನರಿಗೆ ಸಮಾನತೆಯ ಸಂದೇಶವನ್ನು ನೀಡಿದರು. ಮಾನವೀಯತೆ ಮತ್ತು ಮಾನವ ಧರ್ಮಗಳನ್ನು ಕಲಿಸಿದರು. ಪರಸ್ಪರರನ್ನು ಪ್ರೀತಿಸಬೇಕು. ಎಲ್ಲರೂ ಒಂದಾಗಿ ಬಾಳಬೇಕು. ಒಗ್ಗಟ್ಟಿನಿಂದ ಇರಬೇಕು ಎಂಬುದು ಅವರ ಉಪದೇಶವಾಗಿತ್ತು. ಸಂತರ ಕಾರ್ಯದಿಂದಾಗಿ ಜನಜಾಗೃತಿಯಾಯಿತು. ಪರಕೀಯ ದಾಳಿ, ಬರಗಾಲದ ಪರಿಸ್ಥಿತಿ ಅಥವಾ ವಿವಿಧ ಬಗೆಯ ನೈಸರ್ಗಿಕ ಆಪತ್ತುಗಳನ್ನು ಎದುರಿಸುತ್ತ ದೈನಂದಿನ ಜೀವನವನ್ನು ನಡೆಸುವಾಗ ಸಂತರ ಭಕ್ತಿಯ ಉಪದೇಶವು ಜನರಿಗೆ ಆಧಾರವೆನಿಸಿತು. ಸಂತರ ಈ ಕಾರ್ಯಗಳಿಂದಾಗಿ ಮಹಾರಾಷ್ಟ್ರದಲ್ಲಿಯ ಜನರಲ್ಲಿ ಆತ್ಮವಿಶ್ವಾಸ ನಿರ್ಮಾಣವಾಯಿತು.

ಸಮಾಜದಲ್ಲಿ ಧರ್ಮದ ಅವನತಿಯಾಗಿತ್ತು. ಇಂಥ ಸಮಯದಲ್ಲಿ ಸಂತರು ಮುಂದಾಗಿ ಸಮಾಜದ ರಕ್ಷಣೆ ಮಾಡಿದರು. ಅವರು ಧರ್ಮದ ನಿಜವಾದ ಅರ್ಥವನ್ನು ವಿವರಿಸಿದರು. ಜನರೊಳಗೆ ಇದ್ದುಕೊಂಡು ಅವರ ಸುಖದುಃಖಗಳನ್ನು ತಿಳಿದುಕೊಳ್ಳುತ್ತ ಭಕ್ತಿ ಮಾರ್ಗವನ್ನು ಪ್ರತಿಪಾದಿಸಿದರು. ಇಂಥ ಸಮಯದಲ್ಲಿ ಸಮಾಜದಲ್ಲಿಯ ಕೆಲವು ಧರ್ಮನಿಷ್ಠ ಜನರು ಅವರನ್ನು ವಿರೋಧಿಸತೊಡಗಿದರು. ಈ ವಿರೋಧವನ್ನು ಸಹಿಸುವುದು ತಮ್ಮ ಕರ್ತವ್ಯದ ಒಂದು ಭಾಗವಾಗಿದೆ ಎಂದು ಸಂತರ ತಿಳಿದರು. **'ತುಕಾ ಮ್ಹಣೆ ತೋಚಿ ಸಂತ, ಸೋಶಿ ಜಗಾಚೆ ಆಘಾತ'.** (ಜಗತ್ತಿನ ಆಘಾತಗಳನ್ನು ಸಹಿಸುವವನೇ ನಿಜವಾದ ಸಂತ) ಎಂಬ ಶಬ್ದಗಳಲ್ಲಿ ಸಂತ ತುಕಾರಾಮರು ನಿಜವಾದ ಸಂತರ ಲಕ್ಷಣಗಳನ್ನು ಹೇಳಿದ್ದಾರೆ.

ಶಾಸ್ತ್ರಿ-ಪಂಡಿತರ ಕಠಿಣ ಭಾಷೆಯಲ್ಲಿಯ ಧರ್ಮವನ್ನು ಸಂತರು ಜನಸಾಮಾನ್ಯರ ಭಾಷೆಯಲ್ಲಿ ತಂದರು. ದೈನಂದಿನ ವ್ಯವಹಾರದಲ್ಲಿಯ ಭಾಷೆಯಲ್ಲಿ ಅವರು ಪರಮೇಶ್ವರನನ್ನು ಪ್ರಾರ್ಥಿಸಿದರು. ದೇವರ ಮುಂದೆ ಎಲ್ಲರೂ ಸಮಾನರಾಗಿದ್ದಾರೆ ಎಂದು ಅವರು ಹೇಳಿದರು. ವರ್ಣ ಮತ್ತು ಜಾತಿಯ ಅಹಂಕಾರವನ್ನು ಬದಿಗಿರಿಸಿ ನಾವು ಪರಸ್ಪರರನ್ನು ಪರಮೇಶ್ವರನ ಮಕ್ಕಳೆಂದು ತಿಳಿಯಬೇಕು ಎಂಬ ಉಪದೇಶವನ್ನು ಅವರು ಮಾಡಿದರು. ಈ ಎಲ್ಲ ಸಂತರ ಒಂದು ವೈಶಿಷ್ಟ್ಯವೇನೆಂದರೆ ಭಕ್ತಿ ಮಾಡುವಾಗ ಅವರು ತಮ್ಮ ಕರ್ತವ್ಯಕರ್ಮಗಳನ್ನು ಬಿಡಲಿಲ್ಲ, ಅವರು ತಮ್ಮ ಕಾಯಕದಲ್ಲಿಯೇ ಪರಮೇಶ್ವರನನ್ನು ಕಂಡರು. **'ಕಾಂದಾ ಮುಳಾ ಭಾಜಿ, ಅವಘಿ ವಿಠಾಯಿ ಮಾಝಿ.** (ಉಳ್ಳಾಗಡ್ಡೆ, ಮೂಲಂಗಿ ಕಾಯಿಪಲ್ಲೆ- ಎಲ್ಲವೂ ನನ್ನ ವಿಠ್ಠಲನೇ ಆಗಿದ್ದಾನೆ) ಎಂದು ಸಂತ ಸಾವತಾ ಮಹಾರಾಜರು ಹೇಳುತ್ತಾರೆ. ಅವರ ಈ ವಿಧಾನವು ಕೃಷಿ ಕಾರ್ಯಗಳಿಗೆ ಸಂಬಂಧಿಸಿದ್ದರೂ ಅದು ಸಂತರ ದೈನಂದಿನ ಜೀವನದಲ್ಲಿಯ ಅನ್ಯ ಕಾರ್ಯಗಳಿಗೂ ಅನ್ವಯಿಸುತ್ತದೆ. ಸಂತರು ತಮ್ಮ ತಮ್ಮ ಉದ್ಯೋಗಗಳನ್ನು ಮಾಡುತ್ತ ಭಕ್ತಿ, ಉಪದೇಶ, ಕಾವ್ಯ ರಚನೆ ಮಾಡುತ್ತಾ ಇದ್ದರು. ಅವರು ಸಮಾಜದ ನೈತಿಕ ಅರಿವನ್ನು ವಿಕಸಿತಗೊಳಿಸಿದರು.



**ಬನ್ನಿ, ಚರ್ಚೆ ಮಾಡೋಣ**

ಪಂಢರಪೂರದ ವಾರಿಯ ವಿಷಯವಾಗಿ ಹೆಚ್ಚಿನ ಮಾಹಿತಿಯನ್ನು ಪಡೆದು ಕೆಳಗಿನ ಅಂಶಗಳನ್ನು ಕುರಿತು ಚರ್ಚೆಮಾಡಿರಿ.

- ವಾರಕರಿಗಳು ವಾರಿಗೆ ಯಾವ ತಿಂಗಳಲ್ಲಿ ಹೋಗುತ್ತಾರೆ?
- ವಾರಿಯ ಪೂರ್ವ ಸಿದ್ಧತೆಯು ಹೇಗಿರುತ್ತದೆ?

**ರಾಮದಾಸ ಸ್ವಾಮಿಗಳು:** ರಾಮದಾಸ ಸ್ವಾಮಿಗಳು ಮರಾಠವಾಡಾದಲ್ಲಿಯ ಜಾಂಬ ಊರಿನವರು. ಅವರು ಬಲೋಪಾಸನೆಯ ಮಹತ್ವವನ್ನು ಸ್ಪಷ್ಟಪಡಿಸಿದರು. **'ಮರಾಠಾ ತಿತುಕಾ ಮೇಳವಾವಾ, ಮಹಾರಾಷ್ಟ್ರಧರ್ಮ ವಾಢವಾವಾ'** (ಎಲ್ಲ ಮರಾಠಿಗರನ್ನು ಒಂದುಗೂಡಿಸಬೇಕು, ಮಹಾರಾಷ್ಟ್ರ ಧರ್ಮವನ್ನು ಬೆಳೆಸಬೇಕು) ಎಂಬ ಅವರ ಸಂದೇಶವು ಪ್ರಸಿದ್ಧವಾಗಿದೆ. ಜನರಿಗೆ ವ್ಯಾವಹಾರಿಕ ಶಿಕ್ಷಣದ ಪಾಠ ಹೇಳಿಕೊಟ್ಟರು. ಜನರ ಚಳವಳಿಯ ಹಾಗೂ ಸಂಘಟನೆಯ ಮಹತ್ವವನ್ನು ತಿಳಿಸಿದರು. ಸಮರ್ಥ ಸಂಪ್ರದಾಯವನ್ನು ಸ್ಥಾಪಿಸಿದರು. ಚಾಫಳ ಇದು ಈ ಸಂಪ್ರದಾಯದ ಕೇಂದ್ರವಾಗಿತ್ತು. ಅವರು ರಾಮನ ಮತ್ತು ಹನುಮಂತನ ಉಪಾಸನೆಯ ಪ್ರಸಾರ ಮಾಡಿದರು. ತಮ್ಮ ವಿಚಾರಗಳನ್ನು ಪ್ರಸಾರ ಮಾಡುವ ಸಲುವಾಗಿ ಸಾಕಷ್ಟು ಪ್ರವಾಸ ಮಾಡಿದರು.


ರಾಮದಾಸ ಸ್ವಾಮಿ

**ಪಾರತಂತ್ರ್ಯದಲ್ಲಿ ಸ್ವಾತಂತ್ರ್ಯದ ಪ್ರೇರಣೆ:** ಶಿವಪೂರ್ವಕಾಲದ ಮಹಾರಾಷ್ಟ್ರದಲ್ಲಿ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಯು ಸಾಮಾನ್ಯವಾಗಿ ಹೀಗಿತ್ತು. ಈ ಕಾಲದಲ್ಲಿ ಮಹಾರಾಷ್ಟ್ರವು ಆದಿಲಶಾಹಿ ಮುಂತಾದ ಆಡಳಿತಗಾರರ ಅಂಕಿತದಲ್ಲಿತ್ತು. ಹೀಗಾಗಿ ಅದು ಸ್ವತಂತ್ರವಾಗಿರಲಿಲ್ಲ. ಹೀಗಿದ್ದರೂ ಕೂಡ ಕೆಲವು ವ್ಯಕ್ತಿಗಳು ಸ್ವಾತಂತ್ರ್ಯದ ಕನಸನ್ನು ಕಾಣುತ್ತಿದ್ದರು. ಇಂಥ ಘಟಕಗಳಲ್ಲಿ ಸ್ವರಾಜ್ಯದ ಸಂಕಲ್ಪಕರೆಂದು ಮನ್ನಿಸಲ್ಪಡುವ ಶಹಾಜಿರಾಜರ ಸ್ಥಾನವು ಅಗ್ರಭಾಗದಲ್ಲಿತ್ತು.

## ಅಭ್ಯಾಸ

**1. ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ.**

| | ಊರು (ಮೌಜಾ) | ಕಸಬಾ | ಪರಗಣಾ |
|---|---|---|---|
| ಎಂದರೇನು | | | |
| ಪದಾಧಿಕಾರಿಗಳು | | | |
| ಉದಾಹರಣೆ | | | |

**2. ಎಂದರೇನು?**

(1) ಬುದ್ರುಕ್ –
(2) ಬಲೂತೆ –
(3) ವತನ –

**3. ಹುಡುಕಿ ಬರೆಯಿರಿ.**

(1) ಕೊಂಕಣದ ಕರಾವಳಿ ತೀರದಲ್ಲಿ ಆಫ್ರಿಕೆಯಿಂದ ಬಂದ ಜನರು –
(2) 'ಅಮೃತಾನುಭವ' ಗ್ರಂಥದ ಲೇಖಕರು –
(3) ಸಂತ ತುಕಾರಾಮರ ಊರು –
(4) ಭಾರೂಡದ ರಚನಾಕಾರರು –
(5) ಬಲೋಪಾಸನೆಯ ಮಹತವನ್ನು ತಿಳಿಸಿದವರು –
(6) ಸ್ತ್ರೀ ಸಂತರ ಹೆಸರುಗಳನ್ನು ಬರೆಯಿರಿ.

**4. ನಿಮ್ಮ ಶಬ್ದಗಳಲ್ಲಿ ಮಾಹಿತಿ ಮತ್ತು ಕಾರ್ಯಗಳನ್ನು ಬರೆಯಿರಿ.**

(1) ಸಂತ ನಾಮದೇವ (2) ಸಂತ ಜ್ಞಾನೇಶ್ವರ
(3) ಸಂತ ಏಕನಾಥ (4) ಸಂತ ತುಕಾರಾಮ

**5. ಬರಗಾಲವು ಜನರಿಗೆ ಬಹುದೊಡ್ಡ ಸಂಕಟವೆಂದು ಏಕೆ ಅನಿಸುತ್ತಿತ್ತು?**

**ಉಪಕ್ರಮ:**

(1) ವಾರಕರಿಗಳ ದಿಂಡಿಗೆ ನೀವು ಯಾವ ರೀತಿ ಸಹಾಯ ಮಾಡುವಿರಿ. ಅದರ ಸಿದ್ಧತೆ ಬರೆಯಿರಿ.
(2) ವಿವಿಧ ಸಂತರ ವೇಷಭೂಷಣದಲ್ಲಿ ಅವರ ಕಾವ್ಯಗಳನ್ನು ಸಾದರಪಡಿಸಿರಿ.



# 5. ಸ್ವರಾಜ್ಯ ಸ್ಥಾಪನೆ

ಹದಿನೇಳನೆಯ ಶತಮಾನದ ಪೂರ್ವಾರ್ಧದಲ್ಲಿ ಮಹಾರಾಷ್ಟ್ರದಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಎಂಬ ಯುಗ ಪ್ರವರ್ತಕ ವ್ಯಕ್ತಿಯ ಉದಯವಾಯಿತು. ಅವರು ಅಲ್ಲಿಯ ಅನ್ಯಾಯದ ರಾಜಪ್ರಭುತ್ವಗಳಿಗೆ ಆಹ್ವಾನ ನೀಡಿ ಸ್ವರಾಜ್ಯದ ಸ್ಥಾಪನೆ ಮಾಡಿದರು. ಶಕೆ 1551, ಫಾಲ್ಗುಣ ವದ್ಯ ತೃತೀಯ ಅಂದರೆ 19 ಫೆಬ್ರುವರಿ 1630ರಂದು ಪುಣೆ ಜಿಲ್ಲೆಯ ಜುನ್ನರ ಹತ್ತಿರದ ಶಿವನೇರಿ ಕೋಟೆಯಲ್ಲಿ ಅವರ ಜನನವಾಯಿತು. ಅವರು ಮಾಡಿದ ಸ್ವರಾಜ್ಯ ಸ್ಥಾಪನೆಯ ಮಾಹಿತಿಯನ್ನು ನಾವು ಈ ಪಾಠದಲ್ಲಿ ಪಡೆಯುವವರಿದ್ದೇವೆ.

**ಶಹಾಜಿರಾಜರು:** ಶಿವಾಜಿ ಮಹಾರಾಜರ ತಂದೆ ಶಹಾಜಿ ರಾಜರು ದಕ್ಷಿಣದಲ್ಲಿಯ ಒಬ್ಬ ಶೂರ ಸರದಾರರಾಗಿದ್ದರು. ಮುಘಲರು ನಿಜಾಮಶಾಹಿಯನ್ನು ಗೆದ್ದುಕೊಳ್ಳುವ ಸಲುವಾಗಿ ದಂಡಯಾತ್ರೆಯನ್ನು ಕೈಗೊಂಡರು. ಈ ದಂಡಯಾತ್ರೆಯಲ್ಲಿ ವಿಜಾಪುರದ ಆದಿಲಶಾಹನು ಮುಘಲರೊಂದಿಗೆ ಸಹಕರಿಸಿದನು. ದಕ್ಷಿಣದಲ್ಲಿ ಮುಘಲರ ಪ್ರವೇಶವಾಗಬಾರದೆಂಬುದು ಶಹಾಜಿರಾಜರ ಇಚ್ಛೆಯಾಗಿತ್ತು. ಆದ್ದರಿಂದ ಅವರು ಮುಘಲರನ್ನು ತೀವ್ರವಾಗಿ ವಿರೋಧಿಸಿ ನಿಜಾಮಶಾಹಿಯನ್ನು ಉಳಿಸುವ ಪ್ರಯತ್ನ ಮಾಡಿದರು. ಆದರೆ ಮುಘಲ ಮತ್ತು ಆದಿಲಶಾಹರ ಸಾಮರ್ಥ್ಯದ ಮುಂದೆ ಅವರ ಆಟ ನಡೆಯಲಿಲ್ಲ, ಕ್ರಿ.ಶ. 1636 ರಲ್ಲಿ ನಿಜಾಮಶಾಹಿಯ ಪತನವಾಗಿ, ಅದು ನಷ್ಟವಾಯಿತು.



ಶಹಾಜಿರಾಜರು

ನಿಜಾಮಶಾಹಿಯ ಅಸ್ತಿತ್ವವು ನಷ್ಟವಾದ ನಂತರ ಶಹಾಜಿರಾಜರು ವಿಜಾಪೂರದ ಆದಿಲಶಾಹನ ಸರದಾರರಾದರು. ಆದಿಲಶಾಹನು ಶಹಾಜಿರಾಜರ ಕಡೆಗಿದ್ದ ಭೀಮಾ ಮತ್ತು ನೀರಾ ನದಿಗಳ ನಡುವಿನ ಪುಣೆ, ಸುಪೆ, ಇಂದಾಪೂರ ಮತ್ತು ಚಾಕಣ ಈ ಜಹಗೀರುಗಳನ್ನು ಅವರ ಕಡೆಗೇ ಇಟ್ಟನು. ಆದಿಲಶಾಹನ ಕಡೆಯಿಂದ ಶಹಾಜಿ ರಾಜರಿಗೆ ಕರ್ನಾಟಕದ ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಜಹಗೀರುಗಳೆಂದು ದೊರೆತವು.

ಶಹಾಜಿರಾಜರು ಶೂರರೂ, ಧೈರ್ಯಶಾಲಿಗಳೂ, ಬುದ್ಧಿವಂತರೂ ಹಾಗೂ ಶ್ರೇಷ್ಠ ರಾಜಕಾರಣಿಗಳೂ ಆಗಿದ್ದರು.

> **ನಿಮಗೆ ಗೊತ್ತಿದೆಯೇ?**
>
> ಜಹಗೀರು– ಜಹಗೀರು ಎಂದರೆ ಯಾವುದಾದರೊಂದು ಪ್ರದೇಶದ ವಸೂಲಿಯನ್ನು ಅನುಭೋಗಿಸುವ ಹಕ್ಕು. ರಾಜರ ಸೇವೆಯಲ್ಲಿ ಯಾರಿಗೆ ಸರದಾರರ ಪದವಿ ದೊರಕುತ್ತಿತ್ತೋ ಅವರಿಗೆ ನಗದು ಹಣದ ರೂಪದಲ್ಲಿ ಸಂಬಳವನ್ನು ನೀಡದೆ ಸಂಬಳದ ದುಡ್ಡಿನಷ್ಟು ಉತ್ಪನ್ನವು ಕಂದಾಯದಿಂದ ದೊರೆಯುವಷ್ಟು ಪ್ರದೇಶವನ್ನು ನೇಮಿಸಿ ಕೊಡಲಾಗುತ್ತಿತ್ತು. ಅದಕ್ಕೆ 'ಜಹಗೀರು' ಎನ್ನುತ್ತಿದ್ದರು.

ಅವರು ಉತ್ತಮ ಧನುರ್ಧಾರಿಯಾಗಿದ್ದರು. ಅದರಂತೆ ಖಡ್ಗ, ಪಟ್ಟಾ ಮತ್ತು ಭಲ್ಲೆಗಳನ್ನು ಚಲಾಯಿಸುವುದರಲ್ಲಿ ನಿಪುಣರಾಗಿದ್ದರು. ಪ್ರಜೆಗಳನ್ನು ಅವರು ತುಂಬಾ ಪ್ರೀತಿಸುತ್ತಿದ್ದರು. ಮಹಾರಾಷ್ಟ್ರ, ಕರ್ನಾಟಕ ಹಾಗೂ ತಮಿಳುನಾಡುಗಳಲ್ಲಿಯ ಅನೇಕ ಪ್ರದೇಶಗಳನ್ನು ಅವರು ಗೆದ್ದುಕೊಂಡಿದ್ದರು. ದಕ್ಷಿಣ ಭಾರತದಲ್ಲಿ ಅವರ ಬಗ್ಗೆ ಭಯಮಿಶ್ರಿತ ಆದರವಿತ್ತು. ಶಿವರಾಯ ಮತ್ತು ಜಿಜಾಬಾಯಿಯವರು ಬೆಂಗಳೂರಿನಲ್ಲಿರುವಾಗ ಅವರು ಶಿವರಾಯರನ್ನು ರಾಜನನ್ನಾಗಿ ಮಾಡುವ ಸಲುವಾಗಿ ಅವರಿಗೆ ಯೋಗ್ಯವಾದ ಉತ್ತಮ ಶಿಕ್ಷಣವನ್ನು ನೀಡುವ ವ್ಯವಸ್ಥೆಯನ್ನು ಮಾಡಿದ್ದರು. ಪರಕೀಯರ ಆಡಳಿತವನ್ನು ಉರುಳಿಸಿ ಸ್ವರಾಜ್ಯದ ಸ್ಥಾಪನೆ ಮಾಡಬೇಕು ಎಂಬುದು ಅವರ ತೀವ್ರ ಇಚ್ಛೆಯಾಗಿತ್ತು. ಆದ್ದರಿಂದಲೇ ಅವರಿಗೆ ಸ್ವರಾಜ್ಯದ ಸಂಕಲ್ಪಕ ಎಂದು ಕರೆಯಲಾಗುತ್ತದೆ. ಅವರು ಶಿವರಾಯ ಮತ್ತು ಜಿಜಾಬಾಯಿಯವರನ್ನು ವಿಶ್ವಾಸದ ಮತ್ತು ದಕ್ಷ ಆದಳಿತಗಾರದ ಸಹಕಾರಿಗಳನ್ನು ಬೆಂಗಳೂರಿನಿಂದ ಪುಣೆಗೆ ಕಳಿಸಿದರು.

**ವೀರಮಾತೆ ಜಿಜಾಬಾಯಿ:** ಜಿಜಾಬಾಯಿ ಇವರು ಬುಲಢಾಣಾ ಜಿಲ್ಲೆಯ ಸಿಂಧಖೇಡರಾಜಾ ಎಂಬಲ್ಲಿಯ ಸಾಮರ್ಥ್ಯಶಾಲಿ ಸರದಾರರಾದ ಲಖುಜಿರಾಜೆ ಜಾಧವ ಇವರ ಸುಪುತ್ರಿ. ಅವರಿಗೆ ಚಿಕ್ಕವರಿದ್ದಾಗಲೇ ವಿವಿಧ ವಿದ್ಯೆಗಳ ಜೊತೆಗೆ ಸೈನಿಕ ಶಿಕ್ಷಣವೂ ದೊರಕಿತ್ತು. ಶಹಾಜಿ ಮಹಾರಾಜರ ಸ್ವರಾಜ್ಯ ಸ್ಥಾಪನೆಯ ಕನಸು ನನಸಾಗ ಬೇಕೆಂದು ಅವರು ಅವರಿಗೆ ಪ್ರೋತ್ಸಾಹ ನೀಡಿ ಸಹಾಯ ಮಾಡುತ್ತಿದ್ದರು. ಅವರು ಸಾಮರ್ಥ್ಯಶಾಲಿ ಹಾಗೂ ಚತುರ ರಾಜನೀತಿಜ್ಞರಾಗಿದ್ದರು. ಸ್ವರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಅವರು ಶಿವರಾಯರಿಗೆ ಎಡೆಬಿಡದೆ ಮಾರ್ಗದರ್ಶನ ಮಾಡಿದರು. ಕೆಲವೊಮ್ಮೆ ಪ್ರಜೆಗಳ ಪ್ರಶ್ನೆಗಳನ್ನು ಬಿಡಿಸುವ



ವೀರಮಾತೆ ಜಿಜಾಬಾಯಿ

ಸಲುವಾಗಿ ನ್ಯಾಯದಾನದ ಕಾರ್ಯವನ್ನು ಕೂಡ ಅವರು ಮಾಡುತ್ತಿದ್ದರು. ಅವರು ಶಿವರಾಯರಿಗೆ ಉತ್ತಮ ಶಿಕ್ಷಣ ನೀಡುವ ವಿಷಯದಲ್ಲಿ ಸದೈವ ಜಾಗರೂಕರಾಗಿರುತ್ತಿದ್ದರು. ಅವರು ಶಿವರಾಯರ ಮೇಲೆ ಶೀಲ, ಸತ್ಯಪ್ರಿಯತೆ, ವಾಕ್ಚಾತುರ್ಯ, ದಕ್ಷತೆ, ಧೈರ್ಯ, ನಿರ್ಭಯತೆ, ಶಸ್ತ್ರ ಪ್ರಯೋಗ, ವಿಜಯಾಕಾಂಕ್ಷೆ, ಸ್ವರಾಜ್ಯ ಸ್ವಪ್ನ ಇತ್ಯಾದಿಗಳ ಸಂಸ್ಕಾರ ಮಾಡಿದರು.

**ಶಿವರಾಯ ಸಹಕಾರಿಗಳು:** ಶಿವಾಜಿ ಮಹಾರಾಜರು ಸ್ವರಾಜ್ಯ ಸ್ಥಾಪನೆಯ ಆರಂಭವನ್ನು ಮಾವಳ ಪ್ರದೇಶದಲ್ಲಿ ಮಾಡಿದರು. ಮಾವಳ ಎಂದರೆ ಈಗಿನ ಪುಣೆ ಜಿಲ್ಲೆಯ ಪಶ್ಚಿಮ ಮತ್ತು ನೈರುತ್ಯ ಭಾಗ. ಮಾವಳ ಪ್ರದೇಶವು ಗುಡ್ಡಗಾಡು ಪ್ರದೇಶವಾಗಿದ್ದು ಕಣಿವೆ ಕೊಳ್ಳಗಳಿಂದ ಕೂಡಿದ ದುರ್ಗಮ ಪ್ರದೇಶವಾಗಿತ್ತು. ಸ್ವರಾಜ್ಯ ಸ್ಥಾಪನೆಗಾಗಿ ಮಾವಳದ ಭೌಗೋಲಿಕ ಪರಿಸ್ಥಿತಿಯ ಉಪಯೋಗವನ್ನು ಮಹಾರಾಜರು ಅತ್ಯಂತ ಕೌಶಲ್ಯದಿಂದ ಮಾಡಿದರು. ಅವರು ಜನತೆಯ ಮನದಲ್ಲಿ ವಿಶ್ವಾಸದ ಮತ್ತು ಆತ್ಮೀಯತೆಯ ಭಾವನೆಯನ್ನು ಮೂಡಿಸಿದರು. ಈ ಸ್ವರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಅವರಿಗೆ ಒಳ್ಳೆಯ ಒಡನಾಡಿಗಳು ಮತ್ತು ಸಹಕಾರಿಗಳು ದೊರೆತರು. ಯೇಸಾಜಿ ಕಂಕ, ಬಾಜಿ ಪಾಸಲಕರ, ಬಾಪೂಜಿ ಮುದ್ಗಲ್, ನರ್ಹೇಕರ ದೇಶಪಾಂಡೆ ಬಂಧುಗಳು, ಕಾವಜಿ ಕೊಂಢಾಳಕರ, ಜಿವಾ ಮಹಾಲಾ, ತಾನಾಜಿ ಮಾಲುಸರೆ, ಕಾನ್ಹೋಜಿ ಜೇಧೆ, ಬಾಜೀಪ್ರಭು ದೇಶಪಾಂಡೆ, ದಾದಾಜಿ ನರಸಪ್ರಭು ದೇಶಪಾಂಡೆ- ಇವು ಅವರಲ್ಲಿಯ ಕೆಲವು ಹೆಸರುಗಳು. ಈ ಸಹಕಾರಿಗಳ ಬಲದಿಂದ ಶಿವಾಜಿ ಮಹಾರಾಜರು ಸ್ವರಾಜ್ಯದ ಕಾರ್ಯವನ್ನು ಕೈಗೆತ್ತಿಕೊಂಡರು.



**ನೆನಪಿನಲ್ಲಿಡಿರಿ.**

ಹನ್ನೆರಡು ಮಾವಳಗಳು: (1) ಪವಣ ಮಾವಳ (2) ಹಿರಡಸ ಮಾವಳ (3) ಗುಂಜಣ ಮಾವಳ (4) ಪೌಡ (5) ಮುಠೆ (ಕೊಳ್ಳ) (6) ಮುಸೆ ಕಣಿವೆ (7) ಕಾನದ ಕಣಿವೆ (8) ವೇಳವಂಡ ಕಣಿವೆ (9) ರೊಹೀಡ ಕಣಿವೆ (10) ಅಂದರ ಮಾವಳ (11) ನಾಣೆ ಮಾವಳ (12) ಕೋರಬಾರಸೆ ಮಾವಳ

ಶಿವಾಜಿ ಮಹಾರಾಜರ ಪುಣೆ ಜಹಗೀರಿನಲ್ಲಿಯ ಸಹ್ಯಾದ್ರಿಯ ಒಡಲಿನಲ್ಲಿರುವ ಪ್ರದೇಶವೇ ಮಾವಳ ಕಣಿವೆ. ಇವುಗಳನ್ನು 'ಹನ್ನೆರಡು ಮಾವಳ' ಎಂದೂ ಕರೆಯುತ್ತಾರೆ.



**ಮಾಡಿ ನೋಡಿರಿ.**

ಶಿವರಾಯರ ಸಹಕಾರಿಗಳಾದ ಜಿವಾ ಮಹಾಲಾ, ತಾನಾಜಿ ಮಾಲುಸರೆ, ಬಾಜೀಪ್ರಭು ದೇಶಪಾಂಡೆ- ಇವರ ವಿಷಯವಾಗಿ ಹೆಚ್ಚಿನ ಮಾಹಿತಿಯನ್ನು ಪಡೆಯಿರಿ.



ರಾಜಮುದ್ರೆ

**ರಾಜಮುದ್ರೆ:** ಶಿವಾಜಿ ಮಹಾರಾಜರ ಸ್ವರಾಜ್ಯ ಸ್ಥಾಪನೆಯ ಉದ್ದೇಶವು ಅವರ ರಾಜಮುದ್ರೆಯಿಂದ ಸ್ಪಷ್ಟವಾಗುತ್ತದೆ. ಅವರ ಈ ರಾಜಮುದ್ರೆಯ ಮೇಲೆ ಕೆಳಗಿನ ಸಂಸ್ಕೃತ ಶ್ಲೋಕವನ್ನು ಕೊರೆಯಲಾಗಿದೆ.

*ಪ್ರತಿಪಚ್ಚಂದ್ರ ಲೇಖೇವ ವರ್ಧಿಷ್ಣುರ್ವಿಶ್ವವಂದಿತಾ. ||*

*ಶಾಹಸೂನೋಃ ಶಿವಸ್ಯೈಷಾ ಮುದ್ರಾಭದ್ರಾಯ ರಾಜತೆ ||*

**ಅರ್ಥ:** ''ಶಹಾಜಿಯ ಪುತ್ರ ಶಿವಾಜಿ ಇವನ (ಶುಕ್ಲಪಕ್ಷದಲ್ಲಿಯ) ಪ್ರತಿಪದೆಯ ಚಂದ್ರಬಿಂಬದಂತೆ ವೃದ್ಧಿಂಗತವಾಗುತ್ತಿರುವ ಹಾಗೂ ವಿಶ್ವವಂದ್ಯವಾದ ಮುದ್ರೆಯು (ಪ್ರಜೆಗಳ) ಕಲ್ಯಾಣಕ್ಕಾಗಿ ಅಧಿರಾಜ್ಯ ಮಾಡುತ್ತದೆ (ಶೋಭಿಸುತ್ತದೆ)''.

ಮುದ್ರೆಯ ಮೇಲಿನ ಈ ಶ್ಲೋಕದ ಅರ್ಥವು ಅನೇಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಮಹಾರಾಜರು ಈ ಶ್ಲೋಕದಲ್ಲಿ ತಮ್ಮ ತಂದೆಯ ವಿಷಯದ ಕೃತಜ್ಞತೆ, ಸ್ವರಾಜ್ಯವು ನಿರಂತರವಾಗಿ ವಿಸ್ತಾರವಾಗುತ್ತ ಹೋಗುವುದೆಂಬ ಭರವಸೆ, ಮುದ್ರೆಗೆ ಅಂದರೆ ಸ್ವರಾಜ್ಯಕ್ಕೆ ಎಲ್ಲರ ಸನ್ಮಾನ ದೊರೆಯುತ್ತಿರುವ ಅನುಭವ, ಪ್ರಜೆಗಳನ್ನು ಸುಖಿಗಳನ್ನಾಗಿ ಮಾಡುವ ಜವಾಬ್ದಾರಿ ಹಾಗೂ ನಮ್ಮ

ಭೂಮಿಯಲ್ಲಿ ಸ್ವತಂತ್ರವಾಗಿ ಆಡಳಿತವನ್ನು ನಡೆಸುವ ಭರವಸೆ ಮುಂತಾದ ಅಂಶಗಳನ್ನು ವ್ಯಕ್ತಪಡಿಸಿದ್ದಾರೆ. ಈ ಚಿಕ್ಕದಾದ ಶ್ಲೋಕದಲ್ಲಿ ಸ್ವರಾಜ್ಯದ ಕಲ್ಪನೆಯ ಸರ್ವಾಂಗೀಣ ಸಾರ ಅಡಗಿದೆ.

ಅರಿತುಕೊಳ್ಳೋಣ.

- ನಮ್ಮ ದೇಶದ ರಾಜಮುದ್ರೆಯನ್ನು ನಿರೀಕ್ಷಿಸಿರಿ.
- ಅದರಲ್ಲಿ ಯಾವ ಯಾವ ಸಂಗತಿಗಳು ಕಾಣಿಸುತ್ತವೆ?
- ರಾಜಮುದ್ರೆಯ ಉಪಯೋಗವನ್ನು ಎಲ್ಲೆಲ್ಲಿ ಮಾಡಿದ್ದು ಕಂಡುಬರುತ್ತದೆ ?

**ಸ್ವರಾಜ್ಯ ಸ್ಥಾಪನೆಯ ಚಟುವಟಿಕೆಗಳು:** ಶಿವಾಜಿ ಮಹಾರಾಜರ ಜಹಗೀರಿನಲ್ಲಿಯ ಕೋಟೆಗಳು ಅವರ ಅಧಿಪತ್ಯದಲ್ಲಿ ಇರಲಿಲ್ಲ, ಆದರೆ ಅವು ಆದಿಲಶಾಹನ ವಶದಲ್ಲಿದ್ದವು. ಆ ಕಾಲದಲ್ಲಿ ಕೋಟೆಗಳಿಗೆ ವಿಶೇಷ ಮಹತ್ವವಿತ್ತು. ಕೋಟೆಗಳು ವಶದಲ್ಲಿದ್ದರೆ ಅವುಗಳ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ನಿಯಂತ್ರಣವನ್ನಿಡಲು ಬರುತ್ತಿತ್ತು. 'ಕೋಟೆ ಯಾರದೋ ರಾಜ್ಯ ಅವರದು' ಎಂಬ ಪರಿಸ್ಥಿತಿ ಇತ್ತು. ತಮ್ಮ ಜಹಗೀರಿನಲ್ಲಿಯ ಕೋಟೆಗಳನ್ನು ವಶಪಡಿಸಿಕೊಳ್ಳಬೇಕೆಂದು ಮಹಾರಾಜರು ನಿರ್ಧರಿಸಿದರು. ಕೋಟೆಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡುವುದೆಂದರೆ ಆದಿಲಶಾಹಿ ಪ್ರಭುತ್ವಕ್ಕೆ ಆಹ್ವಾನ ನೀಡಿದಂತೆ ಎನ್ನುವ ಪರಿಸ್ಥಿತಿ ಇತ್ತು. ಅವರು ತೋರಣಾ, ಮುರುಂಬದೇವ, ಕೋಢಾಣಾ, ಪುರಂದರ ಈ ಕೋಟೆಗಳನ್ನು ವಶಪಡಿಸಿಕೊಂಡು ಸ್ವರಾಜ್ಯ ಸ್ಥಾಪನೆಗೆ ಬುನಾದಿ ಹಾಕಿದರು. ಮುರುಂಬದೇವ ಕೋಟೆಯನ್ನು ದುರಸ್ತಿ ಮಾಡಿಸಿ ಅದನ್ನು ಸುಸಜ್ಜಿತಗೊಳಿಸಿ ಅದಕ್ಕೆ 'ರಾಜಗಡ' ಎಂಬ ಹೆಸರನ್ನಿಟ್ಟರು. ರಾಜಗಡ ಇದು ಸ್ವರಾಜ್ಯದ ಮೊದಲನೆಯ ರಾಜಧಾನಿಯಾಗಿತ್ತು.



ರಾಜಗಡ ಕೋಟೆ – ಪಾಲಿ ಬಾಗಿಲು

ಆದಿಲಶಾಹಿಯಲ್ಲಿ ಜಾವಳಿಯ ಮೋರೆ, ಮುಧೋಳದ ಘೋರ್ಪಡೆ ಮತ್ತು ಸಾವಂತವಾಡಿಯ ಸಾವಂತ ಮುಂತಾದ ಸರದಾರರಿದ್ದರು. ಸ್ವರಾಜ್ಯ ಸ್ಥಾಪನೆಯ ಕಾರ್ಯಕ್ಕೆ ಅವರ ವಿರೋಧವಿತ್ತು. ಇಂತಹ ಸರದಾರರನ್ನು ನಿಯಂತ್ರಣದಲ್ಲಿಡುವುದು ಸ್ವರಾಜ್ಯ ಸ್ಥಾಪನೆಗಾಗಿ ಅವಶ್ಯಕವಾಗಿತ್ತು.

**ಜಾವಳಿಯ ವಶ:** ಸಾತಾರ ಜಿಲ್ಲೆಯಲ್ಲಿಯ ಜಾವಳಿಯಲ್ಲಿ ಚಂದ್ರರಾವ ಮೋರೆ ಎಂಬ ಹೆಸರಿನ ಆದಿಲಶಾಯಿಯ ಶೂರ ಸರದಾರನಿದ್ದನು. ಸ್ವರಾಜ್ಯ ಸ್ಥಾಪನೆಯ ಕಾರ್ಯಕ್ಕೆ ಅವನು ವಿರೋಧವನ್ನು ವ್ಯಕ್ತಪಡಿಸಿದನು. ಆಗ ಕ್ರಿ.ಶ. 1656 ರಲ್ಲಿ ಶಿವಾಜಿ ಮಹಾರಾಜರು ಜಾವಳಿಯ ಮೇಲೆ ಆಕ್ರಮಣ ಮಾಡಿ ಆ ಪ್ರದೇಶವನ್ನು ಗೆದ್ದುಕೊಂಡರು. ಅಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು. ನಂತರ ರಾಯಗಡವನ್ನೂ ಗೆದ್ದುಕೊಂಡರು. ಜಾವಳಿಯ ಅಪಾರ ಸಂಪತ್ತು ಅವರ ಕೈಗೆ ಬಂದಿತು. ಈ ವಿಜಯದ ನಂತರ ಕೊಂಕಣದಲ್ಲಿಯ ಮಹಾರಾಜರ ಚಟುವಟಿಕೆಗಳು ಹೆಚ್ಚಿದವು. ಅವರು ಜಾವಳಿಯ ಕೊಳ್ಳದಲ್ಲಿ ಪ್ರತಾಪಗಡ ಎಂಬ ಕೋಟೆಯನ್ನು ಕಟ್ಟಿದ್ದರು. ಈ ಗೆಲುವಿನಿಂದ ಎಲ್ಲ ದೃಷ್ಟಿಯಿಂದ ಅವರ ಸಾಮರ್ಥ್ಯ ಹೆಚ್ಚಿತು.

ಶಿವಾಜಿ ಮಹಾರಾಜರು ಇದರ ನಂತರ ಕಲ್ಯಾಣ ಮತ್ತು ಭಿವಂಡಿಗಳನ್ನು ಗೆದ್ದುಕೊಂಡರು. ಅದರಿಂದಾಗಿ ಪಶ್ಚಿಮ ಕರಾವಳಿ ತೀರದ ಸಿದ್ದೀ, ಪೋರ್ತುಗೀಜ ಮತ್ತು ಇಂಗ್ಲಿಷರೊಂದಿಗೆ ಅವರ ಸಂಪರ್ಕ ಉಂಟಾಯಿತು. ಈ ಪ್ರಭುತ್ವಗಳೊಡನೆ ಸಂಘರ್ಷ ಮಾಡಬೇಕಾದರೆ ಪ್ರಬಲವಾದ ನೌಕಾಪಡೆಯನ್ನು ಸ್ಥಾಪಿಸಬೇಕು ಎಂಬುದು ಮಹಾರಾಜರ ಗಮನಕ್ಕೆ ಬಂದಿತು. ಅದರಿಂದಾಗಿ ಅವರು ನೌಕಾಪಡೆಯನ್ನು ಕಟ್ಟುವುದರ ಕಡೆಗೆ ಲಕ್ಷ್ಯವಹಿಸಿದರು.

**ಅಫಜಲಖಾನನ ಪತನ:** ಶಿವಾಜಿ ಮಹಾರಾಜರು ತಮ್ಮ ಜಹಗೀರಿನಲ್ಲಿಯ ಮತ್ತು ಸುತ್ತಮುತ್ತಲಿನ ಆದಿಲಶಾಹಿ ಪ್ರದೇಶಗಳಲ್ಲಿಯ ಕೋಟೆಗಳನ್ನು ವಶಪಡಿಸಿಕೊಳ್ಳಲು ಆರಂಭಿಸಿದರು. ಅವರು ಜಾವಳಿಯ ಮೋರೆಯ ವಿರೋಧವನ್ನು ಅಡಗಿಸಿದ್ದರು. ಕೊಂಕಣ ಕರಾವಳಿ ತೀರದಲ್ಲಿ ಸ್ವರಾಜ್ಯ ಸ್ಥಾಪನೆಯ ಕಾರ್ಯಕ್ಕೆ ಗತಿ ಲಭಿಸಿತು. ಈ ಎಲ್ಲ ಸಂಗತಿಗಳು ಆದಿಲಶಾಹಿಗೆ ಆಹ್ವಾನವಾಗಿದ್ದವು. ಈ ಸಮಯದಲ್ಲಿ ಆದಿಲಶಾಹಿಯ ಆಡಳಿತವನ್ನು ಹಿರಿಯ ರಾಣಿಯು ನೋಡಿಕೊಳ್ಳುತ್ತಿದ್ದಳು. ಶಿವಾಜಿ ಮಹಾರಾಜರನ್ನು ನಿಯಂತ್ರಣದಲ್ಲಿಡಬೇಕು ಎಂದು ಅವಳಿಗೆ ಅನಿಸುತ್ತಿತ್ತು. ಆದ್ದರಿಂದ ಅವಳು ಆದಿಲಶಾಹಿಯಲ್ಲಿಯ ಅಫಜಲಖಾನ ಎಂಬ ಬಲಾಢ್ಯ ಮತ್ತು ಅನುಭವಿ ಸರದಾರನನ್ನು ಶಿವಾಜಿ ಮಹಾರಾಜರ ವಿರುದ್ಧ ಕಳುಹಿಸಿದಳು.

ಅಫಜಲಖಾನನು ವಿಜಾಪೂರದಿಂದ ವಾಯಿ ಎಂಬಲ್ಲಿ ಬಂದನು. ಅವನಿಗೆ ವಾಯಿ ಪ್ರಾಂತದ ಬಗ್ಗೆ ಸಾಕಷ್ಟು ಮಾಹಿತಿಯಿತ್ತು. ವಾಯಿಯ ಸಮೀಪದ ಪ್ರತಾಪಗಡದ ಅಡಿಯಲ್ಲಿ 10 ನವಂಬರ 1659 ರಂದು ಶಿವಾಜಿ ಮಹಾರಾಜ ಮತ್ತು ಅಫಜಲಖಾನರ ಭೇಟಿಯಾಯಿತು. ಈ ಭೇಟಿಯಲ್ಲಿ

ಅಫಜಲಖಾನನು ಮಹಾರಾಜರಿಗೆ ಮೋಸಮಾಡುವ ಪ್ರಯತ್ನ ಮಾಡಿದನು. ಅದರಿಂದಾಗಿ ಅವರು ಅಫಜಲಖಾನನನ್ನು ಕೊಂದುಹಾಕಿದರು. ಆದಿಲಶಾಹಿ ಸೈನ್ಯದ ಪತನ ಮಾಡಿದರು.

ಅಫಜಲಖಾನನ ಹತ್ಯೆಯ ನಂತರ ಶಿವಾಜಿ ಮಹಾರಾಜರು ಯುದ್ಧದಲ್ಲಿ ಗಾಯಗೊಂಡ ಸೈನಿಕರಿಗೆ ಪರಿಹಾರವನ್ನು ನೀಡಿದರು. ಈ ಯುದ್ಧದಲ್ಲಿ ಒಳ್ಳೆಯ ಕಾರ್ಯ ಮಾಡಿದವರಿಗೆ ಬಹುಮಾನಗಳನ್ನು ನೀಡಿದರು. ಶಿವಾಜಿ ಮಹಾರಾಜರು ಸೈನ್ಯದಲ್ಲಿ ಸೆರೆಸಿಕ್ಕ ಅಫಜಲಖಾನನ ಸೈನಿಕರನ್ನು ಒಳ್ಳೆಯ ರೀತಿಯಿಂದ ನೋಡಿಕೊಂಡರು.

**ಸಿದ್ದಿ ಜೌಹರನ ಮುತ್ತಿಗೆ:** ಅಫಜಲಖಾನನನ್ನು ಕೊಂದು ಹಾಕಿದ ನಂತರ ಮಹಾರಾಜರು ಆದಿಲಶಾಹಿಯಲ್ಲಿಯ ವಸಂತಗಡ, ಪನ್ಹಾಳಾ ಮತ್ತು ಖೇಳಣಾ ಈ ಕೋಟೆಗಳನ್ನು ಗೆದ್ದುಕೊಂಡರು. ಖೇಳಣಾ ಕೋಟೆಗೆ ಅವರು 'ವಿಶಾಲ ಗಡ' ಎಂಬ ಹೆಸರನ್ನು ಕೊಟ್ಟರು.

ಮಹಾರಾಜರನ್ನು ನಿಯಂತ್ರಣದಲ್ಲಿಡುವ ಸಲುವಾಗಿ ಆದಿಲಶಾಹನು ಕ್ರಿ.ಶ. 1660 ರಲ್ಲಿ ಕರ್ನೂಲ ಪ್ರಾಂತದ ಸರದಾರನಾದ ಸಿದ್ದೀ ಜೌಹರನನ್ನು ಶಿವಾಜಿ ಮಹಾರಾಜ ಮೇಲೆ ದಾಳಿ ಮಾಡಲು ಕಳುಹಿಸಿದನು. ಅವನಿಗೆ 'ಸಲಾಬತಖಾನ್' ಎಂಬ ಬಿರುದನ್ನು ನೀಡಿದನು. ಸಿದ್ದೀ ಜೌಹರನ ಸಹಾಯಕ್ಕೆ ರುಸ್ತುಮ್-ಇ-ಜಮಾನ್, ಬಾಜಿ ಘೋರ್ಪಡೆ ಮತ್ತು ಅಫಜಲಖಾನನ ಮಗ ಫಾಜಲಖಾನ್ ಇವರೂ ಇದ್ದರು. ಈ ಪರಿಸ್ಥಿತಿಯಲ್ಲಿ ಶಿವಾಜಿ ಮಹಾರಾಜರು ಪನ್ಹಾಳಾ ಕೋಟೆಯಲ್ಲಿ ಆಶ್ರಯ ಪಡೆದರು. ಸುಮಾರು ಐದು ತಿಂಗಳ ವರೆಗೆ ಸಿದ್ದಿಯ ಸೈನಿಕರು ಪನ್ಹಾಳಾ ಕೋಟೆಗೆ ಮುತ್ತಿಗೆ ಹಾಕಿದ್ದರು. ಈ ಮುತ್ತಿಗೆಯಿಂದ ಹೊರಬೀಳುವುದು ಮಹಾರಾಜರಿಗೆ ತುಂಬಾ ಕಠಿಣವಾಗಿತ್ತು. ನೇತೋಜಿ ಪಾಲಕರನು ಹೊರಗಿನಿಂದ ಸಿದ್ದಿಯ ಸೈನ್ಯದ ಮೇಲೆ ದಾಳಿಮಾಡಿ ಮುತ್ತಿಗೆಯನ್ನು ತೆಗೆಯುವಂತೆ ಪ್ರಯತ್ನ ಮಾಡಿದನು. ಆದರೆ ಅವನ ಸೈನ್ಯ ಚಿಕ್ಕದಾಗಿದ್ದರಿಂದ ಅವನ ಈ ಪ್ರಯತ್ನವು ಯಶಸ್ವಿಯಾಗಲಿಲ್ಲ. ಸಿದ್ದಿಯು ಮುತ್ತಿಗೆಯನ್ನು ತೆಗೆಯುವ ಯಾವ ಚಿಹ್ನೆಗಳೂ ಕಾಣಿಸುತ್ತಿರಲಿಲ್ಲ. ಆಗ ಮಹಾರಾಜರು ಸಿದ್ದಿಯ ಜೊತೆ ಮಾತುಕತೆ ಆರಂಭಿಸಿದರು. ಅದರಿಂದಾಗಿ ಸಿದ್ದಿಯು ಪನ್ಹಾಳಗಡಕ್ಕೆ ಹಾಕಿದ ಮುತ್ತಿಗೆಯಲ್ಲಿ ಶಿಥಿಲತೆ ನಿರ್ಮಾಣವಾಯಿತು. ಮಹಾರಾಜರು ಈ ಶಿಥಿಲತೆಯ ಲಾಭವನ್ನು ಪಡೆದರು.

ಈ ಪ್ರಸಂಗದ ಕೋಟೆಯ ಮೇಲೆ ಶಿವಾ ಕಾಶಿದ ಈ ಬಹಾದೂರ ತರುಣನು ಮುಂದಾಳುತನ ವಹಿಸಿದನು. ಅವನು ನೋಡಲು ಶಿವರಾಯರಂತೆ ಇದ್ದನು. ಅವನು ಶಿವಾಜಿ ಮಹಾರಾಜರ ವೇಷಭೂಷವನ್ನು ಧರಿಸಿ ಪಲ್ಲಕ್ಕಿಯಲ್ಲಿ ಕುಳಿತನು. ಪಲ್ಲಕ್ಕಿಯು ರಾಜದಂಡಿ ಬಾಗಿಲಿನಿಂದ ಹೊರಗೆ ನಡೆಯಿತು. ಸಿದ್ದಿಯ ಸೈನಿಕರು ಆ ಪಲ್ಲಕ್ಕಿಯನ್ನು ತಡೆದರು. ಶಿವಾ ಕಾಶಿದನು ಈ ಪ್ರಸಂಗದಲ್ಲಿ ಸ್ವರಾಜ್ಯದ ಸಲುವಾಗಿ ಬಲಿದಾನವಾದನು. ಈ ಮಧ್ಯೆ ಶಿವಾಜಿ ಮಹಾರಾಜರು ಎರಡನೆಯ ದುರ್ಗಮ ಮಾರ್ಗದಿಂದ ಕೋಟೆಯ ಹೊರಗೆ ಬಂದರು. ಅವರ ಜೊತೆ ಬಾಜೀಪ್ರಭು ದೇಶಪಾಂಡೆ ಹಾಗೂ ಬಾಂದಲ ದೇಶಮುಖರೊಂದಿಗೆ ಆಯ್ದ ಸೈನಿಕರಿದ್ದರು.

ಶಿವಾಜಿ ಮಹಾರಾಜರು ಪನ್ಹಾಳಗಡದ ಮುತ್ತಿಗೆಯಿಂದ ಪಾರಾಗಿ ವಿಶಾಲಗಡದ ಕಡೆಗೆ ಹೊರಟರು ಎಂಬ ಸುದ್ದಿ ಸಿದ್ದೀಗೆ ತಿಳಿಯಿತು. ಅವನ ಸೈನ್ಯವು ಅವರನ್ನು ಬೆನ್ನಟ್ಟಿತು. ಸಿದ್ದಿಯ ಸೈನ್ಯವನ್ನು ವಿಶಾಲಗಡದ ಅಡಿಯ ಹತ್ತಿರ ತಡೆದು ನಿಲ್ಲಿಸುವ ಜವಾಬ್ದಾರಿಯನ್ನು ಶಿವರಾಯರು ಬಾಜೀಪ್ರಭು ದೇಶಪಾಂಡೆಯ ಕಡೆಗೆ ಒಪ್ಪಿಸಿದರು. ಬಾಜೀಪ್ರಭುವು ಗಜಾಪೂರ ಹತ್ತಿರದ ಘೋಡಖಿಂಡಿಯಲ್ಲಿ ಆ ಸೈನ್ಯವನ್ನು ತಡೆದನು. ಬಾಜೀಪ್ರಭುವು ವೀರಾವೇಶದಿಂದ ಹೋರಾಡಿದನು. ಆದರೆ ಈ ಸಂಘರ್ಷದಲ್ಲಿ ಅವನು ವೀರಮರಣವನ್ನಪ್ಪಿದನು. ಬಾಜೀಪ್ರಭುವಿನ ಸೈನ್ಯವು ಸಿದ್ದಿಯ ಸೈನ್ಯವನ್ನು ತಡೆಹಿಡಿದದ್ದರಿಂದಲೇ ಮಹಾರಾಜರು ವಿಶಾಲಗಡವನ್ನು ತಲುಪುವುದು ಸಾಧ್ಯವಾಯಿತು. ವಿಶಾಲಗಡದ ಕಡೆಗೆ ಹೋಗುವಾಗ ಮಹಾರಾಜರು ಆದಿಲಶಾಹಿಯ ಸರದಾರನ ಪಾಲವನದ ದಳವಿ ಮತ್ತು ಶೃಂಗಾರಪೂರದ ಸುರ್ವೆ ಇವರ ವಿರೋಧವನ್ನು ಅಡಗಿಸಿದರು. ಮಹಾರಾಜರು ಸುಖರೂಪವಾಗಿ ವಿಶಾಲಗಡವನ್ನು ತಲುಪಿದರು.

ಶಿವಾಜಿ ಮಹಾರಾಜರು ಪನ್ಹಾಳಗಡದ ಮುತ್ತಿಗೆಯಲ್ಲಿ ಸಿಲುಕಿಕೊಂಡ ಸಮಯದಲ್ಲಿ ದಿಲ್ಲಿಯ ಸಿಂಹಾಸನವನ್ನೇರಿದ ಔರಂಗಜೇಬ ಬಾದಶಹನು ಮುಘಲ ಸರದಾರನಾದ ಶಾಯಿಸ್ತಾಖಾನನನ್ನು ದಕ್ಷಿಣದ ಕಡೆಗೆ ಕಳಿಸಿದನು.ಅವನು ಪುಣೆ ಪ್ರಾಂತದ ಮೇಲೆ ದಾಳಿ ಮಾಡಿದ್ದನು. ಆ ಸಮಯದಲ್ಲಿ ಆದಿಲಶಾಹಿಯ ಜೊತೆ ಶಿವಾಜಿ ಮಹಾರಾಜರ ಸಂಘರ್ಷವು ನಡೆದೇ ಇತ್ತು. ಇಂಥ ಪರಿಸ್ಥಿತಿಯಲ್ಲಿ ಇಬ್ಬರು ಶತ್ರುಗಳೊಡನೆ ಏಕಕಾಲಕ್ಕೆ ಹೋರಾಡುವುದು ಯೋಗ್ಯವಾಗಲಾರದೆಂಬುದು ಮಹಾರಾಜರ ಗಮನಕ್ಕೆ ಬಂದಿತು. ಅದರಿಂದಾಗಿ ವಿಶಾಲಗಡವನ್ನು ಸುರಕ್ಷಿತವಾಗಿ ತಲುಪಿದ ನಂತರ ಅವರು ಆದಿಲಶಾಹಿಯ ಜೊತೆ ಒಪ್ಪಂದ ಮಾಡಿಕೊಂಡರು. ಈ ಒಪ್ಪಂದದ ಪ್ರಕಾರ ಅವರು ಪನ್ಹಾಳಾ ಕೋಟೆಯನ್ನು ಹಿಂದಿರುಗಿಸಬೇಕಾಯಿತು. ಇಲ್ಲಿ ಶಿವಾಜಿ ಮಹಾರಾಜರ ಸ್ವರಾಜ್ಯ ಸ್ಥಾಪನೆಯ ಒಂದು ಹಂತ ಪೂರ್ಣವಾಯಿತು.

## ಅಭ್ಯಾಸ

**1. ಗುಂಪಿಗೆ ಸೇರದ ಶಬ್ದವನ್ನು ಹುಡುಕಿರಿ.**

(1) ಪುಣೆ, ಸುಪೆ, ಚಾಕಣ, ಬೆಂಗಳೂರು

(2) ಫಲಟಣದ ಜಾಧವ, ಜಾವಳಿಯ ಮೋರೆ, ಮುಧೋಳದ ಘೋರ್ಪಡೆ, ಸಾವಂತವಾಡಿಯ ಸಾವಂತ

(3) ತೋರಣಾ, ಮುರುಂಬದೇವ, ಸಿಂಹಗಡ, ಸಿಂಧು ದುರ್ಗ

**2. ಬನ್ನಿ, ಉತ್ತರ ಬರೆಯೋಣ!**

(1) ಶಿವಾಜಿ ಮಹಾರಾಜರ ಮೇಲೆ ವೀರಮಾತೆ ಜಿಜಾಬಾಯಿಯವರು ಮಾಡಿದ ವಿವಿಧ ಸಂಸ್ಕಾರಗಳನ್ನು ಬರೆಯಿರಿ.

(2) ಶಿವಾಜಿ ಮಹಾರಾಜರು ಸ್ವರಾಜ್ಯ ಸ್ಥಾಪನೆಯ ಆರಂಭವನ್ನು ಮಾವಳ ಪ್ರದೇಶದಲ್ಲಿ ಮಾಡಿದರು.

**3.** ಶಿವಾಜಿ ಮಹಾರಾಜರ ಒಡನಾಡಿಗಳು ಹಾಗೂ ಸಹಕಾರಿಗಳ ಪಟ್ಟಿಯನ್ನು ಮಾಡಿರಿ.

**4. ಹುಡುಕಿರಿ ಮತ್ತು ಬರೆಯಿರಿ.**

(1) ಶಹಾಜಿ ರಾಜರಿಗೆ ಸ್ವರಾಜ್ಯದ ಸಂಕಲ್ಪಕ ಎಂದು ಏಕೆ ಕರೆಯುತ್ತಾರೆ ?

(2) ಶಿವಾಜಿ ಮಹಾರಾಜರು ನೌಕಾಪಡೆಯನ್ನು ಕಟ್ಟುವುದರ ಕಡೆಗೆ ಏಕೆ ಲಕ್ಷ್ಯ ವಹಿಸಿದರು?

(3) ಶಿವಾಜಿ ಮಹಾರಾಜರು ಆದಿಲಶಾಹನ ಜೊತೆ ಏಕೆ ಒಪ್ಪಂದ ಮಾಡಿಕೊಂಡರು?

(4) ಶಿವಾಜಿ ಮಹಾರಾಜರು ಪನ್ಹಾಳಗಡದಿಂದ ಹೇಗೆ ಪಾರಾದರು ?

**ಉಪಕ್ರಮ:**

(1) ನೀವು ನೋಡಿರುವ ಯಾವುದೊಂದು ಕೋಟೆಯನ್ನು ವರ್ಣಿಸಿರಿ ಮತ್ತು ಐತಿಹಾಸಿಕ ಕಟ್ಟಡಗಳ ರಕ್ಷಣೆ ಮಾಡುವ ವಿಷಯದಲ್ಲಿ ನೀವು ಯಾವ ಉಪಾಯಗಳನ್ನು ಸೂಚಿಸುವಿರಿ ಎಂಬುದನ್ನು ಹೇಳಿರಿ.

(2) ಹೊಲದ 'ಸಾತ/ಬಾರಾ' (7/12) ಪಹಣಿ ಪತ್ರಿಕೆಯನ್ನು ಪಡೆದು ಪಾಠದಲ್ಲಿಯ ಶಬ್ದಗಳ ಸಂಬಂಧವನ್ನು ತಿಳಿದುಕೊಳ್ಳಿರಿ.



ಪನ್ಹಾಳಾ ಕೋಟೆ – ಮೂರು ಬಾಗಿಲ

BX75SC

# 6. ಮುಘಲರೊಡನೆ ಹೋರಾಟ

ಇಲ್ಲಿಯವರೆಗೆ ಶಿವಾಜಿ ಮಹಾರಾಜರು ಆದಿಲಶಾಹಿಯೊಂದಿಗೆ ಯಶಸ್ವಿ ಸಂಘರ್ಷ ಮಾಡಿದ್ದರು. ಆದರೆ ಸ್ವರಾಜ್ಯದ ವಿಸ್ತಾರ ಮಾಡುವಾಗ ಮುಘಲರೊಡನೆ ಹೋರಾಡುವುದು ಅನಿವಾರ್ಯವಾಗಿತ್ತು. ಸ್ವರಾಜ್ಯದ ವಿಸ್ತಾರವಾಗುತ್ತಿದ್ದಂತೆ ಸ್ವರಾಜ್ಯದ ಮೇಲೆ ಮುಘಲರಿಂದ ಸಂಕಟ ಬಂದೊದಗಿತು. ಮಹಾರಾಜರು ಈ ಸಂಕಟವನ್ನೂ ಸಮರ್ಥವಾಗಿ ಎದುರಿಸಿದರು. ಮುಘಲರ ಕಡೆಯಿಂದ ತಮ್ಮ ಕೋಟೆ ಮತ್ತು ಪ್ರದೇಶಗಳನ್ನು ಮರಳಿ ಪಡೆದರು. ಸ್ವತಃ ರಾಜ್ಯಾಭಿಷೇಕ ಮಾಡಿಸಿಕೊಂಡರು. ದಕ್ಷಿಣದ ದಂಡಯಾತ್ರೆಯನ್ನು ಕೈಕೊಂಡರು. ಈ ಎಲ್ಲ ಘಟನೆಗಳ ಮಾಹಿತಿಯನ್ನು ನಾವು ಈ ಪಾಠದಲ್ಲಿ ಪಡೆಯುವವರಿದ್ದೇವೆ.

**ಶಾಯಿಸ್ತಾಖಾನನ ದಾಳಿ:** ಫೆಬ್ರುವರಿ 1660 ರಲ್ಲಿ ಶಾಯಿಸ್ತಾಖಾನನು ಅಹಮದನಗರದಿಂದ ಹೊರಟು ಪುಣೆ ಪ್ರಾಂತಕ್ಕೆ ಬಂದನು. ಅವನು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೈನ್ಯ ಪಡೆಗಳನ್ನು ಕಳಿಸಿ ಸ್ವರಾಜ್ಯದ ಪ್ರದೇಶಗಳನ್ನು ಧ್ವಂಸಗೊಳಿಸಿದನು. ಚಾಕಣದ ಕೋಟೆಗೆ ಮುತ್ತಿಗೆ ಹಾಕಿದನು. ಚಾಕಣ ಕೋಟೆಯ ಅಧಿಪತಿಯಾದ ಫಿರಂಗೋಜಿ ನರಸಾಳಾ ಇವನು ಶಾಯಿಸ್ತಾಖಾನನ ಸೈನ್ಯವನ್ನು ತೀವ್ರವಾಗಿ ಪ್ರತಿಭಟಿಸಿದನು. ಆದರೆ ಕೊನೆಗೆ ಅವನು ಚಾಕಣದ ಕೋಟೆಯನ್ನು ಗೆದ್ದುಕೊಂಡನು.

ಎಲ್ಲಿ ಶಿವಾಜಿ ಮಹಾರಾಜರು ತಮ್ಮ ಬಾಲ್ಯದ ದಿನಗಳನ್ನು ಕಳೆದಿದ್ದರೋ ಆ ಪುಣೆಯಲ್ಲಿಯ ಲಾಲಮಹಲಿನಲ್ಲಿ ಶಾಯಿಸ್ತಾಖಾನನು ತಳ ಊರಿದನು. ಅಲ್ಲಿಂದ ಸುತ್ತಮುತ್ತಲಿನ ಪ್ರದೇಶಗಳಲ್ಲಿಯ ಲೂಟಿಯನ್ನು ಅವನು ಮುಂದುವರಿಸಿದನು. ಎರಡು ವರ್ಷ ಕಳೆದರೂ ಅವನು ಪುಣೆಯನ್ನು ಬಿಡುವ ವಿಚಾರ ಮಾಡಲಿಲ್ಲ. ಪ್ರಜೆಗಳ ಮನಸ್ಥಿತಿಯ ಮೇಲೆ ಪರಿಣಾಮವಾಗಿ ಅವರು ಧೈರ್ಯಗುಂದುವುದು ಸ್ವಾಭಾವಿಕವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಮಹಾರಾಜರು ಒಂದು ಸಾಹಸದ ಯೋಜನೆಯನ್ನು ಕೈಗೊಂಡರು.

ಶಿವಾಜಿ ಮಹಾರಾಜರು ತಮ್ಮ ಸ್ವತಃದ ನೇತೃತ್ವದಲ್ಲಿ ಲಾಲಮಹಲಿನ ಮೇಲೆ ಗುಪ್ತವಾಗಿ ದಾಳಿ ಮಾಡುವ ಸಾಹಸದ ಯೋಜನೆಯನ್ನು ಕೈಗೊಂಡರು. ಅದಕ್ಕನುಸಾರವಾಗಿ 5 ಎಪ್ರಿಲ 1663 ರಂದು ಮಹಾರಾಜರು ರಾತ್ರಿಯ ಸಮಯದಲ್ಲಿ ಆಯ್ದ ಸೈನ್ಯದೊಂದಿಗೆ ಲಾಲಮಹಲಿನ ಮೇಲೆ ದಾಳಿ ಮಾಡಿದರು. ಈ ದಾಳಿಯಲ್ಲಿ ಶಾಯಿಸ್ತಾಖಾನನ ಬೆರಳುಗಳು ಕತ್ತರಿಸಲ್ಪಟ್ಟವು. ಅವನಿಗೆ ಮಾನಹಾನಿಯಾಯಿತು. ಅವನು ಪುಣೆಯನ್ನು ತೊರೆದು ತನ್ನ ಬಿಡಾರವನ್ನು ಔರಂಗಾಬಾದಿಗೆ ಸ್ಥಳಾಂತರಿಸಿದನು. ಅವನು ಔರಂಗಜೇಬನ ಅಸಮಾಧಾನವನ್ನು ಹೆಚ್ಚಿಸಿದನು. ಔರಂಗಜೇಬನು ಅವನನ್ನು ಬಂಗಾಲದ ಸುಭೆಗೆ (ಪ್ರಾಂತಕ್ಕೆ) ಕಳಿಸಿದನು. ಶಾಯಿಸ್ತಾಖಾನನ ಮೇಲಿನ ಈ ಯಶಸ್ವಿ ದಾಳಿಯ ಪರಿಣಾಮವು ಜನರ ಮೇಲೂ ಆಯಿತು. ಶಿವಾಜಿ ಮಹಾರಾಜರ ಸಾಮರ್ಥ್ಯದ ಮೇಲಿನ ಪ್ರಜೆಗಳ ವಿಶ್ವಾಸವು ಇನ್ನೂ ಹೆಚ್ಚಿತು.



**ಹೇಳಿ ನೋಡೋಣ!**

ಸೂರತ ಈ ಪಟ್ಟಣಕ್ಕೆ ಭೇಟಿ ನೀಡುವುದಿದೆ. ನೀವು ಹೇಗೆ ಹೋಗುವಿರಿ ಎಂಬುದನ್ನು ನಕಾಶೆಯ ಸಹಾಯದಿಂದ ತೋರಿಸಿರಿ.

- ಶಿವಾಜಿ ಮಹಾರಾಜರು ಸೂರತಕ್ಕೆ ಹೇಗೆ ಹೋಗಿರಬಹುದೆಂದು ಆಲೋಚಿಸಿರಿ.

**ಸೂರತದ ಮೇಲೆ ದಾಳಿ:** ಶಾಯಿಸ್ತಾಖಾನನು ಮೂರು ವರ್ಷಗಳ ಕಾಲಾವಧಿಯಲ್ಲಿ ಸ್ವರಾಜ್ಯದ ಸಾಕಷ್ಟು ಪ್ರದೇಶಗಳನ್ನು ಧ್ವಂಸ ಮಾಡಿದ್ದನು. ಅದನ್ನು ತುಂಬಿ ತೆಗೆಯುವುದು ಅವಶ್ಯಕವಾಗಿತ್ತು. ಅದಕ್ಕಾಗಿ ಶಿವಾಜಿ ಮಹಾರಾಜರು ಮುಘಲರಿಗೆ ಪಾಠ ಕಲಿಸುವ ಒಂದು ಯೋಜನೆಯನ್ನು ರೂಪಿಸಿದರು. ಮುಘಲರ ವಶದಲ್ಲಿದ್ದ ಸೂರತ ಒಂದು ದೊಡ್ಡ ವ್ಯಾಪಾರದ ಕೇಂದ್ರ ಮತ್ತು ಬಂದರು ಆಗಿತ್ತು. ಅಲ್ಲಿ ಇಂಗ್ಲಿಷ ಮತ್ತು ಡಚ್ ವ್ಯಾಪಾರ ಕೋಠಿಗಳಿದ್ದವು. ಈ ಪಟ್ಟಣದಿಂದ ಬಾದಶಹನಿಗೆ ಎಲ್ಲಕ್ಕಿಂತ ಹೆಚ್ಚು ಕಂದಾಯ ದೊರೆಯುತ್ತಿತ್ತು. ಅಲ್ಲದೆ ಅದು ಆರ್ಥಿಕ ದೃಷ್ಟಿಯಿಂದ ಸಂಪನ್ನವಾಗಿತ್ತು. ಆದ್ದರಿಂದ ಅವರು ಸೂರತದ ಮೇಲೆ ದಾಳಿಮಾಡಿದರು. ಸೂರತದ ಸುಭೇದಾರನಾದ ಇನಾಯತಖಾನನು ಮಹಾರಾಜರ ದಾಳಿಯನ್ನು ವಿರೋಧಿಸಲು ಅಸಮರ್ಥನಾದನು. ಸಾಮಾನ್ಯ ಪ್ರಜೆಗಳನ್ನು ಪೀಡಿಸದೆ ಅವರ ಸೂರತದಿಂದ ಅಪಾರವಾದ ಸಂಪತ್ತನ್ನು ಪಡೆದರು. ಅವರ ಈ ದಾಳಿಯು ಯಶಸ್ವಿಯಾಯಿತು. ಇದರಿಂದಾಗಿ ಔರಂಗಜೇಬ ಬಾದಶಹನ ಪ್ರತಿಷ್ಠೆಗೆ ಧಕ್ಕೆಯುಂಟಾಯಿತು.

**ಜಯಸಿಂಗನ ದಾಳಿ:** ಶಿವಾಜಿ ಮಹಾರಾಜರ ಹೆಚ್ಚುತ್ತಿರುವ ಚಟುವಟಿಕೆಗಳನ್ನು ನಿಯಂತ್ರಿಸುವ ಸಲುವಾಗಿ ಔರಂಗಜೇಬನು ಮಿರ್ಝಾರಾಜೆ ಜಯಸಿಂಗ ಎಂಬ ಅನುಭವಿ ಮತ್ತು ಶೂರ ರಜಪೂತ ಸರದಾರನನ್ನು ಕಳಿಸಿದನು. ಜಯಸಿಂಗನು ಪುಣೆಗೆ ಬಂದನು. ಅವನು ಮಹಾರಾಜರ ವಿರೋಧದಲ್ಲಿ ತನ್ನೆಲ್ಲ ಶಕ್ತಿಯನ್ನು ಸಂಘಟಿಸುವ ಸಲುವಾಗಿ ತನ್ನ ಪ್ರಯತ್ನವನ್ನು ಆರಂಭಿಸಿದನು. ಗೋವಾ ಮತ್ತು ವಸಯಿಯ ಪೋರ್ತುಗೀಜರು,

ವೆಂಗುರ್ಲೆಯ ಡಚ್ಚರು, ಸೂರತದ ಇಂಗ್ಲಿಷರು, ಜಂಜಿರಾದ ಸಿದ್ದಿ ಇವರು ಮಹಾರಾಜರ ವಿರುದ್ಧ ನೌಕಾಪಡೆಯ ದಾಳಿಯನ್ನು ಮಾಡಬೇಕೆಂದು ಜಯಸಿಂಗನು ಅವರಿಗೆ ಸೂಚಿಸಿದನು.

ಜಯಸಿಂಗನು ಶಿವಾಜಿ ಮಹಾರಾಜರ ಕಡೆಯಿಂದ ಕೋಟೆಗಳನ್ನು ಗೆದ್ದುಕೊಳ್ಳುವ ಒಂದು ಯೋಜನೆಯನ್ನು ರೂಪಿಸಿದನು. ಸ್ವರಾಜ್ಯದ ವಿವಿಧ ಭಾಗಗಳಲ್ಲಿ ಮುಘಲ ಸೈನಿಕರ ಪಡೆಗಳನ್ನು ಕಳಿಸಿದನು. ಆ ಸೈನ್ಯವು ಸ್ವರಾಜ್ಯದ ಭೂಪ್ರದೇಶಗಳಿಗೆ ದೊಡ್ಡ ಪ್ರಮಾಣದಲ್ಲಿ ಹಾನಿಯನ್ನುಂಟು ಮಾಡಿತು. ಮಹಾರಾಜರು ಮುಘಲರನ್ನು ಪ್ರತಿಭಟಿಸುವ ಪ್ರಯತ್ನ ಮಾಡಿದರು. ಮಿರ್ಝಾರಾಜೆ ಜಯಸಿಂಗ ಮತ್ತು ದಿಲೇರಖಾನ ಇವರು ಪುರಂದರ ಕೋಟೆಗೆ ಮುತ್ತಿಗೆ ಹಾಕಿದರು. ಪುರಂದರದ ಮುತ್ತಿಗೆಯ ಸಮಯದಲ್ಲಿ ಮುರಾರಬಾಜಿ ದೇಶಪಾಂಡೆ ಇವನು ತನ್ನ ಪ್ರಾಣವನು ಪಣಕ್ಕಿಟ್ಟು ಹೋರಾಡಿದನು. ಆದರೆ ಅವನಿಗೆ ವೀರಮರಣ ಪ್ರಾಪ್ತವಾಯಿತು. ಪರಿಸ್ಥಿತಿಯ ಗಾಂಭೀರ್ಯವನ್ನು ಗಮನಿಸಿ ಮಹಾರಾಜರು ಜಯಸಿಂಗನೊಡನೆ ಮಾತುಕತೆ ಆರಂಭಿಸುವ ನಿರ್ಣಯ ತೆಗೆದುಕೊಂಡರು. ಅವರು ಜಯಸಿಂಗನಿಗೆ ಭೇಟಿಯಾದರು. ಜಯಸಿಂಗ ಮತ್ತು ಮಹಾರಾಜರ ನಡುವೆ ಜೂನ 1665ರಲ್ಲಿ ಒಪ್ಪಂದವಾಯಿತು. ಈ ಒಪ್ಪಂದವು 'ಪುರಂದರದ ಒಪ್ಪಂದ' ಎಂದು ಗುರುತಿಸಲ್ಪಡುತ್ತದೆ. ಈ ಒಪ್ಪಂದದ ಪ್ರಕಾರ ಮಹಾರಾಜರು ಮುಘಲರಿಗೆ ಇಪ್ಪತ್ತೂರು ಕೋಟೆಗಳನ್ನು ಮತ್ತು ಅದರ ಸುತ್ತಮುತ್ತಲಿನ ವರ್ಷಕ್ಕೆ ನಾಲ್ಕು ಲಕ್ಷ ಹೊಸ ಉತ್ಪನ್ನ ದೊರೆಯುವ ಪ್ರದೇಶಗಳನ್ನು ನೀಡಿದರು. ಆದಿಲಶಾಹಿಯ ವಿರುದ್ಧ ಮುಘಲರಿಗೆ ಸಹಾಯ ನೀಡುವ ಭರವಸೆಯನ್ನು ನೀಡಿದರು. ಈ ಒಪ್ಪಂದಕ್ಕೆ ಔರಂಗಜೇಬನು ಒಪ್ಪಿಗೆ ನೀಡಿದನು.



**ಮಾಹಿತಿ ದೊರಕಿಸಿರಿ**

ಶಿವಾಜಿ ಮಹಾರಾಜರು ಆಗ್ರಾದಲ್ಲಿಯ ಔರಂಗಜೇಬನ ಕಣ್ಣುತಪ್ಪಿಸಿ ಹೇಗೆ ಪಾರಾದರು ಅದರ ಮಾಹಿತಿ ಪಡೆಯಿರಿ.

**ಆಗ್ರಾ ಭೇಟಿ ಮತ್ತು ಬಿಡುಗಡೆ:** ಪುರಂದರ ಒಪ್ಪಂದದ ನಂತರ ಜಯಸಿಂಗನು ಆದಿಲಶಾಹಿಯ ವಿರುದ್ಧ ದಂಡಯಾತ್ರೆಯನ್ನು ಕೈಗೊಂಡನು. ಮಹಾರಾಜರು ಜಯಸಿಂಗನಿಗೆ ಸಹಾಯ ಮಾಡಿದರು. ಆದರೆ ಅವನ ಈ ದಂಡಯಾತ್ರೆ ಯಶಸ್ವಿಯಾಗಲಿಲ್ಲ. ಆ ಸಮಯದಲ್ಲಿ ಮಹಾರಾಜರನ್ನು ಕೆಲವು ಕಾಲವಾದರೂ ದಕ್ಷಿಣದ ರಾಜಕಾರಣದಿಂದ ದೂರವಿಡಬೇಕೆಂಬ ವಿಚಾರವನ್ನು ಜಯಸಿಂಗ ಮತ್ತು ಔರಂಗಜೇಬ ಬಾದಶಹರು ಮಾಡಿದರು. ಈ ವಿಚಾರಕ್ಕನುಸಾರವಾಗಿ ಮಹಾರಾಜರು ಬಾದಶಹನ ಭೇಟಿಗೆ ಬರಬೇಕು ಎಂಬ ಸೂಚನೆಯನ್ನು ಜಯಸಿಂಗನು ಮಹಾರಾಜರಿಗೆ ಮಾಡಿದನು. ಅವನು ಅವರ ಸುರಕ್ಷತೆಯ ಭರವಸೆಯನ್ನೂ ನೀಡಿದನು. ಅದಕ್ಕನುಸಾರವಾಗಿ ಶಿವಾಜಿ ಮಹಾರಾಜರು ಆಗ್ರಾಕ್ಕೆ ಹೊರಟರು. ಅವರ ಜೊತೆ ರಾಜ ಪುತ್ರ ಸಂಭಾಜಿ ಇದ್ದರು. ಅಲ್ಲದೆ ಅವರ ಜೊತೆ ವಿಶ್ವಾಸದ ಮತ್ತು ಜೀವಕ್ಕೆ ಜೀವ ಕೊಡುವ ಆಯ್ದ ಸಹಕಾರಿಗಳೂ ಇದ್ದರು.

ಮಹಾರಾಜರು ಆಗ್ರಾ ತಲುಪಿದರು. ಔರಂಗಜೇಬನು ತನ್ನ ಆಸ್ಥಾನದಲ್ಲಿ ಅವರಿಗೆ ಯೋಗ್ಯ ಮಾನ-ಸನ್ಮಾನಗಳನ್ನು ನೀಡಲಿಲ್ಲ. ಹೀಗಾಗಿ ಅವರು ರೋಷವನ್ನು ವ್ಯಕ್ತಪಡಿಸಿದರು. ಆನಂತರ ಬಾದಶಹನು ಅವರನ್ನು ಕಣ್ಗಾವಲಿನಲ್ಲಿ ಇರಿಸಿದನು. ಬಾದಶಹನ ಈ ಕೃತ್ಯದಿಂದ ಎದೆಗುಂದದೆ ಮಹಾರಾಜರು ಕಣ್ಗಾವಲಿನಿಂದ ಪಾರಾಗುವ ಯೋಜನೆಯನ್ನು ರೂಪಿಸಿದರು. ಅವರು ಆಗ್ರಾದಿಂದ ಅತ್ಯಂತ ಚಾಣಾಕ್ಷತನದಿಂದ ಪಾರಾದರು ಹಾಗೂ ಕೆಲವು ದಿವಸಗಳ ನಂತರ ಮಹಾರಾಷ್ಟ್ರದಲ್ಲಿ ಸುರಕ್ಷಿತವಾಗಿ ಮುಟ್ಟಿದರು. ಅವರು ಆಗ್ರಾದಿಂದ ಬರುವಾಗ ಸಂಭಾಜಿರಾಜರನ್ನು ಮಥುರೆಯಲ್ಲಿ ಬಿಟ್ಟುಬಂದಿದ್ದರು. ನಂತರ ಅವರನ್ನು ಸುಖರೂಪವಾಗಿ ರಾಜಗಡಕ್ಕೆ ಕರೆತರಲಾಯಿತು. ಮಹಾರಾಜರು ಸ್ವರಾಜ್ಯದಿಂದ ದೂರವಿರುವಾಗ ಸ್ವರಾಜ್ಯದ ಆಡಳಿತವನ್ನು ವೀರಮಾತೆ ಜಿಜಾಬಾಯಿ ಮತ್ತು ಮಹಾರಾಜರ ಸಹಕಾರಿಗಳು ನೋಡಿಕೊಂಡರು.

**ಮುಘಲರ ವಿರುದ್ಧ ಆಕ್ರಮಣಕಾರಿ ಹೆಜ್ಜೆ:** ಮಹಾರಾಜರಿಗೆ ಮುಘಲರೊಡನೆ ಕೂಡಲೇ ಸಂಘರ್ಷ ಬೇಕಾಗಿರದಿದ್ದರೂ ಪುರಂದರದ ಒಪ್ಪಂದದಲ್ಲಿ ಕೊಡಲ್ಪಟ್ಟ ಕೋಟೆ ಹಾಗೂ ಪ್ರದೇಶಗಳನ್ನು ಮರಳಿ ಪಡೆಯುವುದು ಮಹಾರಾಜರ ಉದ್ದೇಶವಾಗಿತ್ತು. ಅದಕ್ಕಾಗಿ ಅವರು ಒಂದು ವ್ಯಾಪಾರ ಮತ್ತು ಸಾಹಸಮಯ ಯೋಜನೆಯನ್ನು ತಯಾರಿಸಿದರು. ಒಂದು ಬದಿಗೆ ಸಾಕಷ್ಟು ಸಿದ್ಧತೆಯೊಂದಿಗೆ ಸೈನ್ಯವನ್ನು ಕಳಿಸಿ ವಿವಿಧ ಕೋಟೆಗಳನ್ನು ಗೆದ್ದುಕೊಳ್ಳುವುದು ಹಾಗೂ ಇನ್ನೊಂದು ಬದಿಗೆ ದಕ್ಷಿಣದಲ್ಲಿಯ ಮುಘಲರ ಅಧಿಪತ್ಯವಿರುವ ಪ್ರದೇಶಗಳ ಮೇಲೆ ದಾಳಿ ಮಾಡಿ ಅವರನ್ನು ಅಸ್ಥಿರಗೊಳಿಸುವುದು ಆಯೋಜನೆಯಾಗಿತ್ತು. ಇದಕ್ಕನುಸಾರವಾಗಿ ಅವರು ಮುಘಲರ ಅಹಮದನಗರ ಮತ್ತು ಜುನ್ನರ ಈ ಪ್ರದೇಶಗಳ ಮೇಲೆ ದಾಳಿ ಮಾಡಿದರು. ಮುಂದೆ ಒಂದರ ನಂತರ ಮತ್ತೊಂದು ಹೀಗೆ ಸಿಂಹಗಡ, ಪುರಂದರ, ಲೋಹಗಡ, ಮಾಹುಲಿ, ಕರ್ನಾಳಾ, ರೋಹಿಡಾ ಈ ಕೋಟೆಗಳನ್ನು ಗೆದ್ದುಕೊಂಡರು.

ಆನಂತರ ಶಿವಾಜಿ ಮಹಾರಾಜರು ಸೂರತದ ಮೇಲೆ ಎರಡನೇ ಸಲ ದಾಳಿ ಮಾಡಿದರು. ಅಲ್ಲಿಂದ ಮರಳಿಬರುವಾಗ ನಾಶಿಕ ಜಿಲ್ಲೆಯ ವಣಿ, ದಿಂಡೋರಿ ಈ ಸ್ಥಳಗಳಲ್ಲಿ ಮುಘಲರೊಡನೆ ದೊಡ್ಡ ಹೋರಾಟ ನಡೆಯಿತು. ಈ ಹೋರಾಟದಲ್ಲಿ ಅವರು ದಾವುದಖಾನ ಎಂಬ ಮುಘಲ ಸರದಾರನನ್ನು ಸೋಲಿಸಿದರು. ಅದರ ನಂತರ ಮೋರೋಪಂತ ಪಿಂಗಳೆ ಇವನು ನಾಶಿಕ ಹತ್ತಿರದ ತ್ರ್ಯಂಬಕಗಡವನ್ನು ಗೆದ್ದುಕೊಂಡನು.

ಈ ರೀತಿ ಶಿವಾಜಿ ಮಹಾರಾಜರ ಮುಘಲರ ವಿರುದ್ಧದ ಆಕ್ರಮಣಕಾರಿ ನೀತಿಗೆ ಯಶಸ್ಸು ಲಭಿಸಿತು. ಈ ಆಕ್ರಮಣಕಾರಿ ಹೋರಾಟದಲ್ಲಿ ತಾನಾಜಿ ಮಾಲುಸರೆ, ಮೋರೋಪಂತ ಪಿಂಗಳೆ, ಪ್ರತಾಪರಾವ ಗುಜರ ಮುಂತಾದ ಸರದಾರರು ಅಮೂಲ್ಯವಾದ ಕಾರ್ಯಮಾಡಿದರು. ಇತಿಹಾಸಕಾರರಾದ ಕೃಷ್ಣಾಜಿ ಅನಂತ ಸಭಾಸದ ಇವರು ಈ ಹೋರಾಟದ ವರ್ಣನೆಯನ್ನು ಈ ರೀತಿ ಮಾಡಿದ್ದಾರೆ- ''ನಾಲ್ಕು ತಿಂಗಳಲ್ಲಿ ಇಪ್ಪತ್ತೇಳು ಕೋಟೆಗಳನ್ನು ಗೆದ್ದರು. ಮಹಾನ್ ಖ್ಯಾತಿವಂತರೆನಿಸಿದರು.''



ಛತ್ರಪತಿ ಶಿವಾಜಿ ಮಹಾರಾಜರು

**ರಾಜ್ಯಾಭಿಷೇಕ:** ಸತತ ಮೂವತ್ತು ವರ್ಷಗಳ ಅವಿರತ ಪರಿಶ್ರಮದಿಂದಾಗಿ ಮರಾಠರ ಸ್ವರಾಜ್ಯವು ಸಾಕಾರಗೊಂಡಿತ್ತು. ಹಾಗಿದ್ದರೂ ಸ್ವರಾಜ್ಯದ ಅಸ್ತಿತ್ವವು ಸ್ವತಂತ್ರ ಮತ್ತು ಸಾರ್ವಭೌಮವಾಗಿದೆಯೆಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ಸ್ವರಾಜ್ಯಕ್ಕೆ ಅಧಿಕೃತತೆ ಮತ್ತು ಸಾರ್ವತ್ರಿಕ ಮನ್ನಣೆ ಪ್ರಾಪ್ತವಾಗುವುದು ಅವಶ್ಯಕವಾಗಿದೆ ಎಂಬುದು ಮಹಾರಾಜರ ಗಮನಕ್ಕೆ ಬಂದಿತು. ಅದಕ್ಕಾಗಿ ವಿಧಿಪೂರ್ವಕ ರಾಜ್ಯಾಭಿಷೇಕದ ಅವಶ್ಯಕತೆಯಿತ್ತು. ಆದ್ದರಿಂದ ಅವರು 6 ಜೂನ್ 1674 ರಂದು ಪ್ರಸಿದ್ಧ ವಿದ್ವಾಂಸರಾದ ಪಂಡಿತ ಗಾಗಾಭಟ್ಟರ ಹಸ್ತಗಳಿಂದ ರಾಯಗಡದಲ್ಲಿ ರಾಜ್ಯಾಭಿಷೇಕ ಮಾಡಿಸಿಕೊಂಡರು.

ಈ ರಾಜ್ಯಾಭಿಷೇಕದ ಮೂಲಕ ಮಹಾರಾಜರು ಈಗ ಸ್ವರಾಜ್ಯದ ಛತ್ರಪತಿಗಳಾದರು. ಸಾರ್ವಭೌಮತ್ವದ ಪ್ರತೀಕವೆಂದು ಅವರು 'ರಾಜ್ಯಾಭಿಷೇಕ ಶಕ' ಎಂಬ ಹೊಸ ಕಾಲಗಣನೆಯನ್ನು ಆರಂಭಿಸಿದರು. ಅವರು ಈಗ ಶಕಕರ್ತರಾದರು. ರಾಜ್ಯಾಭಿಷೇಕದ ಪ್ರಸಂಗದಲ್ಲಿ ಅವರು ಬಂಗಾರದ 'ಹೋನ' ಮತ್ತು ತಾಮ್ರದ 'ಶಿವರಾಯಿ' ಎಂಬ ಹೊಸ ನಾಣ್ಯಗಳನ್ನು ಟಂಕಿಸಿದರು. ಈ ನಾಣ್ಯಗಳ ಮೇಲೆ 'ಶ್ರೀ ರಾಜಾ ಶಿವಛತ್ರಪತಿ' ಎಂಬ ಅಕ್ಷರಗಳನ್ನು ಕೊರೆಯಲಾಯಿತು. ಅಲ್ಲಿಂದ ಮುಂದೆ ರಾಜಪತ್ರದಲ್ಲಿ 'ಕ್ಷತ್ರಿಯ ಕುಲಾವಂತಸ ಶ್ರೀ ರಾಜಾ ಶಿವಛತ್ರಪತಿ' ಎಂಬ ಉಲ್ಲೇಖವಾಗತೊಡಗಿತು. ರಾಜ್ಯಾಭಿಷೇಕದ ನಂತರ ಅವರು ಫಾರ್ಶಿ ಶಬ್ದಗಳಿಗೆ ಪರ್ಯಾಯ ಸಂಸ್ಕೃತ ಶಬ್ದಗಳಿರುವ ಒಂದು ಕೋಶವನ್ನು ತಯಾರಿಸಿಕೊಂಡರು. ಅದಕ್ಕೆ 'ರಾಜ್ಯ ವ್ಯವಹಾರಕೋಶ'' ಎಂದು ಕರೆಯುತ್ತಾರೆ.



ರಾಯಗಡ ಕೋಟೆ

**ನೆನಪಿಸಿಕೊಳ್ಳಿ ನೋಡೋಣ.**

ಹೊಸ ಕಾಲಗಣನೆಯನ್ನು ಯಾವ ಭಾರತೀಯ ರಾಜನು ಆರಂಭಿಸಿದನು?

**ನೆನಪಿನಲ್ಲಿಡಿರಿ.**

ರಾಜ್ಯ ವ್ಯವಹಾರಕೋಶದಲ್ಲಿಯ ಕೆಲವು ಸಮಾನಾರ್ಥವುಳ್ಳ ಶಬ್ದಗಳು ಉಲ್ಲೇಖನೀಯವಾಗಿವೆ-

ಉದಾ., ಕಿತಾಬ – ಪದವಿ, ಫರ್ಮಾನ – ರಾಜಪತ್ರ,

ಜಾಮೀನ – ಪ್ರತಿಭೂತಿ, ಹಾಲಿ– ಸಾಂಪ್ರತ,

ಮಾಜಿ – ಪೂರ್ವ, ಫಿಲಹಾಲ – ತತ್ಕಾಲ,

ವಾಹವಾ – ಉತ್ತಮ,

ವಕುಬ – ಪ್ರಜ್ಞಾ, ಬೆವಕೂಫ – ಮೂಢ,

ದಸ್ತಪೋಶಿ – ಹಸ್ತಸ್ಪರ್ಶ,

ಮುಲಾಖತ – ದರ್ಶನ, ಕದಮಪೋಶಿ – ಪಾದಸ್ಪರ್ಶ,

ಝೂಟ – ಮಿಥ್ಯಾ, ಕೌಲನಾಮಾ – ಅಭಯ,

ಫತೇಹ – ವಿಜಯ, ಫಿರ್ಯಾದ – ಅನ್ಯಾಯವಾರ್ತಾ,

ಶಿಲೇದಾರ – ಸ್ವತುರಗಿ.

ಮಧ್ಯಯುಗೀನ ಭಾರತದ ಇತಿಹಾಸದಲ್ಲಿ ಶಿವಾಜಿ ಮಹಾರಾಜರ ರಾಜ್ಯಾಭಿಷೇಕವು ಒಂದು ಕ್ರಾಂತಿಕಾರಕ ಘಟನೆಯಾಗಿದೆ. ಈ ಘಟನೆಯ ಮಹತ್ವವನ್ನು ವಿವರಿಸುತ್ತ ಸಭಾಸದನು, ''ಮರಾಠಾ ಸಾರ್ವಭೌಮನು ಇಷ್ಟು ದೊಡ್ಡ ಛತ್ರಪತಿಯಾದನು ಎಂಬ ಸಂಗತಿಯು ಸಾಮಾನ್ಯವಲ್ಲ'' ಎಂದು ಹೇಳುತ್ತಾನೆ.

ಆನಂತರ ಮಹಾರಾಜರು ಅಲ್ಪಾವಧಿಯಲ್ಲಿ ಅಂದರೆ 24 ಸಪ್ಟಂಬರ 1674 ರಂದು ನಿಶ್ಚಲಪುರಿ ಗೋಸಾವಿಯವರ ಮಾರ್ಗದರ್ಶನದಲ್ಲಿ ತಾಂತ್ರಿಕ ಪದ್ಧತಿಯಿಂದ ರಾಜ್ಯಾಭಿಷೇಕ ಮಾಡಿಸಿಕೊಂಡರು. ಭಾರತದಲ್ಲಿ ವೈದಿಕ ಮತ್ತು ತಾಂತ್ರಿಕ ಧಾರ್ಮಿಕ ವಿಧಿಗಳ ಎರಡು ಪರಂಪರೆಗಳು ಅಸ್ತಿತ್ವದಲ್ಲಿದ್ದವು. ಅವುಗಳಿಗೆ ಮರ್ಯಾದೆಯನ್ನು ತೋರಿಸಿ ಮಹಾರಾಜರು ಈ ಎರಡೂ ಪದ್ಧತಿಗಳಿಂದ ರಾಜ್ಯಾಭಿಷೇಕ ಮಾಡಿಸಿಕೊಂಡರು.

**ನಿಮಗೆ ಗೊತ್ತಿದೆಯೇ ?**

ಶಿವಾಜಿ ಮಹಾರಾಜರ ರಾಜ್ಯಾಭಿಷೇಕದ ಸಮಯದಲ್ಲಿ ರಾಜಕುಮಾರ ಸಂಭಾಜಿರಾಜೆ ಇವರು 17 ವರ್ಷದವರಿದ್ದರು. ಅವರು 'ಬುಧಭೂಷಣ' ಎಂಬ ಗ್ರಂಥದಲ್ಲಿ ರಾಜ್ಯಾಭಿಷೇಕ ಸಮಾರಂಭದ ವರ್ಣನೆ ಮಾಡಿದ್ದಾರೆ. ಅದು ಅವರ ಸ್ವತಃದ ಅನುಭವದ ಮೇಲೆ ಆಧಾರಿತವಾಗಿದೆ.

'ಛತ್ರಪತಿ ಶಿವಾಜಿ ಮಹಾರಾಜರ ರಾಜ್ಯಾಭಿಷೇಕ ಮಹೋತ್ಸವದ ಸಮಯದಲ್ಲಿ ವಿವಿಧ ಪ್ರಾಂತಗಳಿಂದ ಬಂದ ಶ್ರೇಷ್ಠ ವಿದ್ವಾಂಸರಿಗೆ ತೂಕ, ಅಳತೆ ಮಾಡದೆ ಅಥವಾ ಎಣಿಕೆ ಮಾಡದೆ ವಿಪುಲ ಧನವನ್ನು ಹಾಗೂ ವಸ್ತ್ರ, ಆನೆ ಮತ್ತು ಕುದುರೆಗಳ ದಾನ ಮಾಡಿ ಅವರನ್ನು ಸಂತುಷ್ಟಗೊಳಿಸಿದರು.'

ಈ ರೀತಿ ಛತ್ರಪತಿ ಶಿವಾಜಿ ಮಹಾರಾಜರು ತಮ್ಮ ಕೀರ್ತಿಯನ್ನು ಬೇರೆ ಬೇರೆ ದಿಶೆಗಳಲ್ಲಿ ವಿಸ್ತರಿಸಿದರು.

**ನಿಮಗೆ ಗೊತ್ತಿದೆಯೇ?**

ಶಿವಾಜಿ ಮಹಾರಾಜರ ರಾಜ್ಯಾಭಿಷೇಕದ ಸಲುವಾಗಿ ಅತ್ಯಂತ ಅಮೂಲ್ಯ ಹಾಗೂ ಭವ್ಯವಾದ ಸಿಂಹಾಸನವನ್ನು ತಯಾರಿಸಲಾಯಿತು. ಸಿಂಹಾಸನದ ಎಂಟು ದಿಕ್ಕುಗಳಿಗೆ ಎಂಟು ರತ್ನಖಚಿತವಾದ ಸ್ತಂಭಗಳಿದ್ದವು. ಮೂವತ್ತೆರಡು ಮಣ ಬಂಗಾರದ ಈ ಸಿಂಹಾಸನವನ್ನು ಅಮೂಲ್ಯ ರತ್ನಗಳಿಂದ ಕುಂದಣಿಸಲಾಗಿತ್ತು.

- 'ಮಣ' ಈ ಮೂಲಮಾನವನ್ನು ಗಣಿತದ ಶಿಕ್ಷಕರಿಂದ ತಿಳಿದುಕೊಳ್ಳಿರಿ.

**ದಕ್ಷಿಣದ ದಂಡಯಾತ್ರೆ:** ರಾಜ್ಯಾಭಿಷೇಕದ ಸುಮಾರು ಮೂರು ವರ್ಷಗಳ ನಂತರ ಅಕ್ಟೋಬರ 1677 ರಲ್ಲಿಮಹಾರಾಜರು ದಕ್ಷಿಣದ ದಂಡಯಾತ್ರೆಯನ್ನು ಕೈಗೊಂಡರು. ಗೋವಳಕಕೊಂಡಾದಲ್ಲಿ ಕುತುಬಶಾಹನಿಗೆ ಭೇಟಿಯಾದರು.

ಮಹಾರಾಜರು ಕರ್ನಾಟಕದಲ್ಲಿಯ ಬೆಂಗಳೂರು, ಹೊಸಕೋಟೆ, ಅದರಂತೆ ಈಗಿನ ತಮಿಳುನಾಡಿನಲ್ಲಿಯ ಜಿಂಜಿ, ವೆಲ್ಲೋರ ಮುಂತಾದ ಕೋಟೆಗಳನ್ನು ಹಾಗೂ ಆದಿಲಶಾಯಿಯ ಕೆಲವು ಪ್ರದೇಶಗಳನ್ನು ಗೆದ್ದುಕೊಂಡರು. ಅವರ ಸೈನಿಕರು ಅಲ್ಲಿಯ ಪ್ರಜೆಗಳಿಗೆ ಯಾವುದೇ ರೀತಿಯ ತೊಂದರೆ ಕೊಡಲಿಲ್ಲ. ಗೆದ್ದ ಪ್ರದೇಶಗಳ ಆಡಳಿತವನ್ನು ನೋಡಿಕೊಳ್ಳುವ ಸಲುವಾಗಿ ಮುಖ್ಯ ಆಡಳಿತಗಾರನೆಂದು ರಘುನಾಥ ನಾರಾಯಣ ಹಣಮಂತೆ ಇವನ ನೇಮಕ ಮಾಡಿದರು.

ಶಿವಾಜಿ ಮಹಾರಾಜರ ಮಲ ಸಹೋದರ ವ್ಯಂಕೋಜಿ ಇವರು ಸಧ್ಯದ ತಮಿಳುನನಾಡಿನಲ್ಲಿರುವ ತಂಜಾವೂರ ಎಂಬಲ್ಲಿ ರಾಜ್ಯಾಡಳಿತ ಮಾಡುತ್ತಿದ್ದರು. ಅವರನ್ನೂ ಸ್ವರಾಜ್ಯದ ಕಾರ್ಯದಲ್ಲಿ ಸಹಭಾಗಿಯನ್ನಾಗಿ ಮಾಡಿಕೊಳ್ಳುವ ಪ್ರಯತ್ನವು ಮಹಾರಾಜರದಾಗಿತ್ತು. ವ್ಯಂಕೋಜಿ ರಾಜರ ನಂತರ ತಂಜಾವರದ ರಾಜನು ವಿದ್ಯೆ ಮತ್ತು ಕಲೆ ಇವುಗಳ ಜೋಪಾಸನೆ ಮಾಡಿದನು. ಅಲ್ಲಿಯ 'ಸರಸ್ವತಿ ಮಹಲ' ಈ ಗ್ರಂಥಾಲಯವು ಜಗತ್ ಪ್ರಸಿದ್ಧವಾಗಿದೆ.

ದಕ್ಷಿಣದ ದಂಡಯಾತ್ರೆಯಲ್ಲಿ ತಮಿಳುನಾಡಿನಲ್ಲಿಯ ಜಿಂಜಿಯ ಕೋಟೆಯನ್ನು ಗೆದ್ದು ಅದನ್ನು ಸ್ವರಾಜ್ಯಕ್ಕೆ ಜೋಡಿಸುವ ಶಿವಾಜಿ ಮಹಾರಾಜರ ಕಾರ್ಯಕ್ಕೆ ನಂತರದ ಕಾಲದಲ್ಲಿ ನಿರ್ಣಾಯಕ ಮಹತ್ವ ಪ್ರಾಪ್ತವಾಯಿತು. ಮುಘಲ ಬಾದಶಾಹ ಔರಂಗಜೇಬನು ಸ್ವರಾಜ್ಯವನ್ನು ಧ್ವಂಸಗೊಳಿಸುವುದಕ್ಕಾಗಿ ಮಹಾರಾಷ್ಟ್ರದಲ್ಲಿ ತಳವೂರಿದ್ದರಿಂದ ಆಗಿನ ಛತ್ರಪತಿಗಳಾದ ರಾಜಾರಾಮ ಮಹಾರಾಜರು ಸುರಕ್ಷತೆಗಾಗಿ ಮಹಾರಾಷ್ಟ್ರವನ್ನು ಬಿಡಬೇಕಾಯಿತು. ಆ ಸಮಯದಲ್ಲಿ ಅವರು ದಕ್ಷಿಣದಲ್ಲಿಯ ಇದೇ ಜಿಂಜಿ ಕೋಟೆಯಲ್ಲಿ ಆಶ್ರಯಪಡೆದು ಅಲ್ಲಿಂದಲೇ ಸ್ವರಾಜ್ಯದ ಆಡಳಿತವನ್ನು ನಡೆಸಿದರು.

ಈ ದಕ್ಷಿಣದ ದಂಡಯಾತ್ರೆಯ ನಂತರ ಅಲ್ಪಾವಧಿಯಲ್ಲಿ ಅಂದರೆ 3 ಎಪ್ರಿಲ 1680 ರಂದು ಶಿವಾಜಿ ಮಹಾರಾಜರು ಮರಣಹೊಂದಿದರು. ವಯಸ್ಸಿನ ಐವತ್ತನೆಯ ವರ್ಷದಲ್ಲಿಯ ಅವರ ನಿಧನದಿಂದ ಸ್ವರಾಜ್ಯಕ್ಕೆ ಅಪರಿಮಿತ ಹಾನಿಯಾಯಿತು. ಒಂದು ಮಹಾನ್ ಯುಗದ ಅಂತ್ಯವಾಯಿತು.



ಶಿವಾಜಿ ಮಹಾರಾಜರ ಸಮಾಧಿ- ರಾಯಗಡ

BXG1TZ

## ಅಭ್ಯಾಸ

**1. ಕೆಳಗಿನ ಘಟನೆಗಳನ್ನು ಕಾಲಾನುಕ್ರಮವಾಗಿ ಬರೆಯಿರಿ.**

(1) ಶಿವಾಜಿ ಮಹಾರಾಜರ ದಕ್ಷಿಣದ ದಂಡಯಾತ್ರೆ
(2) ಲಾಲಮಹಲಿನ ಮೇಲೆ ದಾಳಿ
(3) ಆಗ್ರಾದಿಂದ ಬಿಡುಗಡೆ
(4) ರಾಜ್ಯಾಭಿಷೇಕ
(5) ಪುರಂದರದ ಒಪ್ಪಂದ
(6) ಶಾಯಿಸ್ತಾಖಾನನ ದಾಳಿ

**2. ಹುಡುಕಿದರೆ ಸಿಗುತ್ತದೆ.**

(1) ಸಂಸ್ಕೃತ ಶಬ್ದಗಳಿರುವ ಕೋಶ–
(2) ತ್ರ್ಯಂಬಕಗಡವನ್ನು ಗೆದ್ದುಕೊಂಡವರು–
(3) ವಣಿ– ದಿಂಡೋರಿಯಲ್ಲಿ ಸೋತ ಸರದಾರ–
(4) ಇಂಗ್ಲಿಷ, ಡಚ್ ಮತ್ತು ಫ್ರೆಂಚರ ಇವರ ಮಳಿಗೆಗಳಿದ್ದ ಸ್ಥಳ –

**3. ನಿಮ್ಮ ಶಬ್ದಗಳಲ್ಲಿ ಬರೆಯಿರಿ.**

(1) ಶಿವಾಜಿ ಮಹಾರಾಜರ ರಾಜ್ಯಾಭಿಷೇಕ
(2) ಆಗ್ರಾದಿಂದ ಬಿಡುಗಡೆ
(3) ಶಿವಾಜಿ ಮಹಾರಾಜರ ದಕ್ಷಿಣದ ದಂಡಯಾತ್ರೆ
(4) ಶಿವಾಜಿ ಮಹಾರಾಜರು ರಾಜ್ಯಾಭಿಷೇಕಕ್ಕಾಗಿ ಮಾಡಿದ ಸಿದ್ಧತೆಗಳು

**4. ಕಾರಣಗಳನ್ನು ಬರೆಯಿರಿ.**

(1) ಶಿವಾಜಿ ಮಹಾರಾಜರು ಪುರಂದರ ಒಪ್ಪಂದ ಮಾಡಿಕೊಂಡರು.
(2) ಶಿವಾಜಿ ಮಹಾರಾಜರು ಮುಘಲರ ವಿರುದ್ಧ ಆಕ್ರಮಣಕಾರಿ ಹೆಜ್ಜೆಯನ್ನಿಟ್ಟರು.

**ಉಪಕ್ರಮ:**

(1) ಶಾಲೆಯಲ್ಲಿ ಆಚರಿಸಲಾಗುವ ಸ್ವಾತಂತ್ರ್ಯ ದಿನ/ಗಣರಾಜ್ಯ ದಿನದ ಕಾರ್ಯಕ್ರಮಕ್ಕಾಗಿ ನೀವು ಯಾವ ಯಾವ ಸಿದ್ಧತೆ ಮಾಡುವಿರಿ ? ಶಿಕ್ಷಕರ ಸಹಾಯದಿಂದ ಅದರ ಪಟ್ಟಿಯನ್ನು ತಯಾರಿಸಿರಿ.
(2) ನಿಮ್ಮ ಪರಿಸರದಲ್ಲಿಯ ಐತಿಹಾಸಿಕ ಸ್ಥಳಕ್ಕೆ ಭೇಟಿ ನೀಡಿ ವರದಿಯನ್ನು ಬರೆಯಿರಿ.

# 7. ಸ್ವರಾಜ್ಯದ ಆಡಳಿತ

ಶಿವಾಜಿ ಮಹಾರಾಜರು ಸ್ವರಾಜ್ಯದ ಸ್ಥಾಪನೆ ಮಾಡಿದರು. ಸ್ವತಃ ರಾಜ್ಯಾಭಿಷೇಕ ಮಾಡಿಸಿಕೊಂಡರು. ರಾಜ್ಯಾಭಿಷೇಕದ ನಂತರ ಮಹಾರಾಜರು ದಕ್ಷಿಣದ ದಂಡಯಾತ್ರೆಯನ್ನು ಕೈಗೊಂಡರು. ಸ್ವರಾಜ್ಯದ ವಿಸ್ತಾರವಾಯಿತು. ಈ ಸ್ವರಾಜ್ಯದಲ್ಲಿ ಮಹಾರಾಷ್ಟ್ರದ ನಾಶಿಕ, ಪುಣೆ, ಸಾತಾರಾ, ಸಾಂಗಲಿ, ಕೊಲ್ಹಾಪುರ, ಸಿಂಧೂದುರ್ಗ, ರತ್ನಾಗಿರಿ, ರಾಯಗಡ ಮತ್ತು ಠಾಣೆ ಈ ಜಿಲ್ಲೆಗಳಲ್ಲಿಯ ಸಾಕಷ್ಟು ಪ್ರದೇಶಗಳ ಸಮಾವೇಶವಾಗಿತ್ತು. ಅದರಂತೆ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿಯ ಕೆಲವು ಭಾಗವು ಸ್ವರಾಜ್ಯದಲ್ಲಿ ಸಮಾವೇಶವಾಗಿತ್ತು. ಈ ರೀತಿ ವಿಸ್ತಾರವಾಗುತ್ತ ಹೋದ ಸ್ವರಾಜ್ಯದ ಆಡಳಿತವುಸುಗಮವಾಗಿ ನಡೆಯಬೇಕು, ಅದರಲ್ಲಿ ಜನರ ಹಿತ ಸಾಧಿಸಲ್ಪಡಬೇಕು, ಅದಕ್ಕಾಗಿ ಮಹಾರಾಜರು ಸ್ವರಾಜ್ಯವನ್ನು ಸುಸಜ್ಜಿತಗೊಳಿಸಿದರು. ಈ ವಿಷಯದ ಮಾಹಿತಿಯನ್ನು ನಾವು ಪಡೆಯುವವರಿದ್ದೇವೆ.

**ಅಷ್ಟಪ್ರಧಾನ ಮಂಡಳ:** ಮಹಾರಾಜರು ರಾಜ್ಯಾಭಿಷೇಕದ ಪ್ರಸಂಗದಲ್ಲಿ ಅಷ್ಟಪ್ರಧಾನ ಮಂಡಳದ ನೇಮಕ ಮಾಡಿದರು. ರಾಜ್ಯಾಡಳಿತದ ಸೌಕರ್ಯಕ್ಕಾಗಿ ಅದನ್ನು ಎಂಟು ಖಾತೆಗಳಲ್ಲಿ ವಿಭಾಗಿಸಿದರು. ಪ್ರತಿಯೊಂದು ಖಾತೆಗೆ ಒಬ್ಬ ಪ್ರಮುಖನ ನೇಮಕ ಮಾಡಿದರು. ಎಂಟು ಖಾತೆಗಳ ಎಂಟು ಪ್ರಮುಖರು ಕೂಡಿ 'ಅಷ್ಟಪ್ರಧಾನ ಮಂಡಳ' ವಾಯಿತು. ಈ ಪ್ರಮುಖರ ನೇಮಕಾತಿ ಮಾಡುವುದು ಇಲ್ಲವೆ ಅವರನ್ನು ಮಂತ್ರಿಯ ಸ್ಥಾನದಿಂದ ತೆಗೆದು ಹಾಕುವುದು ಮಹಾರಾಜರ ಅಧಿಕಾರವಾಗಿತ್ತು. ತಮ್ಮ ತಮ್ಮ ಖಾತೆಯ ಆಡಳಿತಕ್ಕಾಗಿ ಈ ಪ್ರಮುಖರು ಮಹಾರಾಜರಿಗೆ ಜವಾಬ್ದಾರರಾಗಿದ್ದರು.

ಶಿವಾಜಿ ಮಹಾರಾಜರು ಗುಣ ಮತ್ತು ಕರ್ತೃತ್ವವನ್ನು ನೋಡಿ ಅಷ್ಟಪ್ರಧಾನ ಮಂಡಳದ ಆಯ್ಕೆ ಮಾಡಿದರು. ಅವರಿಗೆ ಬಹುಮಾನಗಳನ್ನು, ವತನಗಳನ್ನು ಇಲ್ಲವೆ ಜಹಗೀರುಗಳನ್ನು ಕೊಡಲಿಲ್ಲ, ನಗದು ರೂಪದಲ್ಲಿ ಸಾಕಷ್ಟು ಸಂಬಳವನ್ನು ನೀಡುತ್ತಿದ್ದರು.

**ಕೃಷಿ ವಿಷಯದ ಧೋರಣೆ:** ಕೃಷಿಯ ಹಳ್ಳಿಗಳಲ್ಲಿಯ ಮುಖ್ಯ ಉದ್ಯೋಗವಾಗಿತ್ತು. ಮಹಾರಾಜರು ಕೃಷಿಯ ಮಹತ್ವವನ್ನು ಅರಿತಿದ್ದರು. ಆದ್ದರಿಂದ ಅವರು ರೈತರ ಹಿತದ ಕಡೆಗೆ ಲಕ್ಷ್ಯವಹಿಸಿದರು. ಅವರು ಅಣ್ಣಾಜಿ ದತ್ತೋ ಎಂಬ ಕರ್ತವ್ಯನಿಷ್ಠ ಮತ್ತು ಅನುಭವಿ ಅಧಿಕಾರಿಯ ಮೇಲೆ ಭೂಕಂದಾಯ ವ್ಯವಸ್ಥೆಯ ಜವಾಬ್ದಾರಿಯನ್ನು ಒಪ್ಪಿಸಿದರು. ನಿರ್ಧರಿಸಿಕೊಟ್ಟ ಹಣಕ್ಕಿಂತ ಹೆಚ್ಚು ಕಂದಾಯವನ್ನು ಸಂಗ್ರಹಿಸಬಾರದು ಎಂಬ ಎಚ್ಚರಿಕೆಯನ್ನು ಅವರು ಅಧಿಕಾರಿಗಳಿಗೆ ನೀಡಿದರು. ಬೀಳು ಭೂಮಿಯನ್ನು ಸಾಗುವಳಿ ಮಾಡುವ ಸಲುವಾಗಿ ಉತ್ತೇಜನ ನೀಡಿದರು. ಅತಿವೃಷ್ಟಿಯಾದರೆ, ಇಲ್ಲವೆ ಬರಗಾಲ ಬಿದ್ದು ಬೆಳೆ ನಾಶವಾದರೆ ಅಥವಾ ಶತ್ರುಸೈನ್ಯವು ಊರಿನ ಪ್ರದೇಶಗಳನ್ನು ಹಾಳು ಮಾಡಿದರೆ, ಇಂಥ ಎಲ್ಲ ಪ್ರಸಂಗಗಳಲ್ಲಿ ಸರಕಾರದ ವತಿಯಿಂದ ಭೂಕಂದಾಯ ಮತ್ತು ಇತರ ಕರಗಳಲ್ಲಿ ಸವಲತ್ತುಗಳನ್ನು ನೀಡಬೇಕು ಎಂಬುದು ಅವರ ಆಜ್ಞೆಯಾಗಿತ್ತು. ಅದರಂತೆ ಇಂಥ ಪ್ರಸಂಗಗಳಲ್ಲಿ ರೈತರಿಗೆ ಜೋಡು ಎತ್ತುಗಳು, ನೇಗಿಲು ಮತ್ತು ಬಿತ್ತನೆಗಾಗಿ ಉತ್ತಮ

**ಶಿವಾಜಿ ಮಹಾರಾಜರ ಅಷ್ಟ ಪ್ರಧಾನ ಮಂಡಳ**

| | ಪ್ರಧಾನ ಹೆಸರು | ಅಧಿಕಾರ ಸ್ಥಾನ | ಕಾರ್ಯ |
|---|---|---|---|
| 1. | ಮೋರೋ ತ್ರಿಂಬಕ ಪಿಂಗಳೆ | ಪ್ರಧಾನ | ರಾಜ್ಯಾಡಳಿತವನ್ನು ನಡೆಸುವುದು ಮತ್ತು ಗೆದ್ದುಕೊಂಡ ಪ್ರದೇಶಗಳ ವ್ಯವಸ್ಥೆಯನ್ನು ನೋಡಿ ಕೊಳ್ಳುವುದು. |
| 2. | ರಾಮಚಂದ್ರ ನೀಲಕಂಠ ಮುಜುಮದಾರ | ಅಮಾತ್ಯ | ರಾಜ್ಯದ ಆಯವ್ಯಯವನ್ನು ನೋಡಿಕೊಳ್ಳುವುದು. |
| 3. | ಅಣ್ಣಾಜಿ ದತ್ತೋ | ಸಚಿವ | ಸರಕಾರದ ಆಜ್ಞಾಪತ್ರಗಳನ್ನು ತಯಾರಿಸುವುದು. |
| 4. | ದತ್ತಾಜಿ ತ್ರಿಂಬಕ ವಾಕನೀಸ | ಮಂತ್ರಿ | ಪತ್ರವ್ಯವಹಾರಗಳನ್ನು ನೋಡಿ ಕೊಳ್ಳುವುದು. |
| 5. | ಹಂಬೀರರಾವ ಮೋಹಿತೆ | ಸೇನಾಪತಿ | ಸೈನ್ಯದ ವ್ಯವಸ್ಥೆಯನ್ನಿಡುವುದು ಮತ್ತು ರಾಜ್ಯದ ರಕ್ಷಣೆ ಮಾಡುವುದು. |
| 6. | ರಾಮಚಂದ್ರ ತ್ರಿಂಬಕ ಡಬೀರ | ಸುಮಂತ | ಹೊರ ರಾಜ್ಯಗಳೊಡನೆ ಸಂಬಂಧವನ್ನಿಡುವುದು. |
| 7. | ನಿರಾಜಿ ರಾವಜಿ | ನ್ಯಾಯಾಧೀಶರು | ನ್ಯಾಯದಾನ ಮಾಡುವುದು. |
| 8. | ಮೋರೇಶ್ವರ ಪಂಡಿತರಾವ | ಪಂಡಿತರಾವ | ಧಾರ್ಮಿಕ ವ್ಯವಹಾರಗಳನ್ನು ನೋಡಿಕೊಳ್ಳುವುದು. |

ಬೀಜಗಳನ್ನು ಒದಗಿಸಬೇಕು ಎಂದು ಮಹಾರಾಜರು ಅಧಿಕಾರಿಗಳಿಗೆ ಆಜ್ಞೆಮಾಡಿದ್ದರು.

**ಸಮಕಾಲೀನ ಹಳ್ಳಿಗಳ ಅರ್ಥವ್ಯವಸ್ಥೆ:** ಕೃಷಿಯು ಹಳ್ಳಿಯಲ್ಲಿಯ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿತ್ತು. ಹಳ್ಳಿಯಲ್ಲಿ ಕೃಷಿಗೆ ಪೂರಕವಾದ ಉದ್ಯೋಗಗಳು ನಡೆಯುತ್ತಿದ್ದವು. ಊರಲ್ಲಿಯ ಕರಕುಶಲ ಕೆಲಸಗಾರರು ವಸ್ತುಗಳ ಉತ್ಪಾದನೆ ಮಾಡುತ್ತಿದ್ದರು. ಅವರು ಸ್ಥಳೀಯ ಜನರ ಅವಶ್ಯಕತೆಗಳನ್ನು ಪೂರೈಸುತ್ತಿದ್ದರು. ಈ ಅರ್ಥದಲ್ಲಿ ಹಳ್ಳಿಗಳು ಸ್ವಯಂಪೂರ್ಣವಾಗಿದ್ದವು. ರೈತರು ತಮ್ಮ ಉತ್ಪಾದನೆಯಲ್ಲಿಯ ಅವಶ್ಯಕವಾದ ಪಾಲನ್ನು ಕರಕುಶಲ ಕೆಲಸಗಾರರಿಗೆ ಕೊಡುತ್ತಿದ್ದರು. ಈ ಪಾಲಿಗೆ ಬಲೂತೆ ಎನ್ನುತ್ತಿದ್ದರು.

**ವ್ಯಾಪಾರ ಮತ್ತು ಉದ್ಯೋಗ:** ವ್ಯಾಪಾರ ವೃದ್ಧಿಯ ಹೊರತು ರಾಜ್ಯವು ಪ್ರಗತಿಯನ್ನು ಸಾಧಿಸಲಾರದು ಎಂಬುದನ್ನು ಮಹಾರಾಜರು ಗುರುತಿಸಿದ್ದರು. ವ್ಯಾಪಾರಿಗಳಿಂದಾಗಿ ಹೊಸ ಹೊಸ ಮತ್ತು ಅವಶ್ಯಕವಾದ ವಸ್ತುಗಳು ರಾಜ್ಯದಲ್ಲಿ ಬರುತ್ತವೆ. ವಸ್ತುಗಳ ಉಪಲಬ್ಧತೆ ಹೆಚ್ಚುತ್ತದೆ. ವ್ಯಾಪಾರದಲ್ಲಿ ವೃದ್ಧಿಯಾಗುತ್ತದೆ. ಸಂಪತ್ತಿನಲ್ಲಿ ಹೆಚ್ಚಳವಾಗುತ್ತದೆ. 'ಸಾಹುಕಾರರೆಂದರೆ ರಾಜ್ಯದ ಮತ್ತು ರಾಜ್ಯದ ಸಂಪತ್ತಿನ ಶೋಭೆ ಎಂಬ ಆಜ್ಞಾಪತ್ರದಲ್ಲಿಯ ವರ್ಣನೆಯು ವ್ಯಾಪಾರಿಗಳ ಕಡೆಗೆ ನೋಡುವ ಮಹಾರಾಜರ ನಿಶ್ಚಿತವಾದ ದೃಷ್ಟಿಕೋನವನ್ನು ಸ್ಪಷ್ಟಪಡಿಸುತ್ತದೆ. 'ಸಾಹುಕಾರ' ಈ ಶಬ್ದದ ಅರ್ಥವು 'ವ್ಯಾಪಾರಿ' ಎಂದಾಗುತ್ತದೆ.

ಸ್ವರಾಜ್ಯದಲ್ಲಿಯ ಉದ್ಯೋಗಗಳಿಗೆ ಸಂರಕ್ಷಣೆ ನೀಡುವುದು ಮಹಾರಾಜರ ನೀತಿಯಾಗಿತ್ತು. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಉಪ್ಪಿನ ಉದ್ಯೋಗ. ಅವರು ಕೊಂಕಣದಲ್ಲಿ ಉಪ್ಪಿನ ಉದ್ಯೋಗಕ್ಕೆ ಸಂರಕ್ಷಣೆ ನೀಡಿದರು. ಆ ಸಮಯದಲ್ಲಿ ಪೋರ್ತುಗೀಜರ ವಶದಲ್ಲಿದ್ದ ಪ್ರದೇಶದಿಂದ ಸ್ವರಾಜ್ಯಕ್ಕೆ ದೊಡ್ಡ ಪ್ರಮಾಣದಲ್ಲಿ ಉಪ್ಪಿನ ಆಯಾತವಾಗುತ್ತಿತ್ತು. ಅದರಿಂದಾಗಿ ಕೊಂಕಣದಲ್ಲಿಯ ಸ್ಥಾನಿಕ ಉಪ್ಪಿನ ಮಾರಾಟದ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆಂಬುದನ್ನು ಗಮನಿಸಿ ಮಹಾರಾಜರು ಪೋರ್ತುಗೀಜರ ಪ್ರದೇಶದಿಂದ ಸ್ವರಾಜ್ಯದಲ್ಲಿ ಬರುವ ಉಪ್ಪಿನ ಮೇಲೆ ಸಾಕಷ್ಟು ಕರವನ್ನು ಹೇರಿದರು. ಪೋರ್ತುಗೀಜ ಪ್ರದೇಶದಿಂದ ಬರುವ ಉಪ್ಪು ತುಟ್ಟಿಯಾಗಲಿ ಮತ್ತು ಅದರ ಆಯಾತ ಕಡಿಮೆಯಾಗಲಿ ಹಾಗೂ ಸ್ಥಾನಿಕ ಉಪ್ಪಿನ ಮಾರಾಟ ಹೆಚ್ಚಲಿ ಎಂಬುದು ಇದರ ಹಿಂದಿನ ಉದ್ದೇಶವಾಗಿತ್ತು.

**ಸೈನ್ಯ ವ್ಯವಸ್ಥೆ:** ಮಹಾರಾಜರ ಸೈನ್ಯದ ವಿಭಜನೆಯು ಎರಡು ವಿಭಾಗಗಳಲ್ಲಿ ಆಗಿತ್ತು. ಒಂದನೆಯದು ಕಾಲ್ದಳ ಹಾಗೂ ಎರಡನೆಯದು ಅಶ್ವದಳ. ಕಾಲ್ದಳದಲ್ಲಿ ಹವಾಲ್ದಾರ, ಜುಮಲೇದಾರ ಮುಂತಾದ ಅಧಿಕಾರಿಗಳು ಇರುತ್ತಿದ್ದರು. ಕಾಲ್ದಳದ ಪ್ರಮುಖನಿಗೆ 'ಸರನೋಬತ' ಎನ್ನುತ್ತಿದ್ದರು. ಅವನು ಕಾಲ್ದಳದಲ್ಲಿಯ ಸರ್ವೋಚ್ಚ ಅಧಿಕಾರಿಯಾಗಿದ್ದನು.

ಅಶ್ವದಳದಲ್ಲಿ ಶಿಲೇದಾರ ಮತ್ತು ಬಾರಗೀರ ಎಂಬ ಎರಡು ಪ್ರಕಾರದ ಕುದುರೆ ಸವಾರರಿದ್ದರು. ಶಿಲೇದಾರನ ಕಡೆಗೆ ಸ್ವತಃದ ಕುದುರೆ ಮತ್ತು ಶಸ್ತ್ರಾಸ್ತ್ರಗಳು ಇರುತ್ತಿದ್ದವು. ಆದರೆ ಬಾರಗಿರಿಗೆ ಸರಕಾರದಿಂದ ಕುದುರೆ ಮತ್ತು ಶಸ್ತ್ರಾಸ್ತ್ರಗಳು ದೊರೆಯುತ್ತಿದ್ದವು. ಅಶ್ವದಳದಲ್ಲಿ ಬಾರಗಿರ ಸಂಖ್ಯೆ ಅಧಿಕವಾಗಿತ್ತು. ಅಶ್ವದಳದಲ್ಲಿಯೂ ಕಾಲ್ದಳದಂತೆ ಅಧಿಕಾರಿಗಳ ಶ್ರೇಣಿಗಳು ಇದ್ದವು. 'ಸರನೋಬತ' ಇವನು ಅಶ್ವದಳದಲ್ಲಿಯ ಸರ್ವೋಚ್ಚ ಅಧಿಕಾರಿಯಾಗಿದ್ದನು. ನೇತೋಜಿ ಪಾಲಕರ, ಪ್ರತಾಪರಾವ ಗುಜರ ಮತ್ತು ಹಂಬೀರರಾವ ಮೋಹಿತೆ ಇವರು ಮಹಾರಾಜರ ಅಶ್ವದಳದ ಸರನೋಬತರೆಂದು ಪ್ರಸಿದ್ಧರಾಗಿದ್ದರು.



**ಅರಿತುಕೊಳ್ಳೋಣ ಬನ್ನಿ.**

ಭಾರತದ ಸೈನ್ಯದಳದ ಮಾಹಿತಿಯನ್ನು ಪಡೆಯಿರಿ.

- ಮೂರೂ ಸೈನ್ಯದಳಗಳ ಹೆಸರು ಹೇಳಿರಿ.
- ಪ್ರತಿಯೊಂದು ಸೈನ್ಯದಳದ ಪ್ರಮುಖನಿಗೆ ಏನೆನ್ನುತ್ತಾರೆ?
- ಮೂರು ಸೈನ್ಯದಳಗಳ ಪ್ರಮುಖರು ಯಾರು ಇರುತ್ತಾರೆ?

**ಗುಪ್ತಚರ ಖಾತೆ:** ಸ್ವರಾಜ್ಯವನ್ನು ಶತ್ರುಗಳಿಂದ ರಕ್ಷಿಸುವುದು ಅವಶ್ಯಕವಾಗಿತ್ತು. ಅದಕ್ಕಾಗಿ ಶತ್ರುಗಳ ಸುಳಿವಿನ ಬಗ್ಗೆ ಖಚಿತವಾದ ಮಾಹಿತಿಯನ್ನು ಸರಿಯಾದ ವೇಳೆಗೆ ದೊರಕಿಸಬೇಕಾಗುತ್ತಿತ್ತು. ಈ ಮಾಹಿತಿಯನ್ನು ತೆಗೆದು ಅದನ್ನು ಮಹಾರಾಜರಿಗೆ ನೀಡುವ ಕಾರ್ಯವು ಅವರ ಗುಪ್ತಚರ ಖಾತೆಯದಾಗಿತ್ತು. ಅವರ ಗುಪ್ತಚರ ಖಾತೆಯು ಅತ್ಯಂತ ದಕ್ಷವಾಗಿತ್ತು. ಬಹಿರ್ಜಿ ನಾಯಿಕ ಇವನು ಗುಪ್ತಚರ ಖಾತೆಯ ಪ್ರಮುಖನಾಗಿದ್ದನು. ಅವನು ಬೇರೆ ಬೇರೆ ಕಡೆಯಿಂದ ಮಾಹಿತಿಯನ್ನು ತೆಗೆಯುವುದರಲ್ಲಿ ನಿಷ್ಣಾತನಾಗಿದ್ದನು. ಅವನು ಸೂರತದ ಮೇಲಿನ ದಾಳಿಯ ಮೊದಲು ಅಲ್ಲಿಯ ಸಂಪೂರ್ಣ ಮಾಹಿತಿಯನ್ನು ತಂದಿದ್ದನು.

**ಕೋಟೆಗಳು:** ಮಧ್ಯಯುಗದಲ್ಲಿ ಕೋಟೆಗಳಿಗೆ ಅಸಾಧಾರಣ ಮಹತ್ವವಿತ್ತು. ಕೋಟೆಯು ವಶದಲ್ಲಿದ್ದರೆ ಸುತ್ತಮುತ್ತಲಿನ ಪ್ರದೇಶಗಳ ಕಡೆಗೆ ಲಕ್ಷ್ಯವಿಡಲು ಬರುತ್ತದೆ. ಪರಕೀಯ ಆಕ್ರಮಣವಾದರೆ ಕೋಟೆಯ ಆಶ್ರಯದಿಂದ ಪ್ರಜೆಗಳ ರಕ್ಷಣೆ ಮಾಡಲು ಬರುತ್ತದೆ. ಕೋಟೆಯಲ್ಲಿ ಅನ್ನಧಾನ್ಯ, ಯುದ್ಧಸಾಮಗ್ರಿಗಳು, ಮದ್ದುಗುಂಡುಗಳು ಇವುಗಳ ಸಂಗ್ರಹ ಮಾಡಲು ಬರುತ್ತದೆ. ಸ್ವರಾಜ್ಯ ಸ್ಥಾಪನೆಯ ಕಾರ್ಯದಲ್ಲಿಯ ಕೋಟೆಗಳ ಮಹತ್ವವನ್ನು ಆಜ್ಞಾಪತ್ರದಲ್ಲಿ ಹೀಗೆ ಹೇಳಲಾಗಿದೆ. 'ಈ ರಾಜ್ಯವನ್ನು ತೀರ್ಥರೂಪ ಹಿರಿಯ ಕೈಲಾಸವಾಸಿ ಸ್ವಾಮಿಗಳು ಕೋಟೆಯ ಮೇಲಿಂದಲೇ ನಿರ್ಮಿಸಿದ್ದಾರೆ.'

ಸ್ವರಾಜ್ಯದಲ್ಲಿ ಸುಮಾರು 300 ಕೋಟೆಗಳಿದ್ದವು. ಈ ಕೋಟೆಗಳ ಕಟ್ಟಡ ಮತ್ತು ದುರಸ್ತಿಗಾಗಿ ಮಹಾರಾಜರು ಸಾಕಷ್ಟು ಹಣವನ್ನು ಖರ್ಚುಮಾಡಿದರು. ರಾಜಗಡ, ಪ್ರತಾಪಗಡ, ಪಾವನಗಡ ಮುಂತಾದ ದುರ್ಗಮ ಕೋಟೆಗಳನ್ನು ಕಟ್ಟಿದರು. ಕೋಟೆಯಲ್ಲಿ ಕಿಲ್ಲೇದಾರ, ಸಬನೀಸ ಮತ್ತು ಕಾರಖಾನೀಸ ಎಂಬ ಅಧಿಕಾರಿಗಳು ಇರುತ್ತಿದ್ದರು. ಅಲ್ಲಿಯ ಧಾನ್ಯದ ಉಗ್ರಾಣ ಮತ್ತು ಯುದ್ಧ ಸಾಮಗ್ರಿಗಳ ವ್ಯವಸ್ಥೆಯನ್ನು ನೋಡಿಕೊಳ್ಳುವ ಸಲುವಾಗಿ ಕಾರಖಾನೀಸ ಎಂಬ ಅಧಿಕಾರಿ ಇದ್ದನು.

**ನಿಮಗೆ ಗೊತ್ತಿದೆಯೇ?**

ಶಿವಾಜಿ ಮಹಾರಾಜರ ದುರ್ಗನಿರ್ಮಿತಿಯ ವಿಷಯದಲ್ಲಿ ಛತ್ರಪತಿ ಸಂಭಾಜಿ ಮಹಾರಾಜರು ತಮ್ಮ 'ಬುಧಭೂಷಣ' ಎಂಬ ಗ್ರಂಥದಲ್ಲಿ ಮಾಡಿದ ವರ್ಣನೆಯ ಗಮನೀಯವಾಗಿದೆ. ಅದು ಕೆಳಗಿನಂತಿದೆ:

'ಕರ್ನಾಟಕ ದೇಶದಿಂದ ಹಿಡಿದು ಬಾಗಲಾಣದೇಶದ ವರೆಗೆ ಶತ್ರುಗಳಿಗೆ ಅಭೇದ್ಯವಾದ ದುರ್ಗಗಳಂತಹ ಅನೇಕ ಕೋಟೆಗಳನ್ನು ಛತ್ರಪತಿ ಶಿವರಾಯರು ಸಹ್ಯಾದ್ರಿ ಪರ್ವತದ ಉತ್ತುಂಗವಾದ ಶಿಖರ ಮತ್ತು ಪರ್ವತದ ಸಾಲುಗಳಲ್ಲಿ ಅಲ್ಲಲ್ಲಿ ಕಟ್ಟಿದರು. ಈ ಪೃಥ್ವಿಯ ರಕ್ಷಣೆ ಮಾಡುವುದೇ ಅದರ ಹಿಂದಿನ ಉದ್ದೇಶವಾಗಿತ್ತು. ಅವರ ಯಶಸ್ವಿ ನೇತೃತ್ವದಲ್ಲಿ ಕೃಷ್ಣಾನದಿಯ ದಂಡೆಯಿಂದ ಹಿಡಿದು ಸಮುದ್ರದ ನಾಲ್ಕೂ ದಿಕ್ಕುಗಳಲ್ಲಿ ಆ ಕೋಟೆಗಳನ್ನು ಕಟ್ಟಿದರು. ಆ ವಿಜಯೀ ಮತ್ತು ಎಲ್ಲ ರಾಜರಲ್ಲಿ ಶ್ರೇಷ್ಠರಾಜರಾದ ಛತ್ರಪತಿ ಶಿವಾಜಿ ಮಹಾರಾಜರು ರಾಯರಿ ಕೋಟೆಯಲ್ಲಿ ವಾಸ ಮಾಡಿದರು.

**ಸಾಗರ ಕೋಟೆಗಳು:** ಮಹಾರಾಜರು ಸಾಗರಕೋಟೆಗಳ ಮಹತ್ವವನ್ನು ಗುರುತಿಸಿದರು. ಅವರು ಕಟ್ಟಿದ ಜಲದುರ್ಗಗಳಲ್ಲಿ ಮಾಲವಣದ ಸಿಂಧೂದುರ್ಗವು ಒಂದು ಉತ್ಕೃಷ್ಟವಾದ ಸಾಗರ ಕೋಟೆಯಾಗಿದೆ. ಈ ಕೋಟೆಯು ಹೆಚ್ಚು ಗಟ್ಟಿಮುಟ್ಟಾಗಿ ಆಗಬೇಕೆಂಬ ದೃಷ್ಟಿಯಿಂದ ಅಡಿಪಾಯವನ್ನು ಹಾಕುವಾಗ ಐದು ಖಂಡಿ ಸೀಸನ್ನು ಹಾಕುವ ವ್ಯವಸ್ಥೆ ಮಾಡಿದ್ದರು. ಅವರು ಸಿದ್ದಿಯನ್ನು ಸಮರ್ಥವಾಗಿ ಎದುರಿಸುವ ಸಲುವಾಗಿ ರಾಜಾಪುರಿಯ ಎದುರಿಗೆ ಪದ್ಮದುರ್ಗ ಎಂಬ ಹೆಸರಿನ ಸಾಗರ ಕೋಟೆಯನ್ನು ನಿರ್ಮಿಸಿದರು. ಈ ಕೋಟೆಯ ವಿಷಯವಾಗಿ ತಮ್ಮ ಒಂದು ಪತ್ರದಲ್ಲಿ ಮಹಾರಾಜರು, 'ಪದ್ಮದುರ್ಗವನ್ನು ಕಟ್ಟಿ ರಾಜಾಪುರಿಯನ್ನು ಎದುರಿಸಲು ಇನ್ನೊಂದು ರಾಜಾಪುರಿಯನ್ನು ನಿರ್ಮಿಸಿದೆವು' ಎಂದು ಹೇಳುತ್ತಾರೆ.



ಪದ್ಮದುರ್ಗ ಕೋಟೆ

**ನೌಕಾಪಡೆ:** ಭಾರತದ ಪಶ್ಚಿಮ ಕರಾವಳಿಯಲ್ಲಿ ಗೋವಾದ ಪೋರ್ತುಗೀಜರು, ಜಂಜೀರಾದ ಸಿದ್ದಿ ಅದರಂತೆ ಸೂರತ ಮತ್ತು ರಾಜಾಪೂರದಲ್ಲಿಯ ಇಂಗ್ಲಿಷ ವ್ಯಾಪಾರಿಗಳು ಸ್ವರಾಜ್ಯ ವಿಸ್ತಾರದ ಕಾರ್ಯದಲ್ಲಿ ಅಡೆತಡೆಗಳನ್ನು ತರುತ್ತಿದ್ದರು. ಈ ಅಡೆತಡೆಗಳನ್ನು ತಡೆಗಟ್ಟುವುದು ಮತ್ತು ಪಶ್ಚಿಮ ಕರಾವಳಿ ತೀರದ ರಕ್ಷಣೆ ಮಾಡುವುದು ಅವಶ್ಯಕವಾಗಿತ್ತು. ಅದಕ್ಕಾಗಿ ಮಹಾರಾಜರು ನೌಕಾಪಡೆಯನ್ನು ಸ್ಥಾಪಿಸಿದರು. 'ಯಾರಲ್ಲಿ ನೌಕಾಪಡೆ ಇದೆಯೋ ಅವರದೇ ಸಮುದ್ರ' ಎಂಬುದನ್ನು ಅವರು ಗುರುತಿಸಿದರು. ಮಹಾರಾಜರು ದೂರದೃಷ್ಟಿಯುಳ್ಳವರಾಗಿದ್ದರು.

ಮಹಾರಾಜರ ನೌಕಾಪಡೆಯಲ್ಲಿ ವಿವಿಧ ಪ್ರಕಾರದ ನಾಲ್ಕುನೂರು ನೌಕೆಗಳಿದ್ದವು. ಅವುಗಳಲ್ಲಿ ಗುರಾಬ, ಗಲಬತ ಮತ್ತು ಪಾಲ ಇವು ಯುದ್ಧ ನೌಕೆಗಳಾಗಿದ್ದವು. ಕಲ್ಯಾಣ, ಭಿವಂಡಿಯ ಕೊಲ್ಲಿ, ವಿಜಯದುರ್ಗ, ಮಾಲವಣ ಎಂಬ ಸ್ಥಳಗಳಲ್ಲಿ ಹಡಗು ಕಟ್ಟಲಾಗುತ್ತಿತ್ತು. ಮಾಯನಾಕ ಭಂಡಾರಿ ಮತ್ತು ದೌಲತಖಾನ ಇವರು ನೌಕಾಪಡೆಯ ಪ್ರಮುಖ ಅಧಿಕಾರಿಗಳಾಗಿದ್ದರು.



ಗುರಾಬ



ಗಲಬತ

**ಮಾಡಿ ನೋಡೋಣ.**

ಭಾರತೀಯ ಹಡಗುಪಡೆಯಲ್ಲಿಯ ಯುದ್ಧನೌಕೆಗಳ ಮಾಹಿತಿಯನ್ನು ಪಡೆಯಿರಿ ಮತ್ತು ಹಡಗುಗಳ ಚಿತ್ರಗಳನ್ನು ಸಂಗ್ರಹಿಸಿರಿ.

**ಪ್ರಜಾಹಿತದ ಕಾಳಜಿ:** ಇತರ ರಾಜರಂತೆ ಶತ್ರುವಿನ ಅಂಕಿತದಲ್ಲಿರುವ ಪ್ರದೇಶಗಳನ್ನು ಗೆಲ್ಲಬೇಕು ಹಾಗೂ ಅಲ್ಲಿ ತಮ್ಮ ವರ್ಚಸ್ಸನ್ನು ಸ್ಥಾಪಿಸಬೇಕು, ಇಷ್ಟು ಸೀಮಿತ ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡು ಮಹಾರಾಜರು ಕಾರ್ಯಮಾಡಲಿಲ್ಲ. ಪ್ರಜೆಗಳನ್ನು ಸ್ವತಂತ್ರಗೊಳಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು. ಪ್ರಜೆಗಳಿಗೆ ಸ್ವಾತಂತ್ರ್ಯದ ನಿಜವಾದ ಆನಂದ ದೊರೆಯಬೇಕಾದರೆ ರಾಜ್ಯಾಡಳಿತವು ಶಿಸ್ತುಬದ್ಧವಾಗಿರಬೇಕು, ಪ್ರಜೆಗಳ ಹಿತದ ಸರ್ವಾಂಗೀಣ ಕಾಳಜಿ ವಹಿಸಬೇಕು ಹಾಗೂ ಗೆದ್ದ ಪ್ರದೇಶಗಳ ರಕ್ಷಣೆ ಮಾಡಬೇಕು ಎಂಬುದರ ಪ್ರಜ್ಞೆ ಅವರಿಗಿತ್ತು. ಮಹಾರಾಜರು ಕೇವಲ ಅಧಿಕಾರಶಾಹಿ ರಾಜರಾಗಿರಲಿಲ್ಲ, ಪ್ರಜಾಹಿತದಕ್ಷ ಆಡಳಿತರಾಗರಾಗಿದ್ದರೆಂಬುದು ಅವರ ರಾಜ್ಯಾಡಳಿತದಿಂದ ಸ್ಪಷ್ಟವಾಗುತ್ತದೆ.

## ಅಭ್ಯಾಸ

**1. ಗುರುತಿಸಿರಿ ನೋಡೋಣ.**

(1) ಎಂಟು ಖಾತೆಗಳ ಮಂಡಳ –

(2) ಬಹಿರ್ಜಿ ನಾಯಿಕ ಈ ಖಾತೆಯ ಪ್ರಮುಖರಾಗಿದ್ದರು –

(3) ಮಹಾರಾಜರು ಕಟ್ಟಿದ್ದ ಮಾಲವಣ ಹತ್ತಿರದ ಸಾಗರ ಕೋಟೆ –

(4) ಕೋಟೆಯಲ್ಲಿ ಯುದ್ಧ ಸಾಮಗ್ರಿಗಳ ವ್ಯವಸ್ಥೆಯನ್ನು ನೋಡಿಕೊಳ್ಳುವವ –

**2. ನಿಮ್ಮ ಶಬ್ದಗಳಲ್ಲಿ ಬರೆಯಿರಿ.**

(1) ಶಿವಾಜಿ ಮಹಾರಾಜರ ಕೃಷಿ ವಿಷಯದ ಧೋರಣೆ


(2) ಶಿವರಾಯರು– ಒಬ್ಬ ಪ್ರಜಾಹಿತ ದಕ್ಷ ಆಡಳಿತಗಾರರು

**3. ಏಕೆ ಎಂಬುದನ್ನು ಹೇಳಿರಿ.**

(1) ಶಿವಾಜಿ ಮಹಾರಾಜರು ಅಷ್ಟಪ್ರಧಾನ ಮಂಡಳವನ್ನು ಸ್ಥಾಪಿಸಿದರು.

(2) ಶಿವಾಜಿ ಮಹಾರಾಜರು ನೌಕಾಪಡೆಯನ್ನು ಸ್ಥಾಪಿಸಿದರು.

**4. ಕೆಳಗಿನ ಫ್ಲೋ ಚಾರ್ಟ್ ಪೂರ್ಣ ಮಾಡಿರಿ.**




**ಉಪಕ್ರಮ:**

(1) ನಿಮ್ಮ ಪರಿಸರದಲ್ಲಿರುವ ಭಾರತೀಯ ಸೈನ್ಯದಲ್ಲಿ ಕೆಲಸ ಮಾಡಿದ ವ್ಯಕ್ತಿಯನ್ನು ಸಂದರ್ಶಿಸಿರಿ.

(2) ನಿಮ್ಮ ಊರಲ್ಲಿಯ ಮಾರುಕಟ್ಟೆಗೆ ಭೇಟಿ ನೀಡಿ ಪರಿಸರದಲ್ಲಿ ತಯಾರಾಗುವ ವಸ್ತುಗಳು ಮತ್ತು ಹೊರಗಿನಿಂದ ಮಾರಾಟಕ್ಕೆ ಬಂದ ವಸ್ತುಗಳ– ಇವುಗಳ ಪಟ್ಟಿಯನ್ನು ತಯಾರಿಸಿರಿ.

BXPHVH



ಸಿಂಧುದುರ್ಗ ಕೋಟೆ

# 8. ಆದರ್ಶ ರಾಜ

ಸ್ವರಾಜ್ಯ ಸ್ಥಾಪನೆಯ ಮೊದಲು ಮಹಾರಾಷ್ಟ್ರದಲ್ಲಿ ಆದಿಲಶಾಹಿ, ಸಿದ್ದಿ, ಪೋರ್ತುಗೀಜ ಮತ್ತು ಮುಘಲ ಆಡಳಿತಗಾರರ ವರ್ಚಸ್ಸು ಇತ್ತು. ಅವರ ಆಡಳಿತದ ವಿರುದ್ಧ ಶಿವಾಜಿ ಮಹಾರಾಜರು ಹೋರಾಟ ಮಾಡಿದರು. ಅವರು ಎಲ್ಲ ಪ್ರಕಾರದ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿದರು. ಅವರು ಸ್ವತಂತ್ರ ಹಾಗೂ ಸಾರ್ವಭೌಮ ಸ್ವರಾಜ್ಯದ ಸ್ಥಾಪನೆ ಮಾಡಿದರು. ಈ ಸ್ವರಾಜ್ಯದ ಆಡಳಿತದ ವ್ಯವಸ್ಥೆಯನ್ನು ಅವರು ಮಾಡಿದರು. ಸ್ವರಾಜ್ಯವನ್ನು ಸುರಾಜ್ಯವನ್ನಾಗಿ ಮಾಡಿದರು. ಮಹಾರಾಜರು ತಮ್ಮ ಕರ್ತೃತ್ವದಿಂದ ಹೊಸ ಸೃಷ್ಟಿಯನ್ನೇ ನಿರ್ಮಿಸಿದರು. ಸ್ವರಾಜ್ಯ ಸ್ಥಾಪನೆಯ ಸಲುವಾಗಿ ಹೋರಾಡುವಾಗ ಮಹಾರಾಜರು ಅನೇಕ ಗಂಡಾಂತರಗಳನ್ನು ಎದುರಿಸಿದರು. ಅಫಜಲಖಾನನ ಭೇಟಿಯ ಪ್ರಸಂಗ, ಪನ್ಹಾಳಾದ ಮುತ್ತಿಗೆ, ಶಾಯಿಸ್ತಾಖಾನನ ಮೇಲಿನ ದಾಳಿ, ಆಗ್ರಾದಿಂದ ಮಾಡಿಕೊಂಡ ಬಿಡುಗಡೆ ಈ ಎಲ್ಲ ಪ್ರಸಂಗಗಳು ಬಹಳಷ್ಟು ಗಂಡಾಂತರದ್ದಾಗಿದ್ದವು. ಅವರು ಈ ಎಲ್ಲಪ್ರಸಂಗಗಳನ್ನುಸಮರ್ಥವಾಗಿ ಎದುರಿಸಿದರು. ಅವುಗಳಿಂದ ಅವರು ಸುಖರೂಪವಾಗಿ ಹೊರಬಂದರು.



**ಆಲೋಚಿಸಿರಿ.**

ಜೀವಕ್ಕೆ ಜೀವ ಕೊಡುವ ಸಹಕಾರಿಗಳಿರುವುದಿಂದಲೇ ಶಿವಾಜಿ ಮಹಾರಾಜರು ಸ್ವರಾಜ್ಯವನ್ನು ಸ್ಥಾಪಿಸಲು ಸಾಧ್ಯವಾಯಿತು.

ಮಿತ್ರತ್ವದ ಮಹತ್ವವನ್ನು ಸಾರುವ ವಿವಿಧ ಭಾಷೆಗಳಲ್ಲಿಯ ಗಾದೆ ಮಾತುಗಳು ಮತ್ತು ಪಡೆನುಡಿಗಳನ್ನು ಹುಡುಕಿರಿ. ಉದಾ., A friend in need is a friend indeed.

**ಸಂಘಟನಾ ಚಾತುರ್ಯ:** ಸ್ವರಾಜ್ಯ ಕಾರ್ಯಕ್ಕಾಗಿ ಮಹಾರಾಜರು ತಮ್ಮ ಸುತ್ತಮುತ್ತಲಿನ ಜನರಿಗೆ ಪ್ರೇರಣೆ ನೀಡಿದರು. ಅವರಲ್ಲಿ ವಿಲಕ್ಷಣ ಸಂಘಟನಾ ಚಾತುರ್ಯವಿತ್ತು. ಆ ಚಾತುರ್ಯದ ಬಲದಿಂದ ಅವರು ತಮ್ಮ ಸುತ್ತ ಶೂರ ಮತ್ತು ಜೀವಕ್ಕೆ ಜೀವಕೊಡುವ ಜನರನ್ನು ಒಂದುಗೂಡಿಸಿದರು. ಸ್ವರಾಜ್ಯದ ಕಾರ್ಯದಲ್ಲಿ ಅವರ ಈ ಸಹಕಾರಿಗಳು ತಮ್ಮ ಪ್ರಾಣದ ಪರಿವೆಯಿಲ್ಲದೆ ತಮ್ಮ ಕರ್ತವ್ಯವನ್ನು ಪೂರ್ಣಮಾಡಿದರು. ಅಫಜಲಖಾನನ ಭೇಟಿಯ ಪ್ರಸಂಗದಲ್ಲಿ ಅತ್ಯಂತ ಸಂಕಟದ ಕ್ಷಣದಲ್ಲಿ ಬಡಾಸಯ್ಯದ ಇವನನ್ನು ಕೊಲ್ಲುವ ಜಿವಾ ಮಹಾಲಾ, ಪನ್ಹಾಳಗಡದ ಮುತ್ತಿಗೆಯಿಂದ ಪಾರಾಗಿ ಹೋಗುವಾಗ ಶಿವಾಜಿ ಮಹಾರಾಜರ ಪಾತ್ರವನ್ನು ವಹಿಸಿದ ಶಿವಾ ಕಾಶೀದ, ಮಹಾರಾಜರು ವಿಶಾಲಗಡದ ಕಡೆಗೆ ಹೋಗುವಾಗ ಅವರನ್ನು ಬೆನ್ನಟ್ಟುವ ಶತ್ರುಗಳನ್ನು ದಾರಿಯಲ್ಲಿ ತಡೆದು ನಿಲ್ಲಿಸುವ ಬಾಜೀಪ್ರಭು ದೇಶಪಾಂಡೆ, ಪುರಂದರದ ಕೋಟೆಗಾಗಿ ಹೋರಾಡುವ ಮುರಾರಬಾಜಿ ದೇಶಪಾಂಡೆ, ಸಿಂಹಗಡವನ್ನು ಗೆಲ್ಲುವ ಸಲುವಾಗಿ ಪ್ರಾಣವನ್ನರ್ಪಿಸಿದ ತಾನಾಜಿ ಮಾಲುಸರೆ, ಮಹಾರಾಜರು ಆಗ್ರಾದಿಂದ ಬಿಡುಗಡೆಯಾಗುವಾಗ ತನ್ನ ಜೀವವನ್ನು ಗಂಡಾಂತರದಲ್ಲಿ ಸಿಲುಕಿಸುವ ಹೀರೊಜಿ ಫರ್ಜಂದ ಮತ್ತು ಮದಾರಿ ಮೆಹತರ ಮುಂತಾದ ಅನೇಕ ಉದಾಹರಣೆಗಳು ಸ್ವರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಕಂಡುಬರುತ್ತವೆ. ಮಹಾರಾಜರು ತಮ್ಮ ಸಹಕಾರಿಗಳ ಕಾಳಜಿವಹಿಸುತ್ತಿದ್ದರು. ಉದಾಹರಣೆಗಾಗಿ ಸ್ವರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಕಾನ್ಹೋಜಿ ಜೇಧೆ ಇವರು ಆರಂಭದಿಂದಲೂ ಮಹಾರಾಜರ ಜೊತೆಯಲ್ಲಿದ್ದರು. ಇಳಿವಯಸ್ಸಿನಲ್ಲಿ ಅವರು ಕಾಯಿಲೆಬಿದ್ದರು. ಆಸಮಯದಲ್ಲಿಮಹಾರಾಜರು ಅವರಿಗೆ 'ಔಷಧೋಪಚಾರದಲ್ಲಿ ಯಾವುದೇ ರೀತಿಯ ದುರ್ಲಕ್ಷ್ಯ ಮಾಡಬಾರದು' ಎಂದು ಹೇಳಿದರು.

**ಜನತೆಯ ಕಾಳಜಿ:** ಸ್ವರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಶತ್ರುಗಳೊಡನೆ ಮಹಾರಾಜರ ಹೋರಾಟ ನಡೆದಿತ್ತು. ಶತ್ರುಗಳ ದಾಳಿಯಿಂದಾಗಿ ಪ್ರಜೆಗಳು ತೊಂದರೆ ಗೀಡಾಗುತ್ತಿದ್ದರು. ಇಂಥ ಸಮಯದಲ್ಲಿ ಹೆಚ್ಚಿಗೆ ಹೆಚ್ಚು ಪ್ರಜೆಗಳ ಕಾಳಜಿವಹಿಸುವ ಪ್ರಯತ್ನವನ್ನು ಮಹಾರಾಜರು ಮಾಡುತ್ತಿದ್ದರು. ಶಾಯಿಸ್ತಾಖಾನನ ದಾಳಿಯ ಸಮಯದಲ್ಲಿ ಪ್ರಜೆಗಳ ಬಗೆಗಿನ ತಮ್ಮ ಕರ್ತವ್ಯವನ್ನು ನಿರ್ವಹಿಸುವಂತೆ ರೋಹಿಡಖೋರಾದ ದೇಶಮುಖನಿಗೆ ಮಹಾರಾಜರು ಎಚ್ಚರಿಕೆ ನೀಡಿದರು. ಊರೂರು ಸಂಚರಿಸಿ ಘಟ್ಟದ ಕೆಳಗೆ ಎಲ್ಲೆಲ್ಲಿ ಸುರಕ್ಷಿತ ಸ್ಥಳವಿದೆಯೋ ಅಲ್ಲಲ್ಲಿ ಜನರನ್ನು ಕರೆದೊಯ್ಯಲು ಆ ದೇಶಮುಖನಿಗೆ ಅವರು ಹೇಳಿದರು. ಈ ಕಾರ್ಯದಲ್ಲಿ 'ಒಂದು ಕ್ಷಣವೂ ವಿಲಂಬ ಮಾಡಬಾರದು' ಎಂಬ ಎಚ್ಚರಿಕೆಯನ್ನು ನೀಡಿದರು. 'ಒಂದು ವೇಳೆ ಪ್ರಜೆಗಳ ಕಾಳಜಿ ವಹಿಸದಿದ್ದರೆ ಮುಘಲ ಸೈನ್ಯಬಂದು ಜನರನ್ನು ಬಂಧಿಸಬಹುದು ಹಾಗೂ ಅದರ ಪಾಪವು ನಿಮಗೆ ತಗಲುವುದು' ಎಂಬ ಕಠೋರ ಎಚ್ಚರಿಕೆಯನ್ನು ಅವನಿಗೆ ಕೊಟ್ಟರು. ತಮ್ಮ ಸೈನಿಕರಿಂದಾಗಿ ಪ್ರಜೆಗಳಿಗೆ ತೊಂದರೆಯಾಗಬಾರದೆಂದು ಮಹಾರಾಜರು ಕಾಳಜಿ ವಹಿಸುತ್ತಿದ್ದರು.

**ಸೈನ್ಯವಿಷಯದ ನೀತಿ:** ಮಹಾರಾಜರ ಸೈನ್ಯದ ಶಿಸ್ತು ಕಠೋರವಾಗಿತ್ತು. ಸೈನಿಕರಿಗೆ ನಿಯಮಿತ ವೇಳೆಗೆ ಸರಿಯಾಗಿ ವೇತನವನ್ನು ಕೊಡಬೇಕು ಎಂಬುದರ ಕಡೆಗೆ ಅವರು ವಿಶೇಷ ಗಮನ ಹರಿಸುತ್ತಿದ್ದರು. ಅವರು ಸೈನಿಕರಿಗೆ ನಗದು ರೂಪದಲ್ಲಿ ಸಂಬಳವನ್ನು ಕೊಡುವ ವ್ಯವಸ್ಥೆ ಮಾಡಿದರು. ಮಧ್ಯಯುಗೀನ ಭಾರತದ ಅನೇಕ ರಾಜ್ಯಗಳಲ್ಲಿ ಮತ್ತು ಇತರೆಡೆ ಸೈನಿಕರಿಗೆ

ನಗದು ಸಂಬಳದ ಬದಲಾಗಿ ಜಹಗೀರುಗಳನ್ನು ನೀಡುವ ಪದ್ಧತಿಯಿತ್ತು. ಮಹಾರಾಜರು ಈ ಪದ್ಧತಿಯನ್ನು ರದ್ದುಗೊಳಿಸಿದರು. ಅವರ ಸೈನ್ಯವು ಯಾವಾಗ ಶತ್ರುಗಳ ಪ್ರದೇಶದಲ್ಲಿ ಹೋಗುತ್ತಿತ್ತೋ ಆಗ ಸೈನಿಕರು ತಮಗೆ ದೊರೆತುದೆಲ್ಲವನ್ನು ಸರಕಾರಕ್ಕೆ ಒಪ್ಪಿಸುವಂತೆ ಸೈನ್ಯಕ್ಕೆ ಎಚ್ಚರಿಕೆ ನೀಡಲಾಗಿತ್ತು. ದಂಡಯಾತ್ರೆಯ ಸಮಯದಲ್ಲಿ ಪರಾಕ್ರಮವನ್ನು ತೋರಿಸಿದ್ದಕ್ಕಾಗಿ ಸೈನಿಕರನ್ನು ಗೌರವಿಸಲಾಗುತ್ತಿತ್ತು. ಯುದ್ಧದಲ್ಲಿ ವೀರಮರಣವನ್ನು ಹೊಂದಿದ ಸೈನಿಕರ ಕುಟುಂಬದವರ ಉದರ ನಿರ್ವಾಹದ ಕಾಳಜಿಯನ್ನು ಅವರು ವಹಿಸುತ್ತಿದ್ದರು. ಗಾಯಗೊಂಡ ಸೈನಿಕರ ಕಾಳಜಿಯನ್ನೂ ಅವರು ವಹಿಸುತ್ತಿದ್ದರು. ಯುದ್ಧದಲ್ಲಿ ಶರಣಾಗತರಾದ ಸೈನಿಕರನ್ನು ಅಥವಾ ಸೆರೆಸಿಕ್ಕ ಸೈನಿಕರನ್ನು ಒಳ್ಳೆಯ ರೀತಿಯಿಂದ ನೋಡಿಕೊಳ್ಳಲಾಗುತ್ತಿತ್ತು.

**ಸಹಿಷ್ಣುತೆಯ ವರ್ತನೆ:** ಮಹಾರಾಜರಿಗೆ ಯಾವ ರಾಜರೊಡನೆ ಹೋರಾಟ ಮಾಡಬೇಕಾಯಿತೋ, ಅವರಲ್ಲಿ ಆದಿಲಶಾಹ, ಮುಘಲ ಮತ್ತು ಸಿದ್ದಿ ಇವೆಲ್ಲ ಇಸ್ಲಾಮಿ ಆಡಳಿತಗಳಾಗಿದ್ದವು. ಆದರೆ ಅವರೊಡನೆ ಹೋರಾಡುವಾಗ ಮಹಾರಾಜರು ಸ್ವರಾಜ್ಯದಲ್ಲಿಯ ಮುಸಲ್ಮಾನರನ್ನು ತಮ್ಮ ಪ್ರಜೆಗಳೆಂದು ತಿಳಿದರು. ಅಫಜಲಖಾನನ ಭೇಟಿಯ ಸಮಯದಲ್ಲಿ ಮಹಾರಾಜರ ಸೈನ್ಯದಲ್ಲಿ ಸಿದ್ದಿ ಇಬ್ರಾಹಿಂ ಎಂಬ ವಿಶ್ವಾಸಾರ್ಹ ಸೇವಕನಿದ್ದನು. ಸಿದ್ದಿ ಹಿಲಾಲ ಇವನು ಮಹಾರಾಜರ ಸೈನ್ಯದಲ್ಲಿಯ ಸರದಾರನಾಗಿದ್ದನು. ಸ್ವರಾಜ್ಯದ ನೌಕಾಪಡೆಯಲ್ಲಿ ದೌಲತಖಾನ ಎಂಬ ಮಹತ್ವದ ಅಧಿಕಾರಿಯಿದ್ದನು.

ಮಹಾರಾಜರು ಪರಧರ್ಮ ಸಹಿಷ್ಣುತೆಯ ನೀತಿಯನ್ನು ಹೊಂದಿದ್ದರು. ಶತ್ರುಗಳಿಂದ ಯಾವುದೊಂದು ಪ್ರದೇಶವನ್ನು ಗೆದ್ದುಕೊಂಡಾಗ ಅಲ್ಲಿಯ ಮುಸ್ಲಿಂ ಧರ್ಮಸ್ಥಳಗಳಿಗೆ ಇರುವ ಹಿಂದಿನ ಸವಲತ್ತುಗಳನ್ನು ಹಾಗೆಯೇ ಮುಂದುವರಿಸುತ್ತಿದ್ದರು. ಅವರ ಧರ್ಮ ಸಹಿಷ್ಣುತೆಯ ಧೋರಣೆಯ ವಿಷಯವಾಗಿ ಸಮಕಾಲೀನ ಇತಿಹಾಸಕಾರ ಖಾಫೀಖಾನನು ಹೀಗೆ ಬರೆಯುತ್ತಾನೆ. ''ದಾಳಿಯ ಸಮಯದಲ್ಲಿ ಸೈನಿಕರು ಮಸೀದಿಗಳಿಗೆ ಧಕ್ಕೆಯನ್ನುಂಟುಮಾಡಬಾರದು. ಕುರ್‌ಆನ್‌ದ ಪ್ರತಿ ಕೈಗೆ ಸಿಕ್ಕರೆ ಅದನ್ನು ಪೂಜ್ಯಭಾವನೆಯಿಂದ ಮುಸಲ್ಮಾನ ವ್ಯಕ್ತಿಗೆ ತಲುಪಿಸಬೇಕು ಎಂಬ ಕಠೋರ ನಿಯಮವನ್ನು ಶಿವಾಜಿ ಮಹಾರಾಜರು ತಮ್ಮ ಸೈನಿಕರಿಗಾಗಿ ಮಾಡಿದ್ದರು.''

**ಸ್ವಾತಂತ್ರ್ಯದ ಪ್ರೇರಣೆ:** ಶಿವಾಜಿ ಮಹಾರಾಜರ ಸ್ವರಾಜ್ಯ ಸ್ಥಾಪನೆಯ ಪ್ರಯತ್ನಗಳಿಗೆ ಒಂದು ವಿಶೇಷ ಮೌಲ್ಯವಿದೆ. ಆ ಮೌಲ್ಯವೇ ಸ್ವಾತಂತ್ರ್ಯದ ಮೌಲ್ಯ. ಬೇರೆ ಯಾವುದೇ ಪ್ರಭುತ್ವದ ವರ್ಚಸ್ಸನ್ನು ಮನ್ನಿಸದೆ ತಮ್ಮದಾದ ಸ್ವತಂತ್ರ ಮತ್ತು ಸಾರ್ವಭೌಮ ಅಸ್ತಿತ್ವವನ್ನು ಕಾಯ್ದಿಡುವುದೇ ಅದರ ಹಿಂದಿನ ಉದ್ದೇಶವಾಗಿದೆ. ಪರಕೀಯ ಮತ್ತು ಅನ್ಯಾಯದ ಆಡಳಿತದ ವಿರುದ್ಧ ಹೋರಾಡುವಾಗ ಮಹಾರಾಜರು ಇತರರಿಗೂ ಸ್ವಾತಂತ್ರ್ಯದ ಪ್ರೇರಣೆಯನ್ನು ನೀಡಿದರು. ಮುಘಲರ ಸೇವೆಯಲ್ಲಿದ್ದ ಛತ್ರಸಾಲನು ಮಹಾರಾಜರಿಗೆ ಭೇಟಿಯಾದಾಗ ಅವರು ಅವನಿಗೆ ಬುಂದೇಲಖಂಡದ ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವ ಪ್ರೇರಣೆಯನ್ನು ನೀಡಿದರು.

**ಮಹಾರಾಜರ ಕಾರ್ಯದ ಮಹತಿ:** ಮಹಾರಾಜರು ಅನೇಕ ಶತ್ರುಗಳೊಡನೆ ಸಂಘರ್ಷ ಮಾಡುತ್ತ ಸ್ವರಾಜ್ಯದ ಸ್ಥಾಪನೆ ಮಾಡಿದರು. ಈ ಕೃತಿಯೇ ಅವರ ಯುಗ ಪ್ರವರ್ತಕತೆಯನ್ನು ಸಿದ್ಧಮಾಡುತ್ತದೆ. 'ಆದರೆ ಈ ಕೃತಿಯಲ್ಲಿದೆ ಅವರ ವ್ಯಕ್ತಿತ್ವದಲ್ಲಿ ಇತರ ಅನೇಕ ಸದ್ಗುಣಗಳ ಸಮುಚ್ಚಯ ಕಂಡುಬರುತ್ತದೆ.



**ಗೊತ್ತಿದೆಯೇ ನಿಮಗೆ?**

ಬೀಜಗಳನ್ನು ಬಿತ್ತುವ, ಸಸಿಗಳನ್ನು ನೆಡುವ ಮತ್ತು ಬೀಜಗಳು ನಾಟುವ ಸಮಯದಲ್ಲಿ ಯುದ್ಧ ಆರಂಭವಾದರೆ ರೈತರ ದುಃಖಕ್ಕೆ ಮಿತಿ ಇರುತ್ತಿರಲಿಲ್ಲ. ಸೈನ್ಯದ ಚಟುವಟಿಕೆಗಳು ಬಿತ್ತನೆಯ ಕಾರ್ಯದಲ್ಲಿ ಅಡೆತಡೆಯನ್ನು ತರುತ್ತಿದ್ದವಲ್ಲದೆ ಕೆಲವೊಮ್ಮೆ ಸೈನಿಕರು ನಿಂತ ಬೆಳೆಗಳನ್ನೆ ಕೊಯ್ದುಕೊಂಡು ಹೋಗುತ್ತಿದ್ದರು ಇಲ್ಲವೆ ನಾಶಪಡಿಸುತ್ತಿದ್ದರು. ರೈತರ ಮನೆಗಳನ್ನು ಲೂಟಿ ಮಾಡುತ್ತಿದ್ದರು. ತಮ್ಮ ಸೈನಿಕರು ಇಂಥ ಕೃತ್ಯಗಳನ್ನು ಮಾಡದಂತೆ ನೋಡಿಕೊಳ್ಳಬೇಕೆಂಬ ಆಜ್ಞೆಯನ್ನು ಮಹಾರಾಜರು ಅಧಿಕಾರಿಗಳಿಗೆ ನೀಡಿದ್ದರು. ಈ ಸಂದರ್ಭದಲ್ಲಿ ಕ್ರಿ.ಶ. 1674 ರಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಸೈನ್ಯಾಧಿಕಾರಿಗಳನ್ನು ಉದ್ದೇಶಿಸಿ ಬರೆದ ಪತ್ರವು ತುಂಬಾ ಅಮೂಲ್ಯವಾಗಿದೆ. ಮಹಾರಾಜರು ಸೈನ್ಯದಲ್ಲಿಯ ಶಿಸ್ತಿನ ವಿಷಯವಾಗಿ ಎಷ್ಟು ಸೂಕ್ಷ್ಮ ವಿಚಾರ ಮಾಡುತ್ತಿದ್ದರೆಂಬುದು ಇದರಿಂದ ತಿಳಿದುಬರುತ್ತದೆ.

''ವಿಲಾತೀಸ ತಸವೀಸ ದೇವೂ ಲಾಗಾಲ; ಐಶಾಸ, ಲೋಕಾ ಜಾತಿ, ಕೋಣ್ಹೆ ಕುಣಬ್ಯಾಚೆ ದಾನೆ ಆಣೇಲ, ಕೋಣ್ಹೆ ಭಾಕರ, ಕೋಣ್ಹೆ ಗವತ, ಕೋಣ್ಹೆ ಫಾಟೆ, ಕೋಣ್ಹೆ ಭಾಜಿ, ಕೋಣ್ಹೆ ಪಾಲೆ, ಐಸೆ ಕರೂಲಾಗಲೇತ ಮ್ಹಣಜೆ ಜೀ ಕುಣಬಿ ಘರ ಧರೂನ ಜೀವ ಮಾತ್ರ ಘೇವೂನ ರಾಹಿಲೆ ಆಹೇತ ತೇಹಿ ಜಾವೂ ಲಾಗತೀಲ ಕಿತ್ಯೇಕ ಉಪಾಶಿ ಮರಾಯಾ ಲಾಗತೀಲ. ಮ್ಹಣಜೆ ತ್ಯಾಲಾ ಐಸೆ ಹೋಯಿಲಕಿ ಮೊಗಲ ಮುಲಕಾತ ಆಲೆ ತ್ಯಾಹೂನಹೀ ಅಧಿಕ ತುಮ್ಹಿ! ಐಸಾ ತಳತಳಾಟ ಹೋಯಿಲ.''

(ರೈತರಿಗೆ ತೊಂದರೆ ಕೊಡಬೇಡಿ. ಯಾರು ರೈತರ ಧಾನ್ಯಗಳನ್ನು ಕದ್ದು ತರುವರು, ಯಾರು ರೊಟ್ಟಿಯನ್ನು, ಯಾರು ಹುಲ್ಲನ್ನು ತರುವರು, ಯಾರು ಕಾಯಿಪಲ್ಲೆ ತರುವರು ಹೀಗೆ ನೀವು ಮಾಡತೊಡಗಿದರೆ ಮೊದಲೇ ಕಷ್ಟದಲ್ಲಿರುವ ರೈತರು ರಾಜ್ಯವನ್ನು ಬಿಟ್ಟು ಹೋಗುವರು. ಅನೇಕರು ಹೊಟ್ಟೆಗಿಲ್ಲದೆ ಸಾಯುವರು. ಅಂದರೆ ಮೊಗಲರ ರಾಜ್ಯಕ್ಕಿಂತ ಅಧಿಕ ತೊಂದರೆ ಈ ರಾಜ್ಯದಲ್ಲಿ ನಿಮ್ಮಿಂದ ಆದೀತು).

ಮಹಾರಾಜರು ಅತ್ಯಂತ ಬುದ್ಧಿವಂತರಾಗಿದ್ದರು. ಅವರು ಅನೇಕ ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದರು. ಅವರಿಗೆ ಅನೇಕ ಭಾಷೆ ಮತ್ತು ಲಿಪಿಗಳು ಬರುತ್ತಿದ್ದವು. ತಂದೆ-ತಾಯಿಗಳು ಮಾಡಿದ ಸ್ವರಾಜ್ಯ ಸ್ಥಾಪನೆಯ ಮತ್ತು ನೈತಿಕತೆಯ ಸಂಸ್ಕಾರಗಳು ಅವರ ಮನದಾಳದಲ್ಲಿ ಅಂಕುರಿಸಿದ್ದವು. ಅವರ ವ್ಯಕ್ತಿತ್ವದಲ್ಲಿ ಚಾರಿತ್ರ್ಯ ಮತ್ತು ಸಾಮರ್ಥ್ಯ, ಶೀಲ ಮತ್ತು ಪರಾಕ್ರಮ ಇವುಗಳ ಸಮನ್ವಯವಾಗಿತ್ತು. ಅವರಲ್ಲಿ ನೇತೃತ್ವ ವ್ಯವಸ್ಥಾಪನೆ, ದೂರದೃಷ್ಟಿ, ರಾಜಕೀಯ ಮುತ್ಸದ್ದಿತನ, ನಾಗರಿಕ ಮತ್ತು ಸೈನಿಕ ಆಡಳಿತದ ವಿಷಯದ ಪ್ರಭಾವಿ ಧೋರಣೆ, ಸತ್ಯ ಮತ್ತು ನ್ಯಾಯಗಳ ಮೇಲಿನ ನಿಷ್ಠೆ, ಎಲ್ಲರನ್ನೂ ಸಮಾನವಾಗಿ ನೋಡಿಕೊಳ್ಳುವ ಭಾವನೆ, ಭವಿಷ್ಯದಲ್ಲಿಯ ಸಂಗತಿಗಳ ರೂಪುರೇಷೆಯನ್ನು ತಯಾರಿಸುವ ಯೋಜನೆ, ಪ್ರಸ್ತಾಪಿತ ಯೋಜನೆಗಳನ್ನು ಪೂರ್ಣಮಾಡುವ ಕೌಶಲ್ಯ, ಸಂಕಟ ಸಮಯದಲ್ಲಿ ಎದೆಗುಂದದೆ ಮುನ್ನುಗ್ಗಿ ಹೋಗುವ ನಿರ್ಧಾರ, ಸದೈವ ಜಾಗೃತರಾಗಿ ಇರುವ ಅರಿವು ಇತ್ಯಾದಿ ಅಸಂಖ್ಯ ಗುಣಗಳಿದ್ದವು.

ಸ್ತ್ರೀಯರ ವಿಷಯದಲ್ಲಿ ಯಾರಾದರೂ ಅನುಚಿತ ವರ್ತನೆ ಮಾಡಿದರೆ ಅವರಿಗೆ ಕಠೋರ ಶಿಕ್ಷೆಯನ್ನು ವಿಧಿಸುತ್ತಿದ್ದರು. ಅವರು ಪ್ರಜೆಗಳಲ್ಲಿಯ ರೈತರು, ಕುಶಲಕರ್ಮಿಗಳು, ಸೈನಿಕರು, ವ್ಯಾಪಾರಿಗಳು ಮುಂತಾದ ಎಲ್ಲ ವರ್ಗಗಳ ಕಾಳಜಿ ವಹಿಸುತ್ತಿದ್ದರು. ಸ್ವಧರ್ಮದಲ್ಲಿಯ ವ್ಯಕ್ತಿಗಳಂತೆ ಪರಧರ್ಮದಲ್ಲಿಯ ವ್ಯಕ್ತಿಗಳ ವಿಷಯದಲ್ಲಿ ಭೇದಭಾವ ಮಾಡದೆ ಅವರನ್ನು ಆದರದಿಂದ ಕಾಣುತ್ತಿದ್ದರು. ಧರ್ಮಾಂತರ ಹೊಂದಿದ ವ್ಯಕ್ತಿಗಳಿಗೆ ಸ್ವಧರ್ಮಕ್ಕೆ ಹಿಂತಿರುಗಲು ನಿರ್ಬಂಧವಿದ್ದ ಕಾಲದಲ್ಲಿ ಅವರು ಅಂಥ ವ್ಯಕ್ತಿಗಳಿಗೆ ಸ್ವಧರ್ಮಕ್ಕೆ ಹಿಂತಿರುಗಲು ಅನುಮತಿ ನೀಡಿದರು. ಕೆಲವೊಮ್ಮೆ ಅವರ ಜೊತೆ ತಮ್ಮ ಸಂಬಂಧವನ್ನು ಬೆಳೆಸಿದರು. ಧಾರ್ಮಿಕ ಕಾರಣದಿಂದಾಗಿ ಸಮುದ್ರ ಪ್ರಯಾಣಕ್ಕೆ ವಿರೋಧವಿದ್ದ ಕಾಲದಲ್ಲಿ ಅವರು ಸಿಂಧುದುರ್ಗದಂತಹ ಜಲದುರ್ಗಗಳನ್ನು ಕಟ್ಟಿದರು ಹಾಗೂ ನೌಕಾಪಡೆಯ ನಿರ್ಮಿತಿ ಮಾಡಿದರು. ಸಮುದ್ರ ಮಾರ್ಗದಿಂದ ಆಗುವ ಬಾಹ್ಯ ಆಕ್ರಮಣಗಳನ್ನು ಗಮನಿಸಿ ಅವರು ಅದಕ್ಕೆ ಉಪಾಯವನ್ನು ಸಿದ್ಧಪಡಿಸಿದ್ದರು ಎಂಬುದು ಇದರಿಂದ ಅರ್ಥವಾಗುತ್ತದೆ. ಅವರು ರಾಜ್ಯಾಭಿಷೇಕದ ಮೂಲಕ ಅಧಿಕೃತ ರಾಜರಾದರು. ಅವರು ಒಂದು ರಾಜ್ಯಾಭಿಷೇಕದ ನಂತರ ಧಾರ್ಮಿಕ ದೃಷ್ಟಿಯಿಂದ ಭಿನ್ನವಾದ ಎರಡನೆಯ ರಾಜ್ಯಾಭಿಷೇಕ ಮಾಡಿಸಿಕೊಂಡರು. ಅವರ ಈ ಎಲ್ಲ ಕೃತಿಗಳು ಅವರ ಧಾರ್ಮಿಕ ಕ್ಷೇತ್ರದಲ್ಲಿಯ ಕ್ರಾಂತಿಕಾರಿ ವಿಚಾರಗಳನ್ನು ತೋರಿಸುತ್ತವೆ.

ಸ್ವರಾಜ್ಯದ ಮೇಲೆ ಯಾವಾಗ ಪ್ರಾಣಘಾತರ ಸಂಕಟಗಳು ಬರುತ್ತಿದ್ದವೋ ಆಗ ಸಹಕಾರಿಗಳ ಬದಲಾಗಿ ಅಥವಾ ಅವರ ಜೊತೆ ಅವರು ಸಂಕಟಗಳನ್ನು ಎದುರಿಸುತ್ತಿದ್ದರು. ಹೀಗಾಗಿ ಅವರ ಸಹಕಾರಿಗಳು ಕೂಡ ಸ್ವರಾಜ್ಯಕ್ಕಾಗಿ ತಮ್ಮ ಪ್ರಾಣವನ್ನು ಅರ್ಪಿಸಲು ಸಿದ್ಧರಾಗಿರುತ್ತಿದ್ದರು. ಆದರೆ ಕೇವಲ ಇಂಥ ದೊಡ್ಡ ಸಂಕಟಗಳನ್ನು ಧೈರ್ಯದಿಂದ ಮತ್ತು ನಿರ್ಭಯರಾಗಿ ಎದುರಿಸುವುದರಲ್ಲಿಯೇ ಅವರ ದೊಡ್ಡಸ್ತಿಕೆ ಇರಲಿಲ್ಲ. ಅವರಿಗೆ ತಮ್ಮ ಸ್ವರಾಜ್ಯಕ್ಕೆ ನೈತಿಕತೆಯ ಮತ್ತು ಗುಣಮಟ್ಟದ ಆಧಾರ ಕೊಡುವುದಿತ್ತು. ಆದ್ದರಿಂದಲೇ ಮಹತ್ವದ ಸಂಗತಿಗಳ ಜೊತೆ ಚಿಕ್ಕಚಿಕ್ಕ ಸಂಗತಿಗಳ ವಿಷಯದಲ್ಲಿಯೂ ಅವರು ಸಂಬಂಧಿತ ವ್ಯಕ್ತಿಗಳಿಗೆ ಆಜ್ಞೆಗಳನ್ನು ನೀಡಿದ್ದು ಕಂಡುಬರುತ್ತದೆ. ಸೈನಿಕರು ರೈತರ ಹೊಲದಲ್ಲಿಯ ಕಾಯಿಪಲ್ಲೆಯನ್ನು ಕೂಡ ಒತ್ತಾಯದಿಂದ ತೆಗೆದುಕೊಳ್ಳಬಾರದು, ಈ ಅರ್ಥದ ಆಜ್ಞೆಯು ಆ ದೃಷ್ಟಿಯಿಂದ ಆದರ್ಶವಾದ ಆಜ್ಞೆಯಾಗಿದೆ. ಅವರು ಗಿಡಗಳನ್ನು ಕಡಿಯುವದರ ಮೇಲೆ ಹಾಕಿದ ನಿರ್ಬಂಧಗಳು ಕೂಡ ಮಹತ್ವದ್ದಾಗಿವೆ.



**ಆಲೋಚಿಸಿರಿ.**

ವೃಕ್ಷ ಸಂವರ್ಧನವು ಏಕೆ ಅವಶ್ಯಕವಾಗಿದೆ ?

ಕೋಟೆಯಲ್ಲಿಯ ಕಸವನ್ನು ಅತ್ತಿತ್ತ ಎಸೆಯದೆ ಹಿತ್ತಲಿನಲ್ಲಿ ಸುಡಬೇಕು ಹಾಗೂ ಅದರ ಬೂದಿಯನ್ನು ಹಾಕಿ ಕಾಯಿಪಲ್ಲೆಗಳನ್ನು ಬೆಳೆಸಬೇಕು ಎಂಬುದು ಅವರ ಆದೇಶವಾಗಿತ್ತು. ಅವರು ಸ್ವರಾಜ್ಯ ಸ್ಥಾಪಿಸುವಾಗ ಚಿಕ್ಕ-ಪುಟ್ಟ ಸಂಗತಿಗಳ ಕಡೆಗೆ ಲಕ್ಷ್ಯಕೊಡುತ್ತಿದ್ದರೆಂಬುದು ಇದರ ಮೇಲಿಂದ ಸ್ಪಷ್ಟವಾಗುತ್ತದೆ. ಅವರು ಕೇವಲ ಯೋಧರಾಗಿರಲಿಲ್ಲ, ಆದರೆ ಅವರು ಒಂದು ಹೊಸ, ಸ್ವತಂತ್ರ, ನೀತಿವಂತ ಹಾಗೂ ಸುಸಂಸ್ಕೃತ ಸಮಾಜವನ್ನು ನಿರ್ಮಿಸುವ ಶಿಲ್ಪಿಯಾಗಿದ್ದರು. ಅವರ ಮಹತಿಯು ಸರ್ವಾಂಗೀಣವಾಗಿದೆ.



**ಹೇಳಿ ನೋಡೋಣ!**

- ನಿಮ್ಮ ಪರಿಸರದಲ್ಲಿಯ ಕಸದ ವ್ಯವಸ್ಥಾಪನೆಯ ಹೇಗೆ ಆಗುತ್ತದೆ?
- ಕಸದ ವ್ಯವಸ್ಥಾಪನೆ ಮಾಡುವ ವ್ಯವಸ್ಥೆಯ ಹೆಸರು ಹೇಳಿರಿ.

ನಮ್ಮ ರಾಷ್ಟ್ರೀಯ ಚಳವಳಿಯಲ್ಲಿ ಮಹಾರಾಜರು ಒಂದು ದೊಡ್ಡ ಪ್ರೇರಣಾ ಸ್ಥಾನವಾಗಿದ್ದರು. ಮಹಾತ್ಮಾ ಜ್ಯೋತಿರಾವ ಫುಲೆ ಇವರು ಸಮತೆಯ ಸಂಘರ್ಷದಲ್ಲಿ ಲಾವಣಿಯ ಮುಖಾಂತರ ಮಹಾರಾಜರ ಮಹತಿಯನ್ನು ಹೇಳಿದ್ದಾರೆ.

### ಗೊತ್ತಿದೆಯೇ ನಿಮಗೆ?

ಮಹಾತ್ಮಾ ಜ್ಯೋತಿರಾವ ಫುಲೆ ಇವರು ಛತ್ರಪತಿ ಶಿವಾಜಿ ಮಹಾರಾಜರ ಮೇಲೆ ಕ್ರಿ.ಶ. 1869 ರಲ್ಲಿ ಒಂದು ಲಾವಣಿಯನ್ನು ರಚಿಸಿದರು. ಅದರ ಕೆಲವು ಭಾಗವನ್ನು ಇಲ್ಲಿ ಕೊಡಲಾಗಿದೆ.

॥ ಶಿವಾಚಾ ಗಜರ ಜಯನಾಮಾಚಾ ಝೆುಂಡಾ ರೋವಿಲಾ ॥<br>
॥ ಕ್ಷೇತ್ರ್ಯಾಚಾ ಮೇಳಾ ಮಾವಳ್ಯಾಚಾ ಶಿಕಾರ ಖೇಳಲಾ ॥<br>
ಮಾತೆಪಾಯೀ ಠೇವಿ ಡೋಯಿ ಗರ್ವ ನಾಹಿ ಕಾಡೀಚಾ ।<br>
ಆಶೀರ್ವಾದ ಘೇಯಿ ಆಯೀಚಾ ॥<br>
ಆಲಾಬಳಾ ಘೇಯಿ ಆವಡತಾ ಹೋತೊ ಜಿಜೀಚಾ ।<br>
ಪವಾಡಾ ಗಾತೊ ಶಿವಾಜೀಚಾ ॥<br>
ಕುಳವಾಡಿ-ಭೂಷಣ ಪವಾಡಾ ಗಾತೊ ಭೋಸಲ್ಯಾಚಾ ।<br>
ಛತ್ರಪತಿ ಶಿವಾಜೀಚಾ ॥

(ಮಾವಳೆಗಳ ಜೊತೆ ಆಟವಾಡಿದರು. ತಾಯಿಯ ಪಾದಗಳ ಮೇಲೆ ತಲೆಯಿಟ್ಟು ನಮಸ್ಕರಿಸಿದರು. ಸ್ವಲ್ಪವೂ ಗರ್ವ ಅವರಲ್ಲಿ. ತಾಯಿಯ ಆಶೀರ್ವಾದವನ್ನು ಪಡೆದರು. ಭೋಸಲೆ ಕುಲಕ್ಕೆ ಭೂಷಣರಾದ ಛತ್ರಪತಿ ಶಿವಾಜಿಯ ಲಾವಣಿಯನ್ನು ನಾನು ಹಾಡುತ್ತೇನೆ).

ಲೋಕಮಾನ್ಯ ಟಿಳಕರು ಶಿವಾಜಯಂತಿ ಉತ್ಸವದ ಮೂಲಕ ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡಿದರು. ಶಿವಚರಿತ್ರೆಯ ಮಹತಿಯನ್ನು ಸಾರುವ ಪುಸ್ತಕವನ್ನು ಲಾಲಾ ಲಜಪತರಾಯರು ಬರೆದಿದ್ದಾರೆ. ಶಿವಾಜಿ ಮಹಾರಾಜರು ತಮ್ಮ ಸಹಕಾರಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದಾರೆ ಎಂಬ ಪ್ರಸಂಗವನ್ನು ಊಹಿಸಿ ತಮಿಳು ಕಾವ್ಯದ ಪಿತಾಮಹರಾದ ಸುಬ್ರಮಣ್ಯಂ ಭಾರತೀಯವರು ಕಾವ್ಯರಚನೆ ಮಾಡಿದ್ದಾರೆ. ವಿಶ್ವಕವಿ ರವೀಂದ್ರನಾಥ ಟಾಗೋರರು ಮಹಾರಾಜರ ಬಗ್ಗೆ ಒಂದು ದೀರ್ಘ ಕವಿತೆಯನ್ನು ಬರೆದಿದ್ದಾರೆ. ಮಹಾರಾಜರ ರಾಜ್ಯಸಾಧನೆಯ ಪ್ರಯತ್ನವನ್ನು 'ಒಂದು ಮಹಾನ್ ಧ್ಯೇಯ ಸಾಧನೆಯ ಪ್ರಯತ್ನ'ವೆಂದು ನೋಡುತ್ತಾರೆ. ಸರ ಜದುನಾಥ ಸರಕಾರ ಇವರು 'ಶಿವಾಜಿ ಆ್ಯಂಡ್ ಹೀಜ ಟೈಮ್ಸ್' ಎಂಬ ಗ್ರಂಥದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಕಾರ್ಯವನ್ನು ಗೌರವಿಸಿದ್ದಾರೆ. ಪಂಡಿತ ಜವಾಹರಲಾಲ ನೆಹರೂರವರು ಮಹಾರಾಜರ ವಿಷಯವಾಗಿ 'ಮಹಾರಾಜರು ಕೇವಲ ಮಹಾರಾಷ್ಟ್ರದವರಾಗಿರಲಿಲ್ಲ. ಅವರು ಸಂಪೂರ್ಣ ರಾಷ್ಟ್ರದವರಾಗಿದ್ದರು.... ನಮ್ಮ ದೇಶದ ಮೇಲೆ ಅವರಿಗೆ ಅಪಾರ ಪ್ರೇಮವಿತ್ತು. ಅವರು ಮಾನವೀ ಸದ್ಗುಣಗಳ ಸಾಕಾರಮೂರ್ತಿಯಾಗಿದ್ದರು.' ಎಂದು ಹೇಳಿದ್ದಾರೆ. ಭಾರತದಲ್ಲಿಯ ಎಲ್ಲ ಭಾಷೆಗಳಲ್ಲಿ ಮಹಾರಾಜರ ಪ್ರೇರಣೆ ಮತ್ತು ಆದರ್ಶವನ್ನು ಸಾರುವ ಸಾಹಿತ್ಯವು ನಿರ್ಮಾಣವಾಗಿದೆ.

ಶಿವಾಜಿ ಮಹಾರಾಜರ ಈ ಸ್ವರಾಜ್ಯಕಾರ್ಯದ ಮತ್ತು ಅದನ್ನು ಸ್ವರಾಜ್ಯದಲ್ಲಿ ರೂಪಾಂತರ ಮಾಡುವ ಪ್ರೇರಣೆಯು ಭಾವೀ ಪೀಳಿಗೆಗೂ ಆದರ್ಶವಾಗಲಿದೆ. ಶಿವಾಜಿ ಮಹಾರಾಜರು ಒಬ್ಬ ಮಹಾನ್ ರಾಷ್ಟ್ರಪುರುಷರಾಗಿದ್ದರು.

BXYSXA

## ಅಭ್ಯಾಸ

**1. ಪಾಠದಲ್ಲಿ ಹುಡುಕಿ ಬರೆಯಿರಿ.**

(1) ಶಿವಾಜಿ ಮಹಾರಾಜರ ಆಯುಷ್ಯದಲ್ಲಿಯ ಗಂಡಾಂತರದ ಪ್ರಸಂಗಗಳು ಯಾವವು ?

(2) ಶಿವಾಜಿ ಮಹಾರಾಜರು ಆಗ್ರಾದಿಂದ ಬಿಡುಗಡೆಯಾಗುವಾಗ ತನ್ನ ಜೀವವನ್ನು ಗಂಡಾಂತರದಲ್ಲಿ ಸಿಲುಕಿಸುವ ವ್ಯಕ್ತಿ ಯಾರು ?

(3) ರೋಹಿಡಖೋರಾದ ದೇಶಮುಖನಿಗೆ ಶಿವಾಜಿ ಮಹಾರಾಜರು ಯಾವ ಎಚ್ಚರಿಕೆ ನೀಡಿದರು ?

(4) ಶಿವಾಜಿ ಮಹಾರಾಜರ ಯಾವ ಪ್ರೇರಣೆಯು ಭಾವೀ ಪೀಳಿಗೆಗೆ ಆದರ್ಶವಾಗಲಿದೆ ?

**2. ಉತ್ತರ ಬರೆಯಿರಿ.**

(1) ಪ್ರಜೆಗಳಿಗೆ ಹಾನಿಯಾಗಬಾರದೆಂದು ಶಿವರಾಯರು ಸೈನಿಕರಿಗೆ ಯಾವ ಎಚ್ಚರಿಕೆ ನೀಡಿದರು ?

(2) ಶಿವಾಜಿ ಮಹಾರಾಜರು ಪರಧರ್ಮ ಸಹಿಷ್ಣುತೆಯ ನೀತಿಯನ್ನು ಹೊಂದಿದ್ದರು ಎಂಬುದು ಯಾವ ಸಂಗತಿಯಿಂದ ತಿಳಿದುಬರುತ್ತದೆ ?

(3) ಶಿವಾಜಿ ಮಹಾರಾಜರ ಸೈನ್ಯ ವಿಷಯದ ನೀತಿಯನ್ನು ಸ್ಪಷ್ಟಪಡಿಸಿರಿ.

**3. ಒಂದು ಶಬ್ದದಲ್ಲಿ ಉತ್ತರ ಬರೆಯಿರಿ.**

(1) ಸ್ವರಾಜ್ಯದ ನೌಕಾಪಡೆಯಲ್ಲಿ ಮಹತ್ವದ ಅಧಿಕಾರಿ-

(2) ಶಿವಾಜಿ ಮಹಾರಾಜರ ಮೇಲೆ ಕಾವ್ಯವನ್ನು ರಚಿಸಿದ ತಮಿಳು ಕವಿ-

(3) ಬುಂದೇಲಖಂಡದಲ್ಲಿ ಸ್ವತಂತ್ರ ರಾಜ್ಯವನ್ನು ನಿರ್ಮಿಸಿದವ -

(4) ಲಾವಣಿಯ ಮುಖಾಂತರ ಶಿವಾಜಿ ಮಹಾರಾಜರ ಮಹತಿಯನ್ನು ಹೇಳಿದವರು -

**ಉಪಕ್ರಮ:**

(1) ಅಡಚಣೆಯ ಪ್ರಸಂಗದಲ್ಲಿ ಗೆಳೆಯನಿಗೆ/ಗೆಳತಿಗೆ ಮಾಡಿದ ಸಹಾಯವನ್ನು ವರ್ಗದಲ್ಲಿ ವಿವರಿಸಿರಿ.

(2) ವ್ಯಕ್ತಿಯ ಹೆಸರಿನ ಮೇಲಿಂದ ಬಂದಿರುವ ಊರು, ಪಟ್ಟಣಗಳ ಪಟ್ಟಿಯನ್ನು ತಯಾರಿಸಿರಿ.

# 9. ಮರಾಠರ ಸ್ವಾತಂತ್ರ್ಯ ಸಂಗ್ರಾಮ

ಛತ್ರಪತಿ ಶಿವಾಜಿ ಮಹಾರಾಜರ ಮರಣದ ನಂತರ ಸ್ವರಾಜ್ಯದ ರಕ್ಷಣೆಗಾಗಿ ಮರಾಠರು ಛತ್ರಪತಿ ಸಂಭಾಜಿ ಮಹಾರಾಜ, ಛತ್ರಪತಿ ರಾಜಾರಾಮ ಮಹಾರಾಜ ಹಾಗೂ ಮಹಾರಾಣಿ ತಾರಾಬಾಯಿ ಇವರ ನೇತೃತ್ವದಲ್ಲಿ ಮುಘಲರೊಡನೆ ತೀವ್ರ ಹೋರಾಟ ಮಾಡಿದರು. ಇಪ್ಪತ್ತೇಳು ವರ್ಷಗಳ ಈ ದೀರ್ಘ ಹೋರಾಟಕ್ಕೆ 'ಮರಾಠರ ಸ್ವಾತಂತ್ರ್ಯ ಸಂಗ್ರಾಮ' ಎನ್ನುತ್ತಾರೆ. ಕ್ರಿ.ಶ. 1682 ರಲ್ಲಿ ಸ್ವತಃ ಔರಂಗಜೇಬ ಬಾದಶಾಹನು ದಕ್ಷಿಣದ ಕಡೆಗೆ ಏರಿಬಂದನು. ಆದರೂ ಕೂಡ ಮುಘಲರೊಂದಿಗಿನ ಈ ಹೋರಾಟದಲ್ಲಿ ಅನೇಕ ಅಡಚಣೆಗಳನ್ನು ಎದುರಿಸುತ್ತ ಮರಾಠರು ಜಯಶಾಲಿಗಳಾದರು. ಈ ಸ್ವಾತಂತ್ರ್ಯ ಸಂಗ್ರಾಮವು ಭಾರತದ ಇತಿಹಾಸದಲ್ಲಿಯ ಒಂದು ರೋಮಾಂಚಕಾರಿ ಮತ್ತು ತೇಜಸ್ವಿ ಪರ್ವವಾಗಿದೆ. ನಾವು ಈ ಪಾಠದಲ್ಲಿ ಈ ಸ್ವಾತಂತ್ರ್ಯ ಸಂಗ್ರಾಮದ ಅಭ್ಯಾಸ ಮಾಡುವವರಿದ್ದೇವೆ.

ಇಲ್ಲಿ 'ಮರಾಠಾ' ಈ ಶಬ್ದವು 'ಮರಾಠಿ ಭಾಷೆಯನ್ನು ಮಾತನಾಡುವವರು' ಅಥವಾ 'ಮಹಾರಾಷ್ಟ್ರದ ಜನರು ಎಂಬ ಅರ್ಥದಲ್ಲಿ ಇದೆ.

**ಮಾಡಿ ನೋಡಿರಿ.**

ನಾನು ಸಂಭಾಜಿರಾಜೆ ಮಾತಾಡ್ತೇನಿ.....
ಪಾತ್ರಾಭಿನಯ ಮಾಡಿರಿ.



**ಛತ್ರಪತಿ ಸಂಭಾಜಿ ಮಹಾರಾಜರು**

**ಛತ್ರಪತಿ ಸಂಭಾಜಿ ಮಹಾರಾಜರು:** ಸಂಭಾಜಿ ಮಹಾರಾಜರು ಛತ್ರಪತಿ ಶಿವಾಜಿ ಮಹಾರಾಜರ ಜ್ಯೇಷ್ಠ ಪುತ್ರರಾಗಿದ್ದರು. 14 ಮೇ 1657 ರಂದು ಪುರಂದರ ಕೋಟೆಯಲ್ಲಿ ಅವರು ಜನಿಸಿದರು. ಶಿವಾಜಿ ಮಹಾರಾಜರ ನಂತರ ಅವರು ಛತ್ರಪತಿಯಾದರು. ಆ ಸಮಯದಲ್ಲಿ ಮುಘಲರೊಂದಿಗೆ ಮರಾಠರ ಸಂಘರ್ಷ ನಡೆದಿತ್ತು. ಇಂಥ ಪರಿಸ್ಥಿತಿಯಲ್ಲಿ ಔರಂಗಜೇಬನ ಮಗನಾದ ಶಾಹಜಾದಾ ಅಕಬರನು ತನ್ನ ತಂದೆಯ ವಿರುದ್ಧ ಬಂಡೆದ್ದನು. ಬಾದಶಾಹನು ಈ ಬಂಡನ್ನು ಸದೆಬಡಿದನು. ನಂತರ ಅಕಬರನು ದಕ್ಷಿಣದಲ್ಲಿ ಸಂಭಾಜಿ ಮಹಾರಾಜರ ಆಶ್ರಯಕ್ಕೆ ಬಂದನು. ಅವನ ದಮನ ಮಾಡುವುದಕ್ಕಾಗಿ ಬಾದಶಾಹನು ಸ್ವತಃ ಕ್ರಿ.ಶ. 1682 ರಲ್ಲಿ ದಕ್ಷಿಣದ ಕಡೆಗೆ ಬಂದನು. ಅವನ ಜೊತೆ ಪ್ರಚಂಡವಾದ ಸೈನ್ಯ ಮತ್ತು ಬಲಾಢ್ಯ ತೋಪುಖಾನೆಯಿತ್ತು. ಮರಾಠರ ವಿರುದ್ಧ ದಂಡೆತ್ತಿ ಬರುವಂತೆ ಅವನು ಜಂಜೀರಾದ ಸಿದ್ದಿಗೆ ಹೇಳಿದನು. ತನ್ನ ಕಡೆಗೆ ಪೋರ್ತುಗೀಜರ ಮನವನ್ನು ಒಲಿಸಿಕೊಂಡನು. ಇದರಿಂದಾಗಿ ಏಕಕಾಲಕ್ಕೆ ಅನೇಕ ಶತ್ರುಗಳನ್ನು ಎದುರಿಸುವ ಪ್ರಸಂಗ ಸಂಭಾಜಿ ಮಹಾರಾಜರ ಮೇಲೆ ಬಂದಿತು.

ಸಂಭಾಜಿ ಮಹಾರಾಜರ ಆಳ್ವಿಕೆಯು ಶಿವಾಜಿ ಮಹಾರಾಜರ ನಂತರದ ಕಾಲದಲ್ಲಾದ ಮರಾಠರ ಸ್ವಾತಂತ್ರ್ಯ ಸಂಗ್ರಾಮದ ಪ್ರಥಮ ಪರ್ವವಾಗಿದೆ. ಮಹಾರಾಜರು ತಮ್ಮ ಆಡಳಿತ ಕಾಲದಲ್ಲಿಯೇ ಅವರಿಗೆ ಮುಲ್ಕಿ ರಾಜ್ಯಾಡಳಿತದ ಹಾಗೂ ಸೈನಿಕ ಕಾರ್ಯಾಚರಣೆಯ ಉತ್ಕೃಷ್ಟ ಶಿಕ್ಷಣವನ್ನು ನೀಡಿದ್ದರು. ವಯಸ್ಸಿನ ಹದಿನಾಲ್ಕನೆಯ ವರ್ಷದಿಂದ ಅವರು ರಾಜ್ಯಾಡಳಿತ ಮತ್ತು ಸೈನ್ಯದ ಅಧಿಪತ್ಯ ಇವುಗಳ ಕಡೆಗೆ ಲಕ್ಷ್ಯವಹಿಸತೊಡಗಿದರು. ರಾಜಕುಮಾರನಾಗಿದ್ದಾಗಲೇ ಅವರು ಮುಘಲರ ಮತ್ತು ಆದಿಲಶಾಹನ ಅನೇಕ ಪ್ರದೇಶಗಳ ಮೇಲೆ ದಾಳಿ ಮಾಡಿದ್ದರು.ಅವರ ಯುದ್ಧ ಕೌಶಲ್ಯವನ್ನು ವರ್ಣಿಸುತ್ತ ಆ ಕಾಲದ ಫ್ರೆಂಚ್ ಪ್ರವಾಸಿ ಆ್ಯಬೆ ಕ್ಯಾರೆ ಹೀಗೆ ಹೇಳುತ್ತಾನೆ. ''ಈ ರಾಜಕುಮಾರನು ಚಿಕ್ಕವನಾದರೂ ಧೈರ್ಯಶೀಲ ಮತ್ತು ತನ್ನ ತಂದೆಯ ಕೀರ್ತಿಗೆ ಶೋಭಿಸುವಂಥ ಪರಾಕ್ರಮಿಯಾಗಿದ್ದಾನೆ....''

ಸಂಭಾಜಿ ಮಹಾರಾಜರು ಛತ್ರಪತಿಯಾದ ಮೇಲೆ ಮುಘಲರೊಂದಿಗಿನ ಮರಾಠರ ಸಂಘರ್ಷ ಅಧಿಕ ತೀವ್ರವಾಯಿತು. ಕಾಬೂಲದಿಂದ ಹಿಡಿದು ಕನ್ಯಾಕುಮಾರಿಯ ವರೆಗೆ ಮುಘಲರ ಏಕಚಕ್ರಾಧಿಪತ್ಯವನ್ನು ನಿರ್ಮಾಣ ಮಾಡುವುದು ಔರಂಗಜೇಬನ ಉದ್ದೇಶವಾಗಿತ್ತು. ತನ್ನ ಪ್ರಚಂಡ ಸೈನ್ಯದ ಮತ್ತು ಆರ್ಥಿಕ ಶಕ್ತಿಯ ಬಲದಿಂದ ಮರಾಠರ ರಾಜ್ಯವನ್ನು ಸಂಪೂರ್ಣವಾಗಿ ಮುಳುಗಿಸಿ ಬಿಡಬೇಕೆಂಬುದು ಅವನ ಕನಸಾಗಿತ್ತು. ಆದರೆ ಸಂಭಾಜಿ ಮಹಾರಾಜರು ತಮ್ಮ ಪರಾಕ್ರಮ

ಮತ್ತು ಯುದ್ಧ ಕೌಶಲ್ಯದಿಂದ ಅವನ ಈ ಕನಸನ್ನು ಮಣ್ಣುಗೂಡಿಸಿದರು. ಅವರ ಸೈನಿಕ ಪಡೆಗಳು ಅನೇಕ ಮುಘಲ ಪ್ರದೇಶಗಳಲ್ಲಿ ದಾಳಿ ಮಾಡುತ್ತಿದ್ದವು. ಬಾದಶಹನ ಸೇನಾನಿಗಳು ದೀರ್ಘಕಾಲ ಪ್ರಯತ್ನ ಮಾಡಿಯೂ ಮರಾಠರ ನಾಶಿಕ ಹತ್ತಿರದ ರಾಮಸೇಜ ಕೋಟೆಯನ್ನು ಗೆಲ್ಲಲಾಗಲಿಲ್ಲ. ಈ ರೀತಿ ಸಂಭಾಜಿ ಮಹಾರಾಜರ ಪರಾಕ್ರಮದಿಂದಾಗಿ ಔರಂಗಜೇಬನು ಹತಬಲನಾಗಿದ್ದನು. ಹೀಗಾಗಿ ಅವನು ಅತ್ಯಂತ ಕುಪಿತನಾಗಿ ತನ್ನ ತಲೆಯ ಮೇಲಿನ ಪಗಡಿಯನ್ನು ತೆಗೆದು ನೆಲದ ಮೇಲೆ ಅಪ್ಪಳಿಸಿ ''ಈ ಸಂಭಾಜಿಯನ್ನು ಸೋಲಿಸುವವರೆಗೆ ನಾನು ಈ ಪಗಡಿಯನ್ನು ತಲೆಯ ಮೇಲೆ ಧರಿಸುವದಿಲ್ಲ.'' ಎಂಬ ಪ್ರತಿಜ್ಞೆಯನ್ನು ಮಾಡಿದನು. ಸಂಭಾಜಿ ಮಹಾರಾಜರು ಔರಂಗಜೇಬ ನನ್ನು ಇಷ್ಟು ಹತಬಲನನ್ನಾಗಿ ಮಾಡಿದ್ದರು.



**ಗೊತ್ತಿದೆಯೇ ನಿಮಗೆ ?**

ಮರಾಠರ ಕೋಟೆಗಳನ್ನು ಗೆದ್ದರೆ ಅವರ ರಾಜ್ಯವು ಕೊನೆಗೊಳ್ಳುವುದು ಎಂಬ ವಿಚಾರದಿಂದ ಔರಂಗಜೇಬನು ಆರಂಭದಲ್ಲಿ ನಾಶಿಕ ಹತ್ತಿರದ ರಾಮಸೇಜ ಕೋಟೆಗೆ ಮುತ್ತಿಗೆ ಹಾಕಿದನು. ಔರಂಗಜೇಬನ ಸೈನ್ಯ ದೊಡ್ಡದಾಗಿತ್ತು. ಮರಾಠರ ಸೈನಿಕರ ಸಂಖ್ಯೆಯು ಅತ್ಯಂತ ಕಡಿಮೆಯಿತ್ತು. ಆದರೆ ಅವರು ಅತ್ಯಂತ ಜಿಗುಟುತನದಿಂದ ಪ್ರತಿಭಟಿಸಿದರು. ಈ ಮುತ್ತಿಗೆಯು ಮುಂದೆ ಐದು ವರ್ಷಗಳ ವರೆಗೆ ಇತ್ತು. ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದ ಮರಾಠಿ ಸೈನಿಕರು ಮಾಡಿದ ಪರಾಕ್ರಮವು ಅದ್ವಿತೀಯವಾಗಿತ್ತು. ಮರಾಠರ ಈ ಜಿಗುಟುತನದ ಪ್ರತಿಭಟನೆಯಿಂದಾಗಿ ಅವರೊಡನೆ ಹೋರಾಡುವುದು ಕಠಿಣವಾಗಿದೆಯೆಂಬ ಅರಿವು ಔರಂಗಜೇಬನಿಗಾಯಿತು.

**ಸಿದ್ದಿ ವಿರುದ್ಧದ ದಾಳಿ:** ಜಂಜೀರಾದ ಸಿದ್ದಿಯು ಮರಾಠರ ಪ್ರದೇಶಗಳಲ್ಲಿ ಕಿರುಕುಳ ಕೊಡುತ್ತಿದ್ದನು. ಮರಾಠರ ಪ್ರದೇಶಗಳ ಮೇಲೆ ಆಕಸ್ಮಿಕ ದಾಳಿ ಮಾಡಿ ಅಲ್ಲಿ ಬೆಂಕಿ ಇಡುವುದಲ್ಲದೆ ಲೂಟಿ ಮತ್ತು ಅತ್ಯಾಚಾರ ಮಾಡುತ್ತಿದ್ದನು. ''ಮನೆಯಲ್ಲಿ ಇಲಿಗಳಿರುವಂತೆ ರಾಜ್ಯದಲ್ಲಿ ಸಿದ್ದಿ'' ಎಂದು ಸಭಾಸದನು ಅವನನ್ನು ವರ್ಣಿಸಿದ್ದಾನೆ. ಸಂಭಾಜಿ ಮಹಾರಾಜರು ಕ್ರಿ.ಶ. 1682 ರಲ್ಲಿ ಅವನ ವಿರುದ್ಧ ದಾಳಿಯನ್ನಾರಂಭಿಸಿದರು. ಅವರ ಸೈನ್ಯವು ಸಿದ್ದಿಯ ವಶದಲ್ಲಿದ್ದ ದಂಡಾರಾಜಪುರಿ ಎಂಬ ಕೋಟೆಗೆ ಮುತ್ತಿಗೆ ಹಾಕಿತು. ಹಾಗೂ ಜಂಜೀರಾದ ಮೇಲೆಯೂ ತೋಪುಗಳ ಸುರಿಮಳೆ ಮಾಡಿತು. ಆದರೆ ಅದೇ ವೇಳೆಗೆ ಮುಘಲರ ಸೈನ್ಯವು ಸ್ವರಾಜ್ಯದ ಮೇಲೆ ಏರಿಬಂದಿತು. ಆದರಿಂದಾಗಿ ಜಂಜೀರಾದ ದಾಳಿಯನ್ನು ಅರ್ಧಕ್ಕೆ ನಿಲ್ಲಿಸಿ ಸಂಭಾಜಿ ಮಹಾರಾಜರು ಹಿಂದಿರುಗ ಬೇಕಾಯಿತು.

**ಪೋರ್ತುಗೀಜರ ವಿರುದ್ಧ ದಾಳಿ:** ಗೋವಾದ ಪೋರ್ತುಗೀಜರು ಸಂಭಾಜಿ ಮಹಾರಾಜರ ವಿರುದ್ಧ ಬಾದಶಹನೊಂದಿಗೆ ಕೈಗೂಡಿಸಿದ್ದರು. ಆದ್ದರಿಂದ ಅವರು ಪೋರ್ತುಗೀಜರಿಗೆ ಪಾಠ ಕಲಿಸಬೇಕೆಂದು ನಿರ್ಧರಿಸಿದರು. ಅವರು ಕ್ರಿ.ಶ. 1683ರಲ್ಲಿ ಪೋರ್ತುಗೀಜರ ರೇವದಂಡಾ ಬಂದರದ ಮೇಲೆ ದಾಳಿ ಮಾಡಿದರು. ಇದಕ್ಕೆ ಪ್ರತ್ಯುತ್ತರವಾಗಿ ಪೋರ್ತುಗೀಜರು ಗೋವಾದ ಗಡಿಯಲ್ಲಿರುವ ಮರಾಠರ ಫೋಂಡಾ ಕೋಟೆಗೆ ಮುತ್ತಿಗೆ ಹಾಕಿದರು. ಮರಾಠರು ಈ ಮುತ್ತಿಗೆಯನ್ನು ಸಮರ್ಥವಾಗಿ ಎದುರಿಸಿ ಗೋವಾದ ಮೇಲೆ ಆಕ್ರಮಣ ಮಾಡಿದರು. ಈ ಯುದ್ಧದಲ್ಲಿ ಯೇಸಾಜಿ ಕಂಕ ಇವನು ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದನು. ಇದರಲ್ಲಿ ಪೋರ್ತುಗೀಜ ಗವ್ಹರ್ನರನು ಗಾಯಗೊಂಡನು. ಅವನು ಹಿಂಜರಿಯಬೇಕಾಯಿತು. ಸಂಭಾಜಿ ಮಹಾರಾಜರು ಅವನನ್ನು ಬೆನ್ನಟ್ಟಿದರು. ಪೋರ್ತುಗೀಜರು ದೊಡ್ಡ ಸಂಕಟದಲ್ಲಿ ಸಿಲುಕಿಕೊಂಡರು. ಅದೇ ಸಮಯದಲ್ಲಿ ಮುಘಲರು ದಕ್ಷಿಣ ಕೊಂಕಣದ ಮೇಲೆ ಆಕ್ರಮಣ ಮಾಡಿದ್ದಾರೆಂಬ ಸುದ್ದಿ ಸಂಭಾಜಿ ಮಹಾರಾಜರಿಗೆ ತಿಳಿಯಿತು. ಅದಕ್ಕಾಗಿ ಕೈಗೆ ಬಂದ ಗೋವಾದ ವಿಜಯವನ್ನು ಬಿಟ್ಟುಕೊಟ್ಟು ಅವರು ಮುಘಲರನ್ನು ಎದುರಿಸಲು ಹಿಂದಿರುಗಬೇಕಾಯಿತು.

**ಆದಿಲಶಾಹಿ ಮತ್ತು ಕುತುಬಶಾಹಿಗಳ ಅಂತ್ಯ:** ಔರಂಗಜೇಬನಿಗೆ ಮರಾಠರ ವಿರುದ್ಧದ ದಾಳಿಯಲ್ಲಿ ಯಶಸ್ಸು ದೊರೆತಿರಲಿಲ್ಲ. ಹೀಗಾಗಿ ಅವನು ಆ ದಾಳಿಯನ್ನು ನಿಲ್ಲಿಸಿದನು. ಆ ನಂತರ ಅವನು ತನ್ನ ದಾಳಿಯನ್ನು ಆದಿಲಶಾಹಿ ಮತ್ತು ಕುತುಬಶಾಹಿ ರಾಜ್ಯಗಳ ಕಡೆಗೆ ತಿರುಗಿಸಿದನು. ಔರಂಗಜೇಬನು ಆ ರಾಜ್ಯಗಳನ್ನು ಗೆದ್ದುಕೊಂಡನು.

ಈ ಎರಡೂ ರಾಜ್ಯಗಳ ಸಂಪತ್ತು ಮತ್ತು ಸೈನ್ಯವು ಮುಘಲರ ಕೈಗೆ ಬಂದುದರಿಂದ ಔರಂಗಜೇಬನ ಬಲ ಹೆಚ್ಚಿತು. ಆ ನಂತರ ಮರಾಠರನ್ನು ಸೋಲಿಸುವ ಸಲುವಾಗಿ ಅವನು ತನ್ನೆಲ್ಲ ಶಕ್ತಿಯನ್ನು ಒಂದುಗೂಡಿಸಿದನು. ಅವರ ಪ್ರದೇಶಗಳ ಮೇಲೆ ನಾಲ್ಕು ಬದಿಗಳಿಂದ ದಾಳಿ ಮಾಡಿದನು. ಮುಘಲ ಸೈನ್ಯವನ್ನು ಎದುರಿಸುತ್ತಿರುವಾಗ ಮರಾಠರ ಸೇನಾಪತಿಯಾದ ಹಂಬೀರರಾವ ಮೋಹಿತೆಯು ಕೊಲ್ಲಲ್ಪಟ್ಟನು. ಆದರಿಂದಾಗಿ ಸಂಭಾಜಿ ಮಹಾರಾಜರ ಸೈನ್ಯವು ಬಲಹೀನವಾಯಿತು.

**ಸಂಭಾಜಿ ಮಹಾರಾಜರ ಮುಲ್ಕಿ ಆಡಳಿತ:** ಸಂಭಾಜಿ ಮಹಾರಾಜರು ಯುದ್ಧದ ಗಲಿಬಿಲಿಯಲ್ಲಿ ತಮ್ಮ ಮುಲ್ಕಿ ರಾಜ್ಯಾಡಳಿತದ ಕಡೆಗೆ ದುರ್ಲಕ್ಷ್ಯ ಮಾಡಲಿಲ್ಲ. ಅವರು ಶಿವರಾಯರ ಕಾಲದಲ್ಲಿಯ ಉತ್ತಮ ನ್ಯಾಯ ಮತ್ತು ಕಂದಾಯ ವ್ಯವಸ್ಥೆಯನ್ನು ಹಾಗೆಯೇ ಮುಂದುವರಿಸಿದರು.

ಸ್ವರಾಜ್ಯದ ವಿರುದ್ಧ ದಂಗೆಯೆದ್ದವರಿಗೆ ಅದರಂತೆ ಸಾಮಾನ್ಯ ಪ್ರಜೆಗಳಲ್ಲಿ ತೊಂದರೆ ನೀಡುವ ವತನದಾರರಿಗೆ ಅವರು ಕಠಿಣ ಶಿಕ್ಷೆಯನ್ನು ವಿಧಿಸಿದರು. ಮಹಾರಾಣಿ ಯೇಸೂಬಾಯಿಯವರಿಗೆ ರಾಜ್ಯಾಡಳಿತದ ಅಧಿಕಾರ ನೀಡಿದರು. ಅವರಿಗೆ ಅವರದೇ ಆದ ಮುದ್ರೆಯನ್ನು ಮಾಡಿಸಿಕೊಟ್ಟರು. ಶಿವರಾಯರ ಜನಹಿತದ ನೀತಿಯನ್ನು ಅವರು ತಮ್ಮ ಆಡಳಿತಕಾಲವನ್ನು ಮುಂದುವರಿಸಿದರು.

ಸಂಭಾಜಿ ಮಹಾರಾಜರಿಗೆ ಸಂಸ್ಕೃತದ ಜೊತೆಗೆ ಅನೇಕ ಭಾಷೆಗಳು ಅವಗತವಾಗಿದ್ದವು. ಅವರು ಗ್ರಂಥಲೇಖನವನ್ನೂ ಮಾಡಿದ್ದಾರೆ. ರಾಜನೀತಿಯ ಮೇಲಿನ ಪ್ರಾಚೀನ ಭಾರತೀಯ ಗ್ರಂಥಗಳ ಅವಲೋಕನ ಮಾಡಿ ಅದರ ಸಾರವನ್ನು 'ಬುಧಭೂಷಣ' ಎಂಬ ಗ್ರಂಥದಲ್ಲಿ ಮಂಡಿಸಿದ್ದಾರೆ.

**ಗೊತ್ತಿದೆಯೇ ನಿಮಗೆ?**

ಸಂಭಾಜಿ ಮಹಾರಾಜರು 'ಬುಧಭೂಷಣಮ್' ಎಂಬ ಗ್ರಂಥವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದರು. ಅದರಲ್ಲಿಯ ಎರಡನೆಯ ಅಧ್ಯಾಯದಲ್ಲಿ ರಾಜನೀತಿ ವಿಷಯದ ಚರ್ಚೆಯಿದೆ. ಅದರಲ್ಲಿ ರಾಜನ ಲಕ್ಷಣಗಳು, ಪ್ರಧಾನ ಮಂತ್ರಿ, ರಾಜಕುಮಾರ, ಅವರ ಶಿಕ್ಷಣ ಮತ್ತು ಕಾರ್ಯಗಳು, ರಾಜನ ಸಲಹೆಗಾರ, ಕೋಟೆ ಮತ್ತು ಕೋಟೆಯಲ್ಲಿಯ ಸಲಕರಣೆಗಳು, ಸೈನ್ಯ, ರಾಜನ ಕರ್ತವ್ಯಗಳು, ಗುಪ್ತಚರ ವ್ಯವಸ್ಥೆ ಇತ್ಯಾದಿ ವಿಷಯಗಳ ಮಾಹಿತಿಯನ್ನು ನೀಡಲಾಗಿದೆ.

**ಸಂಭಾಜಿ ಮಹಾರಾಜರ ಸಾವು:** ಔರಂಗಜೇಬನು ಸಂಭಾಜಿ ಮಹಾರಾಜರನ್ನು ನಿಗ್ರಹಿಸುವ ಸಲುವಾಗಿ ವಿಶ್ವಪ್ರಯತ್ನವನ್ನು ಮಾಡುತ್ತಿದ್ದನು. ಅವನು ಕೊಲ್ಹಾಪೂರ ಪ್ರಾಂತದ ಮೇಲೆ ಮುಕರ್ರಬ್‌ಖಾನನನ್ನು ನೇಮಿಸಿದ್ದನು. ಸಂಭಾಜಿ ಮಹಾರಾಜರು ಕೊಂಕಣದಲ್ಲಿಯ ಸಂಗಮೇಶ್ವರ ಎಂಬಲ್ಲಿ ಇರುವರೆಂಬ ಸುದ್ದಿ ಮುಕರ್ರಬ್‌ಖಾನನಿಗೆ ತಿಳಿಯಿತು. ಆಗ ಅವನು ಅದಕ್ಕೆ ಮುತ್ತಿಗೆ ಹಾಕಿ ಸಂಭಾಜಿ ಮಹಾರಾಜರನ್ನು ಬಂಧಿಸಿದನು. ಅವರನ್ನು ಬಾದಶಾಹನ ಮುಂದೆ ತಂದ ನಂತರ ಅವನ ಮುಂದೆ ಅವರು ಸ್ವಾಭಿಮಾನದಿಂದ ವರ್ತಿಸಿದರು. ನಂತರ ಬಾದಶಾಹನ ಆಜ್ಞೆಯಂತೆ 11 ಮಾರ್ಚ 1689 ರಂದು ಅವರನ್ನು ಅತ್ಯಂತ ಅಮಾನುಷ ರೀತಿಯಿಂದ ಕೊಲೆ ಮಾಡಲಾಯಿತು. ಮರಾಠರ ಈ ಛತ್ರಪತಿಯು ಸ್ವಾಭಿಮಾನವನ್ನು ಬಿಡದೆ ಅತ್ಯಂತ ಧೀರೋದಾತ್ತವಾಗಿ ಸಾವನ್ನಪ್ಪಿದರು. ಅವರ ಬಲಿದಾನದಿಂದ ಪ್ರೇರಣೆಯನ್ನು ಪಡೆದು ಮರಾಠರು ಮುಘಲರ ವಿರುದ್ಧದ ಸಂಘರ್ಷವನ್ನು ಅಧಿಕ ತೀವ್ರಗೊಳಿಸಿದರು.



ಛತ್ರಪತಿ ರಾಜಾರಾಮ ಮಹಾರಾಜರು

**ಛತ್ರಪತಿ ರಾಜಾರಾಮ ಮಹಾರಾಜರು:** ರಾಜಾರಾಮ ಮಹಾರಾಜರು ಛತ್ರಪತಿ ಶಿವಾಜಿ ಮಹಾರಾಜರ ದ್ವಿತೀಯ ಪುತ್ರರಾಗಿದ್ದರು. 24 ಫೆಬ್ರುವರಿ 1670 ರಂದು ಅವರು ರಾಯಗಡದಲ್ಲಿ ಜನಿಸಿದರು. ಸಂಭಾಜಿ ಮಹಾರಾಜರ ಮರಣದ ನಂತರ ಅವರು ಛತ್ರಪತಿಗಳಾದರು. ಈಗ ಮರಾಠರ ರಾಜ್ಯವನ್ನು ಗೆದ್ದುಕೊಳ್ಳುವ ತನ್ನ ಕನಸು ನನಸಾಗಲಿದೆ ಎಂದು ಔರಂಗಜೇಬನಿಗೆ ಅನಿಸತೊಡಗಿತು ಆದ್ದರಿಂದ ಅವನು ರಾಯಗಡಕ್ಕೆ ಮುತ್ತಿಗೆ ಹಾಕುವ ಸಲುವಾಗಿ ಝುಲ್ಫಿಕಾರಖಾನನನ್ನು ಕಳಿಸಿದನು. ಆ ಸಮಯದಲ್ಲಿ ರಾಜಾರಾಮ ಮಹಾರಾಜರು ಮತ್ತು ಅವರ ಪತ್ನಿ ಮಹಾರಾಣಿ ತಾರಾಬಾಯಿ ಅದರಂತೆ ಸಂಭಾಜಿ ಮಹಾರಾಜರ ಪತ್ನಿ ಯೇಸೂಬಾಯಿ ಮತ್ತು ಅವರ ಪುತ್ರ ಶಾಹೂ ಇವರು ರಾಯಗಡದಲ್ಲಿಯೇ ಇದ್ದರು. ಇವರೆಲ್ಲರೂ ಒಂದೇ ಸ್ಥಳದಲ್ಲಿ ಇರುವುದು ಗಂಡಾಂತರಕಾರಿಯಾಗಿತ್ತು. ಈ ಪ್ರಸಂಗದಲ್ಲಿ ಯೇಸೂಬಾಯಿಯವರು ಅಭೂತಪೂರ್ವ ಸಂಕಟವನ್ನು ಧೈರ್ಯದಿಂದ ಎದುರಿಸಿದರು. ಯಾವುದೇ ಪರಿಸ್ಥಿತಿಯಲ್ಲಿ ಮುಘಲರಿಗೆ ಶರಣುಹೋಗಬಾರದು ಎಂದು ನಿರ್ಧರಿಸಿ ಅವರು ರಾಯಗಡದಲ್ಲಿ ಮಹತ್ವದ ರಾಜನೈತಿಕ ನಿರ್ಣಯವನ್ನು ತೆಗೆದುಕೊಂಡರು. ಅದಕ್ಕನುಸಾರವಾಗಿ, ರಾಜಾರಾಮ ಮಹಾರಾಜರು ರಾಯಗಡದ ಮುತ್ತಿಗೆಯಿಂದ ಪಾರಾಗಬೇಕು ಹಾಗೂ ಅಗತ್ಯವೆನಿಸಿದರೆ ದೂರದಲ್ಲಿರುವ ಜಿಂಜೀಗೆ ಹೋಗಬೇಕು ಎಂದು ನಿರ್ಧರಿಸಲಾಯಿತು. ಅದರಂತೆ ತಮ್ಮ ನೇತೃತ್ವದಲ್ಲಿಯೇ ಮಹಾರಾಣಿ ಯೇಸೂಬಾಯಿಯವರು ರಾಯಗಡ ಕೋಟೆಗಾಗಿ ಹೋರಾಡಬೇಕು ಎಂಬ ಧೋರಣೆಯನ್ನು ನಿಶ್ಚಯಿಸಲಾಯಿತು. ಯೇಸೂಬಾಯಿ ಯವರು ತಮ್ಮ ಮಗನನ್ನು ಛತ್ರಪತಿಯನ್ನಾಗಿ ಮಾಡದೆ ರಾಜಾರಾಮ ಮಹಾರಾಜರನ್ನು ಛತ್ರಪತಿಯನ್ನಾಗಿ ಮಾಡುವ ನಿರ್ಣಯವನ್ನು ತೆಗೆದುಕೊಂಡರು. ಅವರ ಈ ನಿರ್ಣಯವು ಸ್ವರಾಜ್ಯ ಪ್ರೇಮದ ಮತ್ತು ಉತ್ಕಟವಾದ ಸ್ವಾರ್ಥತ್ಯಾಗದ ಉದಾಹರಣೆಯಾಗಿದೆ. ಅವರು ತಮ್ಮ ಸ್ವಂತದ ಮತ್ತು ಪುತ್ರನ ಪ್ರಾಣವನ್ನು ಪಣಕ್ಕಿಟ್ಟು ಮರಾಠರ ಛತ್ರಪತಿಯನ್ನು ಸುರಕ್ಷಿತವಾಗಿರಿಸಿದರು.

**ಹುಡುಕೋಣ ಬನ್ನಿ.**

ಭಾರತದ ನಕಾಶದಲ್ಲಿ ಜಿಂಜೀ ಈ ಸ್ಥಳವನ್ನು ಹುಡುಕಿರಿ.

**ಜಿಂಜಿಗೆ ರಾಜಾರಾಮ ಮಹಾರಾಜರ ಪ್ರಯಾಣ:** 5 ಎಪ್ರಿಲ 1689 ರಂದು ರಾಜಾರಾಮ ಮಹಾರಾಜರು ತಮ್ಮ ಕೆಲವು ಸಹಕಾರಿಗಳೊಂದಿಗೆ ರಾಯಗಡ ಮುತ್ತಿಗೆಯಿಂದ ಪಾರಾದರು. ಅವನು ದಕ್ಷಿಣದಲ್ಲಿಯ ಜಿಂಜೀಗೆ ಹೋಗಲು ನಿರ್ಧರಿಸಿದರು. ಜಿಂಜೀಯ ಕೋಟೆಯು ಅಭೇದ್ಯವಾಗಿತ್ತು. ಈ ಕೋಟೆಯನ್ನು ಗೆದ್ದುಕೊಳ್ಳುವುದು ಮುಘಲರಿಗೆ ಸುಲಭವಾಗಿರಲಿಲ್ಲ, ಪ್ರಹ್ಲಾದ ನಿರಾಜಿ, ಖಂಡೋ ಬಲ್ಲಾಳ, ರೂಪಾಜಿ ಭೋಸಲೆ ಮುಂತಾದ ನಂಬಿಗಸ್ಥ ಜನರೊಂದಿಗೆ ರಾಜಾರಾಮ ಮಹಾರಾಜರು ಜಿಂಜೀಯನ್ನು ತಲುಪಿದರು.

**ಮರಾಠರ ಚಟುವಟಿಕೆಗಳು:** ಮುಘಲರ ಸಾಮರ್ಥ್ಯದ ಮುಂದೆ ರಾಯಗಡ ಕೋಟೆಗಾಗಿ ದೀರ್ಘಕಾಲ ಹೋರಾಡುವುದು ಅಸಾಧ್ಯವಾಗಿತ್ತು. ಮುಘಲರು ನವಂಬರ 1689ರಲ್ಲಿ ರಾಯಗಡವನ್ನು ವಶಪಡಿಸಿಕೊಂಡರು. ಮಹಾರಾಣಿ ಯೋಸೂಬಾಯಿ ಹಾಗೂ ಶಾಹೂ ಇವರನ್ನು ಬಂಧಿಸಿದರು. ಜಿಂಜಿಗೆ ಹೋಗುವಾಗ ರಾಜಾರಾಮ ಮಹಾರಾಜರು ಮುಘಲರ ವಿರುದ್ಧದ ಸಂಘರ್ಷದ ಜವಾಬ್ದಾರಿಯನ್ನು ರಾಮಚಂದ್ರಪಂತ ಅಮಾತ್ಯ, ಶಂಕರಾಜಿ ನಾರಾಯಣ ಸಚಿವ, ಸಂತಾಜಿ ಘೋರಪಡೆ ಮತ್ತು ಧನಾಜಿ ಜಾಧವ ಇವರಿಗೆ ಒಪ್ಪಿಸಿದ್ದರು.

ಮರಾಠರ ದೃಷ್ಟಿಯಿಂದ ಪರಿಸ್ಥಿತಿಯು ಗಂಭೀರವಾಗಿತ್ತು. ಔರಂಗಜೇಬನು ಮರಾಠಾ ಸರದಾರರಿಗೆ ವತನ ಮತ್ತು ಜಹಗೀರುಗಳನ್ನು ಕೊಟ್ಟು ಅವರನ್ನು ತನ್ನ ಕಡೆಗೆ ಒಲಿಸಿಕೊಂಡಿದ್ದನು. ಬಾದಶಾಹನನ್ನು ನಿಗ್ರಹಿಸಲು ರಾಜಾರಾಮ ಮಹಾರಾಜರು ಅದೇ ತಂತ್ರವನ್ನು ಬಳಸಿದರು. ಮರಾಠಾ ಸರದಾರರು ಮುಘಲರ ಪ್ರದೇಶಗಳನ್ನು ಗೆದ್ದರೆ. ಆ ಪ್ರದೇಶಗಳ ಜಹಗೀರನ್ನು ಆ ಸರದಾರನಿಗೆ ಕೊಡಲಾಗುವುದು ಎಂಬ ಭರವಸೆಯನ್ನು ನೀಡಲಾಯಿತು. ಛತ್ರಪತಿಯವರ ಈ ಭರವಸೆಯಿಂದ ಅನೇಕ ಪರಾಕ್ರಮಿಗಳಾದ ಸರದಾರರು ಮುಂದೆ ಬಂದರು. ಅವರು ಮುಘಲ ಪ್ರದೇಶಗಳ ಮೇಲೆ ಶೀಘ್ರ ಆಕ್ರಮಣವನ್ನು ಆರಂಭಿಸಿದರು. ಮುಘಲ ಸೇನಾಪತಿಗಳನ್ನು ಸೋಲಿಸಿದರು. ಈ ಪರಾಕ್ರಮದಲ್ಲಿ ಸಂತಾಜಿ ಮತ್ತು ಧನಾಜಿ ಮುಂಚೂಣಿಯಲ್ಲಿದ್ದರು. ಅವರ ಅನಪೇಕ್ಷಿತ ದಾಳಿ ಮತ್ತು ಗೆರಿಲ್ಲಾ ಯುದ್ಧ ತಂತ್ರದಿಂದಾಗಿ ಮುಘಲರಿಗೆ ಪ್ರಚಂಡ ಸಾಧನ ಸಾಮಗ್ರಿ ಮತ್ತು ಭಾರವಾದ ತೋಫುಖಾನೆಗಳನ್ನು ಉಪಯೋಗಿಸುವುದು ಕಠಿಣವಾಯಿತು. ಹೆಚ್ಚಿನ ಕೋಟೆಗಳು, ಪ್ರದೇಶ ಮತ್ತು ಖಜಾನೆ ವಶದಲ್ಲಿ ಇಲ್ಲದಿದ್ದರೂ ಮರಾಠರು ಮುಘಲರಿಗೆ ಹಣ್ಣುಗಾಯಿ, ನೀರುಗಾಯಿ ಮಾಡಿಬಿಟ್ಟರು. ಒಮ್ಮೆ ಸಂತಾಜಿ ಘೋರ್ಪಡೆ ಮತ್ತು ವಿಠೋಜಿ ಚವ್ಹಾಣರು ಬಾದಶಾಹನ ದಂಡಿನ ಬಿಡಾರದ ಮೇಲೆ ಆಕಸ್ಮಿಕ ದಾಳಿ ಮಾಡಿ ಅವನ ಡೇರೆಯ ಮೇಲಿನ ಬಂಗಾರದ ಕಳಸವನ್ನು ಕತ್ತರಿಸಿಕೊಂಡು ಒಯ್ದಿದ್ದರು.

**ಜಿಂಜಿಗೆ ಮುತ್ತಿಗೆ:** ರಾಯಗಡವನ್ನು ವಶಪಡಿಸಿಕೊಂಡ ನಂತರ ಬಾದಶಾಹನು ಝುಲ್ಫಿಕಾರಖಾನನನ್ನು ಜಿಂಜೀಯ



**ಗೊತ್ತಿದೆಯೇ ನಿಮಗೆ ?**

ಧನನಾಜಿ ಮುಘಲ ಸೈನಿಕರು ಎಷ್ಟೊಂದು ಹೆದರುತ್ತಿದ್ದರೆಂದರೆ- ಕುದುರೆ ನೀರು ಕುಡಿಯುವಾಗ ಹೆದರಿದರೆ ಅವರು ಆ ಕುದುರೆಗೆ, ''ನಿನಗೆ ನೀರಲ್ಲಿ ಧನಾಜಿ ಕಾಣಿಸುತ್ತಾನೆಯೇ?'' ಎಂದು ಕೇಳುತ್ತಿದ್ದರು.

ಮೇಲೆ ದಾಳಿ ಮಾಡಲು ದಕ್ಷಿಣದ ಕಡೆಗೆ ಕಳಿಸಿದನು. ಅವನು ಜಿಂಜೀಗೆ ಮುತ್ತಿಗೆ ಹಾಕಿದನು. ಮರಾಠರು ಜಿಂಜೀಯ ಕೋಟೆಗಾಗಿ ಸುಮಾರು ಎಂಟು ವರ್ಷಗಳ ವರೆಗೆ ಜೀವದ ಹಂಗು ತೊರೆದು ಹೋರಾಡಿದರು. ಮುತ್ತಿಗೆ ಹಾಕಿದ ಎಂಟು ವರ್ಷಗಳವರೆಗೆ ಜೀವದ ಹಂಗು ತೊರೆದು ಹೊರಾಡಿದರು. ಮುತ್ತಿಗೆ ಹಾಕಿದ ಮುಘಲ ಸೈನ್ಯದ ಮೇಲೆ ಸಂತಾಜಿ ಮತ್ತು ಧನಾಜಿಯವರು ಹೊರಗಿನಿಂದ ತೀವ್ರ ದಾಳಿ ಮಾಡಿದರು. ಕೊನೆಗೆ ರಾಜಾರಾಮ ಮಹಾರಾಜರು ಮುತ್ತಿಗೆಯಿಂದ ಪಾರಾಗಿ ಮಹಾರಾಷ್ಟ್ರಕ್ಕೆ ಬಂದರು. ಆ ನಂತರ ಝುಲ್ಫಿಕಾರಖಾನನು ಜಿಂಜೀಯ ಕೋಟೆಯನ್ನು ಗೆದ್ದುಕೊಂಡನು.

ರಾಜಾರಾಮ ಮಹಾರಾಜರು ಮಹಾರಾಷ್ಟ್ರಕ್ಕೆ ಮರಳಿ ಬಂದದ್ದರಿಂದ ಮರಾಠರ ಶಕ್ತಿ ಮತ್ತಷ್ಟು ಹೆಚ್ಚಿತು. ಅವರು ಮುಘಲರ ವಶದಲ್ಲಿದ್ದ ಖಾನ ದೇಶ, ವರ್‍ಹಾಡ, ಬಾಗಲಾಣ ಈ ಪ್ರದೇಶಗಳ ಮೇಲೆ ದಾಳಿ ಮಾಡಿದರು. ರಾಜಾರಾಮ ಮಹಾರಾಜರು ತಮ್ಮ ಸಮಂಜಸ ವೃತ್ತಿಯಿಂದ ಹಾಗೂ ಮುತ್ಸದ್ದಿತನದಿಂದ ಸಂತಾಜಿ ಮತ್ತು ಧನಾಜಿಯವರಂತಹ ನೂರಾರು ಮರಾಠಾ ವೀರರನ್ನು ತಯಾರಿಸಿದರು. ಅವರಲ್ಲಿ ಸ್ವರಾಜ್ಯ ರಕ್ಷಣೆಯ ಪ್ರೇರಣೆಯನ್ನು ನಿರ್ಮಿಸುವ ಅಮೂಲ್ಯವಾದ ಕಾರ್ಯ ಮಾಡಿದರು. ಆದರೆ ಇದೆಲ್ಲವೂ ನಡೆಯುತ್ತಿರುವಾಗ 2 ಮಾರ್ಚ 1700 ರಂದು ರಾಜಾರಾಮ ಮಹಾರಾಜರು ಅಲ್ಪ ಕಾಯಿಲೆಯಿಂದಾಗಿ ಸಿಂಹಗಡದಲ್ಲಿ ಮರಣ ಹೊಂದಿದರು.

ರಾಜಾರಾಮ ಮಹಾರಾಜರು ವಿಚಾರಶೀಲರೂ ಸ್ನೇಹಪರರೂ ಆಗಿದ್ದರು. ಮರಾಠಿ ರಾಜ್ಯದಲ್ಲಿಯ ಎಲ್ಲ ಪರಾಕ್ರಮಶಾಲಿ ಜನರನ್ನು ಅವರು ಒಂದುಗೂಡಿಸಿದರು. ಅವರಲ್ಲಿ ಐಕ್ಯತೆಯನ್ನು ನಿರ್ಮಾಣ ಮಾಡಿದರು. ಮತ್ತು ಅವರಲ್ಲಿ ಚೈತನ್ಯವನ್ನು ತುಂಬಿದರು. ಸಂಭಾಜಿ ಮಹಾರಾಜರ ಮರಣದ ನಂತರ 11 ವರ್ಷ ಅವರು ಧೈರ್ಯದಿಂದ ಹಾಗೂ ದೃಢಸಂಕಲ್ಪದಿಂದ ಔರಂಗಜೇಬನೊಡನೆ ಹೋರಾಡಿದರು. ಅತ್ಯಂತ ಕಠಿಣ ಸಮಯದಲ್ಲಿ ಸ್ವರಾಜ್ಯದ ರಕ್ಷಣೆ ಇದು ರಾಜಾರಾಮ ಮಹಾರಾಜರ ಅತ್ಯಂತ ದೊಡ್ಡ ಸಾಧನೆಯಾಗಿದೆ.

ರಿಯಾಸತಕಾರ ಗೋ.ಸ. ಸರದೇಸಾಯ ಇವರು ಛತ್ರಪತಿ ರಾಜಾರಾಮ ಇವರನ್ನು ವರ್ಣಿಸುವಾಗ 'ಸ್ಥಿರಬುದ್ಧಿ' ಎಂಬ ವಿಶೇಷಣವನ್ನು ಬಳಸಿದ್ದಾರೆ. ಅವರು ಮಾಡಿದ ಈ ಉಲ್ಲೇಖವು ಸಂಪೂರ್ಣವಾಗಿ ಯಥಾರ್ಥವೆನಿಸುತ್ತದೆ.

**ಮಾಡಿ ನೋಡಿರಿ.**

- ನಿಮ್ಮ ಪರಿಸರದಲ್ಲಿಯ ವಿವಿಧ ಕ್ಷೇತ್ರಗಳಲ್ಲಿ ಉಲ್ಲೇಖನೀಯ ಕಾರ್ಯ ಮಾಡಿರುವ ಮಹಿಳೆಯರನ್ನು ಸಂದರ್ಶಿಸಿರಿ.

**ಮಹಾರಾಣಿ ತಾರಾಬಾಯಿ:** ಛತ್ರಪತಿ ರಾಜಾರಾಮ ಮಹಾರಾಜರ ಮರಣದ ನಂತರ ತಾನು ಸಂಘರ್ಷದಲ್ಲಿ ಜಯಗಳಿಸಿದೆನೆಂದು ಔರಂಗಜೇಬಿನಿಗೆ ಅನಿಸಿತು. ಆದರೆ ಪರಿಸ್ಥಿತಿ ಮಾತ್ರ ವಿರುದ್ಧವಾಗಿತ್ತು. ಔರಂಗಜೇಬನು ಹೋರಾಟದ ಮೇಲೆ ಹೋರಾಟಗಳನ್ನು ಗೆಲ್ಲುತ್ತಿದ್ದನು. ಆದರೆ ಅವನಿಗೆ ಯುದ್ಧವನ್ನು ಮಾತ್ರ ಗೆಲ್ಲಲಾಗಲಿಲ್ಲ. ಅತ್ಯಂತ ವಿಪರೀತ ಪರಿಸ್ಥಿತಿಯಲ್ಲಿ ಸ್ವರಾಜ್ಯದ ನೇತೃತ್ವವನ್ನು ವಹಿಸಲು ರಾಜಾರಾಮ ಮಹಾರಾಜರ ಶೂರ ಪತ್ನಿ ಮಹಾರಾಣಿ ತಾರಾಬಾಯಿಯವರು ಮುಂದೆಬಂದರು.



ಮಹಾರಾಣಿ ತಾರಾಬಾಯಿ

ಮುಘಲ ಇತಿಹಾಸಕಾರ ಖಾಫೀಖಾನನು ಮಹಾರಾಣಿ ತಾರಾಬಾಯಿಯ ವರ್ಣನೆಯನ್ನು ಕೆಳಗಿನ ಶಬ್ದಗಳಲ್ಲಿ ಮಾಡಿದ್ದಾನೆ. ''ಅವಳು (ತಾರಾಬಾಯಿ) ಬುದ್ಧಿವಂತ ಮತ್ತು ಜಾಣಳಾಗಿದ್ದಳು. ಸೈನ್ಯದ ವ್ಯವಸ್ಥೆ ಮತ್ತು ರಾಜ್ಯಾಡಳಿತದ ವಿಷಯದಲ್ಲಿ ಗಂಡನ ಜೀವಿಸಿರುವಾಗಲೇ ಅವಳು ಖ್ಯಾತಿಯನ್ನು ಪಡೆದಿದ್ದಳು.''

ಛತ್ರಪತಿ ರಾಜಾರಾಮ ಮಹಾರಾಜರ ಮರಣದ ನಂತರ ಮಹಾರಾಣಿ ತಾರಾಬಾಯಿಯವರು ತಮ್ಮ ಸರದಾರರ ಸಹಾಯದಿಂದ ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ಕಠಿಣ ಪರಿಶ್ರಮದೊಂದಿಗೆ ಸ್ವರಾಜ್ಯದ ಹೋರಾಟವನ್ನು ಮುಂದುವರಿಸಿದರು. ಔರಂಗಜೇಬನು ಸಾತಾರ, ಪನ್ಹಾಳಾ ಈ ಮರಾಠರ ಪ್ರದೇಶಗಳನ್ನು ಗೆದ್ದನು. ಹಾಗೂ ಮರಾಠರು ಮುಘಲರ ಮಧ್ಯಪ್ರದೇಶ, ಗುಜರಾತಗಳನ್ನು ಗೆದ್ದರು. ತಾರಾಬಾಯಿಯವರು ಯುದ್ಧದ ಕ್ಷೇತ್ರವನ್ನು ವಿಸ್ತರಿಸಿದರು. ಕೃಷ್ಣಾಜಿ ಸಾವಂತ, ಖಂಡೇರಾವ ದಾಭಾಡೆ, ಧನಾಜಿ ಜಾಧವ, ನೇಮಾಜಿ ಶಿಂದೆ ಈ ಸರದಾರರು ಮಹಾರಾಷ್ಟ್ರದ ಹೊರಗೆ ಮುಘಲರ ವಿರುದ್ಧ ಹೋರಾಡ ತೊಡಗಿದರು. ಯುದ್ಧದ ಪರಡಿಗಳ ಸಮತೋಲನವು ಏರು ಪೇರಾಗುತ್ತ ನಡೆದಿರುವ ಚಿಹ್ನೆ ಇದಾಗಿತ್ತು.

ಮಹಾರಾಣಿ ತಾರಾಬಾಯಿಯವರು ಏಳು ವರ್ಷ ಸಂಘರ್ಷ ಮಾಡಿದರು. ರಾಜ್ಯದ ರಕ್ಷಣೆ ಮಾಡಿದರು. ಎಲ್ಲ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡು ಸರದಾರರನ್ನು ಸ್ವರಾಜ್ಯ ಕಾರ್ಯಕ್ಕಾಗಿ ಒಂದುಗೂಡಿಸಿದರು. ಸಿರೋಂಜ, ಮಂದಸೌರ ಮತ್ತು ಮಾಳವಾದವರೆಗೆ ಮರಾಠಾ ಸರದಾರರು ಮುಘಲರ ವಿರುದ್ಧ ಹೋರಾಡ ತೊಡಗಿದರು. ಖಾಫೀಖಾನನು ಹೀಗೆ ಬರೆಯುತ್ತಾನೆ, ''ರಾಜಾರಾಮನ ಹೆಂಡತಿ ತಾರಾಬಾಯಿಯು ವಿಲಕ್ಷಣ ಕೋಲಾಹಲವನ್ನುಂಟು ಮಾಡಿದಳು. ಅದರಲ್ಲಿ ಅವಳ ಸೈನ್ಯದ ನೇತೃತ್ವದ ಮತ್ತು ದಾಳಿಯ

**ಗೊತ್ತಿದೆಯೇ ನಿಮಗೆ?**

ಮಹಾರಾಣಿ ತಾರಾಬಾಯಿಯವರು ಗೆರಿಲ್ಲಾ ಯುದ್ಧತಂತ್ರದ ಉಪಯೋಗವನ್ನು ಅತ್ಯಂತ ಒಳ್ಳೆಯ ರೀತಿಯಿಂದ ಮಾಡಿದರು. ಔರಂಗಜೇಬನ ಸೈನ್ಯದ ಮುಂದೆ ಮರಾಠರ ಶಕ್ತಿಯು ಅತ್ಯಂತ ಕಡಿಮೆಯಿತ್ತು. ಔರಂಗಜೇಬನು ಕೋಟೆಯನ್ನು ಗೆಲ್ಲುವ ಸಲುವಾಗಿ ಕೋಟೆಗೆ ಮುತ್ತಿಗೆ ಹಾಕುತ್ತಿದ್ದನು. ಸಾಧ್ಯವಾದಷ್ಟು ಕಾಲ ಮರಾಠರು ಹೋರಾಟ ಮಾಡುತ್ತಿದ್ದರು. ಮಳೆಗಾಲ ಸಮೀಪಿಸಿದಂತೆ, ಮರಾಠಾ ಕಿಲ್ಲೇದಾರನು ರಾಜದ್ರೋಹಿಯಾಗಿದ್ದಾನೆ ಎಂದು ಹೇಳಿ, ಔರಂಗಜೇಬನ ಕಡೆಯಿಂದ ಲಂಚವನ್ನು ಪಡೆದು ಕೋಟೆಯನ್ನು ಅವನಿಗೆ ಬಿಟ್ಟುಕೊಡಲಾಗುತ್ತಿತ್ತು. ಕಿಲ್ಲೇದಾರನು ಲಂಚದ ಹಣವನ್ನು ಮರಾಠಿ ಖಜಾನೆಯಲ್ಲಿ ತುಂಬುತ್ತಿದ್ದನು. ಔರಂಗಜೇಬನು ಕೋಟೆಯಲ್ಲಿ ಧನ, ಧಾನ್ಯ, ಮದ್ದುಗುಂಡು ತುಂಬಿ ಇಡುತ್ತಿದ್ದಂತೆ ತಾರಾಬಾಯಿಯವರು ಆ ಕೋಟೆಯನ್ನು ಮತ್ತೆ ಗೆದ್ದುಕೊಳ್ಳುತ್ತಿದ್ದರು. ತಾರಾಬಾಯಿಯವರ ಈ ಯುದ್ಧತಂತ್ರದ ವರ್ಣನೆಯನ್ನು 'ಸೇಫ್ ಡಿಪಾಜಿಟ್ ಲಾಕರ್ ಸಿಸ್ಟಿಮ್' ಎಂದು ಮಾಡಲಾಗುತ್ತದೆ.

ಈ ರೀತಿ ಛತ್ರಪತಿ ಶಿವಾಜಿ ಮಹಾರಾಜರ ಪರಾಕ್ರಮದ ಉತ್ತರದಾಯಿತ್ವವನ್ನು ಮಹಾರಾಣಿ ತಾರಾಬಾಯಿಯವರು ಮುಂದೆ ನಡೆಸಿಕೊಂಡು ಹೋದರು.



**ಗೊತ್ತಿದೆಯೇ ನಿಮಗೆ ?**

ತಾರಾಬಾಯಿಯ ಕರ್ತೃತ್ವದ ವರ್ಣನೆ ಮಾಡುವಾಗ 'ಶಿವಭಾರತ'ವನ್ನು ಬರೆದ ಪರಮಾನಂದನ ಮಗನಾದ ಕವಿ ದೇವದತ್ತನು ಕೆಳಗಿನಂತೆ ಹೇಳಿದ್ದಾನೆ.


ತಾರಾಬಾಯಿ ರಾಮರಾಣಿ । ಭದ್ರಕಾಲಿ ಕೋಪಲಿ ।
ದಿಲ್ಲಿ ಝಾಲಿ ದೀನವಾಣಿ । ದಿಲ್ಲೀ ಶಾಚೆ ಗೇಲೆ ಪಾಣಿ ।
ರಾಮರಾಣಿ ಭದ್ರಕಾಲಿ । ರಣರಂಗಿ ಕ್ರುದ್ಧ ಝಾಲಿ ।
ಪ್ರಯತ್ನಾಚಿ ವೇಳ ಆಲಿ । ಮುಗಲ ಹೋ ಸಾಂಭಾಳಾ ॥

(ರಾಜಾರಾಮನ ರಾಣಿ ತಾರಾಬಾಯಿ ಭದ್ರಕಾಲಿಯ ರೂಪಧರಿಸಿದ್ದು ಅವಳು ಅತ್ಯಂತ ಕೋಪಿತಳಾಗಿದ್ದಾಳೆ. ಮುಗಲರ ದಿಲ್ಲಿ ದೀನವಾಗಿದ್ದು, ಬಾದಶಾಹ ಹತಬಲನಾಗಿದ್ದಾನೆ. ಅವಳು ಯುದ್ಧಭೂಮಿಯಲ್ಲಿ ವೀರಾವೇಶದಿಂದ ಹೋರಾಡುತ್ತಿದ್ದು ಅತ್ಯಂತ ಕ್ರುದ್ಧಳಾಗಿದ್ದಾಳೆ, ಮುಗಲರೇ ನಿಮ್ಮನು ನೀವು ರಕ್ಷಿಸಿಕೊಳ್ಳಿರಿ).

ಮರಾಠರ ಈ ಆಕ್ರಮಕ ದಾಳಿಗಳಿಂದಾಗಿ ಔರಂಗಜೇಬನು ಹತಾಶನಾದನು. ಸತತ ಇಪ್ಪತ್ತೈದು ವರ್ಷಗಳ ವರೆಗೆ ಮುಘಲ ಮತ್ತು ಮರಾಠರ ಸಂಘರ್ಷವು ನಡೆದಿತ್ತು. ಮರಾಠರನ್ನು ಸೋಲಿಸುವುದು ಮುಘಲರಿಗೆ ಸಾಧ್ಯವಾಗಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಔರಂಗಜೇಬ ಬಾದಶಾಹನು ಕ್ರಿ.ಶ. 1707ರಲ್ಲಿ ಅಹಮದನಗರ ಎಂಬಲ್ಲಿ ಮರಣಹೊಂದಿದನು. ಅವನ ಮರಣದೊಂದಿಗೆ ಮರಾಠರ ಸ್ವಾತಂತ್ರ್ಯ ಸಂಗ್ರಾಮವು ಮುಕ್ತಾಯವಾಯಿತು.

ಮರಾಠರ ಈ ಸ್ವಾತಂತ್ರ್ಯ ಸಂಗ್ರಾಮವೆಂದರೆ ಮುಘಲ ಆಡಳಿತಗಾರರು ಇಟ್ಟುಕೊಂಡಿದ್ದ ಸಾಮ್ರಾಜ್ಯದ ಲಾಲಸೆ ಮತ್ತು ಮರಾಠರ ಮನದಲ್ಲಿಯ ಸ್ವಾತಂತ್ರ್ಯದ ಪ್ರಬಲ ಇಚ್ಛೆ ಇವುಗಳ ನಡುವಿನ ಹೋರಾಟವಾಗಿತ್ತು. ಅದರಲ್ಲಿ ಮರಾಠರು ಜಯಶಾಲಿಗಳಾದರು. ಇಷ್ಟೇ ಅಲ್ಲದೆ ನಂತರದ ಕಾಲದಲ್ಲಿ ಔರಂಗಜೇಬನ ಮರಣದಿಂದಾಗಿ ನಿರ್ಮಾಣವಾದ ರಾಜಕೀಯ ಪೊಳ್ಳನ್ನು ತುಂಬಿ ತೆಗೆಯುವುದರಲ್ಲಿ ಮರಾಠರು ಯಶಸ್ವಿಯಾದರು. ದಿಲ್ಲಿಯ ಸಿಂಹಾಸನದ ಮೇಲೆ ನಿಯಂತ್ರಣವನ್ನಿಡುತ್ತ ಅವರು ಬಹುಮಟ್ಟಿಗೆ ಸರ್ವ ಹಿಂದುಸ್ಥಾನದ ಆಡಳಿತವನ್ನು ನೋಡಿಕೊಂಡರು ಹಾಗೂ ರಕ್ಷಣೆಯನ್ನೂ ಮಾಡಿದರು. ಆದರಿಂದಾಗಿ ಹದಿನೆಂಟನೆಯ ಶತಮಾನವನ್ನು ಮರಾಠರ ಶತಮಾನವೆಂದು ತಿಳಿಯಲಾಗುತ್ತದೆ. ಈ ಶತಮಾನದಲ್ಲಿಯ ಮರಾಠರ ಕಾರ್ಯಗಳ ಇತಿಹಾಸವನ್ನು ನಾವು ಮುಂದಿನ ಪಾಠದಲ್ಲಿ ನೋಡುವವರಿದ್ದೇವೆ.

**ಭೋಸಲೆ ಮನೆತನದ ವಂಶಾವಳಿ**



## ಅಭ್ಯಾಸ

**1. ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿರಿ.**

(1) ಇವರ ಪರಾಕ್ರಮದಿಂದಾಗಿ ಔರಂಗಜೇಬನು ಹತಬಲನಾಗಿದ್ದನು.
(ಅ) ಶಹಾಜಾದಾ ಅಕಬರ (ಬ) ಛತ್ರಪತಿ ಸಂಭಾಜಿ ಮಹಾರಾಜ (ಕ) ಛತ್ರಪತಿ ರಾಜಾರಾಮ ಮಹಾರಾಜ

(2) ಬಾದಶಾಹನ ಡೇರೆಯ ಮೇಲಿನ ಬಂಗಾರದ ಕಳಸವನ್ನು ಕತ್ತರಿಸಿದವರು
(ಅ) ಸಂತಾಜಿ ಮತ್ತು ಧನಾಜಿ (ಬ) ಸಂತಾಜಿ ಘೋರ್ಪಡೆ ಮತ್ತು ವಿಠೋಜಿ ಚವ್ಹಾಣ (ಕ) ಖಂಡೋಬಲ್ಲಾಳ ಮತ್ತು ರೂಪಾಜಿ ಭೋಸಲೆ

(3) ಗೋವಾದ ಯುದ್ಧದಲ್ಲಿ ಪ್ರಾಣವನ್ನು ಪಣಕ್ಕಿಟ್ಟು ಹೋರಾಡುವವನು
(ಅ) ಯೇಸಾಜಿ ಕಂಕ (ಬ) ನೇಮಾಜಿ ಶಿಂದೆ (ಕ) ಪ್ರಹ್ಲಾದ ನಿರಾಜಿ

**2. ಪಾಠದಲ್ಲಿ ಹುಡುಕಿ ಬರೆಯಿರಿ.**

(1) ಜಂಜೀರಾದ ದಾಳಿಯನ್ನು ಅರ್ಧಕ್ಕೆ ನಿಲ್ಲಿಸಿ ಸಂಭಾಜಿ ಮಹಾರಾಜರು ಏಕೆ ಹಿಂದಿರುಗಬೇಕಾಯಿತು?

(2) ಸಂಭಾಜಿ ಮಹಾರಾಜರು ಪೋರ್ತುಗೀಜರಿಗೆ ಪಾಠ ಕಲಿಸಬೇಕೆಂದು ಏಕೆ ನಿರ್ಧರಿಸಿದರು?

(3) ಜಿಂಜೀಗೆ ಹೋಗುವಾಗ ರಾಜಾರಾಮ ಮಹಾರಾಜರು ಸ್ವರಾಜ್ಯದ ರಕ್ಷಣೆಯ ಜವಾಬ್ದಾರಿಯನ್ನು ಯಾರಿಗೆ ಒಪ್ಪಿಸಿದ್ದರು ?

(4) ಮಹಾರಾಣಿ ತಾರಾಬಾಯಿಯ ಕರ್ತೃತ್ವದ ವರ್ಣನೆಯನ್ನು ದೇವದತ್ತ ಕವಿಯು ಯಾವ ಶಬ್ದಗಳಲ್ಲಿ ಮಾಡಿದ್ದಾನೆ ?

**3. ಏಕೆ ಎಂಬುದನ್ನು ಬರೆಯಿರಿ.**

(1) ಔರಂಗಜೇಬನು ತನ್ನ ದಾಳಿಯನ್ನು ಆದಿಲಶಾಹಿ ಮತ್ತು ಕುತುಬಶಾಹಿ ರಾಜ್ಯಗಳ ಕಡೆಗೆ ತಿರುಗಿಸಿದನು.


(2) ಸಂಭಾಜಿ ಮಹಾರಾಜರ ನಂತರ ಮರಾಠರು ಮುಘಲರ ವಿರುದ್ಧದ ಸಂಘರ್ಷವನ್ನು ಅಧಿಕ ತೀವ್ರಗೊಳಿಸಿದರು.

(3) ತಮ್ಮ ನೇತೃತ್ವದಲ್ಲಿಯು ಮಹಾರಾಣಿ ಯೇಸೂಬಾಯಿಯವರು ರಾಯಗಡ ಕೋಟೆಗಾಗಿ ಹೋರಾಡಬೇಕು ಎಂಬ ಧೋರಣೆಯನ್ನು ನಿಶ್ಚಯಿಸಲಾಯಿತು.

**ಉಪಕ್ರಮ:**

ಭಾರತದ ನಕಾಶದಲ್ಲಿ ಗೋವಾ, ವಿಜಾಪೂರ, ಗೋವಳಕೊಂಡಾ, ಜಿಂಜಿ, ಅಹಮದಾಬಾದ, ಅಹಮದನಗರ ಈ ಸ್ಥಳಗಳನ್ನು ತೋರಿಸಿರಿ.

BY8NYX



ಜಿಂಜಿಯ ಕೋಟೆ

# 10. ಮರಾಠರ ಆಡಳಿತದ ವಿಸ್ತಾರ

ಮರಾಠರ ಸ್ವಾತಂತ್ರ್ಯ ಸಂಗ್ರಾಮದ ಆರಂಭದಲ್ಲಿ ಮುಘಲರು ಆಕ್ರಮಣಕಾರಿ ನೀತಿಯನ್ನು ತಾಳಿದರೆ, ಮರಾಠರ ನೀತಿಯು ಸಂರಕ್ಷಣಾತ್ಮಕವಾಗಿತ್ತು. ಸ್ವಾತಂತ್ರ್ಯ ಸಂಗ್ರಾಮದ ಕೊನೆಗೆ ಪರಿಸ್ಥಿತಿ ಸಂಪೂರ್ಣ ಬದಲಾಯಿತು. ಮರಾಠರು ಆಕ್ರಮಣಕಾರಿ ನೀತಿಯನ್ನು ಮತ್ತು ಮುಘಲರು ಸಂರಕ್ಷಣಾತ್ಮಕ ನೀತಿಯನ್ನು ಸ್ವೀಕರಿಸಿದರು. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಮಾರಾಠರು ಮುಘಲ ಸಾಮ್ರಾಜ್ಯವನ್ನು ಮಣಿಸಿ ಬಹುಮಟ್ಟಿಗೆ ಭಾರತದ ತುಂಬೆಲ್ಲ ತಮ್ಮ ಅಧಿಕಾರ ವಿಸ್ತರಿಸಿದರು. ಅದರ ಅಭ್ಯಾಸವನ್ನು ನಾವು ಈ ಪಾಠದಲ್ಲಿ ಮಾಡುವವರಿದ್ದೇವೆ.

**ಶಾಹೂ ಮಹಾರಾಜರ ಬಿಡುಗಡೆ:** ಔರಂಗಜೇಬ ಬಾದಶಹನ ಮರಣದನಂತರ ದಿಲ್ಲಿಯ ಸಿಂಹಾಸನಕ್ಕಾಗಿ ಅವನ ಮಕ್ಕಳಲ್ಲಿ ಸಂಘರ್ಷ ಆರಂಭವಾಯಿತು. ಶಾಹಜಾದಾ ಆಝುಮ ಶಾಹನು ದಕ್ಷಿಣದಲ್ಲಿದ್ದನು. ಭಾದಶಹನ ಸಿಂಹಾಸನವನ್ನು ದೊರಕಿಸುವ ಸಲುವಾಗಿ ಅವನು ತ್ವರಿತವಾಗಿ ದಿಲ್ಲಿಗೆ ಹೊರಟನು. ರಾಜಕುಮಾರ ಶಾಹೂ ಈತನು ಅವನ ವಶದಲ್ಲಿದ್ದನು. ಶಾಹೂ ಮಹಾರಾಜರನ್ನು ಬಂಧನದಿಂದ ಮುಕ್ತಗೊಳಿಸಿದರೆ ಮಹಾರಾಣಿ ತಾರಾಬಾಯಿ ಹಾಗೂ ಶಾಹೂ ಮಹಾರಾಜರ ನಡುವೆ ಛತ್ರಪತಿಯ ಗದ್ದುಗೆಗಾಗಿ ಕಲಹಗಳಾಗಬಹುದು ಹಾಗೂ ಮರಾಠರ ಶಕ್ತಿ ಕುಗ್ಗಬಹುದು ಎಂದು ಆಝುಮಶಾಹನು ಭಾವಿಸಿದ್ದನು. ಆದ್ದರಿಂದ ಅವನು ಶಾಹೂ ಮಹಾರಾಜರನ್ನು ಬಂಧನದಿಂದ ಬಿಡುಗಡೆ ಮಾಡಿದನು.

**ಶೂಹೂ ಮಹಾರಾಜರ ರಾಜ್ಯಾಭಿಷೇಕ :** ಬಂಧನದಿಂದ ಬಿಡುಗಡೆಯಾದ ನಂತರ ಶಾಹೂ ಮಹಾರಾಜರು ಮಹಾರಾಷ್ಟ್ರಕ್ಕೆ ಬಂದರು. ಕೆಲವು ಮರಾಠಾ ಸರದಾರರು ಅವರನ್ನು ಬಂದು ಕೂಡಿದರು. ಆದರೆ ಮಹಾರಾಣಿ ತಾರಾಬಾಯಿಯವರು ಶಾಹೂ ಮಹಾರಾಜರ ಛತ್ರಪತಿ ಸ್ಥಾನದ ಮೇಲಿನ ಹಕ್ಕನ್ನು ಮನ್ನಿಸಲಿಲ್ಲ. ಪುಣೆ ಜಿಲ್ಲೆಯಲ್ಲಿ ಭೀಮಾನದಿ ತೀರದ ಖೇಡ ಎಂಬ ಸ್ಥಳದಲ್ಲಿ ಶಾಹೂ ಮಹಾರಾಜ ಮತ್ತು ಮಹಾರಾಣಿ ತಾರಾಬಾಯಿ ಇವರ ಸೈನ್ಯಗಳ ನಡುವೆ ಯುದ್ಧವಾಯಿತು. ಈ ಯುದ್ಧದಲ್ಲಿ ಶಾಹೂ ಮಹಾರಾಜರು ಜಯ-ಗಳಿಸಿದರು. ಅವರು ಸಾತಾರಾವನ್ನು ಗೆದ್ದು ಕೊಂಡರು. ಸ್ವತಃ ರಾಜ್ಯಾಭಿಷೇಕ ಮಾಡಿಸಿಕೊಂಡರು. ಸಾತಾರಾ ಇದು ಮರಾಠಾ ರಾಜ್ಯದ ರಾಜಧಾನಿಯಾಯಿತು.



ಶಾಹೂ ಮಹಾರಾಜರು

ಕೆಲವು ಕಾಲ ಶಾಹೂ ಮಹಾರಾಜ ಮತ್ತು ಮಹಾರಾಣಿ ತಾರಾಬಾಯಿಯವರ ನಡುವಿನ ವಿರೋಧವು ಮುಂದುವರಿಯಿತು. ಕ್ರಿ.ಶ. 1710 ರಲ್ಲಿ ಮಹಾರಾಣಿ ತಾರಾಬಾಯಿಯವರು ಪನ್ಹಾಳಗಡದಲ್ಲಿ ತಮ್ಮ ಚಿಕ್ಕ ವಯಸ್ಸಿನ ಮಗನಾದ ಶಿವಾಜಿಯನ್ನು ಎರಡನೆಯ ಛತ್ರಪತಿ ಎಂದು ಘೋಷಿಸಿದರು. ಅಂದಿನಿಂದ ಮರಾಠಾಶಾಹಿಯಲ್ಲಿ ಸಾತಾರಾ ರಾಜ್ಯವಲ್ಲದೆ ಕೊಲ್ಹಾಪೂರದ ಸ್ವತಂತ್ರ ರಾಜ್ಯವು ಅಸ್ತಿತ್ವದಲ್ಲಿ ಬಂದಿತು.

ಶಾಹೂ ಮಹಾರಾಜರ ಪೂರ್ವಾಯುಷ್ಯವು ಮುಘಲರ ಶಿಬಿರದಲ್ಲಿ ಕಳೆದುದರಿಂದ ಅವರಿಗೆ ಮುಘಲರ ರಾಜಕಾರಣವನ್ನು ಸಮೀಪದಿಂದ ನೋಡಲು ದೊರಕಿತ್ತು. ಮುಘಲರ ಹಾಗೂ ವಿಶೇಷತ: ಉತ್ತರ ಭಾರತದ ರಾಜಕಾರಣದಲ್ಲಿಯ ಒಳಹೊರಗುಗಳು ಅವರಿಗೆ ತಿಳಿದಿದ್ದವು. ಮುಘಲ ಸಾಮ್ರಾಜ್ಯದ ಸಾಮರ್ಥ್ಯದ ಹಾಗೂ ಕೊರತೆಗಳ ಬಗ್ಗೆಯೂ ಅವರಿಗೆ ಚೆನ್ನಾಗಿ ಮಾಹಿತಿಯಾಗಿತ್ತು. ಅಲ್ಲದೆ ಮುಘಲ ದರಬಾರಿನಲ್ಲಿಯ ಪ್ರಭಾವಶಾಲಿ ವ್ಯಕ್ತಿಗಳ ಜೊತೆಗೆ ಅವರ ಪರಿಚಯವಾಗಿತ್ತು. ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಮರಾಠರ ರಾಜಕಾರಣದ ದಿಶೆಯನ್ನು ನಿರ್ಧರಿಸುವ ಸಲುವಾಗಿ ಈ ಎಲ್ಲ ಸಂಗತಿಗಳ ಉಪಯೋಗವಾಯಿತು.

ಮರಾಠರ ರಾಜ್ಯವನ್ನು ನಷ್ಟಪಡಿಸುವ ಔರಂಗಜೇಬನ ಮೊದಲಿನ ನೀತಿಯನ್ನು ಅವನ ವಾರಸುದಾರರು ಈಗ ಬಿಟ್ಟಿದ್ದರು. ಆದರಿಂದಾಗಿ ಈಗ ಮುಘಲ ಸಾಮ್ರಾಜ್ಯ ದೊಡನೆ ಸಂಘರ್ಷ ಮಾಡುವ ಬದಲಾಗಿ ಅದರ ರಕ್ಷಕ ನೆಂದು ಮುಂದೆ ಬಂದು ತಮ್ಮ ಆಡಳಿತದ ವಿಸ್ತಾರ ಮಾಡಬೇಕೆಂಬ ಹೊಸ ರಾಜಕೀಯ ನೀತಿಯನ್ನು ಮರಾಠರು ಸ್ವೀಕರಿಸಿದರು. ಹೊಸ ದೇವಾಲಯವನ್ನು ಕಟ್ಟಿಸುವುದರಿಂದ ದೊರೆಯುವ ಪುಣ್ಯವು ಹಳೆಯ ದೇವಾಲಯದ ಜೀರ್ಣೋದ್ಧಾರ ಮಾಡುವುದರಿಂದ ದೊರೆಯುತ್ತದೆ ಎಂಬುದು ಈ ನೀತಿಯ ಸೂತ್ರವಾಗಿತ್ತು.

ಮುಘಲ ಸಾಮ್ರಾಜ್ಯಕ್ಕೆ ವಾಯವ್ಯದ ಕಡೆಯಿಂದ ಇರಾಣಿ, ಅಫಗಾನಿಸ್ತಾನಗಳಿಂದ ಆಕ್ರಮಣದ ಭೀತಿಯಿದ್ದಂತೆ ಸುತ್ತಮುತ್ತಲಿನ ಪಠಾಣ, ರಜಪೂತ, ಜಾಟ, ರೋಹಿಲೆ ಇವರಂತಹ ಸ್ಥಳೀಯ ರಾಜರಿಂದಲೂ ಗಂಡಾಂತರವಿತ್ತು. ಅಲ್ಲದೆ ದರಬಾರಿನಲ್ಲಿ ನಡೆಯುವ ಸ್ಪರ್ಧೆ ಮತ್ತು ಸಂಘರ್ಷಗಳಿಂದಾಗಿಯೂ ಮುಘಲ ಸಾಮ್ರಾಜ್ಯವು ಒಳಗಿನಿಂದ ಪೊಳ್ಳಾಗಿತ್ತು. ಇದರಿಂದಾಗಿ ದಿಲ್ಲಿ ದರಬಾರಿಗೆ ಮರಾಠರ ಸಹಾಯದ ಅವಶ್ಯಕತೆ ಇತ್ತು.

**ಬಾಳಾಜಿ ವಿಶ್ವನಾಥ:** ಮುಘಲರ ಬಂಧನದಿಂದ ಶಾಹೂ ಮಹಾರಾಜರ ಬಿಡುಗಡೆಯಾದ ನಂತರ ಅವರು ಬಾಳಾಜಿ ವಿಶ್ವನಾಥ ಭಟ್ ಇವನ್ನು ಪೇಶವೆಯನ್ನಾಗಿ ಮಾಡಿದರು. ಬಾಳಾಜಿಯು ಮೂಲತ: ಕೊಂಕಣದಲ್ಲಿಯ ಶ್ರೀವರ್ಧನ ಗ್ರಾಮದವನು. ಅವನು ಕರ್ತೃತ್ವಶಾಲಿಯೂ ಅನುಭವಿಯೂ ಆಗಿದ್ದನು. ಶಾಹೂ ಮಹಾರಾಜರೇ ಮರಾಠಾ ರಾಜ್ಯದ ನಿಜವಾದ ಉತ್ತರಾಧಿಕಾರಿಯೆಂಬುದನ್ನು ತಿಳಿಸಿಕೊಡುತ್ತ ಇವನು ಅನೇಕ ಮರಾಠಾ ಸರದಾರರನ್ನು ಶಾಹೂ ಮಹಾರಾಜರ ಕಡೆಗೆ ಒಲಿಸಿಕೊಂಡನು.

ಕಾನ್ಹೋಜಿ ಆಂಗ್ರೆಯು ಮರಾಠಾ ನೌಕಾಪಡೆಯ ಪ್ರಮುಖನಾಗಿದ್ದನು. ಅವನು ತಾರಾಬಾಯಿಯ ಪಕ್ಷವಹಿಸಿದನು. ಅವನು ಶಾಹೂ ಮಹಾರಾಜರ ಪ್ರಾಂತಗಳ ಮೇಲೆ ದಾಳಿಮಾಡಿದನು. ಆದರಿಂದಾಗಿ ಶಾಹೂ ಮಹಾರಾಜರ ಮುಂದೆ ಕಠಿಣ ಪ್ರಸಂಗ ನಿರ್ಮಾಣವಾಯಿತು. ಈ ಪರಿಸ್ಥಿತಿಯಲ್ಲಿ ಅವರು ಬಾಳಾಜಿಯನ್ನು ಕಾನ್ಹೋಜಿ ಆಂಗ್ರೆಯ ವಿರುದ್ಧ ಕಳಿಸಿದನು. ಬಾಳಾಜಿಯು ಯುದ್ಧವನ್ನು ತಪ್ಪಿಸಿ ಮುತ್ಸದ್ದಿತನದಿಂದ ಕಾನ್ಹೋಜಿಯನ್ನು ಶಾಹೂ ಮಹಾರಾಜರ ಕಡೆಗೆ ಒಲಿಸಿದನು.

**ಚೌಥಾಯಿ – ಸರದೇಶಮುಖಿ ಸನದುಗಳು:** ಮಹಾರಾಷ್ಟ್ರದಲ್ಲಿ ಶಾಹೂ ಮಹಾರಾಜರ ಸ್ಥಾನವನ್ನು ಸ್ಥಿರವಾಗಿ ಮಾಡಿದ ನಂತರ ಬಾಳಾಜಿಯು ಉತ್ತರದ ರಾಜಕಾರಣದ ಕಡೆಗೆ ತನ್ನ ಗಮನ ಹರಿಸಿದನು. ಔರಂಗಜೇಬ ಬಾದಶಾಹನ ಮರಣದನಂತರ ದಿಲ್ಲಿಯ ಆಸ್ಥಾನದಲ್ಲಿ ಅಂತಃಕಲಹ ಹಾಗೂ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಅಲ್ಲಿ ಸಯ್ಯದ ಬಂಧು ಅಬ್ದುಲ್ಲಾ (ಹಸನ) ಮತ್ತು ಹುಸೇನ ಅಲಿಯವರ ವರ್ಚಸ್ಸು ನಿರ್ಮಾಣವಾಗಿತ್ತು. ಅಲ್ಲಿ ಸಯ್ಯದ ಬಂಧು ಅಬ್ದುಲ್ಲಾ (ಹಸನ) ಮತ್ತು ಹುಸೇನ ಅಲಿಯವರ ವರ್ಚಸ್ಸು ನಿರ್ಮಾಣವಾಗಿತ್ತು. ಅವರ ಸಹಾಯದಿಂದ ಬಾಳಾಜಿಯು ಕ್ರಿ.ಶ. 1719ರಲ್ಲಿ ಮುಘಲ ಬಾದಶಾಹನ ಕಡೆಯಿಂದ ದಕ್ಷಿಣದ ಮುಘಲ ಪ್ರದೇಶಗಳಿಂದ ಕೆಲವು ಸ್ಥಳಗಳಲ್ಲಿ ಚೌಥಾಯಿ ಹಾಗೂ ಕೆಲವು ಸ್ಥಳಗಳಲ್ಲಿ ಸರದೇಶಮುಖಿ ವಸೂಲು ಮಾಡುವ ಸನದುಗಳನ್ನು ದೊರಕಿಸಿಕೊಂಡನು ಚೌಥಾಯಿ ಎಂದರೆ ಉತ್ಪನ್ನದ ಒಂದು ನಾಲ್ಕಾಂಶ ಭಾಗ ಹಾಗೂ ಸರದೇಶಮುಖಿ ಎಂದರೆ ಒಂದು ಹತ್ತಾಂಶ ಭಾಗ-ಹೌದು.


ಮೊದಲನೆಯ ಬಾಜೀರಾವ

**ಮೊದಲನೆಯ ಬಾಜೀರಾವ:** ಬಾಳಾಜಿ ವಿಶ್ವನಾಥನ ಮರಣದ ನಂತರ ಅವನ ಮಗನಾದ (ಮೊದಲನೆಯ) ಬಾಜಿರಾವನನ್ನು ಕ್ರಿ.ಶ 1720ರಲ್ಲಿ ಶಾಹೂ ಮಹಾರಾಜರು ಪೇಶ್ವೆಯನ್ನಾಗಿ ನೇಮಕ ಮಾಡಿದರು. ಪೇಶ್ವೆಪದದ ಇಪ್ಪತ್ತು ವರ್ಷಗಳ ಕಾಲಾವಧಿಯಲ್ಲಿ ಅವನು ಮರಾಠಾ ರಾಜ್ಯವನ್ನು ವಿಸ್ತರಿಸಿದನು.

**ಪಾಲಖೇಡದಲ್ಲಿ ನಿಜಾಮನ ಪರಾಭವ:** ಮುಘಲ ಬಾದಶಾಹನಾದ ಫರ್ರುಖಸಿಯರ ಇವನು ನಿಜಾಮ-ಉಲ್-ಮುಲ್ಕ್ ಇವನನ್ನು ದಕ್ಷಿಣದ ಸುಭೇದಾರನನ್ನಾಗಿ ನೇಮಕ ಮಾಡಿದನು. ಕ್ರಿ.ಶ. 1713ರಲ್ಲಿ ನಿಜಾಮನು ಹೈದರಾಬಾದಿನಲ್ಲಿ ತನ್ನ ಸ್ವತಂತ್ರ ಅಸ್ತಿತ್ವವನ್ನು ನಿರ್ಮಿಸುವ ಪ್ರಯತ್ನಮಾಡಿದನು. ಬಾದಶಾಹನು ಮರಾಠರಿಗೆ ದಕ್ಷಿಣದಲ್ಲಿಯ ಮುಘಲ ಪ್ರಾಂತಗಳಿಂದ ಚೌಥಾಯಿ-ಸರದೇಶಮುಖಿ ವಸೂಲು ಮಾಡುವ ಅಧಿಕಾರವನ್ನು ನೀಡಿದ್ದನು. ಇದಕ್ಕೆ ನಿಜಾಮನ ವಿರೋಧವಿತ್ತು. ಅವನು ಪುಣೆ ಪರಗಣೆಯ ಕೆಲವು ಭಾಗಗಳನ್ನು ಗೆದ್ದುಕೊಂಡನು. ಬಾಜೀರಾವನು ನಿಜಾಮನಿಗೆ ಒಳ್ಳೆಯ ಪಾಠ ಕಲಿಸಬೇಕೆಂದು ನಿರ್ಧರಿಸಿದನು. ಅವನು ಔರಂಗಾಬಾದ್ ಹತ್ತಿರದ ಪಾಲಖೇಡ ಎಂಬಲ್ಲಿ ನಿಜಾಮನನ್ನು ಪರಾಭವಗೊಳಿಸಿದನು. ಆಗ ಅವನು ಚೌಥಾಯಿ- ಸರದೇಶಮುಖಿ ವಸೂಲು ಮಾಡುವ ಮರಾಠರ ಹಕ್ಕನ್ನು ಮಾನ್ಯ ಮಾಡಿದನು.

ಮುಘಲ ಸಾಮ್ರಾಜ್ಯವು ದುರ್ಬಲವಾದದ್ದರಿಂದ ಉತ್ತರದಲ್ಲಿ ರಾಜ್ಯ ವಿಸ್ತಾರ ಮಾಡಲು ಹೆಚ್ಚು ಅವಕಾಶವಿದೆಯೆಂಬುದನ್ನು ಬಾಜೀರಾವನು ಗುರುತಿಸಿದ್ದನು. ಶಾಹೂ ಮಹಾರಾಜರು ಅವನ ನೀತಿಗೆ ಬೆಂಬಲ ನೀಡಿದರು.

**ಮಾಳವಾ:** ಇಂದಿನ ಮಧ್ಯಪ್ರದೇಶದಲ್ಲಿಯ ಮಾಳವಾ ಈ ಭಾಗವು ಮುಘಲರ ವಶದಲ್ಲಿತ್ತು. ಬಾಜೀರಾವನ ತನ್ನ ಸೋದರನಾದ ಚಿಮಾಜಿ ಅಪ್ಪಾ ಇವನ ನೇತೃತ್ವದಲ್ಲಿ ಮಲ್ಹಾರರಾವ ಹೋಳಕರ, ರಾಣೋಜಿ ಶಿಂದೆ ಮತ್ತು ಉದಾಜಿ ಪವಾರ ಇವರನ್ನು ಮಾಳವಾಕ್ಕೆ ಕಳಿಸಿದನು. ಅಲ್ಲಿ ಅವರು ತಮ್ಮ ಸ್ಥಾನವನ್ನು ಭದ್ರಗೊಳಿಸಿದರು.

**ಬುಂದೇಲಖಂಡ:** ಬುದೇಲಖಂಡವೆಂದರೆ ಇಂದಿನ ಮಧ್ಯಪ್ರದೇಶ ಮತ್ತು ಉತ್ತರಪ್ರದೇಶ ಈ ಪ್ರಾಂತಗಳಲ್ಲಿಯ ಝೂಂಶಿ, ಪನ್ನಾ, ಸಾಗರ ಇತ್ಯಾದಿ ಪಟ್ಟಣಗಳ ಪರಿಸರದಲ್ಲಿಯ ಪ್ರದೇಶ.

ಬುಂದೇಲಖಂಡದಲ್ಲಿ ಛತ್ರಸಾಲ ರಾಜನು ತನ್ನ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದ್ದನು. ಅಲಹಾಬಾದನ ಮುಘಲ ಸುಭೇದಾರನಾದ ಮಹಮ್ಮದ ಖಾನ್ ಬಂಗಶನು ಬುಂದೇಲಖಂಡದ ಮೇಲೆ ದಾಳಿ ಮಾಡಿದನು. ಅವನು ಛತ್ರಸಾಲನನ್ನು ಸೋಲಿಸಿದನು. ಆಗ ಛತ್ರಸಾಲನು ಸಹಾಯ ಮಾಡುವಂತೆ ಬಾಜೀರಾವನನ್ನು ವಿನಂತಿಸಿಕೊಂಡನು.

ಬಾಜೀರಾವನು ಪ್ರಚಂಡವಾದ ಸೈನ್ಯದೊಂದಿಗೆ ಬುಂದೇಲಖಂಡಕ್ಕೆ ಹೋದನು. ಅವನು ಬಂಗಶನನ್ನು ಸೋಲಿಸಿದನು. ಛತ್ರಸಾಲನು ಬಾಜೀರಾವನನ್ನು ಗೌರವಿಸಿದನು. ಈ ರೀತಿ ಮಾರಾಠರು ಮಾಳವಾ ಮತ್ತು ಬುಂದೇಲಖಂಡಗಳಲ್ಲಿ ತಮ್ಮ ವರ್ಚಸ್ಸನ್ನು ಸ್ಥಾಪಿಸಿದರು.

**ಗೊತ್ತಿದೆಯೇ ನಿಮಗೆ?**

ಛತ್ರಸಾಲನು ಸಹಾಯಕ್ಕಾಗಿ ಬಾಜೀರಾವನಿಗೆ ಪತ್ರ ಬರೆದನು. ಅದರಲ್ಲಿ ಅವನು ಹೀಗೆ ಬರೆದನು, ''ಜೋ ಗತ ಆಹ ಗಜೇಂದ್ರಕೀ ವಹ ಗತ ಆಯೀ ಹೈ ಆಜ. ಬಾಜೀ ಜಾನಬುಂದೇಲಕಿ, ಬಾಜೀ ರಾಖೊ ಲಾಜ'' (ಮೊಸಳೆಯಿಂದ ಹಿಡಿಯಲ್ಪಟ್ಟ ಗಜೇಂದ್ರನಂತೆ ನನ್ನ ಅವಸ್ಥೆಯಾಗಿದೆ. ನಾನೀಗ ದೊಡ್ಡ ಸಂಕಟದಲ್ಲಿದ್ದೇನೆ. ನನ್ನ ಲಜ್ಜೆಯನ್ನು ಉಳಿಸು. ನೀನೇ ನನ್ನನ್ನು ಕಾಪಾಡು)

ಬಾಜೀರಾವನು ಬಾದಶಾಹನ ಕಡೆಗೆ ಮಾಳವಾದ ಸುಭೇದಾರಿಕೆಯ ಬೇಡಿಕೆ ಮಾಡಿದನು. ಅವನು ಈ ಬೇಡಿಕೆಯನ್ನು ನಿರಾಕರಿಸಿದನು. ಆದ್ದರಿಂದ ಬಾಜೀರಾವನು ಮಾರ್ಚ 1737ರಲ್ಲಿ ದಿಲ್ಲಿಯ ಮೇಲೆ ದಾಳಿ ಮಾಡುವ ಉದ್ದೇಶದಿಂದ ದಿಲ್ಲಿಯ ಗಡಿಯವರೆಗೆ ಹೋಗಿ ತಲುಪಿದನು.

**ಭೋಪಾಳದ ಯುದ್ಧ:** ಬಾಜೀರಾವನ ದಾಳಿಯಿಂದಾಗಿ ಬಾದಶಹನು ಅಸ್ವಸ್ಥನಾದನು. ದಿಲ್ಲಿಯ ರಕ್ಷಣೆಗಾಗಿ ಅವನು ನಿಜಾಮನನ್ನು ಕರೆಸಿಕೊಂಡನು. ಪ್ರಚಂಡ ಸೈನ್ಯದೊಂದಿಗೆ ನಿಜಾಮನು ಬಾಜೀರಾವನ ವಿರುದ್ಧ ಏರಿ ಹೋದನು. ಬಾಜೀರಾವನು ಭೋಪಾಳ ಎಂಬಲ್ಲಿ ಅವನನ್ನು ಸೋಲಿಸಿದನು. ನಿಜಾಮನು ಮರಾಠರಿಗೆ ಮಾಳವಾದ ಸುಭೇದಾರಿಕೆಯ ಸನದನ್ನು ಬಾದಹಶನ ಕಡೆಯಿಂದ ದೊರಕಿಸಿಕೊಡುವುದಾಗಿ ಒಪ್ಪಿಕೊಂಡನು.

**ಪೋರ್ತುಗೀಜರ ಪರಾಭವ:** ಕೊಂಕಣ ಕರಾವಳಿ ತೀರದ ವಸಯಿ ಮತ್ತು ಠಾಣೆ ಈ ಭಾಗಗಳು ಪೋರ್ತುಗೀಜರ ವಶದಲ್ಲಿದ್ದವು. ಪೋರ್ತುಗೀಜ ಆಡಳಿತಗಾರರು ಪ್ರಜೆಗಳ ಶೋಷಣೆ ಮಾಡುತ್ತಿದ್ದರು. ಬಾ ಜೀರಾವನು ಪೋರ್ತುಗೀಜರನ್ನು ಸೋಲಿಸುವ ಸಲುವಾಗಿ ತನ್ನ ಸಹೋದರನಾದ ಚಿಮಾಜಿ ಅಪ್ಪಾನನ್ನು ಕಳಿಸಿದನು. ಅವನು ಠಾಣೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಗೆದ್ದುಕೊಂಡನು. ಆ ನಂತರ ಕ್ರಿ.ಶ. 1739ರಲ್ಲಿ ಅವನು ವಸಯಿ ಕೋಟೆಗೆ ಮುತ್ತಿಗೆಹಾಕಿದನು. ಆ ಕೋಟೆಯು ಅತ್ಯಂತ ಭದ್ರವಾಗಿತ್ತು. ಪೋರ್ತುಗೀಜರಲ್ಲಿ ಪರಿಣಾಮಕಾರಕ ತೋಫುಗಳಿದ್ದವು. ಆದರೂ ಚಿಮಾಜಿ ಅಪ್ಪಾ ಇವನು ಜಿದ್ದಿನಿಂದ ದಾಳಿಯನ್ನು ಮುಂದುವರಿಸಿ 'ಪೋರ್ತುಗೀಜರಿಗೆ ಶರಣು ಬರುವಂತೆ ಮಾಡಿದನು. ಆದರಿಂದಾಗಿ ವಸಯಿಯ ಕೋಟೆ ಮತ್ತು ಪೋರ್ತುಗೀಜರ ಬಹುತಾಂಶ ಪ್ರಾಂತಗಳು ಮರಾಠರ ವಶಕ್ಕೆ ಬಂದವು.

**ಬಾಜೀರಾವನ ಸಾವು:** ಇರಾಣದ ಬಾದಶಹನಾದ ನಾದಿರ ಶಾಹನು ಭಾರತದ ಮೇಲೆ ದಾಳಿಮಾಡಿದನು. ಆಗ ಶಾಹೂ ಮಹಾರಾಜರ ಆಜ್ಞೆಯಂತೆ ಬಾಜೀರಾವನು ಪ್ರಬಲವಾದ ಸೈನ್ಯದೊಂದಿಗೆ ಉತ್ತರದ ಕಡೆಗೆ ಹೊರಟನು. ಅವನು ಬರ್ಹಾಣಪೂರ ತಲುಪಿದನು. ಅಲ್ಲಿಯ ವರೆಗೆ ನಾದಿರಶಾಹನು ದಿಲ್ಲಿಯಿಂದ ಅಪಾರ ಸಂಪತ್ತನ್ನು ಲೂಟಿ ಮಾಡಿಕೊಂಡು ಸ್ವದೇಶಕ್ಕೆ ಮರಳಿ ಹೋಗಿದ್ದನು. ಎಪ್ರಿಲ್ 1740 ರಲ್ಲಿ ನರ್ಮದಾ ತೀರದಲ್ಲಿರುವ ರಾವೇರಖೇಡಿ ಎಂಬಲ್ಲಿ ಬಾಜೀರಾವನು ಮರಣಹೊಂದಿದನು.

ಬಾಜೀರಾವನು ಒಬ್ಬ ಉತ್ತಮ ಸೇನಾನಿಯಾಗಿದ್ದನು. ತನ್ನ ಪರಾಕ್ರಮದಿಂದ ಅವನು ಉತ್ತರ ಭಾರತದಲ್ಲಿ ಮರಾಠರ ವರ್ಚಸ್ಸನ್ನು ಸ್ಥಾಪಿಸಿದನು. ಅವನು ಮರಾಠಾ ಪ್ರಭುತ್ವಕ್ಕೆ ಅಖಿಲ ಭಾರತಿಯ ಮಟ್ಟದಲ್ಲಿಯ ಒಂದು ಪ್ರಬಲವಾದ ರಾಜ್ಯವೆಂಬ ಸ್ಥಾನವನ್ನು ದೊರಕಿಸಿಕೊಟ್ಟನು. ಅವನಕಾಲದಲ್ಲಿ ಶಿಂದೆ, ಹೋಳಕರ, ಪವಾರ, ಗಾಯಕವಾಡ ಈ ಮನೆತನಗಳು ಮುಂದೆ ಬಂದವು.

8VHKIK

## ಅಭ್ಯಾಸ

**1. ಎಂದರೇನು?**

(1) ಚೌಥಾಯಿ –

(2) ಸರದೇಶಮುಖಿ –

**2. ಒಂದು ಶಬ್ದದಲ್ಲಿ ಉತ್ತರ ಬರೆಯಿರಿ.**

(1) ಬಾಳಾಜಿಯು ಮೂಲತ: ಕೊಂಕಣದಲ್ಲಿಯ ಈ ಗ್ರಾಮದವನು ...

(2) ಬುಂದೇಲಖಂಡದಲ್ಲಿ ಇವನ ರಾಜ್ಯವಿತ್ತು ...

(3) ಈ ಸ್ಥಳದಲ್ಲಿ ಬಾಜೀರಾವನು ಮರಣಹೊಂದಿದನು ...

(4) ಇವನು ಪೋರ್ತುಗೀಜರನ್ನು ಸೋಲಿಸಿದನು ...

**3. ಉತ್ತರ ಬರೆಯಿರಿ.**

(1) ಕಾನ್ಹೋಜಿ ಆಂಗ್ರೆ (2) ಪಾಲಖೇಡದ ಯುದ್ಧ (3) ಬಾಳಾಜಿ ವಿಶ್ವನಾಥ (4) ಮೊದಲನೆಯ ಬಾಜೀರಾವ

**4. ಕಾರಣಗಳನ್ನು ಬರೆಯಿರಿ.**

(1) ಮರಾಠಾಶಾಯಿಯಲ್ಲಿ ಎರಡು ಸ್ವತಂತ್ರರಾಜ್ಯಗಳು ನಿರ್ಮಾಣವಾದವು.

(2) ಆಝುಮಶಾಹನು ಛತ್ರಪತಿ ಶಾಹೂ ಮಹಾರಾಜರನ್ನು ಬಂಧನದಿಂದ ಬಿಡುಗಡೆ ಮಾಡಿದನು.

(3) ದಿಲ್ಲಿ ದರಬಾರಿಗೆ ಮರಾಠರ ಸಹಾಯದ ಅವಶ್ಯಕತೆ ಇತ್ತು.

**ಉಪಕ್ರಮ:**

ಮಹಾರಾಣಿ ತಾರಾಬಾಯಿಯವರ ಚರಿತ್ರೆಯನ್ನು ಪಡೆದು ಅವರ ಜೀವನದಲ್ಲಿಯ ನಿಮಗೆ ಹಿಡಿಸಿದ ಪ್ರಸಂಗದ ಪಾತ್ರಾಭಿನಯವನ್ನು ವರ್ಗದಲ್ಲಿ ಸಾದರಪಡಿಸಿರಿ.

# 11. ರಾಷ್ಟ್ರರಕ್ಷಕ ಮರಾಠರು

ಶಾಹೂ ಮಹಾರಾಜರು ಬಾಜೀರಾವನ ನಂತರ ಅವನ ಮಗನಾದ ಬಾಳಾಜಿ ಬಾಜೀರಾವ ಊರ್ಫ್ ನಾನಾಸಾಹೇಬ ಇವನಿಗೆ ಪೇಶವೆ ಪದದ ವಸ್ತ್ರಗಳನ್ನು ನೀಡಿದರು. ನಾದಿರಶಾಹನ ಆಕ್ರಮಣದ ನಂತರ ದಿಲ್ಲಿಯಲ್ಲಿ ಅಸ್ಥಿರತೆ ನಿರ್ಮಾಣವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಉತ್ತರದಲ್ಲಿ ಮರಾಠರ ಆಡಳಿತವನ್ನು ಸ್ಥಿರವಾಗಿರಿಸಲು ನಾನಾಸಾಹೇಬ ಪೇಶವೆ ಪ್ರಯತ್ನ ಮಾಡಿದನು. ಈ ಕಾಲದಲ್ಲಿ ಅಹಮದಶಾಹ ಅಬ್ದಾಲಿಯು ಪಾಣಿಪತ್ತಿನಲ್ಲಿ ಮರಾಠರ ಮುಂದೆ ಆಹ್ವಾನವನ್ನು ನಿರ್ಮಾಣಮಾಡಿದನು. ಈ ಎಲ್ಲ ಸ್ಥಿತ್ಯಂತರಗಳ ಮಾಹಿತಿಯನ್ನು ನಾವು ಈ ಪಾಠದಲ್ಲಿ ಪಡೆಯುವವರಿದ್ದೇವೆ.

**ಉತ್ತರದಲ್ಲಿಯ ಪರಿಸ್ಥಿತಿ:** ಆಯೋಧ್ಯಾ ಪ್ರಾಂತದ ಉತ್ತರ - ಪಶ್ಚಿಮಕ್ಕೆ ಹಿಮಾಲಯದ ಅಡಿಯಲ್ಲಿ ಇರುವ ಪ್ರದೇಶವು ಹದಿನೆಂಟನೆಯ ಶತಮಾನದಲ್ಲಿ ರೋಹಿಲಖಂಡ ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಅಫಗಾಣಿಸ್ಥಾನದಿಂದ ಬಂದ ಪಠಾಣರು ಈ ಭಾಗದಲ್ಲಿ ನೆಲೆಸಿದ್ದರು. ಈ ಪಠಾಣರಿಗೆ ರೋಹಿಲೆ ಎನ್ನುತ್ತಿದ್ದರು. ಗಂಗಾ-ಯಮುನಾ ನದಿಗಳ ದೋ-ಆಬ್‌ದ ಪ್ರದೇಶದಲ್ಲಿ ಕೋಲಾಹಲವನ್ನು ಉಂಟು ಮಾಡಿದ್ದರು. ಅವರನ್ನು ನಿಯಂತ್ರಿಸುವ ಸಲುವಾಗಿಅಯೋಧ್ಯೆಯ ನವಾಬನು ಮರಾಠರನ್ನು ಬರಮಾಡಿಕೊಂಡನು. ಮರಾಠರು ರೋಹಿಲರನ್ನು ನಿಯಂತ್ರಿಸಿದರು.

**ಅಫಗಾಣರೊಡನೆ ಸಂಘರ್ಷ:** ಅಫಘಾಣಿಸ್ತಾನದ ಬಾದಶಹನಾದ ಅಹಮದ ಶಾಹ ಅಬ್ದಾಲಿಗೆ ಭಾರತದ ಸಂಪತ್ತಿನ ಆಕರ್ಷಣೆಯಿತ್ತು. ಕ್ರಿಶ. 1751ರಲ್ಲಿ ಅವನು ಪಂಜಾಬದ ಮೇಲೆ ಆಕ್ರಮಣ ಮಾಡಿದನು. ಈ ಕಾಲದಲ್ಲಿ ಮುಘಲ ಪ್ರದೇಶದಲ್ಲಿ ಅರಾಜಕತೆ ನಿರ್ಮಾಣವಾಗಿತ್ತು. ಮುಘಲರಿಗೆ ಅಬ್ದಾಲಿಯ ಆಕ್ರಮಣದ ಭಯವಿತ್ತು ಈ ಪರಿಸ್ಥಿತಿಯಲ್ಲಿ ತಮ್ಮ ಸಂರಕ್ಷಣೆಗಾಗಿ ಮರಾಠರ ನೆರವು ಪಡೆಯುವುದು ಮುಘಲರಿಗೆ ಅವಶ್ಯಕವೆನಿಸಿತು. ಭಾದಶಾಹನಿಗೆ ಮರಾಠರ ಸಾಮರ್ಥ್ಯ ಮತ್ತು ಪ್ರಾಮಾಣಿಕತೆಗಳ ಬಗ್ಗೆ ಭರವಸೆ ಉಂಟಾಗಿತ್ತು. ದಿಲ್ಲಿಯ ರಕ್ಷಣೆಗಾಗಿ ಮರಾಠಾ ಪ್ರಭುತ್ವದಷ್ಟು ಸಮರ್ಥವಾಗಿ ಪ್ರಭುತ್ವ ಬೇರೊಂದಿರಲಿಲ್ಲ, ಆದರಿಂದಾಗಿ ಬಾದಶಾಹನು ಕ್ರಿ.ಶ. 1752ರ ಎಪ್ರಿಲ್ ತಿಂಗಳಲ್ಲಿ ಮರಾಠರೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಮರಾಠರು ರೋಹಿಲೆ, ಜಾಟ, ರಾಜಪೂತ, ಅಫಘಾಣ ಮುಂತಾದ ಶತ್ರುಗಳಿಂದ ಮುಘಲ ಸಾಮ್ರಾಜ್ಯವನ್ನು ರಕ್ಷಿಸುವುದಾಗಿ ಒಪ್ಪಿಕೊಂಡರು. ಅದಕ್ಕೆ ಬದಲಾಗಿ ಮರಾಠರಿಗೆ ನಗದು ಹಣ ದೊರೆಯುವುದಿತ್ತು. ಅಲ್ಲದೆ ಪಂಜಾಬ, ಮುಲ್ತಾನ, ರಾಜಪುತಾನಾ, ಸಿಂಧ, ರೋಹಿಲ ಖಂಡ ಈ ಪ್ರದೇಶಗಳಲ್ಲಿ ಚೌಥಾಯಿಯನ್ನು ವಸೂಲು ಮಾಡುವ ಹಕ್ಕು ಮರಾಠರಿಗೆ ದೊರೆಯಿತು. ಅದರಂತೆ ಅಜಮೇರ ಮತ್ತು ಆಗ್ರಾ ಪ್ರಾಂತಗಳ ಸುಭೇದಾರಿಕೆಯನ್ನು ನೀಡಲಾಯಿತು.

ಈ ಒಪ್ಪಂದದ ಪ್ರಕಾರ ಛತ್ರಪತಿಯ ಪರವಾಗಿ ಪೇಶವೆಯವರು ಶಿಂದೆ-ಹೋಳಕರ ಇವರ ಸೈನ್ಯವನ್ನು ದಿಲ್ಲಿಯ ಸಂರಕ್ಷಣೆಗಾಗಿ ಕಳಿಸಿದರು. ಮರಾಠರು ದಿಲ್ಲಿಯ ಕಡೆಗೆ ಹೊರಟರು. ಈ ಸುದ್ದಿ ಮುಟ್ಟಿದ ಕೂಡಲೇ ಅಬ್ದಾಲಿಯು ಸ್ವದೇಶಕ್ಕೆ ಮರಳಿದನು. ಮರಾಠರು ಹಂತ ಹಂತವಾಗಿ ದಿಲ್ಲಿ ತಲುಪಿದರು. ಮರಾಠರಿಂದಲೇ ಅಬ್ದಾಲಿಯ ಸಂಕಟ ದೂರವಾಯಿತು. ಆದ್ದರಿಂದ ಬಾದಶಾಹನು ಮುಘಲರ ಸುಭೆಗಳಲ್ಲಿಯ ಚೌಥಾಯಿಯ ಹಕ್ಕನ್ನು ಅವರಿಗೆ ನೀಡಿದನು. ಈ ಸುಭೆಗಳಲ್ಲಿ ಕಾಬೂಲ, ಕಂದಹಾರ ಮತ್ತು ಪೇಶಾವರಗಳ ಸಮಾವೇಶವಾಗಿತ್ತು. ಈ ಸುಭೆಗಳು ಮೊದಲು ಮುಘಲ ಸಾಮ್ರಾಜ್ಯದ ಭಾಗವಾಗಿದ್ದವು. ಈಗ ಅವು ಅಬ್ದಾಲಿಯ ಅಫಘಾಣಿಸ್ತಾನದಲ್ಲಿ ಇದ್ದವು. ಒಪ್ಪಂದಕ್ಕನುಸಾರವಾಗಿ ಈ ಸುಭೆಗಳನ್ನು ಅಬ್ದಾಲಿಯ ಕಡೆಯಿಂದ ಗೆದ್ದುಕೊಂಡು ಮತ್ತೆ ಮುಘಲರ ರಾಜ್ಯಕ್ಕೆ ಜೋಡಿಸುವುದು ಮರಾಠರ ಕರ್ತವ್ಯವಾಗಿತ್ತು. ಇದಕ್ಕೆ ವಿರುದ್ಧವಾಗಿ ಕನಿಷ್ಠ ಪಂಜಾಬರೆಗಿನ ಪ್ರದೇಶವನ್ನು ಅಫಘಾಣ ಅಧಿಪತ್ಯದಲ್ಲಿ ತರಬೇಕು ಎಂಬುದು ಅಬ್ದಾಲಿಯ ಇಚ್ಛೆಯಾಗಿತ್ತು. ಆದರಿಂದಾಗಿ ಇಂದಿಲ್ಲ ನಾಳೆ ಮರಾಠರ ಮತ್ತು ಅಬ್ದಾಲಿಯ ನಡುವೆ ಸಂಘರ್ಷವಾಗುವುದು ಅನಿವಾರ್ಯವಾಗಿತ್ತು.



ನಾನಾಸಾಹೇಬ ಪೇಶವೆ

ನಾನಾಸಾಹೇಬ ಪೇಶವೆಯವರ ಸಹೋದರ ರಘುನಾಥರಾವ ಇವನು ಜಯಾಪ್ಪಾ ಶಿಂದೆ ಮತ್ತು ಮಲ್ಹಾರರಾವ ಹೋಳಕರ ಇವರ ಜೊತೆಗೂಡಿ ಉತ್ತರ ಭಾರತದ ಅಬ್ದಾಲಿಯೊಂದಿಗೆ ಹೋರಾಡುವ ಸಲುವಾಗಿ ದಂಡೆತ್ತಿ ಹೋದನು.

ಉತ್ತರ ಕಡೆಯ ಜಾಟ, ರಾಜಪುತರಂತಹ ಸ್ಥಳೀಯ ಸತ್ತಾಧಾರಿಗಳ ದೃಷ್ಟಿಕೋನದಿಂದ ದಕ್ಷಿಣದಲ್ಲಿಯ ಮರಾಠರು ಅವರ ಸ್ಪರ್ಧಕರಾದರು. ಮರಾಠರ ವ್ಯಾಪಕ ದೃಷ್ಟಿಕೋನವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ

ಮರಾಠರಿಗೆ ಸಹಾಯ ಮಾಡದೆ ಜಾಟ ಮತ್ತು ರಾಜಪುತರು ತಟಸ್ಥರಾಗಿ ಉಳಿದರು. ಮಾರಾಠರದಿಲ್ಲಿ ದರಬಾರದಲ್ಲಿಯ ವರ್ಚಸ್ವ ಮತ್ತು ಹಸ್ತಕ್ಷೇಪವು ಅವನಿಗೆ ರುಚಿಸುತ್ತಿರಲಿಲ್ಲ. ಆದರೆ ಸೂರಜ ಮಲ ಜಾಟ ಹಾಗೂ ರಾಣಿ ಕಿಶೋರ ಇವರು ಪಾನಿಪತದ ಯುದ್ಧದಲ್ಲಿ ಗಾಯವಾಗಿದ್ದ ಮರಾಠರಿಗೆ ಸಹಾಯ ಮಾಡಿದರು.

ಅದರಂತೆ ಉತ್ತರದಲ್ಲಿಯ ಕೆಲವು ನಿಷ್ಠುರವಾದಿಗಳು ಮರಾಠರ ಕಡೆಗೆ ಪರಧರ್ಮಿಗಯರೆಂದು ನೋಡುತ್ತಿದ್ದರು. ಅವರೂ ಮರಾಠರ ವ್ಯಾಪಕ ದೃಷ್ಟಿಕೋನವನ್ನು ತಿಳಿದುಕೊಳ್ಳದೆ ಮರಾಠರ ವಚನಸ್ವವು ಕಡಿಮೆಯಾಗಲೆಂದು ಅಬ್ದಾಲಿಗೆ ಹಿಂದುಸ್ತಾನದ ಮೇಲೆ ಆಕ್ರಮಣ ಮಾಡಲು ಆಗ್ರಹ ಮಾಡಿದರು. ಅಬ್ದಾಲಿಯು ಮರಾಠರನ್ನು ಪರಾಭವಗೊಳಿಸಿ ಅವರನ್ನು ದಕ್ಷಿಣದ ನರ್ಮದೆಯನ್ನು ದಾಟಿಸಬೇಕೆಂದು ಅವನ ಅಪೇಕ್ಷೆಯಾಗಿತ್ತು.

**ಅಟಕದ ಮೇಲೆ ಮರಾಠರ ಧ್ವಜ ಹಾರಾಡಿತು:** ನಜೀಬಖಾನನು ರೋಹಿಲೆಗಳ ಸರದಾರನಾಗಿದ್ದನು. ಉತ್ತರ ಭಾರತದಲ್ಲಿಯ ಮರಾಠರ ವರ್ಚಸ್ಸು ಅವನಿಗೆ ಸಹನೆಯಾಗುತ್ತಿರಲಿಲ್ಲ. ನಜೀಬಖಾನನ ಹೇಳಿಕೆಯಂತೆ ಅಬ್ದಾಲಿಯು ಮತ್ತೆ ಭಾರತದ ಮೇಲೆ ದಾಳಿ ಮಾಡಿದನು. ಇದು ಅವನ ಭಾರತದ ಮೇಲಿನ ಐದನೆಯ ದಾಳಿಯಾಗಿತ್ತು. ಅವನು ದಿಲ್ಲಿಯನ್ನು ಗೆದ್ದುಕೊಂಡನು. ಸಾಕಷ್ಟು ಸಂಪತ್ತನ್ನು ಲೂಟಿಮಾಡಿಕೊಂಡು ಅವನು ಅಫಘಾಣಿಸ್ತಾನಕ್ಕೆ ಮರಳಿಹೋದನು. ರಘುನಾಥರಾವ ಮತ್ತು ಮಲ್ಹಾರರಾವ ಹೋಳಕರ ಇವರು ಮತ್ತೆ ಉತ್ತರದ ಕಡೆಗೆ ಹೋದರು. ಅವರು ದಿಲ್ಲಿಯನ್ನು ವಶಪಡಿಸಿಕೊಂಡರು. ಆ ನಂತರ ಅಬ್ದಾಲಿಯ ಅಧಿಕಾರಿಗಳನ್ನು ಹೊರದೂಡಿ ಪಂಜಾಬವನ್ನು ಗೆದ್ದುಕೊಂಡರು. ಅಬ್ದಾಲಿಯ ಸೈನಿಕರನ್ನು ಬೆನ್ನಟ್ಟುತ್ತ ಮರಾಠರು ಕ್ರಿ.ಶ 1758ರಲ್ಲಿ ಅಟಕದವರೆಗೆ ಹೋದರು. ಅಟಕದ ಮೇಲೆ ಮರಾಠರ ಧ್ವಜವು ಹಾರಾಡಿತು. ಅಟಕ ಈ ಸ್ಥಳವು ಇಂದಿನ ಪಾಕಿಸ್ತಾನದದಲ್ಲಿದೆ. ಮರಾಠರು ಅಟಕದಿಂದ ಹಿಡಿದು ಪೇಶಾವರದವರೆಗೆ ದಂಡಯಾತ್ರೆಯನ್ನು ಕೈಕೊಂಡರು. ಆದರೂ ಮರಾಠರು ತಮ್ಮ ಅಧಿಪತ್ಯಕ್ಕೊಳಪಡಿಸಿದ ಈ ಪ್ರದೇಶಗಳ ವ್ಯವಸ್ಥೆಯನ್ನುಸರಿಯಾಗಿ ಮಾಡಲಿಲ್ಲ.

**ದತ್ತಾಜಿಯ ಪರಾಕ್ರಮ :** ಪಂಜಾಬಿನ ಮೇಲಿನ ಹಿಡಿತವನ್ನು ಬಿಗಿಗೊಳಿಸಲು ಮತ್ತು ನಜೀಬಖಾನನ್ನು ಸೋಲಿಸಲು ಪೇಶವೆಯು ದತ್ತಾಜಿ ಶಿಂದೆ ಮತ್ತು ಜನಕೋಜಿ ಶಿಂದೆ- ಇವರನ್ನು ಉತ್ತರದ ಕಡಿಗೆ ಕಳಸಿದನು. ನತ್ತಾಜಿಯು ಉತ್ತರದ ಕಡೆಗೆ ಹೋದನು. ನಜೀಬಖಾನನು ದತ್ತಾಜಿಯನ್ನು ಮಾತುಕತೆಯಲ್ಲಿ ಸಿಲುಕಿಸಿದನು ಹಾಗೂ ಅಬ್ದಾಲಿಯನ್ನು ಸಹಾಯಕ್ಕೆ ಬರುವಂತೆ ವಿನಂತಿಸಿಕೊಂಡನು. ಈ ಸಂದೇಶವು ದೊರೆಯುತ್ತಲೇ ಅಬ್ದಾಲಿಯು ಪುನಃ ಭಾರತದ ಮೇಲೆ ದಂಡೆತ್ತಿಬಂದನು. ದತ್ತಾಜಿ ಮತ್ತು ಅಬ್ದಾಲಿ ಇವರು ಯಮುನಾ ನದಿತೀರದಲ್ಲಿಯ ಬುರಾಡಿ ಘಟ್ಟದಲ್ಲಿ ಪರಸ್ಪರ ಎದುರಾದರು ಇಬ್ಬರ ನಡುವೆ ಘನಘೋರ ಯುದ್ಧವಾಯಿತು. ದತ್ತಾಜಿಯ ಅಸಾಮಾನ್ಯ ಪರಾಕ್ರಮವವನ್ನು ತೋರಿಸಿದನು. ಆದರೆ ಈ ಯುದ್ಧದಲ್ಲಿ ದತ್ತಾಜಿಯು ವೀರಮರಣವನ್ನಪ್ಪಿದನು.




**ಗೊತ್ತಿದೆಯೇ ನಿಮಗೆ?**

ದತ್ತಾಜಿಯು ಅತ್ಯಂತ ವೀರಾವೇಶದಿಂದ ಹೋರಾಡಿದನು. ಆದರೆ ಕೊನೆಗೆ ಅವನು ಯುದ್ಧಭೂಮಿಯಲ್ಲಿ ಗಾಯಗೊಂಡು ಬಿದ್ದನು. ನಜೀಬಖಾನ ರೋಹಿಲೆಯ ಸಲಹೆಗಾರನಾದ ಕುತುಬಶಾಹನು ಆನೆಯ ಮೇಲಿಂದ ಇಳಿದು ಗಾಯಗೊಂಡ ದತ್ತಾಜಿಯ ಹತ್ತಿರ ಬಂದನು. ಅವನು ದತ್ತಾಜಿಗೆ, ''ಕ್ಯೊಂ ಪಟೇಲ ಜಿ, ಹಮಾರೆ ಸಾಥ ತುಮ್ ಔರಭೀ ಲಢೇಂಗೆ?'' ಎಂದು ಕೇಳಿದನು. ದತ್ತಾಜಿಯು ಗಾಯಗೊಂಡು ಬಿದ್ದಿದ್ದನು. ಆದರೆ ಕುತುಬಶಾಹನ ಶಬ್ದಗಳನ್ನು ಕೇಳುತ್ತಲೇ ಅವನು ದಿಟ್ಟತನದಿಂದ ಅವನಿಗೆ, ''ಹಾಂ, ಬಚೇಂಗೆ ತೊ ಔರಭೀ ಲಢೇಂಗೆ'' ಎಂದು ಉತ್ತರ ಕೊಟ್ಟನು.

**ಸದಾಶಿವರಾವ ಭಾವೂ:** ಅಬ್ದಾಲಿಯನ್ನು ಸೋಲಿಸುವ ಸಲುವಾಗಿ ನಾನಾಸಾಹೇಬನು ತನ್ನ ಚಿಕ್ಕಪ್ಪನ ಮಗನಾದ ಸದಾಶಿವರಾವಭಾವೂ ಹಾಗೂ ಹಿರಿಯ ಮಗ ವಿಶ್ವಾಸರಾವ ಇವರನ್ನು ಉತ್ತರದ ಕಡೆಗೆ ಕಳಿಸಿದನು. ಸದಾಶಿವರಾವಭಾವೂ ಇವನು ಚಿಮಾಜಿ ಅಪ್ಪಾನ ಮಗನು. ಅವನ ಜೊತೆ ಪ್ರಚಂಡ ಸೈನ್ಯ ಮತ್ತು ಪ್ರಭಾವಿ ಫಿರಂಗಿ ಪಡೆಗಳು ಇದ್ದವು. ಇಬ್ರಾಹಿಂಖಾನ್ ಗಾರದಿ ಇವನು ಫಿರಂಗಿ ಪಡೆಗಳ ಪ್ರಮುಖನಾಗಿದ್ದನು. ಈ ಫಿರಂಗಿ ಪಡೆಗಳ ಬಲದಿಂದ ಅವನು ಕ್ರಿ.ಶ. 1760 ರಲ್ಲಿ ಲಾತೂರ ಜಿಲ್ಲೆಯ ಉದಗೀರದ ಯುದ್ಧದಲ್ಲಿ ನಿಜಾಮನನ್ನು ಸೋಲಿಸಿದ್ದನು.



ಸದಾಶಿವರಾವಭಾವೂ




**ಪಾನಿಪತ್ ಯುದ್ಧ:** ಉತ್ತರದ ದಂಡಯಾತ್ರೆಯಲ್ಲಿ ಸದಾಶಿವರಾವಭಾವೂ ಇವನು ದಿಲ್ಲಿಯನ್ನು ಗೆದ್ದುಕೊಂಡನು. ಆ ನಂತರ ಮರಾಠರ ಸೈನ್ಯ ಮತ್ತು ಅಬ್ದಾಲಿಯ ಸೈನ್ಯಗಳು ಪಾನಿಪತ್ ಎಂಬಲ್ಲಿ ಪರಸ್ಪರ ಎದುರಾದವು. 14 ಜನೇವರಿ 1761 ರಂದು ಮರಾಠರು ಅಬ್ದಾಲಿಯ ಮೇಲೆ ದಾಳಿಮಾಡಿ ಯುದ್ಧವನ್ನು ಆರಂಭಿಸಿದರು. ಇದು ಪಾನಿಪತ್ತಿನ ಮೂರನೆಯ ಯುದ್ಧವಾಗಿದೆ. ಯುದ್ಧದಲ್ಲಿ ವಿಶ್ವಾಸರಾವನಿಗೆ ಗುಂಡು ತಗುಲಿ ಅವನು ಕೊಲ್ಲಲ್ಪಟ್ಟನು. ಈ ಸುದ್ದಿ ಸದಾಶಿವರಾವ ಭಾವೂನಿಗೆ ತಿಳಿಯುತ್ತಲೇ ಅವನು ಜೀವದ ಹಂಗುದೊರೆದು ಶತ್ರುಗಳಮೇಲೆ ಆಕ್ರಮಣ ಮಾಡಿದನು. ಘನಘೋರ ಯುದ್ಧದಲ್ಲಿ ಅವನು ಕಾಣದಂತಾದನು. ತಮ್ಮ ಮುಖಂಡನು ಇಲ್ಲದಂತಾದುದನ್ನು ಕಂಡು ಮರಾಠಿ ಸೈನಿಕರು ಧೈರ್ಯಗುಂದಿದರು. ಅದೇ ಕಾಲಕ್ಕೆ ಅಬ್ದಾಲಿಯ ಮೀಸಲು ಮತ್ತು ಹೊಸ ಹರೆಯದ ಸೈನಿಕರು ಮರಾಠರ ಮೇಲೆ ಮುಗಿಬಿದ್ದರು. ಮರಾಠರ ಪರಾಭವವಾಯಿತು. ಮಹಾರಾಷ್ಟ್ರದಲ್ಲಿಯ ಒಂದು ಸಂಪೂರ್ಣ ತರುಣ ಪೀಳಿಗೆಯು ಸಂಹರಿಸಲ್ಪಟ್ಟಿತು. ಅನೇಕ ಪರಾಕ್ರಮಿ ಸರದಾರರು ವೀರಮರಣವನ್ನಪ್ಪಿದರು.

**ಗೊತ್ತಿದೆಯೇ ನಿಮಗೆ?**

ಪಾನಿಪತ್ ಯುದ್ಧದಲ್ಲಿ ಸುಮಾರು ಒಂದೂವರೆ ಲಕ್ಷಜನರು ಕೊಲ್ಲಲ್ಪಟ್ಟರು. ಒಂದು ಪತ್ರದಲ್ಲಿಯ ಸಾಂಕೇತಿಕ ವರ್ಣನೆಯು ಕೆಳಗಿನಂತಿದೆ.

''ಎರಡು ಮುತ್ತುಗಳು ಉದುರಿದವು. ಇಪ್ಪತ್ತೇಳು ರತ್ನಗಳು ಕಳೆದು ಹೋದವು! ಹಾಗೂ ರೂಪಾಯಿಗಳು ಮತ್ತು ನಾಣ್ಯಗಳು ಎಷ್ಟು ಹೋದವೋ ಅದಕ್ಕೆ ಲೆಕ್ಕವೇ ಇಲ್ಲ.''

ಪರಕೀಯನಾದ ಅಬ್ದಾಲಿಗೆ ಇಲ್ಲಿ ರಾಜ್ಯವಾಳುವ ಯಾವುದೇ ನೈತಿಕ ಹಕ್ಕು ಇಲ್ಲ ಎಂಬ ವ್ಯಾಪಕ ದೃಷ್ಟಿಕೋನದಿಂದ ಮರಾಠರು ಅಬ್ದಾಲಿಯ ಜೊತೆ ಹೋರಾಡಿದರು. ನಾವೆಲ್ಲ ಒಂದೇ ದೇಶದವರಾಗಿದ್ದು ಅಬ್ದಾಲಿಯು ಪರಕೀಯ ಶತ್ರುವಾಗಿದ್ದಾನೆ ಎಂಬ ಅರ್ಥದ ಪತ್ರಗಳನ್ನು ಬರೆದು ಸದಾಶಿವರಾವಭಾವೂ ಇವನು ಉತ್ತರದ ಕಡೆಯ ರಾಜರಿಗೆ ಮರಾಠರ ವ್ಯಾಪಕ ಮತ್ತು ಸರ್ವಸಮಾವೇಶಕ ಕಲ್ಪನೆಯನ್ನು ತಿಳಿಸಿದನು. ಆದರೆ ಅದಕ್ಕೆ ಅನುಕೂಲವಾದ ಪ್ರತಿಕ್ರಿಯೆಯನ್ನು ತೋರದೆ ಈ ರಾಜರು ತಟಸ್ಥರಾಗಿ ಉಳಿದರು. ಸ್ವಾಭಾವಿಕವಾಗಿ ಭಾರತದ ರಕ್ಷಣೆಯ ಜವಾಬ್ದಾರಿ ಮರಾಠರ ಮೇಲೆ ಬಿದ್ದಿತು. ಭಾರತವು ಒಂದು ದೇಶ ಇರುವದರ ಮತ್ತು ಅದರ ರಾಜನು ಯಾವುದೇ ಧರ್ಮದವನಿದ್ದರೂ ಎಲ್ಲರೂ ಅವನಿಗೆ ಬೆಂಬಲ ನೀಡ ಬೇಕೆಂಬುದರ ಅರಿವನ್ನು ಇತಿಹಾಸದಲ್ಲಿ ಪ್ರಪ್ರಥಮವಾಗಿ ಮರಾಠರು ತೋರಿಸಿದರು ಎಂದು ಹೇಳಬಹುದು.

**ಮಾಧವರಾವ ಪೇಶವೆ:** ನಾನಾಸಾಹೇಬ ಪೇಶವೆಯ ಮರಣದ ನಂತರ ಅವನ ಮಗನಾದ ಮಾಧವರಾವನು ಪೇಶವೆಯಾದನು. ಮಾಧರಾವನು ತನ್ನ ಆಳ್ವಿಕೆಯ ಕಾಲದಲ್ಲಿ ನಿಜಾಮ ಮತ್ತು ಹೈದರ ಅಲಿ ಇವರನ್ನು ನಿಯಂತ್ರಣದಲ್ಲಿಟ್ಟನು. ಅವನು ಉತ್ತರದಲ್ಲಿ ಮತ್ತೆ ಮರಾಠರ ಪ್ರಭುತ್ವವನ್ನು ಸ್ಥಾಪಿಸಿದನು.



ಮಾಧವರಾವ ಪೇಶವೆ

ಪಾನಿಪತ್ ಯುದ್ಧದಲ್ಲಿ ಮರಾಠರ ಪರಾಭವವಾದದ್ದನ್ನು ಕಂಡು ನಿಜಾಮನು ಮತ್ತೆ ಮರಾಠರ ವಿರುದ್ಧ ಕಾರಸ್ಥಾನವನ್ನು ಆರಂಭಿಸಿದನು. ಅವನು ಅವರ ಪ್ರಾಂತಗಳ ಮೇಲೆ ಆಕ್ರಮಣ ಮಾಡಿದನು. ಆದರೆ ಮಾಧವರಾವನು ಪೈಠಣ ಹತ್ತಿರದ ರಾಕ್ಷಸಭುವನ ಎಂಬಲ್ಲಿ ನಿಜಾಮನನ್ನು ಸೋಲಿಸಿದನು.

ಹೈದರ ಅಲಿಯು ಮೈಸೂರಿನ ಸುಲ್ತಾನನಾಗಿದ್ದನು. ಪಾನಿಪತ್‌ನಲ್ಲಿಯ ಮರಾಠರ ಪರಾಭವದ ಲಾಭವನ್ನು ಪಡೆದು ಅವನು ಕರ್ನಾಟಕದಲ್ಲಿಯ ಮರಾಠಿ ಪ್ರದೇಶಗಳ ಮೇಲೆ ದಾಳಿ ಮಾಡಿದನು. ಆದರೆ ಮರಾಠರು ಶ್ರೀರಂಗಪಟ್ಟಣದ ಹತ್ತಿರದ ಮೋತಿ ತಲಾವ ಎಂಬಲ್ಲಿ ನಡೆದ ಯುದ್ಧದಲ್ಲಿ ಅವನನ್ನು ಪರಾಭವಗೊಳಿಸಿದರು. ಆಗ ಅವನು ತುಂಗಭದ್ರಾನದಿಯ ಉತ್ತರದ ಕಡೆಯ ಪ್ರದೇಶಗಳನ್ನು ಮರಾಠರಿಗೆ ಕೊಡುವುದಾಗಿ ಒಪ್ಪಿಕೊಂಡನು.

ಕ್ರಿ.ಶ. 1772 ರಲ್ಲಿ ಮಾಧವರಾವ ಪೇಶವೆಯ ಮರಣಹೊಂದಿದನು. ಮರಾಠರ ಇತಿಹಾಸದಲ್ಲಿ ಒಬ್ಬ ಪ್ರಾಮಾಣಿಕ, ಕಠಿಣ ಪರಿಶ್ರಮಿ ದೃಢ ನಿಶ್ಚಯದ, ಜನಹಿತಕಾರಿ ಆಡಳಿತಗಾರನೆಂದು ಅವನ ಉಲ್ಲೇಖ ಮಾಡಲಾಗುತ್ತದೆ. ಈ ಕರ್ತೃತ್ವಶಾಲಿ ಪೇಶವೆಯ ನಿಧನದಿಂದ ಮರಾಠಾ ರಾಜ್ಯಕ್ಕೆ ತುಂಬಲಾರದ ಹಾನಿಯಾಯಿತು.

**ಗೊತ್ತಿದೆಯೇ ನಿಮಗೆ?**

ಪೇಶವೆ ಮಾಧವರಾವನು ರೈತರ ಕಲ್ಯಾಣದ ಕಡೆಗೆ ವಿಶೇಷ ಲಕ್ಷ್ಯವಹಿಸಿದನು. ಬಾವಿಗಳನ್ನು ತೋಡಿಸಿ ಪುಣೆಯ ನೀರಿನ ಪೂರೈಕೆಯನ್ನು ಹೆಚ್ಚಿಸಿದನು. ನಾನಾ ಫಡಣವೀಸನಂತಹ ಆಡಳಿತಗಾರನು ಮತ್ತು ರಾಮಶಾಸ್ತ್ರಿಪ್ರಭುಣೆಯಂತಹ ಮಹಾನ್ ನ್ಯಾಯಾಧೀಶರು ಅವನಕಾಲದಲ್ಲಿ ತಯಾರಾದರು. ಪ್ರಜೆಗಳಿಗೆ ನ್ಯಾಯ ದೊರೆಯಬೇಕೆಂದು ಅವರು ನ್ಯಾಯ ಖಾತೆಯಲ್ಲಿ ಸುಧಾರಣೆ ಮಾಡಿದರು. ತೋಪು ಮತ್ತು ಮದ್ದುಗುಂಡುಗಳನ್ನು ತಯಾರಿಸುವ ಕಾರ್ಖಾನೆಯನ್ನು ಆರಂಭಿಸಿದನು. ನಾಣ್ಯಗಳನ್ನು ಟಂಕಿಸುವುದಕ್ಕಾಗಿ ಟಂಕಶಾಲೆಯ ವ್ಯವಸ್ಥೆ ಮಾಡಿದನು.


ಮಾಧವರಾವ ಪೇಶವೆಯ ನಂತರ ಗದ್ದುಗೆಯನ್ನೇರಿದ ನಾರಾಯಣರಾವ ಮತ್ತು ಸವಾಯಿ ಮಾಧವರಾವ ಈ ಇಬ್ಬರೂ ಪೇಶ್ವೆಗಳು ಅಲ್ಪಾಯುಷಿಯಾಗಿದ್ದರು. ಅಲ್ಲದೆ ಅವರ ಕಾಲದಲ್ಲಿ ಪೇಶವೆ ಮನೆತನದಲ್ಲಿ ಗೃಹಕಲಹವು ವ್ಯಾಪಿಸಿತ್ತು. ಒಂದು ಕಾಲದಲ್ಲಿ ಅಟಕವನ್ನು ದಾಟಿಹೋಗಿ ಅಲ್ಲಿ ಧ್ವಜವನ್ನು ಊರುವ ರಘುನಾಥರಾವನು ಅಧಿಕಾರದ ಆಸೆಗಾಗಿ ಇಂಗ್ಲಿಷರ ಆಶ್ರಯಕ್ಕೆ ಹೋದನು. ಅದರಿಂದಾಗಿ ಮರಾಠಾ ಮತ್ತು ಇಂಗ್ಲಿಷರ ನಡುವೆ ಯುದ್ಧಗಳಾದವು.

ಕ್ರಿ. ಶ. 1782 ರಲ್ಲಿ ಹೈದರ ಅಲಿಯು ಮರಣಹೊಂದಿದನು. ಆನಂತರ ಅವನ ಮಗ ಟಿಪ್ಪೂ ಮೈಸೂರಿನ ಸುಲ್ತಾನನಾದನು. ಅವನು ನಿಷ್ಣಾತ ಯೋಧನಾಗಿದ್ದನಲ್ಲದೆ ವಿದ್ವಾಂಸನು ಮತ್ತು ಕವಿಯು ಆಗಿದ್ದನು. ಆವನು ತನ್ನ ಸಾಮರ್ಥ್ಯದಿಂದ ರಾಜ್ಯದ ಪ್ರಭಾವವನ್ನು ಹೆಚ್ಚಿಸಿದನು. ಅವನು ಫ್ರೆಂಚರೊಡನೆ ಸಂಧಾನ ಮಾಡಿ ಇಂಗ್ಲಿಷರ ವರ್ಚಸ್ಸಿಗೆ ಧಕ್ಕೆಯನ್ನು ಕೊಡಲು ಆರಂಭಿಸಿದನು. ಕ್ರಿ.ಶ 1799ರಲ್ಲಿ ಇಂಗ್ಲಿಷರ ವಿರುದ್ಧದ ಯುದ್ಧದಲ್ಲಿ ಅವನು ಕೊಲ್ಲಲ್ಪಟ್ಟನು.

**ಮರಾಠಾ ರಾಜ್ಯದ ವರ್ಚಸ್ಸಿನ ಪುನರ್ ಸ್ಥಾಪನೆ:** ಪಾನಿಪತ್ತಿನ ಸೋಲಿನಿಂದ ಮರಾಠರಿಗೆ ಉತ್ತರ ಭಾರದಲ್ಲಿಯ ಪ್ರತಿಷ್ಠೆಗೆ ಬಲವಾದ ಆಘಾತವಾಗಿತ್ತು. ಉತ್ತರದಲ್ಲಿ ಮರಾಠರ ಅಧಿಕಾರವನ್ನು ಪುನಃ ಸ್ಥಾಪಿಸುವುದಕ್ಕಾಗಿ ಮಾಧವರಾವನು ಮಹಾದಜಿ ಶಿಂದೆ, ತುಕೋಜಿ ಹೋಳಕರ, ರಾಮಚಂದ್ರ ಕಾನಡೆ ಹಾಗೂ ವಿಸಾಜಿಪಂತ ಬೀನಿವಾಲೆ ಈ ಸರದಾರರನ್ನು ಕಳಿಸಿದನು. ಮರಾಠಾ ಸೈನಿಕರು ಜಾಟ, ರೋಹಿಲೆ ಮತ್ತು ರಜಪೂತರನ್ನು ಸೋಲಿಸಿದರು. ಬಾದಶಾಹ ಶಾಹ ಆಲಮನನ್ನು ತಮ್ಮ ಆಶ್ರಯದಲ್ಲಿಯೇ ದಿಲ್ಲಿಯ ಸಿಂಹಾಸನದ ಮೇಲೆ ಕೂಡಿಸಿದರು. ಉತ್ತರದಲ್ಲಿ ಮರಾಠರ ಆಡಳಿತವು ಪುನರ್ ಸ್ಥಾಪಿತವಾಯಿತು.

ಪಾನಿಪತ್ ಯುದ್ಧದಲ್ಲಿ ಮರಾಠರಿಗೆ ತುಂಬಾ ಹಾನಿಯಾಯಿತು. ಅಬ್ದಾಲಿಯ ಸೈನ್ಯಕ್ಕೂ ಹಾನಿಯುಂಟಾಯಿತು. ಪಾನಿಪತ್‌ದ ವಿಜಯದ ನಂತರ ವಿಶೇಷ ಆರ್ಥಿಕ ಲಾಭವಾಗಲಿಲ್ಲ ಆದ್ದರಿಂದ ಅಬ್ದಾಲಿ ಅಥವಾ ಅವನ ವಾರಸುದಾರರು ಭಾರತದ ಮೇಲೆ ಪುನಃ ಆಕ್ರಮಣಮಾಡುವ ಧೈರ್ಯಮಾಡಲಿಲ್ಲ, ತದ್ವಿರುದ್ಧವಾಗಿ ಉತ್ತರದಲ್ಲಿಯ ಅರಾಜಕತೆಯನ್ನು ನಿಯಂತ್ರಿಸುವ ಸಾಮರ್ಥ್ಯವು ಮರಾಠರಲ್ಲಿಯೇ ಇದೆಯೆಂಬುದನ್ನು ಗಮನಿಸಿ ಅವರು ಆ ಸಾಮ್ರಾಜ್ಯದ ರಕ್ಷಣೆ ಮಾಡಬೇಕು ಎಂಬ ಇಚ್ಛೆಯನ್ನು ಪ್ರಕಟಿಸಿದನು. ಸ್ನೇಹಸಂಬಂಧವನ್ನು ಬೆಳೆಸುವ ಸಲುವಾಗಿ ಪುಣೆ ದರಬಾರಿಗೆ ದೂತನನ್ನೂ ಕಳಿಸಿದನು. ಪಾನಿಪತ್ತಿನಲ್ಲಾದ ದೊಡ್ಡ ಪರಾಭವವನ್ನು ಅರಗಿಸಿಕೊಂಡು ಉತ್ತರದ ರಾಜಕಾರಣದಲ್ಲಿ ಮತ್ತೆ ಎದ್ದು ನಿಲ್ಲುವುದರಲ್ಲಿ ಮರಾಠರು ಯಶಸ್ವಿಯಾದರು. ಈ ಸಂಗತಿಯು ತುಂಬ ಮಹತ್ವದ್ದಾಗಿದೆ. ಇದರಲ್ಲಿ ಮಲ್ಹಾರರಾವ ಹೋಳಕರ, ಅಹಿಲ್ಯಾಬಾಯಿ ಹೋಳಕರ ಹಾಗೂ ಮಹಾದಜಿ ಶಿಂದೆ ಇವರದು ಸಿಂಹಪಾಲು ಇದೆ.

**ಪೇಶವೆ ಮನೆತನದ ವಂಶಾವಳಿ**



## ಅಭ್ಯಾಸ

**1. ಇವರು ಯಾರು?**

(1) ಅಫಘಾಣಿಸ್ತಾನದಿಂದ ಬಂದವರು ...
(2) ಹಿಮಾಲಯದ ಅಡಿಯಲ್ಲಿ ನೆಲೆಸಿದವರು ...
(3) ನಾನಾಸಾಹೇಬ ಪೇಶವೆಯ ಸಹೋದರು ...
(4) ಮಥುರಾದಲ್ಲಿಯ ಜಾಟರ ಪ್ರಮುಖ ...
(5) ಪೈಠಣ ಹತ್ತಿರದ ರಾಕ್ಷಸಭುವನ ಎಂಬಲ್ಲಿ ನಿಜಾಮನನ್ನು ಸೋಲಿಸಿದವನು ...

**2. ಸ್ವಲ್ಪದರಲ್ಲಿ ಬರೆಯಿರಿ.**

(1) ಅಟಕದ ಮೇಲೆ ಮರಾಠರ ಧ್ವಜ ಹಾರಾಡಿತು.
(2) ಅಫಘಾಣರೊಡನೆ ಸಂಘರ್ಷ
(3) ಪಾಣಿಪತ್ ಯುದ್ಧದ ಪರಿಣಾಮಗಳು

**3. ಕೆಳಗಿನ ಘಟನೆಗಳನ್ನು ಕಾಲಾನುಕ್ರಮವಾಗಿ ಬರೆಯಿರಿ.**

(1) ರಾಕ್ಷಸಭುವನದ ಯುದ್ಧ
(2) ಟಿಪೂ ಸುಲ್ತಾನನ ಮರಣ
(3) ಮಾಧವರಾವ ಪೇಶವೆಯ ಮರಣ
(4) ಪಾನಿಪತ್ ಯುದ್ಧ
(5) ಖುರಾಡಿ ಘಟದ ಯುದ್ಧ

**4. ಕೆಳಗಿನ ಚೌಕಟ್ಟಿನಲ್ಲಿ ಪಾಠದಲ್ಲಿ ಬಂದ ವ್ಯಕ್ತಿಗಳ ಹೆಸರುಗಳನ್ನು ಹುಡುಕಿರಿ.**

| | | | | | | | |
|---|---|---|---|---|---|---|---|
| ಮ | ಸ | ಹ | ನಾ | ಜ | ನ | ಕೋ | ಜಿ |
| ಹಾ | ಜ | ದ | ರಾ | ನಾ | ಫ | ಮ | ತ್ತಾ |
| ದ | ಯು | ಚ | ಯ | ಪ | ಸಾ | ಥ | ದ |
| ಜಿ | ಪ್ಪಾ | ಲ | ಣ | ಆ | ರೂ | ಹೇ | ಪ್ರ |
| ಬಾ | ಳಾ | ಜಿ | ಪಿ | ಶ್ವ | ನಾ | ಥ | ಬ |
| ಅ | ವ | ಲಾ | ಮಾ | ಧ | ವ | ರಾ | ವ |
| ದೇ | ಸ | ದಾ | ಶಿ | ವ | ರಾ | ವ | ಭಾ |
| ಮ | ಲ್ಹಾ | ರ | ರಾ | ವ | ಕ | ಚಿ | ವೂ |

**ಉಪಕ್ರಮ:**

ಇಂಟರನೇಟ್ ನೆರವಿನಿಂದ ಪಾನಿಪತ್ ಯುದ್ಧದ ಮಾಹಿತಿಯನ್ನು ಪಡೆದು ವರ್ಗದಲ್ಲಿ ಸಾದರ ಪಡಿಸಿರಿ.



ಸವಾಯಿ ಮಾಧವರಾವ ಪೇಶವೆಯವರ ದರಬಾರ

8YRG38

# 12. ಸಾಮ್ರಾಜ್ಯದ ಮುನ್ನಡೆ

ಇಲ್ಲಿಯ ವರೆಗೆ ನಾವು ಮರಾಠರ ರಾಜ್ಯದ ಉದಯ ಮತ್ತು ವಿಸ್ತಾರವನ್ನು ನೋಡಿದೆವು. ಸ್ವರಾಜ್ಯ ಸ್ಥಾಪನೆಯಿಂದ ಹಿಡಿದು ಸಾಮ್ರಾಜ್ಯದವರೆಗಿನ ಪ್ರವಾಸವು ಹೇಗೆ ಹೇಗೆ ಆಯಿತೆಂಬುದನ್ನು ಅಭ್ಯಸಿಸಿದೆವು. ಉತ್ತರ ಭಾರತದಲ್ಲಿಯ ಮರಾಠರ ಸಾಮ್ರಾಜ್ಯವಿಸ್ತಾರಕ್ಕಾಗಿ ಕೊಡುಗೆಯನ್ನು ನೀಡಿದ ಸರದಾರ ಮನೆತನಗಳ ವಿಷಯವಾಗಿ ನಾವು ಈ ಪಾಠದಲ್ಲಿ ಸ್ವಲ್ಪದರಲ್ಲಿ ಪುನರಾವಲೋಕನ ಮಾಡುವವರಿದ್ದೇವೆ.

**ಇಂದೌರಿನ ಹೋಳಕರರು:** ಮಲ್ಹಾರರಾವ ಇವರು ಇಂದೌರಿನ ಹೋಳಕರ ರಾಜ್ಯದ ಸಂಸ್ಥಾಪಕರು. ಅವರು ದೀರ್ಘಕಾಲದವರೆಗೆ ಮರಾಠಿ ರಾಜ್ಯದ ಸೇವೆಯನ್ನು ಮಾಡಿದರು. ಗೆರಿಲ್ಲಾ ಯುದ್ಧ ತಂತ್ರದಲ್ಲಿ ಅವರು ನಿಷ್ಣಾತರಾಗಿದ್ದರು. ಮೊದಲನೆಯ ಬಾಜೀರಾವ ಮತ್ತು ನಾನಾಸಾಹೇಬ ಪೇಶವೆಯವರ ಕಾಲದಲ್ಲಿ ಅವರು ಉತ್ತರದಲ್ಲಿ ಪರಾಕ್ರಮವನ್ನು ತೋರಿಸಿದರು. ಮಾಳವಾ ಮತ್ತು ರಾಜಪುತಾನಾಗಳಲ್ಲಿ ಮಾರಾಠರ ವರ್ಚಸ್ಸನ್ನು ಸ್ಥಾಪಿಸುವುದರಲ್ಲಿ ಇವರ ಪಾತ್ರ ಹಿರಿದಾಗಿತ್ತು. ಪಾನಿಪತ್ ಯುದ್ಧದ ನಂತರ ಉತ್ತರದಲ್ಲಿ ಮರಾಠರ ಪ್ರತಿಷ್ಠೆಯನ್ನು ಕಾಪಾಡುವಲ್ಲಿ ಮಾಧವರಾವ ಪೇಶವೆಯವರಿಗೆ ಅವರು ಬಹಳಷ್ಟು ನೆರವಾದರು.


ಮಲ್ಹಾರರಾವ ಹೋಳಕರ

ಪುಣ್ಯಶ್ಲೋಕ ಅಹಿಲ್ಯಾಬಾಯಿ ಇವರು ಮಲ್ಹಾರರಾವ ಇವರ ಪುತ್ರ ಖಂಡೇರಾವ ಇವರ ಪತ್ನಿಯಾಗಿದ್ದರು. ಕುಂಭೇರಿಯ ಯುದ್ಧದಲ್ಲಿ ಖಂಡೇರಾವ ಮರಣಹೊಂದಿದರು. ಮುಂದೆ ಕೆಲವು ಸಮಯದ ನಂತರ ಮಲ್ಹಾರರಾವ ಕೂಡ ನಿಧನಹೊಂದಿದರು. ಆ ನಂತರ ಇಂದೌರಿನ ಆಡಳಿತದ ಸೂತ್ರಗಳು ಅಹಿಲ್ಯಾಬಾಯಿಯವರ ಕೈಗೆ ಬಂದವು. ಅವರು ಒಬ್ಬ ಮಹಾನ್, ಮುತ್ಸದ್ದಿ ಮತ್ತು ಉತ್ಕೃಷ್ಟ ಆಡಳಿತಗಾರರಾಗಿದ್ದರು. ಅವರು ಹೊಸ ಕಾಯ್ದೆಗಳನ್ನು ಮಾಡಿ ಭೂಕಂದಾಯ, ಕರ ವಸೂಲಿ ಮುಂತಾದ ಸಂಗತಿಗಳನ್ನು ಸುಸಜ್ಜಿತಗೊಳಿಸಿದರು. ಬೀಳುಭೂಮಿಯನ್ನು ಸಾಗುವಳಿಯಲ್ಲಿ ತರುವುದು, ರೈತರಿಗೆ ಬಾವಿಗಳನ್ನು ತೋಡಿಸಿ ಕೊಡುವುದು, ವ್ಯಾಪಾರ – ಉದ್ಯೋಗಗಳಿಗೆ ಪ್ರೋತ್ಸಾಹನೆ ನೀಡುವುದು, ಕೆರೆ – ಹೊಂಡಗಳನ್ನು ನಿರ್ಮಿಸುವುದು ಇತ್ಯಾದಿಗಳಿಗಾಗಿ ಅವರು ಶ್ರಮಸಿದರು. ಭಾರತದ ನಾಲ್ಕು ದಿಕ್ಕುಗಳಲ್ಲಿರುವ ಮಹತ್ವದ ಧಾರ್ಮಿಕ ಸ್ಥಳಗಳಲ್ಲಿ ಅವರು ಮಂದಿರ, ಘಟ್ಟ, ಮಠ, ಧರ್ಮಶಾಲೆ, ಅರವಟ್ಟಿಗೆ ಮುಂತಾದವುಗಳನ್ನು ನಿರ್ಮಿಸಿದರು. ದೇಶದ ಸಾಂಸ್ಕೃತಿಕ ಐಕ್ಯತೆಯ ಅವರ ಈ ಪ್ರಯತ್ನವು ತುಂಬಾ ಮಹತ್ವದ್ದಾಗಿತ್ತು, ಅವರು ಸ್ವತಃ ನ್ಯಾಯ-ನಿರ್ಣಯ ಮಾಡುತ್ತಿದ್ದರು. ಅವರು ದಾನಿಯೂ ಗ್ರಂಥಪ್ರೇಮಿಯೂ ಆಗಿದ್ದರು. ಅವರು ಸುಮಾರು ಇಪ್ಪತ್ತೆಂಟು ವರ್ಷ ಸಮರ್ಥವಾಗಿ ರಾಜ್ಯಾಡಳಿತವನ್ನು ಮಾಡಿ ಉತ್ತರದಲ್ಲಿ ಮರಾಠರ ಆಡಳಿತದ ಪ್ರತಿಷ್ಠೆಯನ್ನು ಹೆಚ್ಚಿಸಿದರು. ರಾಜ್ಯದಲ್ಲಿ ಶಾಂತತೆ ಮತ್ತು ಸುವ್ಯವಸ್ಥೆಯನ್ನು ನಿರ್ಮಿಸಿ ಪ್ರಜೆಗಳಿಗೆ ಸುಖನೀಡಿದರು. ಮರಾಠಾ ಅವನತಿಯ ಕಾಲದಲ್ಲಿ ಯಶವಂತರಾವ ಹೋಳಕರ ಇವರು ರಾಜ್ಯವನ್ನು ಕಾಪಾಡುವ ಪ್ರಯತ್ನಮಾಡಿದರು.


ಅಹಿಲ್ಯಾಬಾಯಿ ಹೋಳಕರ

**ನಾಗಪೂರದ ಭೋಸಲೆ:** ನಾಗಪೂರದ ಭೋಸಲೆ ಮನೆತನದಲ್ಲಿಯ ಪರಸೋಜಿ ಭೋಸಲೆಯವರಿಗೆ ಶಾಹೂ ಮಹಾರಾಜರ ಕಾಲದಲ್ಲಿ ವರ್ಹಾಡ ಮತ್ತು ಗೊಂಡವನ ಪ್ರದೇಶಗಳ ಸನದನ್ನು ನೀಡಲಾಯಿತು. ನಾಗಪೂರದ ಭೋಸಲೆಗಳಲ್ಲಿ ರಘೂಜಿ ಇವರು ಅತ್ಯಂತ ಸಾಮರ್ಥ್ಯಶಾಲಿ ಹಾಗೂ ಪರಾಕ್ರಮಿ ವ್ಯಕ್ತಿಯಾಗಿದ್ದರು. ಅವರು ದಕ್ಷಿಣದಲ್ಲಿಯ ತಿರುಚಿರಾಪಳ್ಳಿ ಮತ್ತು ಅರ್ಕಾಟಗಳ ಸುತ್ತಮುತ್ತಲಿನ ಪ್ರದೇಶವನ್ನೆಲ್ಲ ಮರಾಠಾರಾಜ್ಯದ ಅಧಿಪತ್ಯಕ್ಕೊಳಪಡಿಸಿದನು. ಬಂಗಾಲ, ಬಿಹಾರ ಮತ್ತು ಓಡಿಶಾ ಪ್ರಾಂತಗಳ ಚೌಥಾಯಿ ವಸೂಲು ಮಾಡುವ ಅಧಿಕಾರವನ್ನು ಶಾಹೂ ಮಹಾರಾಜರು ಅವರಿಗೆ ನೀಡಿದ್ದರು. ಅವರು ಆ ಪ್ರದೇಶಗಳನ್ನು ಮರಾಠರ ಪ್ರಭಾವಕ್ಕೊಳಪಡಿಸಿದರು. ಕ್ರಿ.ಶ. 1751ರಲ್ಲಿ ನಾಗಪೂರದ


ರಘೂಜಿ ಭೋಸಲೆ

ಭೋಸಲೆ ಯವರು ಓಡಿಶಾ ಸುಭೆಯನ್ನು ಅಲಿವರ್ದಿಖಾನನ ಕಡೆಯಿಂದ ಗೆದ್ದುಕೊಂಡರು. ಮುಂದೆ ಕ್ರಿ.ಶ. 1803 ವರೆಗೆ ಓಡಿಶಾ ಮೇಲೆ ಮರಾಠರ ಪ್ರಭುತ್ವವಿತ್ತು.

**ಗೊತ್ತಿದೆಯೇ ನಿಮಗೆ?**

**ಮರಾಠಾ ಡಿಚ್:** ಕೋಲಕತಾದಲ್ಲಿಯ ಬ್ರಿಟಿಶರು ನಾಗಪೂರದ ಭೂಸಲೆಯವರಿಗೆ ಅಂಜುತ್ತಿದ್ದರು. ಮರಾಠರ ಸಂಭಾವ್ಯ ಆಕ್ರಮಣದಿಂದ ಕೋಲಕತಾ ಪಟ್ಟಣವನ್ನು ರಕ್ಷಿಸುವ ಸಲುವಾಗಿ ಅವರು ಪಟ್ಟಣದ ಸುತ್ತಲೂ ಒಂದು ಕಂದಕವನ್ನು ಅಗೆದರು. ಅದು ಮರಾಠಾ ಡಿಚ್ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು.

**ಗ್ವಾಲಿಯರದ ಶಿಂದೆ:** ಹಿರಿಯ ಬಾಜೀರಾವನು ರಾಣೋಜಿ ಶಿಂದೆಯ ಕರ್ತೃತ್ವವನ್ನು ನೋಡಿ ಅವನನ್ನು ಉತ್ತರದಲ್ಲಿ ಸರದಾರನೆಂದು ನೇಮಿಸಿದನು. ರಾಣೋಜಿಯ ನಿಧನದ ನಂತರ ಜಯಾಪ್ಪಾ, ದತ್ತಾಜಿ ಮತ್ತು ಮಹಾದಜಿ ಎಂಬ ಅವನ ಮಕ್ಕಳು ಕೂಡ ತಮ್ಮ ಪರಾಕ್ರಮವನ್ನು ತೋರಿಸಿ ಉತ್ತರ ಭಾರತದಲ್ಲಿ ಮರಾಠಾ ಆಡಳಿತವನ್ನು ಪ್ರಬಲಗೊಳಿಸಿದರು.



ಮಹಾದಜಿ ಶಿಂದೆ

ಮಾಧವರಾವ ಪೇಶವೆಯು ಶಿಂದೆ ಮನೆತನದ ಸರದಾರ ಪದವಿಯನ್ನು ಮಹಾದಜಿಯವರಿಗೆ ನೀಡಿದನು. ಅವರು ಪರಾಕ್ರಮಿಯೂ, ಯುತ್ಸದ್ದಿಯೂ ಆಗಿದ್ದರು. ಪಾನಿಪತ್ ಪರಾಭವದ ನಂತರ ಉತ್ತರ ಭಾರತದಲ್ಲಿ ಮರಾಠರ ವರ್ಚಸ್ಸು ಮತ್ತು ಪ್ರತಿಷ್ಠೆಯನ್ನು ನಿರ್ಮಿಸುವ ಕಾರ್ಯವನ್ನು ಅವರು ಮಾಡಿದರು. ಉತ್ತರ ಭಾರತದ ಸಪಾಟಾದ ಪ್ರದೇಶದಲ್ಲಿ ಮರಾಠರ ಗೆರಿಲ್ಲಾ ಯುದ್ಧ ತಂತ್ರವು ಉಪಯುಕ್ತವಾಗಲಾರದು ಎಂಬುದನ್ನು ಅವರು ಗುರುತಿಸಿದರು. ಅವರು 'ಡಿಬಾಯಿನ ಈ ಫ್ರೆಂಚ್ ಸೈನ್ಯದ ತಜ್ಞನ ಮಾರ್ಗದರ್ಶನದಲ್ಲಿ ತಮ್ಮ ಸೈನ್ಯವನ್ನು ತರಬೇತುಗೊಳಿಸಿದರು ಮತ್ತು ತೋಫುಖಾನೆಯನ್ನು ಸುಸಜ್ಜಿತಗೊಳಿಸಿದರು. ಈ ತರಬೇತಿ ಹೊಂದಿದ ಸೈನ್ಯದ ಬಲದಿಂದ ಅವರು ರೋಹಿಲೆ, ಜಾಟ, ರಾಜಪೂತ, ಬುಂದೇಲೆ ಮುಂತಾದವರನ್ನು ಮಣಿಸಿದರು.

ಪಾನಿಪತ್ ಯುದ್ಧದಿಂದಾಗಿ ಮರಾಠರ ಶಕ್ತಿಯು ಕ್ಷೀಣವಾಗಿದೆ ಎಂಬುದನ್ನು ನೋಡಿ ಇಂಗ್ಲಿಷರು ದಿಲ್ಲಿಯ ರಾಜಕಾರಣದಲ್ಲಿ ಭಾಗವಹಿಸಲು ಆರಂಭಿಸಿದರು. ಅವರು ಬಂಗಾಲದ ಸುಭೆಯ ಮುಲ್ಕಿ (ದಿವಾಣಿ) ಅಧಿಕಾರಗಳನ್ನು ಸ್ವತಃದಕಡೆಗೆ ತೆಗೆದುಕೊಂಡರು. ಅವರು ದಿಲ್ಲಿಯ ಬಾದಶಾಹನನ್ನು ತಮ್ಮ ಅಂಕಿತದಲ್ಲಿ ಇಟ್ಟುಕೊಳ್ಳಬಯಸುತ್ತಿದ್ದರು. ಇಂಥ ವಿಪರೀತ ಪರಿಸ್ಥಿತಿಯಲ್ಲಿ ಮಹಾದಜಿ ಶಿಂದೆ ಇವರು ಇಂಗ್ಲಿಷರನ್ನು ಸೋಲಿಸಿ ಬಾದಶಾಹನನ್ನು ಮತ್ತೆ ಸಿಂಹಾಸನದ ಮೇಲೆ ಕೂಡಿಸಿದರು. ಈ ಕಾರ್ಯದಿಂದ ಪ್ರಸನ್ನನಾಗಿ ಬಾದಶಾಹನು ಅವರಿಗೆ 'ವಕೀ-ಇ-ಮುತ್ಲಕ' ಎಂಬ ಪದವಿಯನ್ನು ಕೊಡಮಾಡಿದನು. ಇದರರ್ಥ ಅವರಿಗೆ ಮುಲ್ಕಿ ಮತ್ತು ಸೈನಿಕ ಅಧಿಕಾರಗಳ ಹಕ್ಕುಪತ್ರವನ್ನು ಕೊಡಮಾಡಿದನು. ಅವರು ಆ ಪದವಿವನ್ನು ಬಾಲ ಪೇಶವೆ ಸವಾಯಿ ಮಾಧವರಾವ ಇವರ ವತಿಯಿಂದ ಸ್ವೀಕರಿಸಿದರು ಈ ಪದವಿಯಿಂದಾಗಿ ದಿಲ್ಲಿಯ ಸಾಮ್ರಾಜ್ಯವು ಮರಾಠರ ಸಂಪೂರ್ಣ ನಿಯಂತ್ರಣದಲ್ಲಿ ಬಂದಿತು. ಕುಸಿಯುತ್ತಿರುವ ಬಾದಶಾಹನ ಸಾಮ್ರಾಜ್ಯವನ್ನು ಸಾವರಿಸುವುದು ಸುಲಭವಾದ ಕೆಲಸವಾಗಿರಲಿಲ್ಲ ಮಹಾದಜಿಯು ಇವರ ಅತ್ಯಂತ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ಛಲದಿಂದ ಕ್ರಿ.ಶ. 1784 ರಿಂದ 1894 ರ ಕಾಲಾವಧಿಯಲ್ಲಿ ದಿಲ್ಲಿಯ ಆಡಳಿತವನ್ನು ನೋಡಿಕೊಂಡರು.

ಪಾನಿಪತ್ ಯುದ್ಧಕ್ಕೆ ಹೊಣೆಗಾರನಾಗಿದ್ದ ನಜೀಬಖಾನನ ವಾರಸುದಾರರು ಇನ್ನೂ ರೋಹಿಲಖಂಡದಲ್ಲಿ ಕಾರಸ್ಥಾನಗಳನ್ನು ಮಾಡುತ್ತಲೇ ಇದ್ದರು. ನಜೀಬಖಾನನ ಮೊಮ್ಮಗ ಗುಲಾಮ ಕಾದಿರ ಇವನು ಕೆಂಪುಕೋಟೆಯನ್ನು ವಶಪಡಿಸಿಕೊಂಡು ಹಣಕ್ಕಾಗಿ ಬಾದಶಹ ಮತ್ತು ಬೇಗಮರನ್ನು ಪೀಡಿಸಿದನು. ಬಾದಶಾಹನ ಕಣ್ಣುಗಳನ್ನು ತೆಗೆದನು ಹಾಗೂ ಖಜಾನೆಯನ್ನು ಅಪಹರಿಸಿದನು. ಇಂಥ ಪರಿಸ್ಥಿತಿಯಲ್ಲಿ ಮಹಾದಜಿಯವರು ಕಾದಿರನ್ನು ಸೋಲಿಸಿದರು. ಅವನು ಅಪಹರಿಸಿದ ಸಂಪತ್ತನ್ನು ಜಪ್ತಿ ಮಾಡಿದರು ಹಾಗೂ ಅದನ್ನು ಬಾದಶಾಹನಿಗೆ ತಿರುಗಿ ಕೊಟ್ಟರು. ದಿಲ್ಲಿಯ ಸಿಂಹಾಸನದ ಮೇಲೆ ಬಾದಶಾಹನ ಪುನರ್ ಸ್ಥಾಪನೆ ಮಾಡಿದನು. ಈ ರೀತಿ ಮಹಾದಜಿಯವರು ಪಾನಿಪತ್ ಯುದ್ಧದನಂತರ ಮರಾಠರಿಗೆ ಮತ್ತೆ ಪ್ರತಿಷ್ಠೆಯನ್ನು ದೊರಕಿಸಿಕೊಟ್ಟರು. ದಿಲ್ಲಿಯ ಬಾದಶಾಹನನ್ನು ಮರಾಠರ ಅಂಕಿತದಲ್ಲಿಟ್ಟು ಭಾರತದ ರಾಜಕಾರಣವನ್ನು ನಡೆಸಿದರು.

ಪೇಶವೆಗಳ ಗೃಹಕಲಹದ ಪರಿಣಾಮವಾಗಿ ರಘುನಾಥರಾವನು ಇಂಗ್ಲಿಷರ ಆಶ್ರಯಕ್ಕೆ ಹೋಗಿದ್ದನು. ಇಂಗ್ಲಿಷರ ನೆರವಿನಿಂದ ಪೇಶವೆ ಪದವಿಯನ್ನು ಪಡೆಯಬೇಕೆಂಬುದು ಅವನ ಇಂಗಿತವಾಗಿತ್ತು. ಮರಾಠಿ ಮುತ್ಸದ್ದಿಗಳಿಗೆ ಇದು ಮಾನ್ಯವಿರಲ್ಲಿಲ್ಲ ಆದರಿಂದಾಗಿ ಮರಾಠಾ ಮತ್ತು ಇಂಗ್ಲಿಷರ ನಡುವಿನ ಸಂಘರ್ಷವು ಅನಿವಾರ್ಯವಾಯಿತು. ಆದರೆ ಅದರಿಂದ ಒಂದು ಸಂಗತಿ ಸ್ಪಷ್ಟವಾಯಿತು. ಅದೇನೆಂದರೆ ಹಿಂದುಸ್ಥಾನವನ್ನು ಯಾರು ಆಳಬೇಕು ಎಂಬುದರ ಅಂತಿಮ ನಿರ್ಣಯವು ಮರಾಠಾ ಮತ್ತು

ಇಂಗ್ಲಿಷ ಈ ಎರಡು ಸಾಮ್ರಾಜ್ಯಗಳ ನಡುವಿನ ಸಂಘರ್ಷದಿಂದಲೇ ಆಗುವುದಿತ್ತು.

ಮುಂಬಯಿಯಿಂದ ಬೋರಘಾಟ ಮಾರ್ಗವಾಗಿ ಬಂದ ಇಂಗ್ಲಿಷರು ಮರಾಠರ ಮೇಲೆ ದಾಳಿಮಾಡಿದರು. ಮಹಾದಜಿ ಶಿಂದೆಯವರ ನೇತೃತ್ವದಲ್ಲಿ ಮರಾಠಿ ಸೈನ್ಯವು ಒಂದುಗೂಡಿತು. ಗೆರಿಲ್ಲಾಯುದ್ಧ ತಂತ್ರವನ್ನು ಬಳಸಿ ಮರಾಠರು ಇಂಗ್ಲಿಷರಿಗೆ ಧಾನ್ಯಸಾಮಗ್ರಿ. ದೊರೆಯಗೊಡಲಿಲ್ಲ. ಎರಡೂ ಸೈನ್ಯಗಳು ವಡಗಾವ (ಈಗಿನ ಪುಣೆ-ಮುಂಬಯಿ ರಸ್ತೆಯಲ್ಲಿ) ಎಂಬಲ್ಲಿ ಎದುರಾದವು. ಈ ಯುದ್ಧದಲ್ಲಿ ಇಂಗ್ಲಿಷರ ಪರಾಭವವಾಯಿತು ಹಾಗೂ ಅದರಿಂದಾಗಿ ರಘುನಾಥರಾವನನ್ನು ಇಂಗ್ಲಿಷರು ಮರಾಠರ ವಶಕ್ಕೆ ಕೊಡಲೇಬೇಕಾಯಿತು.

ಕ್ರಿ.ಶ. 1803ರ ವರೆಗೆ ದಿಲ್ಲಿಯ ಮೇಲೆ ಮರಾಠರ ನಿಯಂತ್ರಣವಿತ್ತು. ಮರಾಠರ ಜೊತೆ ಹೋರಾಡಿ ಇಂಗ್ಲಿಷರು ಭಾರತವನ್ನು ಗೆದ್ದರು ಎಂಬುದನ್ನು ಗಮನಿಸಿದರೆ ಮಹಾದಜಿಯ ಕಾರ್ಯದ ಮೌಲ್ಯವು ತಿಳಿದುಬರುತ್ತದೆ. ದಿಲ್ಲಿಯ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಿ ಅವರು ಪುಣೆಗೆ ಬಂದರು. ಪುಣೆಯ ಹತ್ತಿರ ವಾನವಡಿ ಎಂಬಲ್ಲಿ ಮಹದಾಜಿಯವರು ಮರಣಹೊಂದಿದರು. ಅಲ್ಲಿ ಅವರ ಸ್ಮರಣಾರ್ಥವಾಗಿ ಛತ್ರಿಯನ್ನು ನಿಲ್ಲಿಸಲಾಗಿದೆ.



ಶಿಂದೆ ಛತ್ರಿ, ವಾನವಡಿ - ಪುಣೆ

ಶಿಂದೆ, ಹೋಳಕರ ಮತ್ತು ಭೋಸಲೆಯವರಂತೆ ಇತರ ಕೆಲವು ಪ್ರಮುಖ ಸರದಾರರೂ ಮರಾಠರ ರಾಜ್ಯಕ್ಕೆ ಉಲ್ಲೇಖನೀಯ ಸೇವೆ ಸಲ್ಲಿಸಿದರು.

ಶಿವಾಜಿ ಮಹಾರಾಜರು ಸ್ಥಾಪಿಸಿದ ನೌಕಾಪಡೆಯನ್ನು ಕಾನ್ಹೋಜಿ ಮತ್ತು ತುಳಾಜಿ ಈ ತಂದೆಮಕ್ಕಳು ಪ್ರಬಲ ಗೊಳಿಸಿದರು ಪ್ರಬಲ ನೌಕಾಪಡೆಯ ಬಲದಿಂದ ಹಾಗೂ ಸಿದ್ದಿ ಈ ನೌಕಾಶಕ್ತಿಯನ್ನು, ಹೊಂದಿದ ರಾಜ್ಯಗಳನ್ನು ತಮ್ಮ ಭೀತಿಯಲ್ಲಿರಿಸಿದರು. ಮರಾಠಾ ರಾಜ್ಯದ ಕರಾವಳಿಯನ್ನು ರಕ್ಷಿಸಿದರು.

ಸೇನಾಪತಿ ಖಂಡೇರಾವ ದಾಭಾಡೆ ಮತ್ತು ಅವನ ಮಗ ತ್ರಿಂಬಕರಾವ ಇವರು ಗುಜರಾತದಲ್ಲಿ ಮರಾಠಾ ರಾಜ್ಯದ ಅಡಿಪಾಯವನ್ನು ಹಾಕಿದರು. ಖಂಡೇರಾವನ ಮರಣದ ನಂತರ ಅವನ ಪತ್ನಿಯಾದ ಉಮಾಬಾಯಿ ಇವಳು ಅಹಮದಾಬಾದಿನ ಮುಘಲ ಸರದಾರನನ್ನು ಸೋಲಿಸಿದಳು. ಅಲ್ಲಿಯ ಕೋಟೆಯನ್ನು ಗೆದ್ದುಕೊಂಡಳು. ಮುಂದೆ ಗಾಯಕವಾಡರು ಗುಜರಾತದಲ್ಲಿಯ ವಡೋದರಾವನ್ನು ತಮ್ಮ ಆಡಳಿತದ ಕೇಂದ್ರವನ್ನಾಗಿ ಮಾಡಿದರು. ಮಧ್ಯ ಪ್ರದೇಶದಲ್ಲಿಯ ಧಾರ ಮತ್ತು ದೇವಾಸದ ಪವಾರರು ಶಿಂದೆ ಮತ್ತು ಹೋಳಕರ ಇವರಿಗೆ ಉತ್ತರದಲ್ಲಿ ಮರಾಠರ ಪ್ರಭುತ್ವದ ವಿಸ್ತಾರ ಮಾಡಲು ಅಮೂಲ್ಯವಾದ ಸಹಾಯ ಮಾಡಿದರು.

ಮಾಧವರಾವ ಪೇಶವೆಯವರೆ ಮರಣದ ನಂತರ ಮರಾಠರ ರಾಜ್ಯದಲ್ಲಿ ಅವ್ಯವಸ್ಥೆ ನಿರ್ಮಾಣವಾಗಿತ್ತು. ನಾನಾ ಫಡಣವೀಸ ಮತ್ತು ಮಹಾದಜಿ ಶಿಂದೆ ಇವರು ಆಡಳಿತವನ್ನು ಸುಸಜ್ಜಿತಗೊಳಿಸಿದರು. ಮಹಾದಜಿಯವರು ಉತ್ತರ ಭಾರತದಲ್ಲಿ ಮರಾಠರ ವರ್ಚಸ್ಸನ್ನು ಸ್ಥಾಪಿಸುವಕಾರ್ಯದಲ್ಲಿ ತೊಡಗಿರುವಾಗ ನಾನಾ ಫಡಣವೀಸನು ದಕ್ಷಿಣದ ಕಡೆಯ ರಾಜಕಾರಣದ ಸೂತ್ರಗಳನ್ನು ನಿರ್ವ-ಹಿಸಿದನು. ಈ ಕಾರ್ಯದಲ್ಲಿ ಅವನಿಗೆ ಪಟವರ್ಧನ, ಹರಿಪಂತ ಫಡಕೆ, ರಾಸ್ತೆ ಮುಂತಾದ ಸರದಾರರು ನೆರವಾದರು ಅದರಿಂದಾಗಿ ದಕ್ಷಿಣದಲ್ಲಿ ಮರಾಠಾ ಪ್ರಭುತ್ವದ ವರ್ಚಸ್ಸು ಸ್ಥಾಪಿಸಲ್ಪಟ್ಟಿತು ಇಂದೌರಿನ ಹೋಳಕರ, ನಾಗಪೂರದ ಭೋಸಲೆ, ಗ್ವಾಲಿಯರದ ಶಿಂದೆ, ವಡೋದರಾದ ಗಾಯಕವಾಡ ಇವರು ಪರಾಕ್ರಮ, ನೇತೃತ್ವ ಸಾಮರ್ಥ್ಯ ಮುಂತಾದ ಗುಣಗಳ ಮೂಲಕ ಮರಾಠಾ ಸಾಮ್ರಾಜ್ಯಕ್ಕೆ ವೈಭವವನ್ನು ದೊರಕಿಸಿಕೊಟ್ಟರು. ಅವರು ಮರಾಠಾ ಸಾಮ್ರಾಜ್ಯದ ಕೊನೆಯ ಹಂತದಲ್ಲಿಯ ಆಧಾರಸ್ತಂಭವಾಗಿದ್ದರು.



ನಾನಾ ಫಡಣವೀಸ

ಉತ್ತರ ಮತ್ತು ದಕ್ಷಿಣ ಭಾರತಗಳಲ್ಲಿ ಮಾರಾಠಾ ಪ್ರಭುತ್ವದ ಪ್ರಭಾವವನ್ನು ನಿರ್ಮಿಸುವುದರಲ್ಲಿ ಮರಾಠಾ ಸರದಾರರು ಯಶಸ್ವಿಯಾದರು. ಮಹಾದಜಿ ಶಿಂದೆ ಮತ್ತು ನಾನಾ ಫಡಣವೀಸ ಇವರ ಮರಣದ ನಂತರ ಮರಾಠಾ ಪ್ರಭುತ್ವವು ಅವನತಿ ಹೊಂದತೊಡಗಿತು. ಈ ಕಾಲದಲ್ಲಿ ರಘುನಾಥರಾವನ ಪುತ್ರನಾದ ಎರಡನೇ ಬಾಜೀರಾವ ಪೇಶವೆಯಾಗಿದ್ದನು. ಅವನಲ್ಲಿ ನೇತೃತ್ವದ

ಗುಣಗಳಿರಲಿಲ್ಲ. ಅನೇಕ ದೋಷಗಳೇ ಇದ್ದವು. ಅವನಿಗೆ ಮರಾಠಾ ಸರದಾರರಲ್ಲಿ ಐಕ್ಯತೆಯನ್ನು ನಿರ್ಮಾಣ ಮಾಡಲು ಸಾಧ್ಯವಾಗಲಿಲ್ಲ. ಮರಾಠಾ ಸರದಾರರಲ್ಲಿಯ ಒಡಕಿನಿಂದಾಗಿ ಮರಾಠಾ ಸಾಮ್ರಾಜ್ಯವು ಒಳಗಿನಿಂದ ಪೊಳ್ಳಾಗುತ್ತ ಹೋಯಿತು. ಇಂಥ ಅನೇಕ ಕಾರಣಗಳಿಂದಾಗಿ ಎರಡನೇ ಬಾಜೀರಾವನ ಕಾಲದಲ್ಲಿ ಉತ್ತರ ಮತ್ತು ದಕ್ಷಿಣಗಳಲ್ಲಿಯ ಮರಾಠರ ಪ್ರಭಾವವು ಕಡಿಮೆಯಾಗುತ್ತಹೋಯಿತು. ಮರಾಠರ ಸ್ಥಾನವನ್ನು ಇಂಗ್ಲಿಷರು ಪಡೆದರು.

ಕ್ರಿ.ಶ. 1817ರಲ್ಲಿ ಇಂಗ್ಲಿಷರು ಪುಣೆಯನ್ನು ವಶಪಡಿಸಿಕೊಂಡ ಅಲ್ಲಿ'ಯುನಿಯನ್ ಜಾಕ್' ಈ ತಮ್ಮ ಧ್ವಜವನ್ನು ಹಾರಿಸಿದರು. ಕ್ರಿ.ಶ, 1818 ರಲ್ಲಿ ಸೋಲಾಪೂರ ಜಿಲ್ಲೆಯಲ್ಲಿಯ ಆಷ್ಟಿಯ ಯುದ್ಧದಲ್ಲಿ ಇಂಗ್ಲಿಷರು ಮರಾಠರನ್ನು ಪರಾಭವಗೊಳಿಸಿದರು. ಅದರಿಂದಾಗಿ ಮರಾಠರ ಪ್ರಭುತ್ವ ಕೊನೆಗೊಂಡಿತು. ಇದು ಭಾರತದ ಇತಿಹಾಸದಲ್ಲಿ ಒಂದು ದೊಡ್ಡ ಬದಲಾವಣೆಯನ್ನುಂಟು ಮಾಡುವ ಘಟನೆಯಾಗಿದೆ. ಈ ಘಟನೆಯ ನಂತರ ಇಂಗ್ಲಿಷರು ಭಾರತದ ಬಹುತಾಂಶ ಭಾಗವನ್ನು ತಮ್ಮ ಅಧಿಪತ್ಯಕ್ಕೆ ಒಳಪಡಿಸಿದರು. ಪಾಶ್ಚಾತ್ಯ ಜಗತ್ತಿನ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಾದವು. ಅನೇಕ ಹಳೆಯ ಸಂಗತಿಗಳು ಕ್ರಮೇಣ ಮಾಯವಾದವು ಇಲ್ಲವೆ ಬದಿಗೊತ್ತಲ್ಪಟ್ಟವು. ಒಂದು ದೊಡ್ಡ ಸ್ಥಿತ್ಯಂತರವಾಯಿತು. ಭಾರತದ ಇತಿಹಾಸದಲ್ಲಿಯ ಮಧ್ಯಯುಗವು ಮುಕ್ತಾಯವಾಯಿತು. ಆಧುನಿಕಕಾಲಖಂಡ ಆರಂಭವಾಯಿತು.



## ಅಭ್ಯಾಸ

**1. ಒಂದೊಂದು ಶಬ್ದದಲ್ಲಿ ಉತ್ತರ ಬರೆಯಿರಿ.**

(1) ಇಂದೌರಿನ ಆಡಳಿತ ಸೂತ್ರಗಳನ್ನು ನಿರ್ವಹಿಸುವ–

(2) ನಾಗಪೂರದ ಭೋಸಲೆ ಮನೆತನದಲ್ಲಿಯ ಅತ್ಯಂತ ಸಾಮರ್ಥ್ಯಶಾಲಿ ಮತ್ತು ಪರಾಕ್ರಮಿ ವ್ಯಕ್ತಿ –

(3) ದಿಲ್ಲಿಯ ಸಿಂಹಾಸನದ ಮೇಲೆ ಬಾದಶಾಹನನ್ನು ಪುನರ್‌ಸ್ಥಾಪನೆ ಮಾಡಿದವರು –

(4) ದಕ್ಷಿಣದಲ್ಲಿಯ ರಾಜಕಾರಣದ ಸೂತ್ರಗಳನ್ನು ನಿರ್ವಹಿಸುವವರು –

**2. ಕೆಳಗಿನ ಘಟನೆಗಳನ್ನು ಕಾಲಾನುಕ್ರಮವಾಗಿ ಬರೆಯಿರಿ.**

(1) ಆಷ್ಟಿಯ ಯುದ್ಧ (2) ಓಡಿಶಾ ಮೇಲೆ ಮರಾಠರ ಪ್ರಭುತ್ವ (3) ಇಂಗ್ಲಿಷರು ಪುಣೆಯಲ್ಲಿ 'ಯುನಿಯನ್ ಜಾಕ್' ಹಾರಿಸಿದರು.

**3. ಉತ್ತರ ಬರೆಯಿರಿ.**

(1) ಅಹಿಲ್ಯಾಬಾಯಿ ಹೋಳಕರ ಇವರು ಮಾಡಿದ ಕಾರ್ಯಗಳು

(2) ಮಹಾದಜಿ ಶಿಂದೆಯ ಪರಾಕ್ರಮ

(3) ಗುಜರಾತದಲ್ಲಿಯ ಮರಾಠರ ಆಡಳಿತ

**4.** ಮರಾಠರ ಪ್ರಭುತ್ವವು ಕೊನೆಗೊಳ್ಳುವ ಕಾರಣಗಳು ಚರ್ಚಿಸಿರಿ.

**ಉಪಕ್ರಮ:**

ಮರಾಠಿ ಸಾಮ್ರಾಜ್ಯದ ವಿಸ್ತಾರಕ್ಕಾಗಿ ಕೊಡುಗೆಯನ್ನು ನೀಡಿದ ಮನೆತನಗಳು ಮಾಹಿತಿಯನ್ನು ಸಚಿತ್ರ ಸಂಗ್ರಹಿಸಿರಿ. ಶಾಲೆಯಲ್ಲಿ ಪ್ರದರ್ಶನವನ್ನು ಏರ್ಪಡಿಸಿರಿ.



ಶನಿವಾರವಾಡಾ. ಪುಣೆ.

# 13. ಮಹಾರಾಷ್ಟ್ರದಲ್ಲಿಯ ಸಮಾಜಜೀವನ

ಛತ್ರಪತಿ ಶಿವಾಜಿ ಮಹಾರಾಜರು ಸ್ಥಾಪಿಸಿದ ಹಿಂದವೀ ಸ್ವರಾಜ್ಯವು ಜನತೆಯ ರಾಜ್ಯವಾಗಿತ್ತು. ಜನರು ಕಲ್ಯಾಣವಾಗಬೇಕು. ಅವರ ಶೋಷಣೆಯಾಗಬಾರದು. ಮಹಾರಾಷ್ಟ್ರ ಧರ್ಮದ ರಕ್ಷಣೆಯಾಗಬೇಕು ಎಂಬುದು ಅವರ ಉದಾತ್ತವಾದ ಉದ್ದೇಶವಾಗಿತ್ತು. ಶಿವಾಜಿ ಮಹಾರಾಜರ ನಂತರದ ಕಾಲದಲ್ಲಿಯೂ ಭಾರತದ ತುಂಬೆಲ್ಲ ಮರಾಠಿ ಪ್ರಭುತ್ವದ ವಿಸ್ತಾರವಾಯಿತು. ಮರಾಠ ಸಾಮ್ರಾಜ್ಯವು ಸುಮಾರು 150 ವರ್ಷ ಉಳಿಯಿತು.

ಮರಾಠಿ ಪ್ರಭುತ್ವದ ಆಡಳಿತದ ಮಾಹಿತಿಯನ್ನು ನಾವು ಹಿಂದಿನ ಪಾಠದಲ್ಲಿ ಅಭ್ಯಸಿಸಿದೆವು. ಈ ಪಾಠದಲ್ಲಿ ನಾವು ಆ ಕಾಲದಲ್ಲಿಯ ಸಾಮಾಜಿಕ ಸ್ಥಿತಿ ಮತ್ತು ಜನಜೀವನ ಈ ವಿಷಯಗಳ ಮಾಹಿತಿಯನ್ನು ಪಡೆಯುವವರಿದ್ದೇವೆ.

**ಸಾಮಾಜಿಕ ಪರಿಸ್ಥಿತಿ:** ಕೃಷಿ ಮತ್ತು ಕೃಷಿಯ ಮೇಲೆ ಆಧಾರಿತ ಇತರ ಉದ್ಯೋಗಗಳು ಹಳ್ಳಿಗಳಲ್ಲಿಯ ಉತ್ಪಾದನೆಯ ಪ್ರಮುಖ ಸಾಧನಗಳಾಗಿದ್ದವು. ಊರಿನ ಪಾಟೀಲನ ಕಡೆಗೆ ಊರಿನ ಸಂರಕ್ಷಣೆಯ ಹಾಗೂ ಕುಲಕರ್ಣಿಯ ಕಡೆಗೆ ಕಂದಾಯವನ್ನು ನೋಡಿಕೊಳ್ಳುವ ಜವಾಬ್ದಾರಿಯಿತ್ತು. ಪಾಟೀಲಕಿಯ (ಗೌಡಕಿ) ಕಾರ್ಯಕ್ಕಾಗಿ ಪಾಟೀಲನಿಗೆ ಭೂಮಿಯನ್ನು ಇನಾಮು ಕೊಡಲಾಗುತ್ತಿತ್ತು. ಅವನಿಗೆ ಈ ಕಾರ್ಯಕ್ಕಾಗಿ ಕಂದಾಯದಲ್ಲಿಯ ಸ್ವಲ್ಪ ಪಾಲು ದೊರೆಯುತ್ತಿತ್ತು. ಬಲೂತೆದಾರರಿಗೆ ಊರಿನ ಸಲುವಾಗಿ ಮಾಡಿದ ಕೆಲಸಗಳ ಪ್ರತಿಫಲವು ವಸ್ತುರೂಪದಲ್ಲಿ ದೊರೆಯುತ್ತಿತ್ತು. ಹಳ್ಳಿಯಲ್ಲಿಯ ಉದ್ಯೋಗಗಳಲ್ಲಿ ಕಪ್ಪು ಮತ್ತು ಬಿಳಿದು ಎಂಬ ಎರಡು ಪ್ರಮುಖ ಭಾಗಗಳಿದ್ದವು. ಕಪ್ಪು ಭೂಮಿಯಲ್ಲಿ ಕೆಲಸ ಮಾಡುವವರು ರೈತರಾಗಿದ್ದರು ಹಾಗೂ ಎರಡನೆಯ ಭಾಗದಲ್ಲಿ ನೌಕರಿ ಮಾಡುವವರ ವರ್ಗವಿತ್ತು ಊರಲ್ಲಿಯ ಎಲ್ಲ ವ್ಯವಹಾರಗಳನ್ನು ಪರಸ್ಪರ ಸಾಮರಸ್ಯದಿಂದ ಮಾಡಲಾಗುತ್ತಿತ್ತು. ಹಳ್ಳಿಗಳಲ್ಲಿ ಅವಿಭಕ್ತ ಕುಟುಂಬ ಪದ್ಧತಿಯಿತ್ತು.



**ಗೊತ್ತಿದೆಯೇ ನಿಮಗೆ?**

ಹಳ್ಳಿಯಲ್ಲಿ ಕಮ್ಮಾರ, ಬಡಿಗ, ಕುಂಭಾರ, ಪತ್ತಾರ ಮುಂತಾದ ಹನ್ನೆರಡು ಬಲೂತೆದಾರರು ಇರುತ್ತಿದ್ದರು. ಈ ಬಲೂತೆದಾರರು ಹಳ್ಳಿಯಲ್ಲಿಯ ಜನರ ಕೆಲಸಗಳನ್ನು ಮಾಡುತ್ತಿದ್ದರು.

**ರೂಢಿ-ಪರಂಪರೆಗಳು:** ಈ ಕಾಲದಲ್ಲಿ ಬಾಲವಿವಾಹ ಪದ್ಧತಿಯು ರೂಢವಾಗಿತ್ತು. ಬಹುಪತ್ನಿತ್ವದ ಪದ್ಧತಿ ಬಳಕೆಯಲ್ಲಿತ್ತು. ವಿಧವೆಯರು ಪುನರ್ವಿವಾಹ ಮಾಡಿಕೊಂಡ ಉದಾಹರಣೆಗಳಿವೆ. ಮಾನವ ಶರೀರದ ಮೇಲೆ ಅಂತ್ಯಸಂಸ್ಕಾರ ಮಾಡಲು ದಹನ, ದಫನ ಮತ್ತು ವಿಸರ್ಜನೆ ಎಂಬ ಪದ್ಧತಿಗಳಿದ್ದವು. ಚಿಕ್ಕ-ದೊಡ್ಡ ಸಂಗತಿಗಳಿಗಾಗಿ ಹಾಗೂ ಯುದ್ಧದ ಸಲುವಾಗಿ ಮುಹೂರ್ತವನ್ನು ನೋಡಲಾಗುತ್ತಿತು. ಸ್ವಪ್ನ ಹಾಗೂ ಶಕುನಗಳ ಮೇಲೆ ಜನರ ವಿಶ್ವಾಸವಿತ್ತು. ದೇವರ ಅಥವಾ ಗ್ರಹಗಳ ಕೋಪವಾಗಬಾರದೆಂದು ಅನುಷ್ಠಾನಗಳನ್ನು ಮಾಡಲಾಗುತ್ತಿತ್ತು. ಅದಕ್ಕಾಗಿ ದಾನ-ಧರ್ಮಗಳನ್ನು ಮಾಡಲಾಗುತ್ತಿತ್ತು. ಜ್ಯೋತಿಷ್ಯದ ಮೇಲೆ ಜನರ ವಿಶ್ವಾಸವಿತ್ತು. ವೈಜ್ಞಾನಿಕ ದೃಷ್ಟಿಕೋನದ ಅಭಾವವಿದ್ದು ಔಷಧೋಪಚಾರಕ್ಕಿಂತ ಹರಕೆಗೆ ಪ್ರಾಧಾನ್ಯವಿತ್ತು.

**ಜೀವನಮಟ್ಟ:** ಬಹುಸಂಖ್ಯ ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದರು. ಹಳ್ಳಿಗಳು ಸ್ವಯಂಪೂರ್ಣವಾಗಿದ್ದವು. ಕೇವಲ ಉಪ್ಪನ್ನು ಬೇರೆಕಡೆಯಿಂದ ತರಿಸಿಕೊಳ್ಳಬೇಕಾಗುತ್ತಿತು. ರೈತರ ಅವಶ್ಯಕತೆಗಳು ಸೀಮಿತವಾಗಿದ್ದವು. ರೈತರ ಜೋಳ, ಸಜ್ಜೆ, ಗೋದಿ, ರಾಗಿ, ಗೋವಿನಜೋಳ, ಅಕ್ಕಿ ಮುಂತಾದ ಧಾನ್ಯಗಳನ್ನು ಬೆಳೆಯುತ್ತಿದ್ದರು. ದೈನಂದಿನ ಊಟದಲ್ಲಿ ರೊಟ್ಟಿ, ಉಳ್ಳಾಗಡ್ಡಿ, ಚಟ್ನಿ, ಸಾರು ಇತ್ಯಾದಿಗಳ ಸಮಾವೇಶವಿರುತ್ತಿತ್ತು. ತಮ್ಮಲ್ಲಿಯ ವ್ಯವಹಾರಗಳನ್ನು ವಸ್ತುವಿನಿಯಮ ಪದ್ಧತಿಯಿಂದ ಮಾಡುತ್ತಿದ್ದರು. ಊರಲ್ಲಿ ಮಣ್ಣು-ಇಟ್ಟಿಗೆಗಳ ಸಾದಾ ಮನೆಗಳು ಇರುತ್ತಿದ್ದವು. ಪಟ್ಟಣಗಳಲ್ಲಿ ಒಂದು ಅಂತಸ್ತಿನ ಇಲ್ಲವೆ ಎರಡು ಅಂತಸ್ತುಗಳ ಮಹಲುಗಳು ಇರುತ್ತಿದ್ದವು. ಶ್ರೀಮಂತರ ಊಟದಲ್ಲಿ ಅನ್ನ, ತೊವ್ವೆ, ಚಪಾತಿ, ಪಲ್ಯ, ಕೋಸಂಬರಿ, ಹಾಲು-ಮೊಸರಿನ ಪದಾರ್ಥಗಳು ಇರುತ್ತಿದ್ದವು. ಧೋತರ, ಅಂಗಿ, ನಿಲುವಂಗಿ, ಮುಂಡಾಸುಗಳು ಪುರುಷರ ವೇಷಭೂಷಣಗಳಾಗಿದ್ದರೆ ಸೀರೆ, ಕುಪ್ಪಸ ಇವು ಸ್ತ್ರೀಯರ ವೇಷಭೂಷಣಗಳಾಗಿದ್ದವು.

**ಹಬ್ಬ-ಹರಿದಿನಗಳು:** ಯುಗಾದಿ, ನಾಗಪಂಚಮಿ, ಬೈಲಪೋಳಾ ದೀಪಾವಳಿ, ಮಕರ ಸಂಕ್ರಮಣ, ಹೋಳಿಹುಣ್ಣಿವೆ, ಈದ ಮುಂತಾದ ಹಬ್ಬ-ಹರಿದಿನಗಳನ್ನು ಜನರು ಆಚರಿಸುತ್ತಿದ್ದರು, ಪೇಶವೆಯವರ ಕಾಲದಲ್ಲಿ ಗಣೇಶೋತ್ಸವವನ್ನು ದೊಡ್ಡ ಪ್ರಮಾಣದಲ್ಲಿ ಆಚರಿಸಲಾಗುತ್ತಿತ್ತು. ಅದುನ್ನು ಮನೆಗಳಲ್ಲಿ ಮಾತ್ರ ಆಚರಿಸಲಾಗುತ್ತಿತು. ಪೇಶವೆಯವರು ಗಣೇಶ ಭಕ್ತರಾದುದರಿಂದ ಗಣೇಶೋತ್ಸವಕ್ಕೆ ಮಹತ್ವ ಪ್ರಾಪ್ತವಾಯಿತು ಪ್ರತಿವರ್ಷ ಭಾದ್ರಪದ ಚತುರ್ಥಿ ಹಿಡಿದು ಅನಂತ ಚತುರ್ಥಿವರೆಗೂ ಈ ಉತ್ಸವವು ನಡೆಯುತ್ತಿತು.

ದಸರಾ ಇದು ಸಾಡೇತೀನ (ಮೂರುವರೆ) ಮುಹೂರ್ತಗಳಲ್ಲಿ ಒಂದು ಇರುವುದರಿಂದ ಅಂದಿನಿಂದ ಜನರು

ಶುಭಕಾರ್ಯಗಳನ್ನು ಆರಂಭಿಸುತ್ತಿದ್ದರು. ಈ ದಿನ ಶಸ್ತ್ರಾಸ್ತ್ರಗಳ ಪೂಜೆಮಾಡುತ್ತಿದ್ದರು. ಸೀಮೋಲ್ಲಂಘನ ಮಾಡುತ್ತಿದ್ದರು. ಪರಸ್ಪರರಿಗೆ ಬನ್ನಿ ಗಿಡದ ಎಲೆಗಳನ್ನು ಕೊಡುತ್ತಿದ್ದರು. ದಸರಾದನಂತರ ಮರಾಠರುದಂಡ ಯಾತ್ರೆಗಾಗಿ ಹೊರಡುತ್ತಿದ್ದರು. ದೀಪಾವಳಿಯಲ್ಲಿ ಬಲಿಪ್ರತಪದಾ ಮತ್ತು ಭಾವುಬೀಜ ವಿಶೇಷವಾಗಿ ಆಚರಿಸಲಾಗುತ್ತಿತು. ಹಳ್ಳಿಗಳಲ್ಲಿ ಜಾತ್ರೆಗಳಾಗುತ್ತಿದ್ದವು. ಜಾತ್ರೆಯಲ್ಲಿ ಮಲ್ಲಯುದ್ಧವನ್ನು ಏರ್ಪಡಿಸಲಾಗುತ್ತಿತ್ತು. ಯುಗಾದಿಯ ದಿನ 'ಗುಢಿ' (ಧ್ವಜ)ಯನ್ನು ನಿಲ್ಲಿಸಿ ಈ ಹಬ್ಬವನ್ನು ಆಚರಿಸುತ್ತಿದ್ದರು. ಉತ್ಸವದ ಸಮಯದಲ್ಲಿ ನೃತ್ಯ, ಹಾಡು, ಡಪ್ಪಿನ ಪದಗಳು, ತಮಾಶಾ ಇತ್ಯಾದಿ ಮನ ರಂಜನೆಯ ಕಾರ್ಯಕ್ರಮಗಳು ನಡೆಯುತ್ತಿದ್ದವು 'ತಮಾಶಾ' ಈ ಮನರಂಜನೆಯ ಪ್ರಕಾರವು ಜನಪ್ರಿಯವಾಗಿತ್ತು.



ಬೈಲಪೋಳಾ

**ಶಿಕ್ಷಣ:** ಈ ಕಾಲದಲ್ಲಿಯ ಶಿಕ್ಷಣ ಪದ್ಧತಿಯಲ್ಲಿ ಪಾಠಶಾಲೆ ಮತ್ತು ಮದರಸಾಗಳು ಇದ್ದವು. ಲೇಖನ, ವಾಚನ, ಗಣಿತ ಇತ್ಯಾದಿಗಳ ಶಿಕ್ಷಣವು ಮನೆಯಲ್ಲಿ ದೊರೆಯುತ್ತಿತ್ತು. ವ್ಯವಹಾರದಲ್ಲಿ ಮೋಡಿ ಲಿಪಿಯ ಬಳಕೆಯನ್ನು ಮಾಡಲಾಗುತ್ತಿತ್ತು.

**ಸಂಪರ್ಕ-ಪ್ರವಾಸ:** ಘಟ್ಟದ ಮಾರ್ಗ, ರಸ್ತೆ, ನದಿಗಳ ಮೇಲಿನ ಸೇತುವೆ ಮಾರ್ಗದಿಂದ ಸಾರಿಗೆ ನಡೆಯುತ್ತಿತು ಧಾನ್ಯ ಬಾಟ್ಟೆ, ಅಂಗದಿ ಸಾಮಾನುಗಳ ಇವುಗಳ ಸಾರಿಗೆ ಎತ್ತುಗಳ ಬೆನ್ನು ಮೇಲಿದ ಮಾಡಲಾಗುತ್ತಿತ್ತು. ನದಿಯೊಳಗಿಂದ ಹೋಗುವ ಸಲುವಾಗಿ ನಾವೆಗಳ ಉಪಯೋಗವಾಗುತ್ತಿತ್ತು. ಪತ್ರಗಳನ್ನು ಒಯ್ಯುವ ಮತ್ತು ತರುವ ಕೆಲಸವನ್ನು ಒಂಟೆ ಸವಾರರು ಮತ್ತು ದೂತರು ಮಾಡುತ್ತಿದ್ದರು.

**ಕ್ರೀಡೆಗಳು:** ಈ ಕಾಲದಲ್ಲಿ ವಿವಿಧ ಆಟಗಳನ್ನು ಆಡಲಾಗುತ್ತಿತ್ತು. ಕ್ರೀಡೆಯು ಮನರಂಜನೆಯ ಸಾಧನವಾಗಿತ್ತು, ಮಲಯುದ್ಧ, ಯುದ್ಧಕಲೆ ಈ ಆಟಗಳು ಜನಪ್ರಿಯವಾಗಿದ್ದವು. ಮಲ್ಲಕಂಬ, ದಂಡ, ಕುಸ್ತಿ, ಲಾಠಿ, ದಂಡಪಟ್ಟಾ, ಭೋಥಾಟಿ ಮುಂತಾದ ಆಟಗಳನ್ನು ಆಡಲಾಗುತ್ತಿತ್ತು. ಹುತೂತ್ತು ಖೋಖೋ, ಆಟ್ಯಾಪಾಟ್ಯಾ ಈ ಹೊರಾಂಗಣ ಆಟಗಳು ಹಾಗೂ ಪಗಡೆ, ಗಂಜಿಫಾ, ಚದುರಂಗ ಈ ಒಳಾಂಗಣ ಆಟಗಳು ಜನಪ್ರಿಯವಾಗಿದ್ದವು.



ಮಲ್ಲಕಂಬ

**ಧರ್ಮ ಮತ್ತು ಆಚಾರ-ವಿಚಾರ:** ಹಿಂದೂ ಮತ್ತು ಮುಸ್ಲಿಂ ಎಂಬ ಎರಡು ಪ್ರಮುಖ ಧರ್ಮಗಳು ಈ ಕಾಲದಲ್ಲಿ ಕಂಡುಬರುತ್ತವೆ. ಛತ್ರಪತಿ ಶಿವಾಜಿ ಮಹಾರಾಜರ ಧಾರ್ಮಿಕ ಧೋರಣೆಯು ಉದಾರವಾಗಿತ್ತು. ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮದ ಪ್ರಕಾರ ವರ್ತಿಸಬೇಕು. ಮತ್ತೊಬ್ಬರ ಮೇಲೆ ತಮ್ಮ ಧರ್ಮದ ಒತ್ತಾಯ ಮಾಡಬಾರದು. ಇಂತಹದೇ ವಿಚಾರ ಸರಣಿ ಆ ಕಾಲದಲ್ಲಿತ್ತು. ಪಾಠಶಾಲೆ, ಮಂದಿರ, ಮದರಸಾ ಹಾಗೂ ಮಸೀದೆಗಳಿಗೆ ಸರಕಾರದ ಕಡೆಯಿಂದ ದೇಣಿಗಳನ್ನು ಕೊಡಲಾಗುತ್ತಿತ್ತು. ಎರಡೂ ಧರ್ಮಗಳ ಅನುಯಾಯಿಗಳು ಪರಸ್ಪರರ ಹಬ್ಬಗಳಲ್ಲಿ ಸಹಭಾಗಿಯಾಗುತ್ತಿದ್ದರು. ವಾರಕರಿ, ಮಹಾನುಭಾವ ದತ್ತ, ನಾಥ, ರಾಮದಾಸಿ ಎಂಬ ಪಂಥಗಳು ಪ್ರಚಲಿತವಾಗಿದ್ದವು.

**ಸ್ತ್ರೀಯರ ಜೀವನ:** ಈ ಕಾಲದಲ್ಲಿ ಸ್ತ್ರೀಯರ ಜೀವನವು ಕಷ್ಟಮಯವಾಗಿತ್ತು. ತವರು ಮನೆ ಮತ್ತು ಗಂಡನಮನೆ ಇಷ್ಟೇ ಅವಳ ಜಗತ್ತಾಗಿತ್ತು. ಅವರ ಶಿಕ್ಷಣದ ಕಡೆಗೆ ಯಾರೂ ಲಕ್ಷ್ಯ ಕೊಡುತ್ತಿರಲ್ಲಿಲ್ಲ ಅಪವಾದಾತ್ಮಕವಾಗಿ ಕೆಲವು ಸ್ತ್ರೀಯರು ಅಕ್ಷರಜ್ಞಾನ, ಆಡಳಿತ ಮತ್ತು ಯುದ್ಧಕೌಶಲ್ಯ ಇವುಗಳಲ್ಲಿ ಪ್ರಗತಿಯನ್ನು ಸಾಧಿಸಿದ್ದರು. ಇವರಲ್ಲಿ ವೀರಮಾತೆ ಜಿಜಾಬಾಯಿ, ಯೋಸೂಬಾಯಿ ಮಹಾರಾಣಿ ತಾರಾಬಾಯಿ, ಉಮಾಬಾಯಿ ದಾಭಾಡೆ, ಗೋಪಿಕಾ ಬಾಯಿ, ಪುಣ್ಯಶ್ಲೋಕ ಅಹಿಲ್ಯಾಬಾಯಿ ಇವರ ಸಮಾವೇಶವಿತ್ತು. ಬಾಲವಿವಾಹ ವಿಷಮ ವಿವಾಹ, ವೈಧವ್ಯ, ಕೇಶ ಮುಂಡನ, ಸತಿ, ಬಹುಪತ್ನಿತ್ವ ಈ ಪದ್ಧತಿಗಳಿಂದ ಸ್ತ್ರೀಯರ ಜೀವನವು ಕಷ್ಟದಲ್ಲಿತ್ತು. ಒಟ್ಟಿನಲ್ಲಿ ಅವರು ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ಬದುಕಬೇಕಾಗಿತ್ತು.

ಕ್ರಿ.ಶ. 1630 ರಿಂದ ಹಿಡಿತು 1810ರ ವರೆಗಿನ ಒಂದು ನೂರಾ ಎಪ್ಪತ್ತೆದು ವರ್ಷಗಳ ಕಾಲಖಂಡಕ್ಕೆ ಸಾಮಾನ್ಯವಾಗಿ ಮರಾಠಶಾಹಿ ಎನ್ನುತಾರೆ. ಈ ಕಾಲದಲ್ಲಿಯ ಕಲೆ ವಾಸ್ತುಶಿಲ್ಪಗಳ ವಿಷಯವಾಗಿ ಸ್ವಲ್ಪದರಲ್ಲಿ ಪುನರಾವಲೋಕನ ಮಾಡೋಣ.

**ಶಿಲ್ಪಕಲೆ:** ಶಿವಕಾಲದಲ್ಲಿ ಕಸಬಾ ಗಣಪತಿ ಮಂದಿರದ ಜೀರ್ಣೋದ್ಧಾರ, ಲಾಲಮಹಲ ನಿರ್ಮಿತಿ, ರಾಜಗಡ ಮತ್ತು ರಾಯಗಡದಲ್ಲಿಯ ಕಟ್ಟಡಗಳ ನಿರ್ಮಾಣ, ಜಲದುರ್ಗದ ನಿರ್ಮಾಣ ಮುಂತಾದ ವಾಸ್ತುಶಿಲ್ಪ ನಿರ್ಮಾಣ ಕಾರ್ಯದ ಉಲ್ಲೇಖ ಬರುತ್ತವೆ. ಹಿರೋಜ ಇಂದುಲಕರ ಇವನು ಆ ಕಾಲದಲ್ಲಿಯ ಪ್ರಸಿದ್ಧ ವಾಸ್ತುಶಿಲ್ಪಿಯಾಗಿದ್ದನು.

ಊರನ್ನು ಸ್ಥಾಪಿಸುವಾಗ ಸಾಧ್ಯವಾದ ಮಟ್ಟಿಗೆ ಕಾಟಕೋನಾಕಾರದಲ್ಲಿಯ ರಸ್ತೆಗಳು, ಬದಿಗೆ ಕಲ್ಲಿನಿಂದ ನಿರ್ಮಿಸಿದ ಕಟ್ಟಡ, ನದಿಯ ಪಾತ್ರದ ದಂಡೆಗೆ ಘಟ್ಟ ಈ ರೀತಿಯ ರಚನೆ ಇರುತ್ತಿತ್ತು. ಪೇಶವೆ ಕಾಲದಲ್ಲಿ ಅಹಮದನಗರ ಹಾಗೂ ವಿಜಾಪೂರಗಳಲ್ಲಿರುವಂತೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಪುಣೆ ನಗರದಲ್ಲಿ ಮಾಡಲಾಗಿತ್ತು. ಪೇಶವೆಗಳು ಭೂಗತ ನಲ್ಲಿಗಳು, ಚಿಕ್ಕ-ಚಿಕ್ಕ ಅಣೆಕಟ್ಟುಗಳು, ಉದ್ಯಾನಗಳು, ಹೌದು ಮತ್ತು ಕಾರಂಜಿಗಳನ್ನು ನಿರ್ಮಿಸಿದರು. ಪುಣೆ ನಗರದ ಸಮೀಪ ಹಡಪಸರ ಭಾಗದಲ್ಲಿಯ ದಿವೇ ಘಟ್ಟದಲ್ಲಿಯ ಮಸ್ತಾನಿ ಕೆರೆಯು ವಾಸ್ತುಶಿಲ್ಪದ ದೃಷ್ಟಿಯಿಂದ ಮಹತ್ವದ್ದಾಗಿದೆ.

ಪುಣೆಯಲ್ಲಿಯ ಶನಿವಾರವಾಡಾ, ವಿಶ್ರಾಮಬಾಗ ವಾಡಾ, ನಾಶಿಕದ ಸರಕಾರವಾಡಾ, ಕೋಪರಗಾವದ ರಘುನಾಥ ಪೇಶವೆಯವರ ವಾಡೆ, ಸಾತಾರದ ಛತ್ರಪತಿಗಳ ವಾಡೆ, ಅಲ್ಲದೆ ವಾಯೀ, ಮೇಣವಲಿ, ಟೋಕೆ, ಶ್ರೀಗೋಂದೆ, ಪಂಢರಪೂರಗಳಲ್ಲಿಯ ಹಳೆಯ ಸೌಧಗಳು ಮಧ್ಯಯುಗೀನ ವಾಡೆ ಸಂಸ್ಕೃತಿಯ ಚಿಹ್ನೆಗಳಾಗಿವೆ.

ವಾಡೆಗಳ ಕಟ್ಟಡದಲ್ಲಿ ಕಚ್ಚಾ ಮತ್ತು ಸುಟ್ಟ ಇಟ್ಟಿಗೆಗಳನ್ನು ಬಳಸುತ್ತಿದ್ದರು. ಕಲ್ಲಿನ ಕಂಬಗಳು, ತೊಲೆಗಳು, ಹಾಸುಗಲ್ಲು, ಕಟೆದ ಕಲ್ಲುಗಳು, ಕಮಾನುಗಳು, ಚೆನ್ನಾಗಿ ಕಲಸಿದ ಸುಣ್ಣ, ಕೊಳವೆಯ ಆಕಾರದ ಹಂಚಿನ ಚಪ್ಪರ, ಕೆಸರು, ಬಿದಿರು ಇವುಗಳ ಬಳಕೆಯನ್ನು ಕಟ್ಟಡವನ್ನು ನಿರ್ಮಿಸುವಾಗ ಮಾಡಲಾಗುತ್ತಿತ್ತು. ವಾಡೆಗಳ ಅಲಂಕಾರಕ್ಕಾಗಿ ಚಿತ್ರಗಳು, ಬಣ್ಣ, ಕಾಷ್ಠಶಿಲ್ಪ, ಕನ್ನಡಿ ಇತ್ಯಾದಿಗಳನ್ನು ಬಳಸಲಾಗುತ್ತಿತ್ತು.

**ಮಂದಿರಗಳು:** ಶಿವಕಾಲದಲ್ಲಿಯ ಮಂದಿರಗಳು ಯಾದವಕಾಲೀನ ಹೇಮಾಡಪಂತಿ ಪದ್ಧತಿಯವಾಗಿವೆ. ಕೊಲ್ಹಾಪೂರದ ಅಂಬಾಬಾಯಿ ಮಂದಿರದ ಶಿಖರ, ಜ್ಯೋತಿಬಾನ ಗುಡ್ಡದ ಮೇಲಿನ ಮಂದಿರಗಳು, ಶಿಖರ ಶಿಂಗಣಾಪೂರದ ಶಂಭೂ ಮಹಾದೇವನ ಮಂದಿನ ಎಲ್ಲೋರಾದ ಘೃಷ್ಣೇಶ್ವರ ಮಂದಿರ ಇವು ಶಿಲ್ಪಕಲೆಯ ಉತ್ತಮ ಉದಾಹರಣೆಯಾಗಿವೆ. ಪ್ರತಾಪಗಡದ ಮೇಲಿನ ಭವಾನಿದೇವಿಯ ಮಂದಿರ ಮತ್ತು ಗೋವಾದಲ್ಲಿಯ ಸಪ್ತಕೋಟೇಶ್ವರನ ಮಂದಿರಗಳನ್ನು ಶಿವಾಜಿ ಮಹಾರಾಜರು ಕಟ್ಟಿಸಿದರು. ನಾಶಿಕದ ಕಾಳಾರಾಮ ಮಂದಿರ, ತ್ರ್ಯಂಬಕೇಶ್ವರದ ಶಿವಮಂದಿರ, ಗೋದಾವರಿ-ಪ್ರವರಾ ನದಿಗಳ ಸಂಗಮದ ಮೇಲಿರುವ ಕಾಯಗಾಂವ ಮತ್ತು ಟೋಕೆ ಎಂಬಲ್ಲಿಯ ಶಿವಮಂದಿರಗಳು, ನೇವಾಸೆಯಲ್ಲಿಯ ಮೋಹಿನಿರಾಜ ಮಂದಿರ ಮುಂತಾದ ಮಂದಿರಗಳು ಪೇಶವೆ ಕಾಲದಲ್ಲಿ ಕಟ್ಟಲ್ಪಟ್ಟವು.



**ಘೃಷ್ಣೇಶ್ವರ ಮಂದಿರ**

**ಘಟ್ಟಗಳು:** ನದಿ ಇಲ್ಲವೆ ಸಂಗಮದ ಸ್ಥಳಗಳಲ್ಲಿ ಕಟೆದ ಕಲ್ಲುಗಳಿಂದ ತಯಾರಿಸಿದ ಘಟ್ಟವು ಮರಾಠೆಶಾಹಿಯ ಒಂದು ವೈಶಿಷ್ಟ್ಯವಾಗಿದೆ. ಗೋದಾವರಿ ಮತ್ತು ಪ್ರವರಾನದಿಯ ಸಂಗಮದಲ್ಲಿಯ ಪ್ರವರಾಸಂಗಮ, ಟೋಕೆ ಎಂಬಲ್ಲಿಯ ಘಟ್ಟವು ಈ ಕಾಲದಲ್ಲಿಯ ಅತ್ಯಂತ ಪ್ರೇಕ್ಷಣೀಯ ಘಟ್ಟವಾಗಿದೆ. ಕಟೆದು ತಯಾರಿಸಿದ ಕಲ್ಲುಗಳಿಂದ ಕಟ್ಟಿದ ಈ ಘಟ್ಟದಲ್ಲಿ ಮೆಟ್ಟಿಲುಗಳ ಸಾಲುಗಳಿದ್ದು ವಿಶಿಷ್ಟ ಅಂತರದಲ್ಲಿ ಮೆಟ್ಟಿಲುಗಳನ್ನು ಜೋಡಿಸಲಾಗುತ್ತಿತ್ತು. ಅದರಿಂದಾಗಿ ಸಂಪೂರ್ಣ ಘಟ್ಟವು ಎದ್ದು ಕಾಣುತ್ತಿತ್ತು. ನೀರಿನ ಪ್ರವಾಹದಿಂದ ಘಟ್ಟವು ಸಡಿಲಾಗಿ ಕುಸಿಯಬಾರದೆಂದು ವಿಶಿಷ್ಟ ಅಂತರದಲ್ಲಿ ಗಟ್ಟಿಮುಟ್ಟಾದ ಬುರುಜಗಳನ್ನು ಕಟ್ಟಲಾಗುತ್ತಿತ್ತು.

**ಚಿತ್ರಕಲೆ:** ಪೇಶವಾಯಿಯ ಕಾಲದಲ್ಲಿ ಶನಿವಾರವಾಡಾದ ಗೋಡೆಗಳ ಮೇಲಿನ ಚಿತ್ರಗಳು ಮಹತ್ವದ್ದಾಗಿವೆ. ಈ ಕಾಲದಲ್ಲಿ ರಾಘೋ, ತಾನಾಜಿ, ಅನುಪರಾವ, ಶಿವರಾಮ, ಮಾಣಕೋಜಿ ಎಂಬ ಮಹತ್ವದ ಚಿತ್ರಕಾರರು ಆಗಿಹೋದರು. ಸವಾಯಿ ಮಾಧವರಾವ ಪೇಶವೆಯವರ ಕಾಲದಲ್ಲಿ ಗಂಗಾರಾಮ ತಾಂಬಟ

ಎಂಬ ಪ್ರಖ್ಯಾತ ಚಿತ್ರಕಾರನಿದ್ದನು. ಪೇಶವೆಗಳು ಚಿತ್ರಕಲೆಗೆ ಉತ್ತೇಜನ ನೀಡಿದರು. ಪೇಶವೆ ಕಾಲದಲ್ಲಿ ಪುಣೆ, ಸಾತಾರಾ, ಮೇಣವಲಿ, ನಾಶಿಕ, ಚಾಂದವಡ ಹಾಗೂ ನಿಪ್ಪಾಣಿ ಈ ಭಾಗದಲ್ಲಿಯ ವಾಡೆಗಳಲ್ಲಿ ಗೋಡೆಗಳ ಮೇಲೆ ಚಿತ್ರಗಳಿದ್ದವು. ಪಾಂಡೇಶ್ವರ, ಮೋರಗಾವ, ಪಾಲ, ಬೆನವಡಿ, ಪುಣೆಯ ಹತ್ತಿರದ ಪಾಷಾಣ ಈ ಸ್ಥಳಗಳಲ್ಲಿಯ ಮಂದಿರಗಳ ಗೋಡೆಗಳ ಮೇಲೆ ಚಿತ್ರಗಳಿದ್ದವು. ಈ ಕಾಲದಲ್ಲಿಯ ಚಿತ್ರಗಳ ವಿಷಯಗಳು ಬಂದರೆ ದಶಾವತಾರ, ಗಣಪತಿ, ಶಂಕರ, ರಾಮಪಂಚಾಯತನ ವಿದರ್ಭದಲ್ಲಿ ಜಾಮೋದ ಎಂಬಲ್ಲಿಯ ಜೈನಮಂದಿರದಲ್ಲಿಯ ಜಿನಚರಿತ್ರೆ, ಪೌರಾಣಿಕ ಕಥೆಗಳು ಇತ್ಯಾದಿ ಇರುತ್ತಿದ್ದವು. ರಾಮಾಯಣ, ಮಹಾಭಾರತ, ಹಬ್ಬ, ಉತ್ಸವ ಮುಂತಾದವುಗಳ ಮೇಲೆ ಆಧಾರಿತ ಚಿತ್ರಗಳು ಇರುತ್ತಿದ್ದವು. ಗ್ರಂಥಗಳ ಮೇಲಿನ ಚಿತ್ರಗಳು, ಲಘುಚಿತ್ರಗಳು, ವ್ಯಕ್ತಿಚಿತ್ರಗಳು ಹಾಗೂ ಪ್ರಸಂಗಚಿತ್ರಗಳು ಕೂಡ ಇರುತ್ತಿದ್ದವು.

**ಶಿಲ್ಪಕಲೆ:** ಶಿವಕಾಲದಲ್ಲಿಯ ಶಿವಾಜಿ ಮಹಾರಾಜರ ಕರ್ನಾಟಕ ದಂಡಯಾತ್ರೆಯ ಸಮಯದಲ್ಲಿಯ ಮಲ್ಲಮ್ಮಾ ದೇಸಾಯಿ ಭೇಟಿಯ ಶಿಲ್ಪ, ಭುಲೇಶ್ವರ ಮಂದಿರದಲ್ಲಿಯ ಶಿಲ್ಪಕಲೆ, ವ್ಯಕ್ತಿಶಿಲ್ಪಗಳು, ಪ್ರಾಣಿಗಳ ಶಿಲ್ಪಗಳು (ಉದಾ. ಆನೆ, ನವಿಲು, ಮಂಗಗಳು), ಟೋಕೆ ಎಂಬಲ್ಲಿಯ ಮಂದಿರದಲ್ಲಿಯ ಶಿಲ್ಪಗಳು ಹಾಗೂ ಹೊರವಲಯದಲ್ಲಿಯ ಶಿಲ್ಪಗಳು, ಪುಣೆಯಲ್ಲಿಯ ತ್ರಿಶುಂಡ ಗಣಪತಿ ಮಂದಿರ, ಮಧ್ಯಪ್ರದೇಶದಲ್ಲಿಯ ಅಹಿಲ್ಯಾಬಾಯಿ ಹೋಳಕರ ಇವರ ಛತ್ರಿ, ನೇವಾಸೆ ಎಂಬಲ್ಲಿಯ ಮೋಹಿನಿರಾಜ ಮಂದಿರದಲ್ಲಿಯ ಶಿಲ್ಪಕಲೆ ಮಹತ್ವದ್ದಾಗಿವೆ.

**ಲೋಹದ ಮೂರ್ತಿಗಳು:** ಪೇಶವೆಗಳು ಪುಣೆಯ ಪರ್ವತಿ ಎಂಬಲ್ಲಿಯ ಮಂದಿರದಲ್ಲಿ ಪೂಜೆಯ ಸಲುವಾಗಿ ಪಾರ್ವತಿ ಮತ್ತು ಗಣಪತಿಯ ಮೂರ್ತಿಗಳನ್ನು ತಯಾರಿಸಿಕೊಂಡಿದ್ದರು. ಅದರ ಜೊತೆಗೆ ಕಾಷ್ಟಶಿಲ್ಪವು ಕೂಡ ತಯಾರಾಗುತ್ತಿತ್ತು.

**ವಾಙ್ಮಯ:** ಸಂತವಾಙ್ಮಯ, ಪೌರಾಣಿಕ ಕಥೆಗಳು, ಟೀಕಾಗ್ರಂಥಗಳು ಬೀಸುವಕಲ್ಲಿನ ಹಾಡುಗಳು, ಅಭಂಗಗಳು, ಗ್ರಂಥಗಳು, ಕಥಾಕಾವ್ಯಗಳು, ಚರಿತ್ರಕಥೆಗಳು, ಲಾವಣಿಪದಗಳು, ಬಖರಗಳು, ಐತಿಹಾಸಿಕ ಪತ್ರಗಳು. ಸಂತರ ಚರಿತ್ರಗಳು, ಸ್ಫುಟ ಕಾವ್ಯರಚನೆ ದೇವ ದೇವತೆಂಶ ಆರಲೆಗಳು, ಇವು ವಾಙ್ಮಯದ ಮಹತ್ವದ ಭಾಗವಾಗಿದ್ದವು.

**ನಾಟ್ಯಕಲೆ:** ಹದಿನೇಳನೆಯ ಶತಮಾನದ ಕೊನೆಯಲ್ಲಿ ದಕ್ಷಿಣದಲ್ಲಿಯ ತಂಜಾವೂರ ಎಂಬಲ್ಲಿ ಮರಾಠಿ ನಾಟಕಗಳು ಆರಂಭವಾಗಿದ್ದವು. ಸರಫೋಜಿ ರಾಜರು ಈ ಕಲೆಗೆ ಪ್ರೋತ್ಸಾಹನೆ ನೀಡಿದರು. ಈ ನಾಟಕಗಳಲ್ಲಿ ಗಾಯನ ಹಾಗೂ ನರ್ತನಗಳಿಗೆ ಪ್ರಾಧಾನ್ಯವಿತ್ತು.


ಇಲ್ಲಿಯವರೆಗೆ ನಾವು ಮಧ್ಯಯುಗದಲ್ಲಿಯ ಕಾಲಖಂಡದ ಪರಿಶೀಲನೆ ಮಾಡಿದೆವು. ಮರಾಠಾ ಸಾಮ್ರಾಜ್ಯದ ಉದಯ ಮತ್ತು ವಿಸ್ತಾರವನ್ನು ಅಭ್ಯಸಿಸಿದೆವು ಮುಂದಿನ ವರ್ಷ ನಾವು ಆಧುನಿಕ ಕಾಲಖಂಡದ ಅಭ್ಯಾಸ ಮಾಡುವವರಿದ್ದೇವೆ.

BZA86I



## ಅಭ್ಯಾಸ

**1. ಕೋಷ್ಟಕವನ್ನು ಪೂರ್ಣಮಾಡಿರಿ.**




**(2)** ಸಮಾಜದಲ್ಲಿ ಯಾವಯಾವ ಅನಿಷ್ಟರೂಢಿ-ಪರಂಪರೆಗಳು ಪ್ರಚಲಿತವಾಗಿವೆ? ಅವುಗಳ ದೂರ ಮಾಡುವ ಸಲುವಾಗಿ ಉಪಾಯಯೋಜನೆಯನ್ನು ಸೂಚಿಸಿರಿ.

**(3)** ನಿಮ್ಮ ಪರಿಸರದಲ್ಲಿ ಯಾವಯಾವ ಹಬ್ಬ ಹರಿದಿನಗಳನ್ನು ಆಚರಿಸಲಾಗುತ್ತದೆ? ಈ ವಿಷಯದಲ್ಲಿ ಸವಿಸ್ತಾರ ಟಿಪ್ಪಣೆ ತಯಾರಿಸಿರಿ.

**(4) ಕೆಳಗಿನ ಅಂಶಗಳ ಆಧಾರದಿಂದ ಶಿವಕಾಲದ ಸಮಾಜ ಜೀವನ ಹಾಗೂ ಈಗಿನ ಸಮಾಜ ಜೀವನಗಳ ತುಲನೆ ಮಾಡಿರಿ.**

| ಅನಂ. | ಅಂಶಗಳು | ಶಿವಕಾಲೀನ ಸಮಾಜ ಜೀವನ | ಈಗಿನ ಸಮಾಜ ಜೀವನ |
|---|---|---|---|
| 1. | ವ್ಯವಹಾರ | ........... | ............... |
| 2. | ಮನೆಗಳು | ........... | ವ್ಯವಸ್ಥಿತವಾಗಿ ಕಟ್ಟಿದ ಸಿಮೆಂಟ್ ಕಾಂಕ್ರೀಟನ ಅನೇಕ ಅಂತಸ್ತುಗಳ ಮನೆಗಳು |
| 3. | ಸಂಪರ್ಕ | ........... | ಬಸ್ಸು, ರೈಲು, ವಿಮಾನ |
| 4. | ಮನರಂಜನೆ | ........... | ........... |
| 5. | ಲಿಪಿ | ........... | ........... |

**ಉಪಕ್ರಮ:**


ನಮ್ಮ ದೇಶದಲ್ಲಿಯ ಶೂರ ಸ್ತ್ರೀಯರ ವಿಷಯವಾಗಿ ಮಾಹಿತಿಯನ್ನು ದೊರಕಿಸಿರಿ, ಅದನ್ನು ವರ್ಗದಲ್ಲಿ ಓದಿರಿ. ಉದಾ. ಪಿ.ವ್ಹಿ ಸಿಂಧೂ, ಸಾಕ್ಷಿ ಮಲಿಕ

# ನಾಗರಿಕಶಾಸ್ತ್ರ

## - ಅನುಕ್ರಮಣಿಕೆ -

### ನಮ್ಮ ಸಂವಿಧಾನ


| ಕ್ರ. | ಪಾಠದ ಹೆಸರು | ಪುಟ ಸಂಖ್ಯೆ |
|---|---|---|
| 1. | ನಮ್ಮ ಸಂವಿಧಾನದ ಪರಿಚಯ | 63 |
| 2. | ಸಂವಿಧಾನ ಉದ್ದೇಶ ಪತ್ರಿಕೆ | 68 |
| 3. | ಸಂವಿಧಾನದ ವೈಶಿಷ್ಟ್ಯಗಳು | 72 |
| 4. | ಮೂಲಭೂತ ಹಕ್ಕುಗಳು ಭಾಗ – 1 | 76 |
| 5. | ಮೂಲಭೂತ ಹಕ್ಕುಗಳು ಭಾಗ – 2 | 80 |
| 6. | ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಕರ್ತವ್ಯಗಳು | 83 |

## ಅಧ್ಯಯನ ನಿಷ್ಪತ್ತಿಗಳು

| ಸೂಚಿಸಿದಂತಹ ಶೈಕ್ಷಣಿಕ ಪ್ರಕ್ರಿಯೆ | ಅಧ್ಯಯನ ನಿಷ್ಪತ್ತಿ |
|---|---|
| **ಅಧ್ಯಯನಾರ್ಥಿಯ ಗುಂಪು/ಗುಂಪುಗಳಲ್ಲಿ/ವೈಯಕ್ತಿಕ ಅಧ್ಯಯನದ ಸಂಧಿ ಕೊಡುವುದು ಮತ್ತು ಅವುಗಳ ಮುಂದಿನ ವಿಷಯದ ಸಲುವಾಗಿ ಪ್ರವೃತ್ತ.**<br>• ಲೋಕಶಾಹಿ, ಸಮತೆ, ರಾಜ್ಯ ಸರಕಾರ, ಲಿಂಗಭೇದ, ಮಾಧ್ಯಮಗಳು, ಜಾಹೀರಾತು ಇತ್ಯಾದಿ ಸಂಕಲ್ಪನೆಗಳ ಮೇಲೆ ಚರ್ಚೆಯಲ್ಲಿ ಸಹಭಾಗಿಯಾಗುವುದು.<br>• ಸಂವಿಧಾನದ ಮಹತ್ವ, ಪ್ರಾಸ್ತಾವಿಕ, ಸಮತೆಯ ಅಧಿಕಾರ, ಸಮತೆಯ ಯುದ್ಧ ಇವುಗಳ ಚಿತ್ರಗಳು, ಚಿತ್ರಗಳ ಸಂಗ್ರಹ ಇವುಗಳ ಸಹಾಯದಿಂದ ಬಿತ್ತಿಪತ್ರಗಳನ್ನು ತಯಾರಿಸುವುದು.<br>• ಸಂವಿಧಾನದ ವೈಶಿಷ್ಟ್ಯಗಳ ಮಾಹಿತಿ ದೊರಕಿಸುವುದು.<br>• ಮೂಲಭೂತ ಹಕ್ಕು ವಿಷಯದ ಚರ್ಚೆ.<br>• ಲೋಕಶಾಹಿಯಲ್ಲಿಯ ಸಮತೆ, ಹುಡುಗಿಯರು ಮಾಡಬೇಕಾಗಿರುವ ಭೇದ-ಭಾವ ಎದುರಿಸುವ ಇತ್ಯಾದಿ ವಿಷಯಗಳ ಮೇಲೆ ಹಾಡು, ಕವಿತೆಗಳ ಭೂಮಿಕೆ ಪಾಲನೆಯ ಸಾದರಪಡಿಸುವುದು.<br>• ಮಾರ್ಗದರ್ಶಕ ತತ್ವಗಳು ಮತ್ತು ಮೂಲಭೂತ ಕರ್ತವ್ಯಗಳು, ಸಾಮ್ಯ ಭೇದ ಈ ವಿಷಯಗಳ ಚರ್ಚೆ. | **ಅಧ್ಯಯನಾರ್ಥಿ**<br>07.73H.13 ಲೋಕಶಾಹಿಯಲ್ಲಿಯ ಸಮತೆಯ ಮಹತ್ವ ಸ್ಪಷ್ಟ ಪಡಿಸುವುದು.<br>07.73H.14 ರಾಜಕೀಯ ಸಮತೆ, ಆರ್ಥಿಕ ಸಮತೆ ಮತ್ತು ಸಾಮಾಜಿಕ ಸಮತೆ ಇವುಗಳಲ್ಲಿಯ ವ್ಯತ್ಯಾಸ ತಿಳಿದುಕೊಳ್ಳುವುದು.<br>07.73H.15 ಸಮತೆಯ ಹಕ್ಕು ಸಂದರ್ಭದಲ್ಲಿಯ ನಮ್ಮ ವಿಭಾಗದಲ್ಲಿಯ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಸಮಸ್ಯಗಳ ಅನ್ವಯಾರ್ಥ ಹಚ್ಚುವುದು.<br>07.73H.16 ಸ್ಥಾನಿಕ ಸರಕಾರ ಮತ್ತು ರಾಜ್ಯ ಸರಕಾರ ಇವುಗಳಲ್ಲಿಯ ವ್ಯತ್ಯಾಸ ತಿಳಿಯುವುದು.<br>07.73H.17 ಲೋಕಶಾಹಿ ಸರಕಾರ ವ್ಯವಸ್ಥೆಯ ವೈಶಿಷ್ಟ್ಯಗಳು ಸ್ಪಷ್ಟ ಮಾಡುವುದು.<br>07.73H.18 ಸಂವಿಧಾನದಲ್ಲಿ ಉಲ್ಲೇಖ ಮಾಡಿದ ಹಕ್ಕುಗಳಿಗೆ ನ್ಯಾಯಾಲಯದ ವಿಶೇಷ ಸಂರಕ್ಷಣೆ ಇರುತ್ತದೆ ಇದನ್ನು ತಿಳಿದುಕೊಳ್ಳುವುದು.<br>07.73H.19 ಕಾಯದೆ ಮುಂದೆ ಎಲ್ಲ ವ್ಯಕ್ತಿಗಳು ಸಮಾನ ಇರುತ್ತಾರೆ ಇದನ್ನು ತಿಳಿದುಕೊಳ್ಳುವುದು.<br>07.73H.20 ಮಾರ್ಗದರ್ಶಕ ತತ್ವಗಳಿಗೆ ನ್ಯಾಯಾಲಯದ ಸಂರಕ್ಷಣೆ ಇಲ್ಲ, ಆದರೆ ಆ ಸರಕಾರದ ಮೇಲೆ ಬಂಧನಕಾರಕವಿದೆ ಇದನ್ನು ತಿಳಿದುಕೊಳ್ಳುವುದು.<br>07.73H.21 ಮೂಲಭೂತ ಹಕ್ಕು ಮತ್ತು ಮೂಲಭೂತ ಕರ್ತವ್ಯಗಳು ಯೋಗ ಉದಾಹರಣೆಗಳ ಸಹಾಯದಿಂದ ಹೇಳುತ್ತಾನೆ.<br>07.73H.22 ಮೂಲಭೂತ ಹಕ್ಕು ಸಂಬಂಧದ ಜ್ಞಾನದ ಪ್ರತ್ಯಕ್ಷ ಉಪಯೋಗ ಮಾಡಿ ಯಾವುದೊಂದು ಪ್ರಸಂಗ ಹಕ್ಕು, ಭಂಗಹಕ್ಕು, ಸಂರಕ್ಷಣೆ ಮತ್ತು ಹಕ್ಕುಗಳ ಜೋಪಾನ ಹೇಗೆ ಮಾಡಲು ಬರುತ್ತದೆಂಬುದನ್ನು ತಿಳಿದುಕೊಳ್ಳುತ್ತಾನೆ. |

# 1. ನಮ್ಮ ಸಂವಿಧಾನದ ಪರಿಚಯ

## ಬನ್ನಿ, ಸ್ವಲ್ಪ ಪುನರಾವಲೋಕನ ಮಾಡೋಣ!

ಹಿಂದಿನ ಇಯತ್ತೆಯಲ್ಲಿಯ ನಾಗರಿಕ ಶಾಸ್ತ್ರದ ಪಠ್ಯಪುಸ್ತಕದಲ್ಲಿ ನಾವು ನಿಯಮಗಳ ಅವಶ್ಯಕತೆಯನ್ನು ಕುರಿತು ಅನೇಕ ಸಂಗತಿಗಳನ್ನು ತಿಳಿದುಕೊಂಡೆವು. ಕುಟುಂಬ, ಶಾಲೆ, ನಮ್ಮ ಊರು ಇಲ್ಲವೆ ಪಟ್ಟಣ ಇವುಗಳ ವ್ಯವಹಾರವು ಸುಲಭವಾಗಿ ನಡೆಯಬೇಕೆಂದು ನಾವು ಸಂಕೇತ ಮತ್ತು ನಿಯಮಗಳನ್ನು ಪಾಲಿಸುತ್ತೇವೆ. ಕುಟುಂಬದಲ್ಲಿ ನಿಯಮಗಳಿರುವುದಿಲ್ಲ, ಆದರೆ ಪ್ರತಿಯೊಂದು ಕುಟುಂಬದಲ್ಲಿಯ ಸದಸ್ಯರು ಹೇಗೆ ವರ್ತಿಸಬೇಕು ಎನ್ನುವುದರ ಬಗ್ಗೆ ಕೆಲವು ಸಂಕೇತಗಳಿರುತ್ತವೆ. ಶಾಲೆಯಲ್ಲಿ ಪ್ರವೇಶದ ವಿಷಯವಾಗಿ, ಸಮವಸ್ತ್ರ ಹಾಗೂ ಅಭ್ಯಾಸದ ವಿಷಯವಾಗಿ ನಿಯಮಗಳಿರುತ್ತವೆ. ವಿವಿಧ ಸ್ಪರ್ಧೆಗಳಲ್ಲಿಯೂ ನಿಯಮಗಳಿರುತ್ತವೆ. ನಮ್ಮ ದೇಶದ ಆಡಳಿತವು ಕೂಡ ನಿಯಮಾನುಸಾರವಾಗಿಯೇ ನಡೆಯುತ್ತದೆ. ಕುಟುಂಬ, ಶಾಲೆ, ಹಳ್ಳಿ ಅಥವಾ ಪಟ್ಟಣಗಳಿಗಾಗಿ ಇರುವ ನಿಯಮಗಳು ಸೀಮಿತ ಸ್ವರೂಪದ್ದಾಗಿರುತ್ತವೆ. ಆದರೆ ದೇಶದ ಆಡಳಿತಕ್ಕೆ ಸಂಬಂಧಿಸಿದ ನಿಯಮಗಳು ಇಲ್ಲವೆ ಏರ್ಪಾಟು ಮಾತ್ರ ವ್ಯಾಪಕವಾಗಿರುತ್ತವೆ.

> ಸಮೀರ ಮತ್ತು ವಂದನಾಗೆ ಬಿದ್ದ ಪ್ರಶ್ನೆಯನ್ನು ನಿಮಗೆ ಕೇಳಬೇಕೆನಿಸುತ್ತದೆಯೇ?
>
> - ದೇಶದ ಆಡಳಿತವು ಯಾವ ನಿಯಮದ ಪ್ರಕಾರ ಅಥವಾ ಏರ್ಪಾಟಿನ ಪ್ರಕಾರ ನಡೆಯುತ್ತದೆಯೋ, ಆ ನಿಯಮಗಳು ಎಲ್ಲಿ ಇರುತ್ತವೆ?
> - ಆ ನಿಯಮಗಳನ್ನು ಯಾರು ತಯಾರಿಸುತ್ತಾರೆ? ಅವುಗಳ ಪಾಲನೆ ಬಂಧನಕಾರಕವಾಗಿರುತ್ತದೆಯೆ?

ಕೆಳಗಿನ ವಿವರಣೆಯಲ್ಲಿ ನಿಮಗೆ ಉತ್ತರಗಳು ಸಿಗುತ್ತವೆಯೇ, ನೋಡಿ.

### ಸಂವಿಧಾನ : ಅರ್ಥ

ದೇಶದ ಆಡಳಿತಕ್ಕೆ ಸಂಬಂಧಿತವಾದ ನಿಯಮ ಮತ್ತು ಕಟ್ಟುಪಾಡುಗಳನ್ನು ಒಟ್ಟಿಗೆ ಮತ್ತು ಸುಸೂತ್ರವಾಗಿ ಯಾವ ಗ್ರಂಥದಲ್ಲಿ ನಮೂದಿಸಲಾಗಿರುತ್ತದೆಯೋ ಆ ಗ್ರಂಥಕ್ಕೆ 'ಸಂವಿಧಾನ' ಎಂದು ಕರೆಯುತ್ತಾರೆ. ಇದರರ್ಥ ಸಂವಿಧಾನವೆಂದರೆ ದೇಶದ ರಾಜ್ಯಾಡಳಿತಕ್ಕೆ ಸಂಬಂಧಿತವಾದ ನಿಯಮಗಳ ಲಿಖಿತ ದಾಖಲೆ ಹೌದು. ಜನರಿಂದ ಆರಿಸಿಬಂದ ಪ್ರತಿನಿಧಿ ಸರಕಾರ ಸ್ಥಾಪನೆ ಮಾಡುತ್ತಾರೆ. ಸಂವಿಧಾನದಲ್ಲಿಯ ನಿಯಮಗಳಿಗನುಸಾರವಾಗಿಯೇ ರಾಜ್ಯಾಡಳಿತವನ್ನು ಮಾಡಬೇಕೆಂಬ ಬಂಧನವು ಸರಕಾರದ ಮೇಲಿರುತ್ತದೆ. ಸಂವಿಧಾನದಲ್ಲಿಯ ನಿಯಮಗಳು ಅಥವಾ ಅದರಲ್ಲಿ ನಮೂದಿಸಲಾದ ಕಾನೂನು ಮೂಲಭೂತವಾಗಿರುತ್ತದೆ. ಸಂವಿಧಾನಕ್ಕೆ ವಿಸಂಗತವಾದ ಕಾನೂನುಗಳನ್ನು ಸರಕಾರಕ್ಕೆ ಮಾಡಲು ಬರುವುದಿಲ್ಲ, ಹೀಗೆ ಮಾಡಿದರೆ ಅಂಥ ಕಾಯ್ದೆಗಳನ್ನು ನ್ಯಾಯಾಂಗವು ರದ್ದು ಪಡಿಸುತ್ತದೆ.

### ಸಂವಿಧಾನದಲ್ಲಿಯ ನಿಯಮಗಳು ಯಾವುದರ ಬಗ್ಗೆ ಇರುತ್ತವೆ?

ಸಂವಿಧಾನದಲ್ಲಿಯ ನಿಯಮಗಳು ವಿವಿಧ ವಿಷಯಗಳ ಬಗ್ಗೆ ಇರುತ್ತವೆ. ಉದಾ. ನಾಗರಿಕತ್ವ, ನಾಗರಿಕರ ಹಕ್ಕುಗಳು,ನಾಗರಿಕ ಮತ್ತು ಸರಕಾರಗಳ ನಡುವಣ ಸಂಬಂಧ, ಸರಕಾರವು ಮಾಡುವ ಕಾನೂನುಗಳ ವಿಷಯ, ಚುನಾವಣೆಗಳು, ಸರಕಾರದ ಮೇಲಿನ ನಿರ್ಬಂಧಗಳು ಹಾಗೂ ರಾಜ್ಯದ ಅಧಿಕಾರ ಕ್ಷೇತ್ರ ಇತ್ಯಾದಿ.

ಸಂವಿಧಾನಕ್ಕನುಸಾರವಾಗಿ ರಾಜ್ಯಡಳಿತ ಮಾಡುವ ತತ್ವವನ್ನು ಪ್ರಾಯಶಃ ಎಲ್ಲ ದೇಶಗಳು ಸ್ವೀಕರಿಸಿವೆ. ಹೀಗಿದ್ದರೂ ಕೂಡ ಪ್ರತಿಯೊಂದು ದೇಶದ ಸಂವಿಧಾನದ ಸ್ವರೂಪವು ಬೇರೆ ಬೇರೆಯಾಗಿರುತ್ತದೆ. ಇತಿಹಾಸ, ಸಮಾಜ ರಚನೆ, ಸಂಸ್ಕೃತಿ, ಪರಂಪರೆ ಇತ್ಯಾದಿಗಳ ವಿಷಯದಲ್ಲಿ ದೇಶ ದೇಶಗಳಲ್ಲಿ ಭಿನ್ನತೆ ಇರುತ್ತದೆ. ಇಲ್ಲವೆ ವ್ಯತ್ಯಾಸವಿರುತ್ತದೆ ಅದೇರೀತಿ ರಾಷ್ಟ್ರಗಳ ಅವಶ್ಯಕತೆಗಳು ಮತ್ತು ಉದ್ದೇಶಕಗಳು ಕೂಡ ಭಿನ್ನವಾಗಿರಬಹುದು. ಅದಕ್ಕೆ ಅನುರೂಪವಾದ ಸಂವಿಧಾನವನ್ನು ನಿರ್ಮಾಣ ಮಾಡುವ ಪ್ರಯತ್ನವನ್ನು ಆಯಾ ರಾಷ್ಟ್ರಗಳು ಮಾಡುತ್ತವೆ.



**ಗೊತ್ತಿದೆಯೇ ನಿಮಗೆ?**

> ಅಮೇರಿಕಾ, ಇಂಗ್ಲಂಡ ಈ ದೇಶಗಳ ರಾಜ್ಯಾಡಳಿತವು ಸಂವಿಧಾನಕ್ಕನುಸಾರವಾಗಿ ನಡೆಯುತ್ತದೆ, ಆದರೆ ಎರಡೂ ದೇಶಗಳ ಸಂವಿಧಾನಗಳಲ್ಲಿ ವ್ಯತ್ಯಾಸವಿದೆ. ಉದಾ. ಅಮೇರಿಕೆ ಸಂವಿಧಾನವು ಕ್ರಿ.ಶ. 1789ರಲ್ಲಿ ಜಾರಿಗೆ ಬಂದಿತು. ಅದು ಲಿಖಿತವಾಗಿದ್ದು ಅದರಲ್ಲಿ ಕೇವಲ 7 ಕಲಮುಗಳ ಸಮಾವೇಶವಾಗಿದೆ. ಆದರೆ 225 ವರ್ಷಗಳಿಗಿಂತ ಹೆಚ್ಚು ಕಾಲ ಗತಿಸಿದ್ದರೂ ಅದೇ ಸಂವಿಧಾನಕ್ಕನುಸಾರವಾಗಿ ಇಂದೂ ಕೂಡ ಅಮೇರಿಕೆಯ ರಾಜ್ಯಾಡಳಿತವನ್ನು ನಡೆಸಲಾಗುತ್ತದೆ.

ಇಂಗ್ಲಂಡ ಈ ದೇಶಕ್ಕೆ ಅನೇಕ ಶತಮಾನಗಳ ಇತಿಹಾಸವಿದೆ. ರಾಜ್ಯಾಡಳಿತದ ವಿಷಯದ ನಿಯಮಗಳು ಈ ದೇಶದಲ್ಲಿ ಸಂಕೇತ, ರೂಢಿ, ಪರಂಪರೆಯ ಸ್ವರೂಪದಲ್ಲಿ ಕಂಡುಬರುತ್ತವೆ. ಆದರೂ ಕೂಡ ಅವುಗಳನ್ನು ಕಟ್ಟುನಿಟ್ಟಿನಿಂದ ಪಾಲಿಸಲಾಗುತ್ತದೆ. ಕ್ರಿ.ಶ. 1215ರಲ್ಲಾದ ಮ್ಯಾಗ್ನಾಕಾರ್ಟಾ ಕರಾರಿನಿಂದ ಇಂಗ್ಲಂಡಿನ ಸಂವಿಧಾನವು ವಿಕಸಿತವಾಗುತ್ತಹೋಯಿತು. ಕೆಲವು ಲಿಖಿತ ನಿಯಮಗಳ ಸಮಾವೇಶವಿದ್ದರೂ ಇಂಗ್ಲಂಡಿನ ಸಂವಿಧಾನವು ಪ್ರಾಮುಖ್ಯವಾಗಿ ಅಲಿಖಿತವಾಗಿದೆ.



**ನಡೆಯಿರಿ ಶೋಧಿಸೋಣ!**

ನಿಮ್ಮ ಮೆಚ್ಚಿನ ಯಾವುದೇ ಒಂದು ದೇಶದ ಸಂವಿಧಾನದ ವಿಷಯವಾಗಿ ಕೆಳಗಿನ ಅಂಶಗಳ ಆಧಾರದಿಂದ ಸ್ವಲ್ಪದರಲ್ಲಿ ಮಾಹಿತಿ ಪಡೆಯಿರಿ:

ದೇಶದ ಹೆಸರು, ಸಂವಿಧಾನ ನಿರ್ಮಿತಿಯ ವರ್ಷ, ಸಂವಿಧಾನದ ಎರಡು ವೈಶಿಷ್ಟ್ಯಗಳು.

**ಸಂವಿಧಾನದ ಅವಶ್ಯಕತೆ:** ಸಂವಿಧಾನದಲ್ಲಿ ನಮೂದಿಸಲಾಗಿರುವ ಕಟ್ಟುಪಾಡುಗಳಿಗನುಸಾರವಾಗಿ ಇಲ್ಲವೆ ನಿಯಮಗಳಿಗನುಸಾವಾಗಿ ರಾಜ್ಯಾಡಳಿತವನ್ನು ಮಾಡುವ ಅನೇಕ ಲಾಭಗಳಿರುತ್ತವೆ.

- ನಿಯಮಗಳ ಚೌಕಟ್ಟಿನಲ್ಲಿದ್ದುಕೊಂಡೇ ಸರಕಾರವು ರಾಜ್ಯಾಡಳಿತ ಮಾಡಬೇಕಾಗುತ್ತದೆ. ಅಂದರಿಂದಾಗಿ ಅವರಿಗೆ ದೊರೆತ ಅಧಿಕಾರದ ಅಥವಾ ಆಡಳಿತದ ದುರುಪಯೋಗವಾಗುವ ಸಾಧ್ಯತೆ ಕಡಿಮೆಯಿರುತ್ತದೆ.
- ಸಂವಿಧಾನದಲ್ಲಿ ನಾಗರಿಕರ ಹಕ್ಕುಗಳು ಮತ್ತು ಅವರ ಸ್ವಾತಂತ್ರ್ಯದ ಉಲ್ಲೇಖವಿರುತ್ತದೆ. ಸರಕಾರವು ಆ ಹಕ್ಕುಗಳನ್ನು ಕಸಿದುಕೊಳ್ಳಲು ಬರುವುದಿಲ್ಲ, ಹೀಗಾಗಿ ನಾಗರಿಕರ ಹಕ್ಕು ಮತ್ತು ಸ್ವಾತಂತ್ರ್ಯಗಳು ಸುರಕ್ಷಿತವಾಗಿ ಉಳಿಯುತ್ತವೆ.
- ಸಂವಿಧಾನದಲ್ಲಿಯ ನಿಯಮಗಳಿಗನುಸಾರವಾಗಿ ರಾಜ್ಯಾಡಳಿತ ಮಾಡುವುದೆಂದರೆ ಕಾನೂನಿನ ರಾಜ್ಯವನ್ನು ಸ್ಥಾಪಿಸಿದಂತೆ. ಏಕೆಂದರೆ ಅದರಲ್ಲಿ ಅಧಿಕಾರದ ದುರುಪಯೋಗಕ್ಕೆ ಅತವಾ ಸ್ವೇಚ್ಛಾಚಾರ ಆಡಳಿತಕ್ಕೆ ಅವಕಾಶವಿರುವುದಿಲ್ಲ.
- ಸಂವಿಧಾನಕ್ಕನುಸಾರವಾಗಿ ರಾಜ್ಯಾಡಳಿತ ನಡೆಯುತ್ತಿರುವುದನ್ನು ನೋಡಿ ಸರಕಾರದ ಮೇಲಿನ ಸಾಮಾನ್ಯಜನರ ವಿಶ್ವಾಸ ಹೆಚ್ಚುತ್ತದೆ. ಅದರಿಂದ ಅವರು ಭಾಗವಹಿಸಲು ಉತ್ಸುಕರಾಗುತ್ತಾರೆ. ಜನಸಾಮಾನ್ಯರ ಹೆಚ್ಚುತ್ತಿರುವ ಸಹಭಾಗದಿಂದಾಗಿ ಪ್ರಜಾಪ್ರಭುತ್ವವು ಹೆಚ್ಚು ದೃಢವಾಗುತ್ತದೆ.
- ಸಂವಿಧಾನವು ಆಯಾ ದೇಶಗಳ ಮುಂದೆ ಕೆಲವು ರಾಜಕೀಯ ಆದರ್ಶಗಳನ್ನು ಇಡುತ್ತದೆ. ಆ ದಿಶೆಯಲ್ಲಿ ಮುನ್ನಡೆಯುವ ಬಂಧನವು ಆ ರಾಷ್ಟ್ರದ ಮೇಲಿರುತ್ತದೆ. ಅದರಿಂದ ಜಾಗತಿಕ ಶಾಂತಿ ಮತ್ತು ಸುರಕ್ಷಿತೆ, ಮಾನವೀ ಹಕ್ಕುಗಳ ರಕ್ಷಣೆಯಾಗಲು ಪೋಷಕವಾದ ವಾತಾವರಣ ನಿರ್ಮಾಣವಾಗುತ್ತದೆ.
- ಸಂವಿಧಾನದಲ್ಲಿ ನಾಗರಿಕರ ಕರ್ತವ್ಯಗಳ ಉಲ್ಲೇಖವಿರುವುದರಿಂದ ನಾಗರಿಕರ ಹೊಣೆಗಾರಿಕೆಯೂ ನಿಶ್ಚಿತವಾಗುತ್ತದೆ.

**ರಾಜ್ಯಾಡಳಿತ ಎಂದರೇನು?**


ದೇಶದ ರಾಜ್ಯಾಡಳಿತದಲ್ಲಿ ಯಾವ ವಿಷಯಗಳು ಅಡಕವಾಗಿರುತ್ತವೆ?

ದೇಶದ ಗಡಿರೇಖೆಗಳ ಸಂರಕ್ಷಣೆ ಮಾಡುವುದು, ಪರಕೀಯ ಆಕ್ರಮಣಗಳಿಂದ ಜನತೆಯ ರಕ್ಷಣೆ ಮಾಡುವದನ್ನು ಹಿಡಿದು ದಾರಿದ್ರ ನಿರ್ಮೂಲನೆ, ರೋಜಗಾರು ನಿರ್ಮಿತಿ, ಶಿಕ್ಷಣ ಮತ್ತು ಆರೋಗ್ಯಸೇವೆ, ಉದ್ಯೋಗ ವ್ಯವಸಾಯಗಳಿಗೆ ಪ್ರೋತ್ಸಾಹ ದುರ್ಬಲ ಘಟಕಗಳ ರಕ್ಷಣೆ, ಮಹಿಳೆಯರ, ಮಕ್ಕಳ ಮತ್ತು ಆದಿವಾಸಿಗಳ ಪ್ರಗತಿಗಾಗಿ ಉಪಾಯಯೋಜನೆ ಇತ್ಯಾದಿ ಅನೇಕ ವಿಷಯಗಳನ್ನು ಕುರಿತು ಸರಕಾರಕ್ಕೆ ಕಾನೂನುಗಳನ್ನು ಮಾಡಬೇಕಾಗುತ್ತದೆ. ಕಾನೂನುಗಳನ್ನು ಜಾರಿಗೊಳಿಸುವುದರ ಮುಖಾಂತರ ಸಮಾಜದಲ್ಲಿ ಯೋಗ್ಯ ಬದಲಾವಣೆಗಳನ್ನುಂಟು ಮಾಡಬೇಕಾಗುತ್ತದೆ. ಸ್ವಲ್ಪದರಲ್ಲಿ ಹೇಳುವುದಾದರೆ ಆಧುನಿಕ ಕಾಲದಲ್ಲಿಯ ಸರಕಾರಕ್ಕೆ ಅಂತರಿಕ್ಷ ಸಂಶೋಧನೆಯಿಂದ ಹಿಡಿದು ಸಾರ್ವಜನಿಕ ಸ್ವಚ್ಛತೆಯವರೆಗಿನ ಎಲ್ಲ ವಿಷಯಗಳನ್ನು ಕುರಿತು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೇನೆ ರಾಜ್ಯಾಡಳಿತ ಎಂದು ಹೇಳಬಹುದು.

ಸಂವಿಧಾನದ ಅರ್ಥ ಮತ್ತು ಅದರ ಅವಶ್ಯಕತೆಯನ್ನು ತಿಳಿದುಕೊಂಡನಂತರ ಈಗ ನಾವು ಭಾರತದ ಸಂವಿಧಾನ ರಚನೆ ಹೇಗೆ ಆಯಿತು ಎಂಬುದನ್ನು ತಿಳಿದುಕೊಳ್ಳೋಣ.

**ಸಂವಿಧಾನ ನಿರ್ಮಿತಿಯ ಹಿನ್ನೆಲೆ:** ಭಾರತದ ಸಂವಿಧಾನ ರಚನೆಯು ಕ್ರಿ.ಶ. 1946 ರಿಂದ ಆರಂಭವಾಯಿತು. 'ಸ್ವತಂತ್ರ ಭಾರತದ ರಾಜ್ಯಾಡಳಿತವು ಬ್ರಿಟಿಷರು ತಯಾರಿಸಿದ ಕಾನೂನಿಗನುಸಾರವಿಗಿ ನಡೆಯಲಾರದು. ಅದು ಭಾರತೀಯರೇ ತಯಾರಿಸಿದ ಕಾನೂನಿಗನುಗುಣವಾಗಿ ನಡೆಯಬೇಕು' ಎಂಬುದು ಸ್ವಾತಂತ್ರ್ಯಚಳವಳಿಯಲ್ಲಿಯ ಮುಖಂಡರ ಆಗ್ರಹವಾಗಿತ್ತು. ಅದಕ್ಕನುಸಾರವಾಗಿ ಭಾರತದ ಸಂವಿಧಾನವನ್ನು

ತಯಾರಿಸುವ ಸಲುವಾಗಿ ಒಂದು ಸಮಿತಿಯನ್ನು ಸ್ಥಾಪಿಸಲಾಯಿತು. ಆ ಸಮಿತಿಯು 'ಸಂವಿಧಾನ ಸಭೆ' ಎಂದು ಗುರುತಿಸಲ್ಪಡುತ್ತದೆ.



ಡಾ. ರಾಜೇಂದ್ರ ಪ್ರಸಾದ

**ಸಂವಿಧಾನ ಸಭೆ:** ನಮ್ಮ ದೇಶವು 15 ಆಗಷ್ಟ 1947 ರಂದು ಸ್ವತಂತ್ರವಾಯಿತು. ಅದಕ್ಕೆ ಮೊದಲು ಭಾರತದ ಮೇಲೆ ಇಂಗ್ಲಿಷರ ಆಧಿಪತ್ಯವಿತ್ತು. ಬ್ರಿಟಿಷ ಸರಕಾರವು ರಾಜ್ಯಾಡಳಿತದ ಅನುಕೂಲತೆಗಾಗಿ ಮುಂಬಯಿ ಪ್ರಾಂತ, ಬಂಗಾಲ ಪ್ರಾಂತ ಮತ್ತು ಮದ್ರಾಸ ಪ್ರಾಂತ ಇತ್ಯಾದಿ ಕೆಲವು ವಿಭಾಗಗಳನ್ನು ಮಾಡಿತ್ತು. ಈ ಪ್ರಾಂತಗಳಲ್ಲಿಯ ರಾಜ್ಯಾಡಳಿತವನ್ನು ಅಲ್ಲಿಯ ಜನತೆಯ ಪ್ರತಿನಿಧಿಗಳ ಮುಖಾಂತರ ನಡೆಸಲಾಗುತ್ತಿತ್ತು. ಅದರ ಜೊತೆಗೆ ದೇಶದಲ್ಲಿಯ ಕೆಲವು ಭಾಗಗಳ ಆಡಳಿತವನ್ನು ಅಲ್ಲಿಯ ಸ್ಥಳೀಯ ರಾಜರು ನೋಡಿಕೊಳ್ಳುತ್ತಿದ್ದರು, ಇಂತಹ ಭಾಗಗಳಿಗೆ ಸಂಸ್ಥಾನಗಳು ಎನ್ನುತ್ತಿದ್ದರು ಹಾಗೂ ಅವುಗಳ ಪ್ರಮುಖರು ಸಂಸ್ಥಾನಿಕರು ಎಂದು ಗುರುತಿಸಲ್ಪಡುತ್ತಿದ್ದರು. ಸಂವಿಧಾನ ಸಭೆಯಲ್ಲಿ ಪ್ರಾಂತ ಮತ್ತು ಸಂಸ್ಥಾನಗಳ ಪ್ರತಿನಿಧಿಗಳ ಸಮಾವೇಶವಾಗಿತ್ತು.

ಸಂವಿಧಾನ ಸಭೆಯಲ್ಲಿ ಒಟ್ಟು 299 ಸದಸ್ಯರಿದ್ದರು. ಡಾ. ರಾಜೇಂದ್ರ ಪ್ರಸಾದ ಇವರು ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದರು.

**ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಕೊಡುಗೆ:** ಡಾ. ಬಾಬಾಸಾಹೇಬ ಅಂಬೇಡ್ಕರ ಇವರು ಕರಡು ಸಮಿತಿಯ ಅಧ್ಯಕ್ಷರಾಗಿದ್ದರು ಅವರು ವಿವಿಧ ದೇಶಗಳ ಸಂವಿಧಾನಗಳನ್ನು ಆಳವಾಗಿ ಅಧ್ಯಯನ ಮಾಡಿದ್ದರು. ಅವರು ಹಗಲು - ರಾತ್ರಿ ಶ್ರಮವಹಿಸಿ ಸಂವಿಧಾನದ ಕರಡನ್ನು ತಯಾರಿಸಿದರು.



ಡಾ. ಬಾಬಾಸಾಹೇಬ ಅಂಬೇಡ್ಕರ

ಡಾ. ಬಾಬಾಸಾಹೇಬ ಅಂಬೇಡ್ಕರರು ತಯಾರಿಸಿದ ಸಂವಿಧಾನದ ಕರಡನ್ನು ಸಂವಿಧಾನ ಸಭೆಯ ಮುಂದೆ ಮಂಡಿಸಲಾಯಿತು. ಅದರ ಮೇಲೆ ವಿಧಿವಾರು ಚರ್ಚೆಯಾಯಿತು. ಅನೇಕ ತಿದ್ದುಪಡಿಗಳನ್ನು ಸೂಚಿಸಲಾಯಿತು. ಸಂವಿಧಾನದ ಕರಡನ್ನು ಸಂವಿಧಾನ ಸಭೆಯ ಮುಂದೆ ಮಂಡಿಸುವ, ಅದರ ಬಗ್ಗೆ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಕೊಡುವ, ಸಂವಿಧಾನ ಸಭೆಯ ಸೂಚನೆಯ ಪ್ರಕಾರ ಮೂಲ ಕರಡಿನಲ್ಲಿ ಬದಲಾವಣೆಗಳನ್ನು ಮಾಡುವ, ಪ್ರತಿಯೊಂದು ನಿಯಮವನ್ನು ದೋಷರಹಿತವನ್ನಾಗಿ ಮಾಡುವ ಕಾರ್ಯವನ್ನು ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ಮಾಡಿದರು. ಭಾರತದ ಸಂವಿಧಾನ ರಚನೆಯಲ್ಲಿಯ ಈ ಕೊಡುಗೆಯಿಂದಾಗಿ ಅವರಿಗೆ 'ಭಾರತೀಯ ಸಂವಿಧಾನದ ಶಿಲ್ಪಿ ಎಂದು ಕರೆಯುತ್ತಾರೆ.

ಸಂಪೂರ್ಣ ಸಂವಿಧಾನವು ಬರೆದು ಪೂರ್ಣವಾದ ನಂತರ ಸಂವಿಧಾನ ಸಭೆಯು ಅದಕ್ಕೆ ಮಾನ್ಯತೆ ನೀಡಿತು. ಹಾಗೂ 26 ನವೆಂಬರ 1949 ರಂದು ಅದನ್ನು ಸ್ವೀಕರಿಸಿತು. ಆದ್ದರಿಂದ 26 ನವೆಂಬರ ಈ ದಿನವನ್ನು 'ಸಂವಿಧಾನ ದಿನ' ವೆಂದು ಆಚರಿಸಲಾಗುತ್ತದೆ.

**ಎಷ್ಟು ಹೆಮ್ಮೆಯ ಸಂಗತಿಯಾಗಿದೆ ಇದು!**

- ಸಂವಿಧಾನ ಸಭೆಯಲ್ಲಿ ಚರ್ಚೆ ಮತ್ತು ವಿಚಾರ-ವಿನಿಮಯಗಳ ಆಧಾರದಿಂದ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ವಿರೋಧಿ ಅಭಿಪ್ರಾಯಗಳ ಆದರ ಮತ್ತು ಅವರ ಯೋಗ್ಯ ಸೂಚನೆಗಳ ಸ್ವೀಕಾರ ಇವು ಅಲ್ಲಿಯ ಕಾರ್ಯಕಲಾಪಗಳ ವೈಶಿಷ್ಟ್ಯವಾಗಿದ್ದವು.
- ಸಂವಿಧಾನವನ್ನು ಬರೆದು ಪೂರ್ಣಮಾಡಲು 2 ವರ್ಷ 11 ತಿಂಗಳು 17 ದಿವಸ ದಷ್ಟು ಕಾಲಾವಧಿ ಬೇಕಾಯಿತು.
- ಮೂಲ ಸಂವಿಧಾನದಲ್ಲಿ 22 ಭಾಗಗಳು, 395 ಕಲಮುಗಳು ಹಾಗೂ 8 ಪರಿಶಿಷ್ಟಗಳ ಸಮಾವೇಶವಿತ್ತು.




**ಗೊತ್ತಿದೆಯೇ ನಿಮಗೆ**

ಸಂವಿಧಾನ ಸಭೆಯಲ್ಲಿ ಡಾ. ರಾಜೇಂದ್ರ ಪ್ರಸಾದ, ಪಂ ಜವಾಹರಲಾಲ ನೆಹರೂ, ಡಾ. ಬಾಬಾಸಾಹೇಬ ಅಂಬೇಡ್ಕರ, ಸರ್ದಾರ ವಲ್ಲಭಭಾಯಿ ಪಟೇಲ, ಮೌಲಾನಾ ಅಬುಲ್‌ಕಲಾಮ ಆಜಾದ, ಸರೋಜಿನಿ ನಾಯಡು, ಜೆ.ಬಿ. ಕೃಪಲಾನಿ, ರಾಜಕುಮಾರಿ ಅಮೃತಾ ಕೌರ, ದುರ್ಗಾಭಾಯಿ ದೇಶಮುಖ, ಹಂಸಾಬೆನ್ ಮೆಹತಾ ಮುಂತಾದ ಅನೇಕ ಗಣ್ಯ ಸದಸ್ಯರಿದ್ದರು. ಸಂವಿಧಾನ ಸಭೆಯ ಕಾನೂನು ಸಲಹೆಗಾರರಾಗಿ ಬಿ.ಎನ್.ರಾವ ಎಂಬ ಕಾನೂನು ತಜ್ಞರ ನೇಮಕ ಮಾಡಲಾಗಿತ್ತು.

26 ಜನೇವರಿ 1950 ರಿಂದ ಸಂವಿಧಾನದಲ್ಲಿಯ ನಿಯಮಗಳಿಗನುಸಾರವಾಗಿ ದೇಶದ ರಾಜ್ಯಾಡಳಿತನ್ನು ನಡೆಸಲು ಆರಂಭಿಸಲಾಯಿತು. ಈ ದಿನದಿಂದ ಭಾರತದ ಪ್ರಜಾಸತ್ತಾತ್ಮಕ ರಾಜ್ಯವು ಅಸ್ತಿತ್ವದಲ್ಲಿ ಬಂದಿತು. ಆದ್ದರಿಂದಲೇ 26 ಜನೇವರಿ ಈ ದಿನವನ್ನು ನಾವು 'ಗಣರಾಜ್ಯದಿನ' ವೆಂದು ಆಚರಿಸುತ್ತೇವೆ.



ಪಂ. ಜವಾಹರಲಾಲ ನೆಹರೂ



ಸರದಾರ ವಲ್ಲಭಭಾಯಿ ಪಟೇಲ



ಮೌಲಾನಾ ಆಝಾದ



ಸರೋಜನಿ ನಾಯಡು

**ಮಾಡಿ ನೋಡಿರಿ.**

ನಿಮ್ಮ ವರ್ಗದ ಆಡಳಿತವು ನಿಯಮಾನುಸಾರವಾಗಿ ನಡೆಯಬೇಕು ಎಂದು ನಿಮಗೆ ಅನಿಸುತ್ತದೆಯಲ್ಲವೆ? ಆದರಲ್ಲಿ ಯಾವ ನಿಯಮಗಳ ಸಮಾವೇಶವನ್ನು ನೀವು ಮಾಡುವಿರಿ? ಹಾಗಾದರೆ ವರ್ಗದ ಸಲುವಾಗಿ ಒಂದು ನಿಯಮಾವಳಿಯನ್ನು ತಯಾರಿಸಿರಿ.

**ಗೊತ್ತಿದೆಯೇ ನಿಮಗೆ?**

ಡಾ. ಬಾಬಾಸಾಹೇಬ ಅಂಬೇಡ್ಕರರ ಕೊಡುಗೆಯು ಜಲವ್ಯವಸ್ಥಾಪನೆ, ವಿದೇಶಾಂಗ ಸಂಬಂಧ, ರಾಷ್ಟ್ರೀಯ ಸುರಕ್ಷತೆ, ಪತ್ರಿಕೋದ್ಯಮ, ಅರ್ಥವ್ಯವಸ್ಥೆ, ಸಾಮಾಜಿಕ ನ್ಯಾಯ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಇತ್ತು.



ಭಾರತೀಯ ಸಂವಿಧಾನದ ಕರಡನ್ನು ಸಂವಿಧಾನ ಸಭೆಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರಿಗೆ ಸಾದರಪಡಿಸುವಾಗ ಡಾ. ಬಾಬಾಸಾಹೇಬ ಅಂಬೇಡ್ಕರರು.

8ZJ486

## ಅಭ್ಯಾಸ

**1. ಕೆಳಗಿನ ಕಲ್ಪನೆಗಳನ್ನು ಸ್ಪಷ್ಟಪಡಿಸಿರಿ.**

(1) ಸಂವಿಧಾನದಲ್ಲಿಯ ನಿಯಮಗಳು

(2) ಸಂವಿಧಾನ ದಿನ

**2. ಚರ್ಚೆ ಮಾಡಿರಿ.**

(1) ಸಂವಿಧಾನ ಸಮಿತಿಯನ್ನು ಸ್ಥಾಪಿಸಲಾಯಿತು.

(2) ಡಾ. ಬಾಬಾಸಾಹೇಬ ಅಂಬೇಡಕರ ಅವರಿಗೆ ಭಾರತೀಯ ಸಂವಿಧಾನದ ಶಿಲ್ಪಿ ಎಂದು ಕರೆಯುತ್ತಾರೆ.

(3) ದೇಶದ ರಾಜ್ಯಾಡಳಿತದಲ್ಲಿ ಅಡಕವಾದ ವಿಷಯಗಳು

**3. ಯೋಗ್ಯ ಪರ್ಯಾಯವನ್ನು ಆಯ್ಕೆಮಾಡಿರಿ.**

(1) ಯಾವ ದೇಶದ ಸಂವಿಧಾನವು ಸಂಪೂರ್ಣವಾಗಿ ಲಿಖಿತವಾಗಿರುವುದಿಲ್ಲ

(ಅ) ಅಮೇರಿಕಾ (ಬ) ಭಾರತ

(ಕ) ಇಂಗ್ಲಂಡ (ಡ) ಇದರಲ್ಲಿ ಯಾವುದೂ ಇಲ್ಲ

(2) ಸಂವಿಧಾನ ಸಭೆಯ ಅಧ್ಯಕ್ಷರು ಯಾರು?

(ಅ) ಡಾ. ಬಾಬಾಸಾಹೇಬ ಅಂಬೇಡ್ಕರ

(ಬ) ಡಾ. ರಾಜೇಂದ್ರ ಪ್ರಸಾದ

(ಕ) ದುರ್ಗಾಬಾಯಿ ದೇಶಮು

(ಡ) ಬಿ.ಎನ್. ರಾವ

(3) ಕೆಳಗಿನವರಲ್ಲಿ ಯಾರು ಸಂವಿಧಾನ ಸಭೆಯ ಸದಸ್ಯರಾಗಿರಲಿಲ್ಲ?

(ಅ) ಮಹಾತ್ಮಾಗಾಂಧಿ

(ಬ) ಮೌಲಾನಾ ಆಝಾದ

(ಕ) ರಾಜಕುಮಾರಿ ಅಮೃತಾ ಕೌರ

(ಡ) ಹಂಸಾಬೆನ್ ಮೆಹತಾ

(4) ಕರಡು ಸಮಿತಿಯ ಅಧ್ಯಕ್ಷರು ಯಾರು?

(ಅ) ಡಾ. ರಾಜೇಂದ್ರ ಪ್ರಸಾದ

(ಬ) ಸರದಾರ ವಲ್ಲಭಭಾಯಿ ಪಟೇಲ

(ಕ) ಡಾ. ಬಾಬಾಸಾಹೇಬ ಅಂಬೇಡಕರ

(ಡ) ಜೆ.ಬಿ. ಕೃಪಲಾನಿ

**4. ನಿಮ್ಮ ಅಭಿಪ್ರಾಯವನ್ನು ಬರೆಯಿರಿ.**

(1) ಸರಕಾರಕ್ಕೆ ಯಾವಯಾವ ವಿಷಯಗಳನ್ನು ಕುರಿತು ಕಾನೂನು ಮಾಡಬೇಕಾಗುತ್ತದೆ?

(2) 26 ಜನೇವರಿ ಈ ದಿನವನ್ನು ನಾವು ಗಣರಾಜ್ಯ ದಿನವೆಂದು ಏಕೆ ಆಚರಿಸುತ್ತೇವೆ?

(3) ಸಂವಿಧಾನದಲ್ಲಿಯ ನಿಯಮಗಳಿಗನುಸಾರವಾಗಿ ರಾಜ್ಯಾಡಳಿತವನ್ನು ಮಾಡುವ ಲಾಭಗಳು

**ಉಪಕ್ರಮ:**

(1) ಸಂವಿಧಾನ ಸಭೆಯ ಸಲುವಾಗಿ ವಿವಿಧ ಸಮಿತಿಗಳ ಸ್ಥಾಪನೆಯಾಯಿತು. ಅದರ ಬಗೆಗಿನ ಮಾಹಿತಿಯನ್ನು ಪಡೆಯಿರಿ ಹಾಗೂ ಸಮಿತಿಗಳ ಹೆಸರುಗಳ ಕೋಷ್ಟಕವನ್ನು ತಯಾರಿಸಿರಿ. ಹೆಸರುಗಳ ಜೊತೆ ಚಿತ್ರಗಳನ್ನು ಸಂಗ್ರಹಿಸಿರಿ.

(2) ಶಾಲೆಯಲ್ಲಿ 'ಸಂವಿಧಾನದಿನ'ವನ್ನು ಹೇಗೆ ಆಚರಿಸಲಾಯಿತು? ಅದರ ವರದಿಯನ್ನು ತಯಾರಿಸಿರಿ.

(3) ಸಂವಿಧಾನ ಸಭೆಯಲ್ಲಿಯ ಸದಸ್ಯರ ಭಾವಚಿತ್ರಗಳನ್ನು ಸಂಗ್ರಹಿಸಿರಿ.

# 2. ಸಂವಿಧಾನ ಉದ್ದೇಶಪತ್ರಿಕೆ

**ಹಿಂದಿನ ಪಾಠದಲ್ಲಿ ನಾವು ಏನು ಕಲಿತೆವು!**

- ಸಂವಿಧಾನವೆಂದರೆ ರಾಜ್ಯಾಡಳಿತ ನಿಯಮಗಳನ್ನು ಸ್ಪಷ್ಟಪಡಿಸುವ ಒಂದು ಮಹತ್ವದ ಲಿಖಿತ ದಾಖಲೆಯಾಗಿರುತ್ತದೆ.
- ಸಂವಿಧಾನ ಸಭೆಯು ಭಾರತದ ಸಂವಿಧಾನದ ರಚನೆ ಮಾಡಿತು.
- ಸಂವಿಧಾನದಿಂದಾಗಿ ಜನತೆಯ ಪ್ರತಿನಿಧಿಗಳು ಕಾನೂನಿಗನುಸಾರವಾಗಿಯೇ ರಾಜ್ಯಾಡಳಿತ ಮಾಡಬೇಕಾಗುತ್ತದೆ.

ಸಂವಿಧಾನವು ನಮ್ಮ ದೇಶದ ಮೂಲಭೂತ ಹಾಗೂ ಸರ್ವಶ್ರೇಷ್ಠ ಕಾನೂನಾಗಿದೆ. ಯಾವುದೇ ಕಾನೂನನ್ನು ಮಾಡುವುದರ ಹಿಂದೆ ಕೆಲವು ನಿರ್ದಿಷ್ಟ ಉದ್ದೇಶಗಳಿರುತ್ತವೆ. ಆ ಉದ್ದೇಶಗಳನ್ನು ಸ್ಪಷ್ಟಪಡಿಸಿದ ನಂತರ ಸವಿಸ್ತಾರವಾಗಿ ಕಾನೂನಿನಲ್ಲಿಯ ಅನ್ಯ ಕಟ್ಟುಪಾಡುಗಳನ್ನು ಮಾಡಲಾಗುತ್ತದೆ. ಅವುಗಳನ್ನು ಒಟ್ಟುಗೂಡಿಸಿ ಸ್ವಲ್ಪದರಲ್ಲಿ ಮತ್ತು ಸುಸೂತ್ರವಾಗಿ ಮಾಡಿದ ರಚನೆ ಎಂದರೆ ಪ್ರಸ್ತಾವನೆಯೇ ಹೌದು. ಈ ಪ್ರಸ್ತಾವನೆಗೆ ಪೀಠಿಕೆ ಎಂದು ಕರೆಯುತ್ತಾರೆ ಉದ್ದೇಶಪತ್ರಿಕೆಗೆ ಭಾರತೀಯ ಸಂವಿಧಾನದ ಪ್ರಸ್ತಾವನೆ ಎಂದೂ ಕರೆಯಲಾಗುತ್ತದೆ. ಉದ್ದೇಶಪತ್ರಿಕೆಯು ನಮ್ಮ ಸಂವಿಧಾನದ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತದೆ.



**ಮಾಡಿ ನೋಡಿರಿ.**

ಸಂವಿಧಾನದ ಉದ್ದೇಶಪತ್ರಿಕೆಯನ್ನು ಓದಿರಿ. ಅದರಲ್ಲಿಯ ಶಬ್ದಗಳ ಸೂಚಿಯನ್ನು ತಯಾರಿಸಿರಿ. ಈ ಶಬ್ದಗಳನ್ನು ನೀವು ಬೇರೆಕಡೆ ಎಲ್ಲಿ ಓದುತ್ತೀರಿ?

ನಾವೆಲ್ಲರೂ ಭಾರತದ ನಾಗರಿಕರಾಗಿದ್ದೇವೆ ದೇಶದ ನಾಗರಿಕರಾದ ನಾವೆಲ್ಲರೂ ಏನನ್ನು ಪಡೆಯಬೇಕಾಗಿದೆ ಯೆಂಬುದನ್ನು ಉದ್ದೇಶಪತ್ರಿಕೆಯು ಹೇಳುತ್ತದೆ. ಇದರಲ್ಲಿಯ ಮೌಲ್ಯಗಳು, ವಿಚಾರಗಳು ಹಾಗೂ ಉದ್ದೇಶಗಳು ಉದಾತ್ತವಾಗಿವೆ. ಅವುಗಳನ್ನು ಹೇಗೆ ಪಡೆಯುವುದು ಎಂಬುದನ್ನು ಕುರಿತಾದ ನಿಯಮಗಳನ್ನು ಸಂವಿಧಾನದಲ್ಲಿ ಸ್ಪಷ್ಟ ಪಡಿಸಲಾಗಿದೆ.

ಸಂವಿಧಾನದ ಉದ್ದೇಶ ಪತ್ರಿಕೆಯ ಆರಂಭವು 'ಭಾರತದ ಪ್ರಜೆಗಳಾದ ನಾವು' ಎಂಬ ಶಬ್ದಗಳಿಂದ ಆಗುತ್ತದೆ. ಭಾರತವನ್ನು 'ಸಾರ್ವಭೌಮ, ಸಮಾಜವಾದಿ, ಧರ್ಮ ನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯ' ವನ್ನಾಗಿ ನಿರ್ಮಿಸುವ ಭಾರತೀಯರ ನಿರ್ಧಾರದ ವಿಷಯವಾಗಿ ಅದರಲ್ಲಿ ಹೇಬಲಾಗಿದೆ. ಅದರಲ್ಲಿಯ ಪ್ರತಿಯೊಂದು ಸಂಜ್ಞೆಯ ಅರ್ಥವನ್ನು ನಾವು ತಿಳಿದುಕೊಳ್ಳೋಣ.

**(1) ಸಾರ್ವಭೌಮ ರಾಜ್ಯ:** ಭಾರತದಲ್ಲಿ ದೀರ್ಘಕಾಲ ದವರೆಗೆ ಬ್ರಿಟಿಷರ ಆಡಳಿತವಿತ್ತು. 15 ಅಗಷ್ಟ 1947 ರಂದು ಈ ಆಡಳಿತವು ಮುಕ್ತಾಯಗೊಂಡಿತು. ನಮ್ಮ ದೇಶವು ಸ್ವತಂತ್ರವಾಯಿತು. ಭಾರತಕ್ಕೆ ಸಾರ್ವಭೌಮತ್ವ ಪ್ರಾಪ್ತವಾಯಿತು. ನಾವು ನಮ್ಮ ದೇಶದಲ್ಲಿ ನಮಗೆ ಯೋಗ್ಯವೆನಿಸಿದ ನಿರ್ಣಯಗಳನ್ನು ಕೈಕೊಳ್ಳಲು ಸ್ವತಂತ್ರರಾಗಿದ್ದೇವೆ. ಯಾವುದೊಂದು ದೇಶವು ಪರಕೀಯ ನಿಯಂತ್ರಣದಲ್ಲಿ ಇಲ್ಲದಿರುವುದು – ಎಂಬುದು ಸಾರ್ವಭೌಮ ಈ ಶಬ್ದದ ಅರ್ಥವಾಗಿದೆ.

ಸಾರ್ವಭೌಮತ್ವವನ್ನು ಪಡೆಯುವುದು ನಮ್ಮ ಸಂಪೂರ್ಣ ಸ್ವಾಂತಂತ್ರ್ಯ ಸಂಗ್ರಾಮದ ಅತ್ಯಂತ ಮಹತ್ವದ ಉದ್ದೇಶ. ಸಾರ್ವಭೌಮತ್ವವೆಂದರೆ ರಾಜ್ಯಾಡಳಿತವನ್ನು ಮಾಡುವ ಸರ್ವಶ್ರೇಷ್ಠ ಅಧಿಕಾರ. ಪ್ರಜಾಪ್ರಭುತ್ವದಲ್ಲಿ ಸಾರ್ವಭೌಮತ್ವವು ಜನರ ಕೈಯಲ್ಲಿ ಇರುತ್ತದೆ. ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆಮಾಡಿ ಅವರಿಗೆ ತಮ್ಮ ಸಾರ್ಮಭೌಮ ಅಧಿಕಾರವನ್ನು ಉಪಯೋಗಿಸಲು ಅನುಮತಿ ನೀಡುತ್ತಾರೆ. ನಮ್ಮ ದೇಶದಲ್ಲಿ ಯಾವ ಕಾನೂನುಗಳನ್ನು ಮಾಡಬೇಕು ಎಂಬುದನ್ನು ನಿರ್ಧರಿಸುವ ಅಧಿಕಾರವು ಜನರಿಗೆ ಮತ್ತು ಜನರು ಆರಿಸಿ ಕೊಟ್ಟ ಸರಕಾರಕ್ಕೆ ಇರುತ್ತದೆ.

**(2) ಸಮಾಜವಾದಿ ರಾಜ್ಯ:** ಯಾವ ರಾಜ್ಯದಲ್ಲಿ ಬಡವ ಮತ್ತು ಶ್ರೀಮಂತರಲ್ಲಿ ಹೆಚ್ಚು ಅಂತರ ಇರುವುದಿಲ್ಲವೋ ಅದು ಸಮಾಜವಾದಿ ರಾಜ್ಯ ಹೌದು. ಸಮಾಜವಾದಿ ರಾಜ್ಯದಲ್ಲಿ ದೇಶದ ಸಂಪತ್ತಿನ ಮೇಲೆ ಎಲ್ಲರ ಹಕ್ಕು ಇರುತ್ತದೆ. ಕೆಲವೇ ಜನರ ಕೈಯಲ್ಲಿ ಸಂಪತ್ತಿನ ಕೇಂದ್ರೀಕರಣವಾಗಲಾರದಂತೆ ಕಾಳಜಿ ವಹಿಸಲಾಗುತ್ತದೆ.

**(3) ಧರ್ಮನಿರಪೇಕ್ಷ ರಾಜ್ಯ:** ಧರ್ಮನಿರಪೇಕ್ಷತೆಯು ನಮ್ಮ ಉದ್ದೇಶವಾಗಿದೆಯೆಂದು ಉದ್ದೇಶಪತ್ರಿಕೆಯಲ್ಲಿ ಹೇಳಲಾಗಿದೆ. ಧರ್ಮ ನಿರಪೇಕ್ಷ ರಾಜ್ಯದಲ್ಲಿ ಎಲ್ಲ ಧರ್ಮಗಳನ್ನು ಸಮಾನವೆಂದು ತಿಳಿಯಲಾಗುತ್ತದೆ.

ಯಾವುದೇ ನಿರ್ದಿಷ್ಟಧರ್ಮಕ್ಕೆ ರಾಜ್ಯದ ಧರ್ಮವೆಂದು ತಿಳಿಯಲಾಗುವುದಿಲ್ಲ. ನಾಗರಿಕರಿಗೆ ತಮ್ಮ ತಮ್ಮ ಧರ್ಮವನ್ನು ಪಾಲಿಸುವ ಸ್ವಾತಂತ್ರ್ಯವಿರುತ್ತದೆ. ಧರ್ಮದ ಆಧಾರದ ಮೇಲೆ ನಾಗರಿಕರಲ್ಲಿ ಭೇದಭಾವ ಮಾಡಲು ಬರುವುದಿಲ್ಲ.



**ಗೊತ್ತಿದೆಯೇ ನಿಮಗೆ?**

ಧರ್ಮನಿರಪೇಕ್ಷತೆಯ ಮುಖಾಂತರ ನಾವು ನಮ್ಮ ಸಮಾಜದ ಬಹುಧಾರ್ಮಿಕತೆಯನ್ನು ಪಾಲಿಸುವ ಪ್ರಯತ್ನ ಮಾಡಿದ್ದೀವೆ. ಸಂವಿಧಾನವು ನಮಗೆ ನೀಡಿದ ಹಕ್ಕುಗಳನ್ನು ಅಪರಿಮಿತವಾಗಿ ಇಲ್ಲವೆ ನಮಗೆ ಬೇಕಾದ ಹಾಗೆ ಉಪಯೋಗಿಸಲು ಬರುವುದಿಲ್ಲ. ಧಾರ್ಮಿಕ ಸ್ವಾತಂತ್ರ್ಯವೂ ಅದೇ ರೀತಿಯಾಗಿದೆ. ನಾವು ಯಾವಾಗ ಹಬ್ಬ, ಉತ್ಸವಗಳನ್ನು ಆಚರಿಸುತ್ತಿವೆಯೋ, ಆಗ ನಾವು ಸಾರ್ವಜನಿಕ ಸ್ವಚ್ಛತೆ, ಆರೋಗ್ಯ, ಮತ್ತು ಪರಿಸರ ಇವುಗಳ ವಿಚಾರ ಮಾಡುವುದೂ ಅವಶ್ಯಕವಾಗಿರುತ್ತದೆ.

**(4) ಪ್ರಜಾಪ್ರಭುತ್ವ ರಾಜ್ಯ:** ಪ್ರಜಾಪ್ರಭುತ್ವದಲ್ಲಿ ರಾಜ್ಯಾಡಳಿತ ಅಧಿಕಾರವು ಜನರ ಕೈಯಲ್ಲಿ ಇರುತ್ತದೆ. ಅವರ ಇಚ್ಛೆಗನುಸಾರ ಸರಕಾರವು ನಿರ್ಣಯಗಳನ್ನು ಕೈಕೊಳ್ಳುತ್ತದೆ ಮತ್ತು ಧೋರಣೆಗಳನ್ನು ರೂಪಿಸುತ್ತದೆ. ಸರಕಾರವು ಸರ್ವ ಜನರ ಕಲ್ಯಾಣಕ್ಕಾಗಿ ಮಹತ್ವದ ಆರ್ಥಿಕ, ಸಾಮಾಜಿಕ ಇತ್ಯಾದಿ ನಿರ್ಣಯಗಳನ್ನು ಕೈಕೊಳ್ಳಬೇಕಾಗುತ್ತದೆ. ಇಂಥ ನಿರ್ಣಯಗಳನ್ನು ದಿನನಿತ್ಯ ಎಲ್ಲ ಜನರನ್ನು ಒಟ್ಟಿಗೆ ಸೇರಿಸಿ ತೆಗೆದುಕೊಳ್ಳುವುದು ಸಾಧ್ಯವಿರುವುದಿಲ್ಲ. ಆದ್ದರಿಂದ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಚುನಾವಣೆಗಳು ನಡೆಯುತ್ತವೆ. ಈ ಚುನಾವಣೆಗಳಲ್ಲಿ ಮತದಾರರು ಮತ ಚಲಾಯಿಸಿ ತಮ್ಮ ಪ್ರತಿನಿಧಿಗಳನ್ನು ಆಯ್ಕೆಮಾಡುತ್ತಾರೆ. ಆರಿಸಿಬಂದ ಪ್ರತಿ ನಿಧಿಗಳು ಸಂವಿಧಾನವು ರಚಿಸಿದ ಸಂಸತ್ತು, ಕಾರ್ಯಾಂಗ ಮುಂತಾದ ಅಂಗಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಸಂವಿಧಾನವೇ ನಮೂದಿಸಿದ ಅಥವಾ ಹೇಳಿದ ಪದ್ಧತಿಯಿಂದ ಎಲ್ಲ ಜನರಸಲುವಾಗಿ ನಿರ್ಣಯಗಳನ್ನು ಕೈಕೊಳ್ಳುತ್ತಾರೆ.

**(5) ಗಣರಾಜ್ಯ:** ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಜೊತೆಗೆ ಗಣರಾಜ್ಯ ಪದ್ಧತಿಯಿದೆ. ಗಣರಾಜ್ಯದಲ್ಲಿ ಎಲ್ಲ ಸಾರ್ವಜನಿಕ ಹುದ್ದೆಗಳನ್ನು ಜನರಿಂದ ಆಯ್ಕೆಮಾಡಲಾಗುತ್ತದೆ. ಯಾವುದೇ ಸಾರ್ವಜನಿಕ ಹುದ್ದೆಯು ವಂಶಪರಪರಾಗತವಾಗಿ ಬರುವುದಿಲ್ಲ.

ರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಪಾಲ, ಮುಖ್ಯಮಂತ್ರಿ, ಮಹಾಪೌರ, ಸರಪಂಚ ಮುಂತಾದ ಹುದ್ದೆಗಳು

**ಚರ್ಚಿಸಿರಿ.**

'ನನ್ನ ಕುಟುಂಬ' ಇದರ ಬಗ್ಗೆ ದೀಪಾ ಇವಳು ಏನು ಬರೆದಿದ್ದಾಳೆ, ಓದಿರಿ.

ಪ್ರಜಾಪ್ರಭುತ್ವವೆಂದರೆ ಕೇವಲ ಚುನಾವಣೆಗಳಲ್ಲ. ನನ್ನ ಅಮ್ಮ-ಅಪ್ಪ ಇವರು ಮನೆಯಲ್ಲಿಯ ಎಲ್ಲಕೆಲಸಗಳನ್ನು ಒಟ್ಟಿಗೆ ಸೇರಿ ಮಾಡುತ್ತಾರೆ. ಅದರಲ್ಲಿ ನಮ್ಮ ಪಾಲು ಕೂಡ ಇರುತ್ತದೆ. ಪರಸ್ಪರರ ಜೊತೆ ಮಾತನಾಡುವಾಗ ನಾವು ಜಗಳ ಮಾಡುವದಿಲ್ಲ.ಜಗಳ ಮಾಡಿದರೂ ಜೀಗನೆ ಅದನ್ನು ಬಗೆಹರಿಸಿ ಪರಸ್ಪರರ ಹೇಳಿಕೆಗಳನ್ನು ಆಲಿಸುತ್ತೇವೆ. ಯಾವುದೇ ಬದಲಾವಣೆ ಮಾಡಬೇಕಾದರೆ ಅಜ್ಜಿ-ಅಜ್ಜಂದಿರಿಗೆ ಕೇಳಲಾಗುತ್ತದೆ. ಅನುಜಾಳಿಗೆ ಕೃಷಿಯ ಅಭ್ಯಾಸದಲ್ಲಿ ಸಂಶೋಧನೆ ಮಾಡುವುದಿದೆ. ಅವಳ ತೀರ್ಮಾನವು ಎಲ್ಲರಿಗೂ ಹಿಡಿಸಿತು.

ದೀಪಾಳ ಮನೆಯಲ್ಲಿ ಪ್ರಜಾಪ್ರಭುತ್ವ ಪದ್ಧತಿ ಇದೆಯೆಂದು ನಿಮಗೆ ಅನಿಸುತ್ತದೆಯೇ? ಪ್ರಜಾಪ್ರಭುತ್ವದ ಯಾವ ವೈಶಿಷ್ಟ್ಯಗಳು ಈ ಪರಿಚ್ಛೇದದಲ್ಲಿ ಕಂಡುಬರುತ್ತವೆ?

ಸಾರ್ವಜನಿಕವಾಗಿರುತ್ತವೆ. ನಿರ್ದಿಷ್ಟಪಡಿಸಿದ ವಯಸ್ಸಿನ ಅರ್ಹತೆಯನ್ನು ಪೂರ್ಣಮಾಡುವ ಯಾವುದೇ ಭಾರತೀಯ ನಾಗರಿಕನು ಚುನಾವಣೆಯಲ್ಲಿ ಸ್ಪರ್ಧಿಸಿ ಈ ಹುದ್ದೆಗಳನ್ನು ಪಡೆಯಬಹುದು. ರಾಜಪ್ರಭುತ್ವ ಪದ್ಧತಿಯಲ್ಲಿ ಈ ಹುದ್ದೆಗಳು ವಂಶಪರಂಪರಾಗತವಾಗಿ ಒಂದೇ ಕುಟುಂಬದಲ್ಲಿಯ ವ್ಯಕ್ತಿಗಳ ಕಡೆಗೆ ಹೋಗುತ್ತವೆ.

ಉದ್ದೇಶ ಪತ್ರಿಕೆಯು ಸರ್ವಭಾರತೀಯ ನಾಗರಿಕರಿಗೆ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆ ಈ ಮೂರು ಮೌಲ್ಯಗಳ ಹಾಗೂ ಅದಕ್ಕನುಸಾರವಾಗಿ ವ್ಯವಹಾರ ಮಾಡುವ, ಕಾನೂನುಗಳನ್ನು ಮಾಡಿ ಆ ಮೌಲ್ಯಗಳನ್ನು ಪ್ರತ್ಯಕ್ಷ ವ್ಯವಹಾರದಲ್ಲಿ ತರುವ ಭರವಸೆಯನ್ನು ನೀಡಿದೆ. ಈ ಮೌಲ್ಯಗಳ ಅರ್ಥವನ್ನು ನಾವು ತಿಳಿದುಕ್ಕೋಣ.

**(1) ನ್ಯಾಯ:** ಅನ್ಯಾಯವನ್ನು ದೂರ ಮಾಡಿ ಎಲ್ಲರಿಗೂ ಅವರ ವಿಕಾಸದ ಸಮಾನ ಅವಕಾಶವನ್ನು ದೊರಕಿಸಿಕೊಡುವುದೆಂದರೆ ನ್ಯಾಯ. ಸರ್ವಜನರ ಕಲ್ಯಾಣವಾಗುವ ದೃಷ್ಟಿಯಿಂದ ಉಪಾಯಯೋಜನೆ ಮಾಡುವುದೇಂದರೆ ನ್ಯಾಯವನ್ನು ಪ್ರಸ್ತಾಪಿಸುವುದು. ಉದ್ದೇಶ ಪತ್ರಿಕೆಯಲ್ಲಿ ನ್ಯಾಯದ ಮೂರು ಪ್ರಕಾರಗಳನ್ನು ಹೇಳಲಾಗಿದೆ ಅವು ಕೆಳಗಿನಂತಿವೆ.

**(ಅ) ಸಾಮಾಜಿಕ ನ್ಯಾಯ:** ವ್ಯಕ್ತಿಗಳಲ್ಲಿ ಜಾತಿ, ಧರ್ಮ, ವಂಶ, ಭಾಷೆ, ಪ್ರದೇಶ, ಜನ್ಮಸ್ಥಾನ ಅಥವಾ ಲಿಂಗ ಇವುಗಳ

ಆಧಾರದ ಮೇಲೆ ಯಾವುದೇ ಭೇದ-ಭಾವ ಮಾಡಬಾರದು. ಮನುಷ್ಯನೆಂದು ಪ್ರತಿಯೊಬ್ಬ ವ್ಯಕ್ತಿಯ ದರ್ಜೆಯು ಸಮಾನವಾಗಿರುತ್ತದೆ.

**(ಬ) ಆರ್ಥಿಕ ನ್ಯಾಯ:** ಹಸಿವು ಹೊಟ್ಟೆಗಿಲ್ಲದೆ ನರಳುವಿಕೆ ಕುಪೋಷಣೆ, ಇವು ಬಡತನ ಇಲ್ಲವೆ ದಾರಿದ್ರ್ಯದಿಂದಾಗಿ ನಿರ್ಮಾಣವಾಗುತ್ತದೆ. ಬಡತನವನ್ನು ಹೋಗಲಾಡಿಸಲು ಪ್ರತಿಯೊಬ್ಬನಿಗೆ ತನ್ನ ಮತ್ತು ತನ್ನ ಕುಟುಂಬದ ಪಾಲನೆ-ಪೋಷಣೆ ಮಾಡುವ ಸಲುವಾಗಿ ಉಪಜೀವನದ ಸಾಧನವನ್ನು ದೊರಕಿಸುವ ಹಕ್ಕು ಇದೆ. ನಮ್ಮ ಸಂವಿಧಾನವು ಯಾವುದೇ ಭೇದ-ಭಾವವಿಲ್ಲದೆ ಪ್ರತಿಯೊಬ್ಬ ನಾಗರಿಕನಿಗೆ ಈ ಹಕ್ಕನ್ನು ನೀಡಿದೆ.

**(ಕ) ರಾಜಕೀಯ ನ್ಯಾಯ:** ಸರ್ವರಿಗೂ ರಾಜ್ಯಾಡಳಿತದಲ್ಲಿ ಭಾಗವಹಿಸುವ ಸಮಾನ ಹಕ್ಕು ಇರಬೇಕೆಂದು ನಾವು ಪ್ರೌಢ ಮತದಾನ ಪದ್ಧತಿಯನ್ನು ಸ್ವೀಕರಿಸಿದ್ದೇವೆ. ಅದಕ್ಕನು ಸಾರವಾಗಿ ವಯಸ್ಸಿನ 18 ವರ್ಷ ವಯಸ್ಸು ಪೂರ್ಣವಾದ ಎಲ್ಲ ನಾಗರಿಕರಿಗೆ ಮತದಾನದ ಅಧಿಕಾರವಿದೆ.

**2. ಸ್ವಾತಂತ್ರ್ಯ:** ಸ್ವಾತಂತ್ರ್ಯವೆಂದರೆ ನಮ್ಮ ಮೇಲೆ ಅನ್ಯಾಯಕಾರಕ, ಅಯೋಗ್ಯ ನಿರ್ಬಂಧಗಳು ಇಲ್ಲದಿರುವುದು, ನಮ್ಮಲ್ಲಿಯ ಸಾಮರ್ಥ್ಯಗಳ ವಿಕಾಸಕ್ಕೆ ಪೋಷಕ ವಾತಾವರಣವಿರುವುದು ಎಂದರ್ಥ. ಪ್ರಜಾಪ್ರಭುತ್ವದಲ್ಲಿ ನಾಗರಿಕರಿಗೆ ಸ್ವಾತಂತ್ರ್ಯವಿರುತ್ತದೆ. ಸ್ವಾತಂತ್ರ್ಯವಿದ್ದರೇನೆ ಪ್ರಜಾಪ್ರಭುತ್ವವು ಪರಿಪಕ್ವವಾಗುತ್ತದೆ.

ವಿಚಾರ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವು ವ್ಯಕ್ತಿಯ ಮೂಲಭೂತ ಸ್ವಾತಂತ್ರ್ಯವಾಗಿದೆ. ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಅಭಿಪ್ರಾಯ ಮತ್ತು ವಿಚಾರಗಳನ್ನು ವ್ಯಕ್ತಪಡಿಸಲು ಬರುತ್ತದೆ. ವಿಚಾರಗಳ ಕೊಡು-ಕೊಳ್ಳುವಿಕೆಯಿಂದ ನಮ್ಮಲ್ಲಿಯ ಸಹಕಾರ ಮತ್ತು ಐಕ್ಯತೆ ಹೆಚ್ಚುತ್ತವೆ ಮತ್ತು ಅದರ ಜೊತೆಗೆ ಯಾವುದೊಂದು ಸಮಸ್ಯೆಯ ಅನೇಕ ಬದಿಗಳೂ ನಮಗೆ ತಿಳಿಯುತ್ತವೆ.

ಶ್ರದ್ಧೆ, ತಿಳುವಳಿಕೆ, ಮತ್ತು ಉಪಾಸನೆಯ ಸ್ವಾತಂತ್ರ್ಯಗಳಿಂದ ಪ್ರಾಮುಖ್ಯವಾಗಿ ಧಾರ್ಮಿಕ ಸ್ವಾತಂತ್ರ್ಯ ವ್ಯಕ್ತವಾಗುತ್ತದೆ. ನಮ್ಮ ಧರ್ಮದ ಇಲ್ಲವೆ ನಮ್ಮ ಮೆಚ್ಚಿನ ಧರ್ಮದ ಉಪದೇಶಕ್ಕನುಸಾರವಾಗಿ ವರ್ತಿಸುವ ಸ್ವಾತಂತ್ರ್ಯವು ಪ್ರತಿಯೊಬ್ಬ ಭಾರತೀಯ ನಾಗರಿಕನಿಗೆ ಇದೆ. ನಮ್ಮ ಹಬ್ಬ-ಹರಿದಿನಗಳನ್ನು ಆಚರಿಸುವ ಶ್ರದ್ಧಾಸ್ಥಾನಗಳನ್ನು ಕಾಪಾಡುವ ಉಪಾಸನೆಯ ಸ್ವಾತಂತ್ರ್ಯಗಳು ಧಾರ್ಮಿಕ ಸ್ವಾತಂತ್ರ್ಯದಲ್ಲಿ ಬರುತ್ತವೆ.

**(2) ಸಮಾನತೆ:** ಉದ್ದೇಶ ಪತ್ರಿಕೆಯು ಭಾರತೀಯ ನಾಗರಿಕರಿಗೆ ದರ್ಜೆ ಮತ್ತು ಅವಕಾಶಗಳ ವಿಷಯದಲ್ಲಿ ಸಮಾನತೆಯ ಭರವಸೆಯನ್ನು ನೀಡಿದೆ.

ಜಾತಿ, ಧರ್ಮ, ವಂಶ, ಲಿಂಗ, ಜನ್ಮಸ್ಥಳ ಮುಂತಾದವುಗಳ ಆಧಾರದ ಮೇಲೆ ವ್ಯಕ್ತಿ ವ್ಯಕ್ತಿಗಳಲ್ಲಿ ಭೇದ-ಭಾವ ಮಾಡದೆ ಎಲ್ಲರಿಗೂ ಸಮಾನ ದರ್ಜೆಯನ್ನು ನೀಡಲಾಗಿದೆ. ಉಚ್ಚ-ನೀಚ, ಶ್ರೇಷ್ಠ-ಕನಿಷ್ಠ ಎಂಬ ಭೇದವನ್ನು ಮಾಡದೆ ಇರುವುದು ಎಂದರೆ ಸಮಾನ ದರ್ಜೆಯನ್ನು ನಿಡುವುದು ಎಂದರ್ಥ. ಉದ್ದೇಶ ಪತ್ರಿಕೆಯು 'ಅವಕಾಶದ ಸಮಾನತೆ' ಯನ್ನು ಮಹತ್ವದ್ದೆಂದು ತಿಳಿದಿದೆ. ಎಲ್ಲರಿಗೂ ತಮ್ಮ ವಿಕಾಸದ ಅವಕಾಶಗಳು ದೊರಕುವವು. ಅವುಗಳನ್ನು ಉಪಲಬ್ಧ ಮಾಡಿಕೊಡುವಾಗ ಯಾವುದೇ ಭೇದಭಾವ ಮಾಡಲಾಗುವುದಿಲ್ಲ.

**ಚರ್ಚಿಸಿರಿ.**

ಸ್ವಾತಂತ್ರ್ಯದ ವಿಷಯವಾಗಿ ಕೆಲವು ಹೇಳಿಕೆಗಳನ್ನು ಕೆಳಗೆ ಕೊಡಲಾಗಿದೆ. ಅದರ ಮೇಲೆ ಚರ್ಚೆಮಾಡಿರಿ.

- ☐ ಹಬ್ಬ-ಹರಿದಿನಗಳನ್ನು ಸಾರ್ವಜನಿಕವಾಗಿ ಆಚರಿಸುವಾಗ ಕೆಲವೆ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಆದರಿಂದಾಗಿ ನಮ್ಮ ಸ್ವಾತಂತ್ರ್ಯದ ಮೇಲೆ ನಿರ್ಬಂಧ ಬರುವುದಿಲ್ಲ.
- ☐ ಸ್ವಾತಂತ್ರ್ಯವೆಂದರೆ ಮನಸ್ಸಿಗೆ ಬಂದಂತೆ ವರ್ತಿಸುವುದಲ್ಲ, ಜವಾಬ್ದಾರಿಯಿಂದ ವರ್ತಿಸುವುದು.

ಸಂವಿಧಾನದ ಉದ್ದೇಶ ಪತ್ರಿಕೆಯಲ್ಲಿ ಒಂದು ತುಂಬಾ ಬೇರೆ ಆದರ್ಶದ ಅಥವಾ ತತ್ವದ ಉಲ್ಲೇಖ ಮಾಡಲಾಗಿದೆ. ಆ ಆದರ್ಶ ಅಥವಾ ತತ್ವವೆಂದರೆ ಭ್ರಾತೃತ್ವವನ್ನು ನಿರ್ಮಾಣ ಮಾಡುವ ಉದ್ದೇಶ ಹಾಗೂ ವ್ಯಕ್ತಿಯ ಪ್ರತಿಷ್ಠೆಯನ್ನು ಕಾಪಾಡುವ ಭರವಸೆ.

**ಭ್ರಾತೃತ್ವ:** ಸಂವಿಧಾನಕಾರಿಗೆ ಹೀಗೇನಿಸುತ್ತದೆಂದರೆ ಕೇವಲ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಯ ಭರವಸೆಯನ್ನು ನೀಡಿದರೆ ಭಾರತೀಯ ಸಮಾಜದಲ್ಲಿ ಸಮಾನತೆ ನಿರ್ಮಾಣವಾಗಲಾರದು. ಎಲ್ಲಿಯವರೆಗೆ ಭಾರತೀಯರಲ್ಲಿ ಭ್ರಾತೃತ್ವ ಇರುವುದಿಲ್ಲವೋ ಅಲ್ಲಿಯವರೆಗೆ ಎಷ್ಟೇ ಕಾನೂನುಗಳನ್ನು ಮಾಡಿದರೂ ಆ ಕಾನೂನುಗಳ ಉಪಯೋಗವಾಗಲಾರದು. ಆದ್ದರಿಂದಲೇ ಭ್ರಾತೃತ್ವದ ನಿರ್ಮಿತಿ ಎಂಬ ಉದ್ದೇಶವನ್ನು ಉದ್ದೇಶಪತ್ರಿಕೆಯಲ್ಲಿ ಸಮಾವೇಶ ಮಾಡಲಾಗಿದೆ. ಭ್ರಾತೃತ್ವವೆಂದರೆ ನಮ್ಮ ದೇಶದಲ್ಲಿಯ ಎಲ್ಲ ನಾಗರಿಕರ ಬಗ್ಗೆ ಮತ್ತು ಪರಸ್ಪರರ ಬಗ್ಗೆ ಆತ್ಮೀಯತೆಯ ಭಾವನೆ ಇರುವುದು. ಭ್ರಾತೃತ್ವವು ಪರಸ್ಪರರ ವಿಷಯವಾಗಿ ಸಹಾನುಭೂತಿಯ ಭಾವನೆಯನ್ನು ಮೂಡಿಸುತ್ತದೆ. ಪರಸ್ಪರರ ಸಮಸ್ಯೆಗಳನ್ನು ಕುರಿತು ಜನರು ಸಂವೇದನಶೀಲತೆಯಿಂದ ವಿಚಾರ ಮಾಡುತ್ತಾರೆ.

ಭ್ರಾತೃತ್ವ ಮತ್ತು ವ್ಯಕ್ತಿಗೌರವ ಇವುಗಳಲ್ಲಿ ನಿಕಟ ಸಂಬಂಧವಿದೆ. ವ್ಯಕ್ತಿಗೌರವವೆಂದರೆ ಪ್ರತಿಯೊಬ್ಬ ವ್ಯಕ್ತಿಗೆ ಮನುಷ್ಯನೆಂದು ಗೌರವವಿರುತ್ತದೆ. ಅದು ಜಾತಿ, ಧರ್ಮ, ವಂಶ, ಲಿಂಗ, ಭಾಷೆ ಇತ್ಯಾದಿಗಳ ಮೇಲಿಂದ ನಿರ್ಧರಿಸಲ್ಪಡುವುದಿಲ್ಲ, ಯಾವರೀತಿ ಇತರರು ನಮ್ಮ ಜೊತೆ

ಆದರದಿಂದ ಮತ್ತು ಗೌರವದಿಂದ ವರ್ತಿಸಬೇಕು ಎಂದು ನಮಗೆ ಅನಿಸುತ್ತದೆಯೋ ಅದೇರೀತಿ ನಾವೂ ಕೂಡ ಅವರನ್ನು ಗೌರವದಿಂದ ಕಾಣಬೇಕು.

ಯಾವಾಗ ಪ್ರತಿಯೊಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯನ್ನು ಗೌರವಿಸಿ ಅವನ ಸ್ವಾತಂತ್ರ್ಯ ಮತ್ತು ಸನ್ಮಾನಿಸುತ್ತಾನೆಯೋ ಆಗ ತನ್ನಿಂದ ತಾನೇ ವ್ಯಕ್ತಿಗೌರವ ನಿರ್ಮಾಣವಾಗುವುದು. ಇಂಥ ವಾತಾವರಣದಲ್ಲಿ ಭ್ರಾತೃತ್ವವು ಸಹಜವಾಗಿ ಬೆಳೆಯುತ್ತ ಹೋಗುವುದು. ನ್ಯಾಯ ಮತ್ತು ಸಮಾನತೆಯ ಮೇಲೆ ಆಧಾರಿತವಾದ ಹೊಸ ಸಮಾಜ ನಿರ್ಮಿತಿಯ ಕಾರ್ಯವು ಹೆಚ್ಚು ಸುಲಭವಾಗುವುದು. ಭಾರತದ ಸಂವಿಧಾನದ ಉದ್ದೇಶ ಪತ್ರಿಕೆಯಿಂದ ಇದರ ಮಾರ್ಗದರ್ಶನ ದೊರೆಯುತ್ತದೆ.

ಈ ಸಂವಿಧಾನವನ್ನು ಭಾರತದ ಪ್ರಜೆಗಳಾದ ನಾವು ಸ್ವತಃ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ ಎಂಬ ಉಲ್ಲೇಖದಿಂದ ಉದ್ದೇಶಪತ್ರಿಕೆಯು ಮುಕ್ತಾಯವಾಗುತ್ತದೆ.



## ಅಭ್ಯಾಸ

**1. ಹುಡುಕಿರಿ ಮತ್ತು ಬರೆಯಿರಿ.**

| | | | | | | |
|---|---|---|---|---|---|---|
| ಧ | ರ್ಮ | ನಿ | ರ | ಪೇ | ಕ್ಷ | ತೆ |
| ಪ್ರ | ಭು | ಕ | ನೆ | ಷ್ಟ | ರ | ಭ್ರಾ |
| ಮಾ | ನ | ವ | ಸು | ಖ | ಕ | ತೃ |
| ಜಾ | ಸ್ತಾ | ಪ್ರ | ಜಾ | ಪ್ರ | ಭು | ತ್ವ |
| ಪ್ರ | ತ್ವ | ಭ್ರಾ | ನೆ | ಪ | ಪೇ | ರು |

(1) ದೇಶದಲ್ಲಿಯ ಎಲ್ಲ ನಾಗರಿಕರ ಬಗ್ಗೆ ಮತ್ತು ಪರಸ್ಪರರ ಬಗ್ಗೆ ಆತ್ಮೀಯತೆಯ ಭಾವನೆ.

(2) ರಾಜ್ಯಾಡಳಿತದ ಅಧಿಕಾರವು ಜನರ ಕೈಯಲ್ಲಿ ಇರುವುದು.

(3) ಉದ್ದೇಶಪತ್ರಿಕೆಯನ್ನು ಈ ಹೆಸರಿನಿಂದಲೂ ಕರೆಯುತ್ತಾರೆ.

(4) ಎಲ್ಲ ಧರ್ಮಗಳನ್ನು ಸಮಾನವೆಂದು ತಿಳಿಯುವುದು.

**2. ಬರೆಯುತ್ತಾ ಇರೋಣ**

(1) ಧರ್ಮನಿರಪೇಕ್ಷ ರಾಜ್ಯದಲ್ಲಿ ಯಾವ ಏರ್ಪಾಟುಗಳಿರುತ್ತವೆ?

(2) ಪ್ರೌಢ ಮತದಾನ ಪದ್ಧತಿ ಎಂದರೇನು?

(3) ಆರ್ಥಿಕ ನ್ಯಾಯದಿಂದಾಗಿ ನಾಗರಿಕರಿಗೆ ಯಾವ ಹಕ್ಕು ದೊರೆಯುತ್ತದೆ?

(4) ಸಮಾಜದಲ್ಲಿ ವ್ಯಕ್ತಿಗೌರವ ಹೇಗೆ ನಿರ್ಮಾಣವಾಗುವುದು?

**3.** ನಮಗೆ ದೊರೆತ ಸ್ವಾತಂತ್ರ್ಯದ ಉಪಯೋಗವನ್ನು ನಾವು ಯಾವರೀತಿ ಮಾಡಬೇಕು? ನಮ್ಮ ಅಭಿಪ್ರಾಯವನ್ನು ಬರೆಯಿರಿ/ಹೇಳಿರಿ

**4. ಕಲ್ಪನೆಗಳನ್ನು ಸ್ಪಷ್ಟಪಡಿಸಿರಿ.**

(1) ಸಮಾಜವಾದಿ ರಾಜ್ಯ –

(2) ಸಮಾನತೆ –

(3) ಸಾರ್ವಭೌಮ ರಾಜ್ಯ –

(4) ಅವಕಾಶದ ಸಮಾನತೆ –

**5.** ಭಾರತೀಯ ಸಂವಿಧಾನದ ಉದ್ದೇಶಪತ್ರಿಕೆಯಲ್ಲಿ ಯಾವ ಯಾವ ಮಹತ್ವದ ಸಂಗತಿಗಳನ್ನು ಉಲ್ಲೇಖಿಸಲಾಗಿದೆ?

**ಉಪಕ್ರಮ:**

(1) ಶಿಕ್ಷಕರ ಸಹಾಯದಿಂದ ಮತಪತ್ರಿಕೆ ಮತ್ತು ಮತದಾನಯಂತ್ರ (EVM)ದ ಬಗ್ಗೆ ತಿಳಿದುಕೊಳ್ಳಲು ತಹಸೀಲು ಕಾರ್ಯಾಲಯಕ್ಕೆ ಭೇಟಿ ನೀಡಿರಿ.

(2) ನಿಮ್ಮ ಪರಿಸರದಲ್ಲಿಯ ವರ್ತಮಾನ ಪತ್ರಗಳ ಹೆಸರುಗಳ ಪಟ್ಟಿಯನ್ನು ತಯಾರಿಸಿರಿ.

BZS29T

# 3. ಸಂವಿಧಾನದ ವೈಶಿಷ್ಟ್ಯಗಳು

ಹಿಂದಿನ ಎರಡು ಪಾಠಗಳಲ್ಲಿ ನಾವು ಭಾರತದಲ್ಲಿ ಸಂವಿಧಾನದ ನಿರ್ಮಿತಿ ಹೇಗೆ ಆಯಿತು ಎಂಬುದರ ಮತ್ತು ಸಂವಿಧಾನ ಉದ್ದೇಶಪತ್ರಿಕೆಯ ಅಭ್ಯಾಸ ಮಾಡಿದೆವು. ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಪ್ರಭುತ್ವ, ಗಣರಾಜ್ಯ ಈ ಸಂಜ್ಞೆಗಳನ್ನು ತಿಳಿದುಕೊಂಡೆವು. ಉದ್ದೇಶಪತ್ರಿಕೆಯಲ್ಲಿ ನಮೂದಿಸಲಾದ ಈ ಉದ್ದೇಶಗಳು ಮತ್ತು ಸಂವಿದಾನದ ವೈಶಿಷ್ಟ್ಯಗಳೂ ಆಗಿವೆ. ಇವುಗಳಲ್ಲದೆ ಸಂವಿಧಾನದ ಇನ್ನೂ ಯಾವ ವೈಶಿಷ್ಟ್ಯಗಳಿವೆಯೆಂಬುದನ್ನು ನಾವು ಈ ಪಾಠದಲ್ಲಿ ತಿಳಿದುಕೊಳ್ಳುವವರಿದ್ದೇವೆ.

**ಒಕ್ಕೂಟ ರಾಜ್ಯ:** ಒಕ್ಕೂಟ ರಾಜ್ಯ ವ್ಯವಸ್ಥೆಯು ನಮ್ಮ ಸಂವಿಧಾನದ ಒಂದು ಮಹತ್ವದ ವೈಶಿಷ್ಟ್ಯವಾಗಿದೆ. ದೊಡ್ಡ ಭೂಪ್ರದೇಶ, ಹಾಗೂ ಸಾಕಷ್ಟು ಜನಸಂಖ್ಯೆಯಿರುವ ದೇಶಗಳಲ್ಲಿ ಆಡಳಿತವನ್ನು ನಡೆಸುವ ಸಲುವಾಗಿ ಒಕ್ಕೂಟ ರಾಜ್ಯವು ಒಂದು ಪದ್ಧತಿಯಾಗಿದೆ. ವಿಸ್ತಾರವಾದ ಭೂಪ್ರದೇಶವಿದ್ದರೆ ಒಂದೇ ಸ್ಥಳದಿಂದ ಆಡಳಿತವನ್ನು ನಡೆಸುವುದು ಕಠಿಣವಾಗುತ್ತದೆ. ದೂರದ ಪ್ರದೇಶಗಳ ಕಡೆಗೆ ದುರ್ಲಕ್ಷವಾಗುತ್ತದೆ. ಅಲ್ಲಿಯ ಜನರಿಗೆ ರಾಜ್ಯಾಡಳಿತದಲ್ಲಿ ಭಾಗವಹಿಸುವ ಅವಕಾಶದೊರೆಯುವುದಿಲ್ಲ, ಆದ್ದರಿಂದ ಒಕ್ಕೂಟ ರಾಜ್ಯದಲ್ಲಿ ಎರಡು ಮಟ್ಟಗಳಲ್ಲಿ ಸರಕಾರಗಳಿರುತ್ತವೆ. ಸಂಪೂರ್ಣ ದೇಶದ ಸಂರಕ್ಷಣ ಮಾಡುವುದುಪರ ರಾಷ್ಟ್ರಗಳ ಜೊತೆ ವ್ಯವಹಾರ ಮಾಡುವುದು, ಶಾಂತತೆಯನ್ನು ಕಾಪಾಡುವುದು ಇತ್ಯಾದಿ ಕಾರ್ಯಗಳನ್ನು ಕೇಂದ್ರ ಸರಕಾರವು ನಿರ್ವಹಿಸುತ್ತದೆ. ಅದಕ್ಕೆ 'ಕೇಂದ್ರ ಸರಕಾರ' ಅಥವಾ 'ಒಕ್ಕೂಟ ಸರಕಾರ' ಎಂದೂ ಕರೆಯುತ್ತಾರೆ. ಒಕ್ಕೂಟ ಸರಕಾರವು ಸಂಪೂರ್ಣ ದೇಶದ ರಾಜ್ಯಾಡಳಿತವನ್ನು ನೋಡಿಕೊಳ್ಳುತ್ತದೆ.

ನಾವು ಯಾವ ಪ್ರದೇಶದಲ್ಲಿರುತ್ತೇವೆಯೋ ಆ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುವ ಸರಕಾರಕ್ಕೆ 'ರಾಜ್ಯಸರಕಾರ' ಎಂದ ಕರೆಯುತ್ತಾರೆ. ರಾಜ್ಯಸರಕಾರವು ಒಂದು ಸೀಮಿತ ಪ್ರದೇಶದ ರಾಜ್ಯಾಡಳಿತವನ್ನು ನೋಡಿಕೊಳ್ಳುತ್ತದೆ. ಉದಾ. ಮಹಾರಾಷ್ಟ್ರ ರಾಜ್ಯ ಸರಕಾರ

ಎರಡು ಮಟ್ಟಗಳಲ್ಲಿ ಬೇರೆ ಬೇರೆ ವಿಷಯಗಳ ಮೇಲೆ ಕಾನೂನುಗಳನ್ನು ಮಾಡಿ ಪರಸ್ಪರ ಸಹಕಾರದಿಂದ ರಾಜ್ಯಡಳಿತವನ್ನು ಮಾಡುವ ಈ ಪದ್ಧತಿಗೆ 'ಒಕ್ಕೂಟ ರಾಜ್ಯ' ಎನ್ನುತ್ತಾರೆ.

**ಅಧಿಕಾರಗಳ ವಿಭಜನೆ:** ಕೇಂದ್ರಸರಕಾರ ಮತ್ತು ರಾಜ್ಯ ಸರಕಾರಗಳಲ್ಲಿ ಸಂವಿಧಾನವು ಅಧಿಕಾರಗಳನ್ನು ಹಂಚಿಕೊಟ್ಟಿದೆ. ಅದಕ್ಕನುಸಾರವಾಗಿ ಯಾವ ವಿಷಯದ ಅಧಿಕಾರಗಳು ಯಾರ ಕಡೆಗೆ ಇವೆಯೆಂಬುದನ್ನು ನೋಡೋಣ. ನಮ್ಮ ಸಂವಿಧಾನವು ಮೂರು ಪಟ್ಟಿಗಳನ್ನು ತಯಾರಿಸಿದೆ ಹಾಗೂ ಅವುಗಳಲ್ಲಿ ವಿವಿಧ ವಿಷಯಗಳನ್ನು ನಮೂದಿಸಿದೆ.

ಮೊದಲನೆಯ ಪಟ್ಟಿಗೆ 'ಕೇಂದ್ರಪಟ್ಟಿ' ಎನ್ನುತ್ತಾರೆ. ಅದರಲ್ಲಿ 97 ವಿಷಯಗಳಿದ್ದು ಈ ವಿಷಯಗಳ ಮೇಲೆ ಕೇಂದ್ರ ಸರಕಾರವು ಕಾಯ್ದೆ ಮಾಡುತ್ತದೆ. ರಾಜ್ಯಸರಕಾರಕ್ಕಾಗಿ 'ರಾಜ್ಯಪಟ್ಟಿ' ಇದ್ದು ಅದರಲ್ಲಿ 47 ವಿಷಯಗಳಿವೆ. ಈ ವಿಷಯಗಳ ಮೇಲೆ ರಾಜ್ಯ ಸರಕಾರವು ಕಾಯದೆ ಮಾಡುತ್ತದೆ ಈ ಎರಡೂ ಪಟ್ಟಿಗಳಲ್ಲದೆ. ಸಮವರ್ತಿ ಅದರಲೂ 47 ವಿಷಯಗಳಿವೆ. ಎರಡೂ ಸರಕಾರಗಳಿಗೆ ಈ ಪಟ್ಟಿಯಲ್ಲಿಯ ವಿಷಯಗಳ ಮೇಲೆ ಕಾಯ್ದೆ ಮಾಡಲು ಬರುತ್ತದೆ. ಈ ಮೂರು ಪಟ್ಟಿಗಳಲ್ಲಿಯ ವಿಷಯಗಳನ್ನು ಬಿಟ್ಟು ಯಾವುದೊಂದು ವಿಷಯವು ಹೊಸದಾಗಿ ನಿರ್ಮಾಣವಾದರೆ ಅದರ ಮೇಲೆ ಕಾಯ್ದೆ ಮಾಡುವ ಅಧಿಕಾರವು ಕೇಂದ್ರಸರಕಾರಕ್ಕೆ ಇರುತ್ತದೆ. ಈ ಅಧಿಕಾರವು 'ಶೇಷಾಧಿಕಾರ' ವೆಂದು ಗುರುತಿಸಲ್ಪಡುತ್ತದೆ.



**ಗೊತ್ತಿದೆಯೇ ನಿಮಗೆ?**

ಭಾರತೀಯ ಒಕ್ಕೂಟ ರಾಜ್ಯದಲ್ಲಿಯ ಅಧಿಕಾರಗಳ ಹಂಚಿಕೆ ಇಲ್ಲವೆ ವಿಭಜನೆಯು ವೈಶಿಷ್ಯಪೂರ್ಣವಾಗಿದೆ. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಪರಸ್ಪರರೊಡನೆ ಸಹಕರಿಸಿ ದೇಶದ ವಿಕಾಸವನ್ನು ಸಾಧಿಸುವುದು ಇದರಿಂದಾಗಿ ಸಾಧ್ಯವಾಗುತ್ತದೆ. ರಾಜ್ಯಾಡಳಿತದಲ್ಲಿ ನಾಗರಿಕರ ಸಹಭಾಗಿತ್ವಕ್ಕೆ ಈ ಪದ್ಧತಿಯಲ್ಲಿ ಪ್ರೊತ್ಸಾಹ ದೊರೆಯುತ್ತದೆ.

**ಯಾವ ವಿಷಯವು ಯಾರ ಕಡೆ –**

**(1) ಕೇಂದ್ರ ಸರಕಾರದ ಕಡೆಯ ವಿಷಯಗಳು:** ಸಂರಕ್ಷಣೆ, ವಿದೇಶಾಂಗ ನೀತಿ, ಯುದ್ಧ ಮತ್ತು ಶಾಂತತೆ, ಚಲಾವಣೆ ವ್ಯವಸ್ಥೆ, ಅಂತರರಾಷ್ಟ್ರೀಯ ವ್ಯಾಪಾರ ಇತ್ಯಾದಿ.

**(2) ರಾಜ್ಯ ಸರಕಾರದಕಡೆಯ ವಿಷಯಗಳು:** ಕೃಷಿ, ಕಾಯ್ದೆ ಮತ್ತು ಸುವ್ಯವಸ್ಥೆ, ಸ್ಥಾನಿಕ ಆಡಳಿತ, ಆರೋಗ್ಯ ಸರೆಮನೆ, ಆಡಳಿತ ಇತ್ಯಾದಿ.

**(3) ಎರಡೂ ಸರಕಾರಕಾರಗಳಿಗಾಗಿ ಇರುವ ವಿಷಯಗಳು:** ರೋಜಗಾರು, ಪರಿಸರ, ಆರ್ಥಿಕ ಮತ್ತು ಸಾಮಾಜಿಕ ಯೋಜನೆ, ವೈಯಕ್ತಿಕ ಕಾಯ್ದೆ, ಶಿಕ್ಷಣ ಇತ್ಯಾದಿ.

**ಕೇಂದ್ರಾಡಳಿತ ಪ್ರದೇಶ/ಕೇಂದ್ರ ಸರಕಾರ:** ಭಾರತದಲ್ಲಿ ಒಂದು ಕೇಂದ್ರ ಸರಕಾರ, 28 ರಾಜ್ಯ ಸರಕಾರಗಳು ಇಲ್ಲವೆ ಘಟಕರಾಜ್ಯಗಳು ಹಾಗೂ 9 ಕೇಂದ್ರಾಡಳಿತ ಪ್ರದೇಶಗಳು

ಇವೆ. ಕೇಂದ್ರಾಡಳಿತ ಪ್ರದೇಶಗಳ ಮೇಲೆ ಕೇಂದ್ರ ಸರಕಾರದ ನಿಯಂತ್ರಣವಿರುತ್ತದೆ. ಹೊಸ ದೆಹಲಿ, ದಮಣ-ದೀವ, ಪುದುಚ್ಚೆರಿ, ಚಂದೀಗಢ, ದಾದರಾ-ನಗರ ಹವೇಲಿ, ಅಂದಮಾನ -ನಿಕೋ ಬಾರ, ಲಕ್ಷದ್ವಿಪ, ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ ಇವು ಕೇಂದ್ರಾಡಳಿತ ಪ್ರದೇಶಗಳಾಗಿವೆ.

**ಮಾಡಿ ನೋಡಿರಿ.**

ಈಶಾನ್ಯದ ಕಡೆಯ ರಾಜ್ಯಗಳ ಸೂಚಿಯನ್ನು ತಯಾರಿಸಿರಿ ಅಲ್ಲಿಯ ರಾಜ್ಯಗಳ ರಾಜಧಾನಿಯ ನಗರಗಳು ಯಾವವು?

**ಸಂಸದೀಯ ಸರಕಾರ ಪದ್ಧತಿ:** ಭಾರತದ ಸಂವಿಧಾನವು ಸಂಸದೀಯ ಸರಕಾರ ಪದ್ಧತಿಯನ್ನು ಏರ್ಪಾಟು ಮಾಡಿದೆ. ರಾಜ್ಯಾಡಳಿತ ಯಾವ ಪದ್ಧತಿಯಲ್ಲಿ ಸಂಸತ್ತಿಗೆ ಅಂದರೆ ಕಾರ್ಯಾಂಗಕ್ಕೆ ನಿರ್ಣಯಗಳನ್ನು ಕೈಕೊಳ್ಳುವ ಸರ್ವಶ್ರೇಷ್ಠ ಅಧಿಕಾರವಿರುತ್ತದೆ ಭಾರತದ ಸಂಸತ್ತಿನಲ್ಲಿ ರಾಷ್ಟ್ರಪತಿ, ಲೋಕಸಭೆ ಮತ್ತು ರಾಜ್ಯಸಭೆಗಳ ಸಮಾವೇಶವಿರುತ್ತದೆ. ಪ್ರತ್ಯಕ್ಷ ರಾಜ್ಯಾಡಳಿತವನ್ನು ಮಾಡುವ ಮಂತ್ರಿಮಂಡಳವು ಲೋಕಸಭೆಯೊಳಗಿಂದ ನಿರ್ಮಾಣವಾಗುತ್ತದೆ ಮತ್ತು ಅದು ತಮ್ಮ ಕಾರ್ಯಕ್ಕಾಗಿ ಲೋಕಸಭೆಗೆ ಹೊಣೆಯಾಗಿರುತ್ತದೆ. ಸಂಸದೀಯ ಸರಕಾರ ಪದ್ಧತಿಯಲ್ಲಿ ಸಂಸತ್ತಿನಲ್ಲಿ ನಡೆಯುವ ಚರ್ಚೆ ವಿಚಾರ. ವಿನಿಮಯಗಳಿಗೆ ಮಹತ್ವವಿರುತ್ತದೆ.

**ಗೊತ್ತಿದೆಯೇ ನಿಮಗೆ?**




ಚಲಾವಣೆಯ ನಾಣ್ಯಗಳು ಮತ್ತು ನೋಟುಗಳು

ನೀವು ಚಲಾವಣೆಯ ನೋಟುಗಳನ್ನು ನೋಡಿರುವಿರಲ್ಲವೇ? ಅವುಗಳ ಮೇಲೆ ಕೇಂದ್ರ ಸರಕಾರದ ಮುಖಾಂತರ ಅಂಗೀಕರಿಸಿ ಎಂದು ಬರೆದಿರುತ್ತದೆ.

ಪೋಲೀಸರ ಭುಜದ ಮೇಲಿನ ಲಾಂಛನ (ಬಿಲ್ಲೆ) ನೀವು ನೋಡಿದ್ದರೆ ಅದರ ಮೇಲೆ 'ಮಹಾರಾಷ್ಟ್ರ ಪೋಲೀಸ' ಎಂದು ಬರೆದದ್ದು ಕಾಣಿಸುತ್ತದೆ.

'ಭಾರತೀಯ ರೇಲ' ಹಾಗೂ 'ಮಹಾರಾಷ್ಟ್ರ ರಾಜ್ಯ ಪರಿವಹನ ಮಹಾಮಂಡಳ' ಹೀಗೆ ಬರೆದದ್ದನ್ನೂ ನೀವು ಓದಿರಬಹುದು.

ಇದರರ್ಥ ನಮ್ಮ ದೇಶದಲ್ಲಿ ಎರಡು ಮಟ್ಟಗಳಲ್ಲಿ ಸರಕಾರಗಳಿರುತ್ತವೆ. ಒಂದು ಭಾರತದ ಸರಕಾರ ಹಾಗೂ ಎರಡನೆಯದು ರಾಜ್ಯಸರಕಾರ ಉದಾ. ಮಹಾರಾಷ್ಟ್ರ ಸರಕಾರ ಕರ್ನಾಟಕ ಸರಕಾರ ಇತ್ಯಾದಿ.




ಮಹಾರಾಷ್ಟ್ರ ಪೋಲೀಸ ಲಾಂಛನ




ಭಾರತೀಯ ರೇಲ ಲಾಂಛನ





ಮಹಾರಾಷ್ಟ್ರ ರಾಜ್ಯ ಪರಿವಹನ ಮಹಾಮಂಡಳ ಲಾಂಛನ

**ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ:** ಭಾರತದ ಸಂವಿಧಾನವು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯ ನಿರ್ಮಿತಿ ಮಾಡಿದೆ. ವಾದಗ್ರಸ್ತ ಪ್ರಶ್ನೆಗಳು ಪರಸ್ಪರರಲ್ಲಿ ಬಗೆಹರಿಯದಿದ್ದರೆ ಅವುಗಳನ್ನು ನ್ಯಾಯಾಲಯದಲ್ಲಿ ಸಾದರಪಡಿಸಲಾಗುತ್ತದೆ. ನ್ಯಾಯಾಲಯವು ಎರಡೂ ವರ್ಷಗಳ ಹೇಳಿಕೆಯನ್ನು ಕೇಳಿಕೊಂಡು ಅದರಲ್ಲಿ ಅನ್ಯಾಯವಾಗಿದ್ದರೆ ಅದನ್ನು ದೂರಮಾಡಿ ತೀರ್ಪು ನೀಡುತ್ತದೆ. ಈ ಕಾರ್ಯವು ನಿಷ್ಪಕ್ಷಪಾತವಾಗಿ ಆಗುವುದು ಅವಶ್ಯಕವಾಗಿರುತ್ತದೆ.

ನ್ಯಾಯಾಲಯದ ಮೇಲೆ ಯಾವುದೇ ರೀತಿಯ ಒತ್ತಡ ಬರಬಾರದೆಂದು ಸಂವಿಧಾನವು ನ್ಯಾಯಾಂಗವನ್ನು ಹೆಚ್ಚಿಗೆ ಹೆಚ್ಚು ಸ್ವತಂತ್ರವಾಗಿಡುವ ಸಲುವಾಗಿ ಅನೇಕ ಏರ್ಪಾಟುಗಳನ್ನು ಮಾಡಿದೆ. ಉದಾ. ನ್ಯಾಯಾಧೀಶರ ನೇಮಕವನ್ನು ಸರಕಾರವು ಮಾಡುವುದಿಲ್ಲ, ರಾಷ್ಟ್ರಪತಿಗಳು ಮಾಡುತ್ತಾರೆ. ನ್ಯಾಯಾಧೀಶರನ್ನು ಸಹಜವಾಗಿ ಅವರ ಸ್ಥಾನದಿಂದ ದೂರಮಾಡಲು ಬರುವುದಿಲ್ಲ.

**ಒಂದೇ ನಾಗರಿಕತ್ವ:** ಭಾರತದ ಸಂವಿಧಾನವು ಭಾರತದಲ್ಲಿಯ ಎಲ್ಲ ನಾಗರಿಕರಿಗೆ ಒಂದೇ ನಾಗರಿಕತ್ವವನ್ನು ನೀಡಿದೆ ಅದುವೇ 'ಭಾರತೀಯ' ನಾಗರಿಕತ್ವ.

**ಸಂವಿಧಾನದಲ್ಲಿಯ ತಿದ್ದುಪಡಿ ಮಾಡುವ ಪದ್ಧತಿಗಳು:** ಸಂವಿಧಾನದಲ್ಲಿ ನಮೂದಿಸಲಾದ ಯೋಜನೆಯಲ್ಲಿ ಪರಿಸ್ಥಿತಿಗನುಸಾರವಾಗಿ ತಿದ್ದುಪಡಿ ಮಾಡಬೇಕಾಗುತ್ತದೆ. ಆದರೆ ಸಂವಿಧಾನದಲ್ಲಿ ಮೇಲಿಂದ ಮೇಲೆ ತಿದ್ದುಪಡಿ ಮಾಡಿದರೆ ಅಸ್ಥಿರತೆ ನಿರ್ಮಾಣ ವಾಗಬಹುದು. ಆದ್ದರಿಂದ ಯಾವುದೇ ತಿದ್ದುಪಡಿ ಮಾಡುವಾಗ ಪೂರ್ಣ ವಿಚಾರ ಮಾಡಬೇಕು.



ಅದಕ್ಕಾಗಿ ಭಾರತದ ಸಂವಿಧಾನದಲ್ಲಿಯೇ ಯಾವುದೇ ತಿದ್ದುಪಡಿ ಮಾಡುವುದಾದರೆ ಅದನ್ನು ಇದೇ ಪ್ರಕ್ರಿಯೆಯ ಮೂಲಕ ಮಾಡಬೇಕಾಗುತ್ತದೆ. ಸಂವಿಧಾನ ತಿದ್ದುಪಡಿಯ ಈ ಪ್ರಕ್ರಿಯೆಯು ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ. ಅದು ಬಹಳ ಕಠಿಣವೂ ಇಲ್ಲ, ಸರಳವೂ ಇಲ್ಲ, ಮಹತ್ವದ ತಿದ್ದುಪಡಿಗಾಗಿ ವಿಚಾರ ವಿನಿಮಯ ಮಾಡಲು ಸಾಕಷ್ಟು ಅವಕಾಶ ನೀಡಲಾಗಿದೆ ಸಾಮಾನ್ಯ ತಿದ್ದುಪಡಿಯು ಸುಲಭವಾಗಿ ಆಗುವಷ್ಟು ಸ್ಥಿತಿಸ್ಥಾಪಕತ್ವವೂ ಈ ಪ್ರಕ್ರಿಯೆ ಯಲ್ಲಿದೆ.

**ಹುಡುಕಿರಿ!**

ಇಲ್ಲಿಯ ವರೆಗೆ ಭಾರತೀಯ ಸಂವಿಧಾನದಲ್ಲಿ ಎಷ್ಟು ಸಲ ತಿದ್ದುಪಡಿಯಾಗಿದೆ?

**ಚನಾವಣಾ ಆಯೋಗ:** ಚುನಾವಣಾ ಆಯೋಗದ ವಿಷಯದಲ್ಲಿಯ ಸಮಾಚಾರವನ್ನು ನೀವು ಯಾವಾಗಲೂ ವರ್ತಮಾನ ಪತ್ರಗಳಲ್ಲಿ ಓದುತ್ತಿರಬಹುದು. ಭಾರತವು ಪ್ರಜಾಪ್ರಭುತ್ವ ಸರಕಾರ ವ್ಯವಸ್ಥೆಯನ್ನು ಸ್ವೀಕರಿಸಿದ್ದರಿಂದ ನಿರ್ದಿಷ್ಟ ಕಾಲಾವಧಿಯ ನಂತರ ಜನರು ತಮ್ಮ ಪ್ರತಿನಿಧಿಗಳನ್ನು ಹೊಸದಾಗಿ ಆಯ್ಕೆಮಾಡುತ್ತಾರೆ. ಅದಕ್ಕಾಗಿ ಚುನಾವಣೆಗಳನ್ನು ನಡೆಸಬೇಕಾಗುತ್ತದೆ. ಈ ಚುನಾವಣೆಗಳು ಮುಕ್ತ ಮತ್ತು ನಿಷ್ಪಕ್ಷಪಾತ ವಾತಾವರಣದಲ್ಲಿ ನಡೆಯುವುದು ಅವಶ್ಯಕವಾಗಿರುತ್ತದೆ. ಅಂದಾಗ ಮಾತ್ರ ನಾಗರಿಕರಿಗೆ ಯಾವುದೇ ಒತ್ತಡವಿಲ್ಲದೆ ತಮಗೆ ಯೋಗ್ಯವೆನಿಸಿದ ಅಭ್ಯರ್ಥಿಯನ್ನು ಆಯ್ಕೆ



**ಹೇಳಿ ನೋಡೋಣ!**

ಇಂದಿನ ಮುಖ್ಯ ಚುನಾವಣಾ ಆಯುಕ್ತರು ಯಾರು?

ಚುನಾವಣೆಯ ನೀತಿ ಸಂಹಿತೆ ಎಂದರೇನು? ಮತಕ್ಷೇತ್ರ ಎಂದರೇನು?

ಮಾಡಲು ಬರುತ್ತದೆ. ಒಂದು ವೇಳೆ ಸರಕಾರವು ಈ ಚುನಾವಣೆಗಳನ್ನು ನಡೆಸಿದರೆ ಈರೀತಿಯ ಮುಕ್ತ ಮತ್ತು ನ್ಯಾಯ ವಾತಾವರಣ ದೊರೆಯುವ ಭರವಸೆ ಇರುವುದಿಲ್ಲ, ಆದ್ದರಿಂದ ನಮ್ಮ ಸಂವಿಧಾನವು ಚುನಾವಣೆಗಳನ್ನು ನಡೆಸುವ ಹೊಣೆಗಾರಿಕೆಯನ್ನು ಒಂದು ಸ್ವತಂತ್ರ ಆಯೋಗದ ಮೇಲೆ ವಹಿಸಿದೆ. ಅದೇ ಯಂತ್ರಣ ಅಂದರೆ ಚುನಾವಣೆ ಆಯೋಗ ಹೌದು. ಭಾರತದಲ್ಲಿಯ ಎಲ್ಲ ಮಹತ್ವದ ಚುನಾವಣೆಗಳನ್ನು ನಡೆಸುವ ಜವಾಬ್ದಾರಿಯು ಚುನಾವಣಾ ಆಯೋಗದ ಮೇಲಿರುತ್ತದೆ.

ಭಾರತೀಯ ಸಂವಿಧಾನವು ಅನೇಕ ವೈಶಿಷ್ಟ್ಯಗಳನ್ನು ಹೊಂದಿದೆ. ಈ ಪಾಠದಲ್ಲಿ ನಾವು ಅವುಗಳಲ್ಲಿಯ ಕೆಲವು ಮಹತ್ವದ ವೈಶಿಷ್ಟ್ಯಗಳ ಅಭ್ಯಾಸ ಮಾಡಿದ್ದೇವೆ. 'ಮೂಲಭೂತ ಹಕ್ಕುಗಳು' ಈ ವಿಷಯದ ವಿಸ್ತೃತವಾದ ಸವಲತ್ತುಗಳು ಇದ್ದು ನಮ್ಮ ಸಂವಿಧಾನದ ಮತ್ತೊಂದು ಮಹತ್ವದ ವೈಶಿಷ್ಟ್ಯವಾಗಿದೆ ಅದರ ಅಭ್ಯಾಸವನ್ನು ನಾವು ಮುಂದಿನ ಪಾಠದಲ್ಲಿ ಮಾಡುವವರಿದ್ದೇವೆ.

BZY8MJ



## ಅಭ್ಯಾಸ

**1. ಒಕ್ಕೂಟ ರಾಜ್ಯಪದ್ಧತಿಯಲ್ಲಿ ಅಧಿಕಾರಗಳ ವಿಭಜನೆಯನ್ನು ಯಾವರೀತಿ ಮಾಡಲಾಗಿದೆಯೆಂಬದರ ಸೂಚಿಯನ್ನು ಕೆಳಗಿನ ಕೋಷ್ಟಕದಲ್ಲಿ ತಯಾರಿಸಿರಿ.**

| ಕೇಂದ್ರ ಸರಕಾರ | ರಾಜ್ಯಸರಕಾರ | ಎರಡೂ ಸರಕಾರಗಳ ಕಡೆಗೆ ಇರುವ ವಿಷಯಗಳು |
|---|---|---|
| (1) ______ | (1) ______ | (1) ______ |
| (2) ______ | (2) ______ | (2) ______ |
| (3) ______ | (3) ______ | (3) ______ |

**2. ಯೋಗ್ಯ ಶಬ್ದವನ್ನು ಬರೆಯಿರಿ.**

(1) ಸಂಪೂರ್ಣ ದೇಶದ ಆಡಳಿತವನ್ನು ನೋಡಿಕೊಳ್ಳುವ ಸರಕಾರ

(2) ಚುನಾವಣೆಗಳನ್ನು ನಡೆಸುವ ಆಯೋಗ

(3) ಎರಡು ಪಟ್ಟಿಗಳಲ್ಲದೆ ಇರುವ ಇನ್ನೊಂದು ಪಟ್ಟಿ

**3. ಬರೆಯುತ್ತಾ ಇರಿ.**

(1) ಒಕ್ಕೂಟ ರಾಜ್ಯದಲ್ಲಿ ಎರಡು ಮಟ್ಟಗಳಲ್ಲಿ ಸರಕಾರಗಳಿರುತ್ತವೆ.

(2) ಶೇಷಾಧಿಕಾರ ಎಂದರೇನು?

(3) ಸಂವಿಧಾನವು ಸ್ವತಂತ್ರ ನ್ಯಾಯಾಂಗದ ವ್ಯವಸ್ಥೆಯನ್ನು ನಿರ್ಮಿಸಿದೆ.


**4. ಸ್ವತಂತ್ರ ನ್ಯಾಯಾಂಗವ್ಯವಸ್ಥೆಯ ಲಾಭ ಮತ್ತು ಹಾನಿಗಳು ಎಂಬ ವಿಷಯದ ಮೇಲೆ ವರ್ಗದಲ್ಲಿ ಗಂಪು ಚರ್ಚೆಯನ್ನು ಏರ್ಪಡಿಸಿರಿ.**

**5. ಇಲೆಕ್ಟ್ರಾನಿಕ್ ಮತದಾನಯಂತ್ರದ (EVM) ಉಪಯೋಗದಿಂದ ಯಾವ ಲಾಭಗಳಾಗುತ್ತವೆಯೆಂಬುದರ ಮಾಹಿತಿ ಪಡೆಯಿರಿ.**

**ಉಪಕ್ರಮ:**

ವರ್ಗದಲ್ಲಿ ಚನಾವಣಾ ಆಯೋಗದ ಸ್ಥಾಪನೆ ಮಾಡಿರಿ. ಆ ಚುನಾವಣಾ ಆಯೋಗದ ಮಾರ್ಗದರ್ಶನದಲ್ಲಿ ವರ್ಗದ ಚುನಾವಣೆಯನ್ನು ನಡೆಸಿರಿ.

# 4. ಮೂಲಭೂತ ಹಕ್ಕುಗಳು ಭಾಗ - 1




**ಬನ್ನಿ ಹುಡುಕೋಣ.**

* ಮಕ್ಕಳ ಹಕ್ಕು ನಿಮಗೆ ಗೊತ್ತಿರಬಹುದು. ಅದರಲ್ಲಿಯ ಎರಡು ಮಹತ್ವದ ಹಕ್ಕುಗಳನ್ನು ನೀವು ಹೇಳಬಹುದು?
* ಮಹಿಳೆಯರ ಹಕ್ಕು, ಆದಿವಾಸಿಗಳ ಹಕ್ಕು, ರೈತರ ಹಕ್ಕು ಈ ಸಂಜ್ಞೆಗಳು ಕೂಡ ನಿಮಗೆ ಗೊತ್ತಿವೆ. ಆ ಹಕ್ಕುಗಳ ಸಂದರ್ಭದಲ್ಲಿ ನಮ್ಮೆಲ್ಲರ ಮುಂದೆ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ?
* ಹಕ್ಕುಗಳ ಉಪಯೋಗವು ಏನಾಗಿರುತ್ತದೆ. ಅವುಗಳನ್ನು ಯಾರು ಕೊಡಬೇಕಾಗುತ್ತದೆ?
* ಹಕ್ಕುಗಳನ್ನು ಕಸಿದುಕೊಳ್ಳಲು ಬರುತ್ತದೆಯೇ?
* ಹಾಗಾದಲ್ಲಿ ಅದರ ವಿರುದ್ಧ ಎಲ್ಲಿ ಮನವಿಯನ್ನು ಮಾಡಬೇಕು?

ವರ್ತಮಾನ ಪತ್ರದಲ್ಲಿ ಅಥವಾ ಇತರೆಡೆ ನೀವು ಇಂಥ ಫಲಕಗಳನ್ನು ನೋಡಿರಬಹುದು. ಮೋರ್ಚಾದಲ್ಲಿ ಕೆಲವು ಬೇಡಿಕೆಗಳನ್ನು ಮಾಡಲಾಗುತ್ತದೆ. ಅದು ಅವರ ಹಕ್ಕು ಇದೆಯೆಂದು ಹೇಳಲಾಗುತ್ತದೆ.

ನಮಗೆ ಜನ್ಮತಃ ಹಕ್ಕುಗಳು ಪ್ರಾಪ್ತವಾಗುತ್ತವೆ. ಜನಿಸಿದ ಪ್ರತಿಯೊಂದು ಮಗುವಿಗೆ ಜೀವಿಸುವ ಹಕ್ಕು ಇರುತ್ತದೆ. ಆ ಮಗುವಿಗೆ ಉತ್ತಮ ಆರೋಗ್ಯ ಲಭಿಸಲೆಂದು ಸಂಪೂರ್ಣ ಸಮಾಜ ಮತ್ತು ಸರಕಾರವು ಪ್ರಯತ್ನ ಮಾಡುತ್ತದೆ. ಅನ್ಯಾಯ, ಶೋಷಣೆ, ಭೇದ-ಭಾವ, ಇವುಗಳಿಂದ ವ್ಯಕ್ತಿಗಳಿಗೆ ಸಂರಕ್ಷಣೆ ದೊರೆತರೆ ಮಾತ್ರ ಅವರು ತಮ್ಮಲ್ಲಿಯ ಗುಣಗಳ ಮತ್ತು ಕೌಶಲ್ಯಗಳ ವಿಕಾಸವನ್ನು ಸಾಧಿಸಬಹುದು ಮತ್ತು ಸಂಪೂರ್ಣ ಜನಸಮೂಹದ ವಿಕಾಸಕ್ಕಾಗಿ ಪೋಷಕ ವಾತಾವರಣ ಬೇಡಿಕೆ ಮಾಡುವುದು, ಅದಕ್ಕಾಗಿ ಆಗ್ರಹ ಮಾಡುವುದು ಎಂದರೆ ಹಕ್ಕು ಬೇಡುವುದು ಎಂದರ್ಥ.

ಇಂತಹ ಪೋಷಕ ವಾತಾವರಣವನ್ನು ನಿರ್ಮಾಣ ಮಾಡುವ ಸಲುವಾಗಿ ಸಂವಿಧಾನವು ಭಾರತದಲ್ಲಿಯ ಎಲ್ಲ ನಾಗರಿಕರಿಗೆ ಸಮಾನ ಹಕ್ಕುಗಳನ್ನು ನೀಡಿದೆ. ಈ ಹಕ್ಕುಗಳು

ಮೂಲಭೂತ ಹಕ್ಕುಗಳಾಗಿವೆ. ಇವುಗಳನ್ನು ಸಂವಿಧಾನದಲ್ಲಿ ನಮೂದಿಸಲಾಗಿರುವುದರಿಂದ ಅವುಗಳಿಗೆ ಕಾನೂನಿನ ದರ್ಜೆ ಇದೆ. ಈ ಹಕ್ಕುಗಳ ಪಾಲೆಯು ಸರ್ವರಿಗೆ ಬಂಧನಕಾರಕವಾಗಿದೆ.

**ಯೋಚಿಸಿರಿ ಹಾಗೂ ಬರೆಯಿರಿ.**

ನೀವು ನಾಯಿ, ಬೆಕ್ಕು, ಆಕಳು, ಎಮ್ಮೆ, ಆಡು ಮುಂತಾದ ಪ್ರಾಣಿಗಳನ್ನು ಸಾಕುತ್ತಿರಬಹುದು. ನೀವು ಅವುಗಳ ಕಾಳಜಿ ಮಾಡುತ್ತೀರಿ. ಅವುಗಳನ್ನು ತುಂಬಾ ಪ್ರೀತಿಸುತ್ತೀರಿ.

ಈ ಪ್ರಾಣಿಗಳಿಗೆ ಮಾತನಾಡಲು ಬರುತ್ತಿದ್ದರೆ ಅವು ನಿಮ್ಮ ಕಡೆಯಿಂದ ಯಾವ ಹಕ್ಕುಗಳನ್ನು ಬೇಡುತ್ತಿದ್ದವು?

**ಸಂವಿಧಾನದಲ್ಲಿ ಉಲ್ಲೇಖಿಸಲಾದ ನಮ್ಮ ಹಕ್ಕುಗಳು:** ಸಂವಿಧಾನದಲ್ಲಿ ಭಾರತೀಯ ನಾಗರಿಕರ ಹಕ್ಕುಗಳನ್ನು ನಮೂದಿಸಲಾಗಿದೆ. ಈ ಹಕ್ಕುಗಳು ಯಾವವೆಂಬುದನ್ನು ನೋಡೋಣ.

**ಸಮಾನತೆಯ ಹಕ್ಕು:** ಸಮಾನತೆಯ ಹಕ್ಕಗಳಿಗನುಗುಣವಾಗಿ ರಾಜ್ಯಕ್ಕೆ ಭಾರತೀಯ ನಾಗರಿಕರಲ್ಲಿ ಉಚ್ಚ-ನೀಚ, ಶ್ರೇಷ್ಠ-ಕನಿಷ್ಠ, ಸ್ತ್ರೀ-ಪುರುಷ ಎಂಬ ಭೇದಭಾವ ಮಾಡಿ ಅವರನ್ನು ಬೇರೆ ರೀತಿಯಿಂದ ನಡೆಸಿಕೊಳ್ಳಲು ಬರುವುದಿಲ್ಲ, ಕಾನೂನು ಸರ್ವರಿಗಾಗಿ ಸಮಾನವಾಗಿರುತ್ತದೆ. ಅನೇಕ ಕಾನೂನುಗಳು ನಮಗೆ ಸಂರಕ್ಷಣೆ ನೀಡುತ್ತವೆ. ಉದಾ. ವಿಚಾರಣೆಯಿಲ್ಲದೆ ಯಾವುದೇ ವ್ಯಕ್ತಿಯನ್ನು ಬಂಧಿಸಲು ಬರುವುದಿಲ್ಲ. ಈ ರೀತಿಯ ಸಂರಕ್ಷಣೆ ನೀಡುವಾಗಲೂ ಸರಕಾರಕ್ಕೆ ಬೇದಭಾವ ಮಾಡಲು ಬರುವುದಿಲ್ಲ.



**ಬನ್ನಿ, ಚರ್ಚಿಸೋಣ.**

ಸರ್ವರನ್ನು ಕಾನೂನಿನ ಎದುರಿಗೆ ಸಮಾನರಾಗಿ ತಿಳಿಯುವುದು ಮತ್ತು ಸರ್ವರಿಗೂ ಕಾನೂನಿನ ಸಮಾನ ಸಂರಕ್ಷಣೆ ನೀಡುವುದು - ಇದರ ಲಾಭಗಳು ಯಾವವು?

ಸಮಾನತೆಯ ಹಕ್ಕಿನಲ್ಲಿ ಇನ್ನೂ ಯಾವ ಸಂಗತಿಗಳು ಬರುತ್ತವೆ? ಸರಕಾರಿ ನೌಕರಿಗಳನ್ನು ನೀಡುವಾಗ ಸರಕಾರಕ್ಕೆ ಜಾತಿ, ಧರ್ಮ, ಲಿಂಗ, ಜನ್ಮ ಸ್ಥಳ ಇತ್ಯಾದಿಗಳ ಮೇಲೆ ಆಧಾರಿತ ಭೇದಭಾವ ಮಾಡಲು ಬರುವುದಿಲ್ಲ. ನಮ್ಮ ದೇಶದಲ್ಲಿ ಅಸ್ಪೃಶ್ಯತೆಯನ್ನು ಪಾಲಿಸುವ ಅಮಾನವೀಯ ರೂಢಿಯನ್ನ ಕಾನೂನಿನ ಮೂಲಕ ನಷ್ಟಪಡಿಸಲಾಗಿದೆ. ಅಸ್ಪೃಶ್ಯತೆಯ ಪಾಲನೆಯನ್ನು ಅಪರಾಧವೆಂದು ತಿಳಿಯಲಾಗುತ್ತದೆ. ಭಾರತೀಯ ಸಮಾಜದಲ್ಲಿ ಸಮಾನತೆಯನ್ನು ನಿರ್ಮಾಣ ಮಾಡುವ ಸಲುವಾಗಿ ಈ ರೂಢಿಯನ್ನು ನಿರ್ಮೂಲನೆಗೊಳಿಸಲಾಗಿದೆ. ಜನರಲ್ಲಿ ಶ್ರೇಷ್ಠ ಮತ್ತು ಕನಿಷ್ಠ ಎಂಬ ಭೇದ-ಭಾವನ್ನು ತೋರಿಸುವ ಪದವಿಗಳನ್ನು ನೀಡುವುದನ್ನು ಸಂವಿಧಾನವು ನಿಷೇಧಿಸಿದೆ. ಉದಾ. ರಾಜಾ, ಮಹಾರಾಜ, ರಾವಬಹಾದ್ದೂರ ಇತ್ಯಾದಿ



**ಗೊತ್ತಿದೆಯೇ ನಿಮಗೆ?**

ವಿಷಮತೆಯನ್ನು ಪೋಷಿಸುವ, ಸಮಾಜದಲ್ಲಿ ಒಡಕನ್ನು ಹುಟ್ಟಿಸುವ ಹಾಗೂ ನಾಗರಿಕರಲ್ಲಿ ಭೇದ-ಭಾವವನ್ನುಂಟು ಮಾಡುವ ಪದವಿಗಳನ್ನು ರಾಜ್ಯಕೆ ನೀಡಲು ಬರುವುದಿಲ್ಲ. ಆದರೆ ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ಗೌರವಾಸ್ಪದ ಕಾರ್ಯಗಳನ್ನು ಮಾಡುವವರಿಗೆ ಮಾತ್ರ ಸರಕಾರವುಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣಗಳಂತಹ ಪದವಿಗಳನ್ನು ನೀಡುತ್ತದೆ. ಭಾರತರತ್ನ ಇದು ನಮ್ಮ ದೇಶದಲ್ಲಿಯ ಸರ್ವೋಚ್ಚ ಪದವಿ ಇಲ್ಲವೆ ಸನ್ಮಾನವಾಗಿದೆ.

ಸಂರಕ್ಷಣ ದಳದಲ್ಲಿಯ ಉತ್ಕೃಷ್ಟ ಕಾರ್ಯಕ್ಕಾಗಿ ಪರಮವೀರ ಚಕ್ರ, ಅಶೋಕ ಚಕ್ರ, ಶೌರ್ಯಚಕ್ರ ಸನ್ಮಾನದ ಪದವಿಗಳನ್ನು ನೀಡಲಾಗುತ್ತದೆ.

ಇಂಥ ಪದವಿಗಳಿಂದಾಗಿ ಅನ್ಯ ನಾಗರಿಕರಿಗೆ ದೊರೆಯದ ಯಾವುದೇ ವಿಶೇಷಾಧಿಕಾರಗಳು ಆ ವ್ಯಕ್ತಿಗಳಿಗೆ ದೊರೆಯುವುದಿಲ್ಲ. ಆದರೆ. ಇಂಥ ಪದವಿಗಳನ್ನು ನೀಡಿ ಅವರ ಕಾರ್ಯವನ್ನು ಗೌರವಿಸಲಾಗುತ್ತದೆ.

**ಸ್ವಾತಂತ್ರ್ಯದ ಹಕ್ಕು:** ಇದು ಸಂವಿಧಾನವು ನೀಡಿದ ಅತ್ಯಂತ ಮಹತ್ವದ ಹಕ್ಕಾಗಿದ್ದು ಆದರಲ್ಲಿ ವ್ಯಕ್ತಿಯ ದೃಷ್ಟಿಯಲ್ಲಿ ಅವಶ್ಯಕವಾದ ಸರ್ವಪ್ರಕಾರದ ಸ್ವಾತಂತ್ರ್ಯದ ಭರವಸೆ ನೀಡಲಾಗಿದೆ.

ನಾಗರಿಕರಾದುದರಿಂದ ನಮಗೆ -

* ಭಾಷಣ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವಿದೆ.
* ಶಾಂತತಾಪೂರ್ವಕವಾಗಿ ಒಂದೆಡೆ ಸೇರುವ ಮತ್ತು ಸಭೆಗಳನ್ನು ಆಯೋಜಿಸುವ ಸ್ವಾತಂತ್ರ್ಯವಿದೆ.
* ಸಂಸ್ಥೆ ಮತ್ತು ಸಂಘಟನೆಗಳನ್ನು ಸ್ಥಾಪಿಸುವ ಸ್ವಾತಂತ್ರ್ಯವಿದೆ.
* ಭಾರತದ ಪ್ರದೇಶದಲ್ಲಿ ಎಲ್ಲಿಯೂ ತಿರುಗಾಡುವ ಸ್ವಾತಂತ್ರ್ಯವಿದೆ.
* ಭಾರತದ ಪ್ರದೇಶದಲ್ಲಿ ಎಲ್ಲಿಯೂ ನೆಲೆಸುವ ಸ್ವಾತಂತ್ರ್ಯ ವಿದೆ.
* ನಮಗೆ ಹಿಡಿಸುವ ಯಾವುದೇ ಉದ್ಯೋಗ, ವ್ಯವಸಾಯವನ್ನು ಮಾಡುವ ಸ್ವಾತಂತ್ರ್ಯವಿದೆ.



**ಮಾಡಿ ನೋಡಿರಿ.**

'ಅ', 'ಬ' ಮತ್ತು 'ಕ' ಇವರು ಮಾಡಿದ ಕೆಲವು ಕೃತಿಗಳನ್ನು ಇಲ್ಲಿ ಕೊಡಲಾಗಿದೆ. ಮೇಲೆ ಉಲ್ಲೇಖಿಸಿದ ಸ್ವಾತಂತ್ರ್ಯಗಳ ಯಾವ ಪ್ರಕಾರದೊಂದಿಗೆ ನೀವು ಅವುಗಳನ್ನು ಹೊಂದಿಸುವಿರಿ.

'ಅ' ಇವನು ಆದಿವಾಸಿಗಳ ಪ್ರಶ್ನೆಗಳನ್ನು ಬಿಡಿಸುವ ಸಲುವಾಗಿ 'ಆದಿವಾಸಿ ಸಹಕಾರ ಮಂಚ' ವನ್ನು ಸ್ಥಾಪಿಸಿದನು.

'ಬ' ಇವನು ತನ್ನ ತಂದೆಯ ಬೇಕರಿ ಉತ್ಪಾದನೆಯನ್ನು ಗೋವಾದಿಂದ ಮಹಾರಾಷ್ಟ್ರದಲ್ಲಿ ತರಬೇಕೆಂದು ನಿರ್ಧರಿಸಿದನು.

'ಕ' ವ್ಯಕ್ತಿಗೆ ಸರಕಾರದ ಹೊಸ ಕರ ವಿಷಯಕ ನೀತಿಯಲ್ಲಿ ನ್ಯೂನತೆಗಳು ಕಂಡುಬಂದುವು. ಆ ವಿಷಯದಲ್ಲಿ ಆ ವ್ಯಕ್ತಿಯು ಒಂದು ಲೇಖನವನ್ನು ಬರೆದು ವರ್ತಮಾನ ಪತ್ರದ ಕಡೆಗೆ ಕಳಿಸಿಕೊಟ್ಟನು.



**ಗೊತ್ತಿದೆಯೇ ನಿಮಗೆ?**

ಸಂವಿಧಾನವು ನಮಗೆ ಅನೇಕ ಹಕ್ಕುಗಳನ್ನು ನೀಡಿದೆ. ಆದರೆ ಅವುಗಳ ಉಪಯೋಗವನ್ನು ಬೇಜವಾಬ್ದಾರಿಯಿಂದ ಮಾಡಲು ಬರುವುದಿಲ್ಲ. ಈ ರೀತಿಯ ವರ್ತನೆಯಿಂದ ಮತ್ತೊಬ್ಬರಿಗೆ ಹಾನಿಯಾಗಬಾರದು ಎಂಬ ಪ್ರಜ್ಞೆ ನಮಗಿರಬೇಕು. ನಮಗೆ ಮಾತನಾಡುವ ಹಕ್ಕು ಇದೆ. ಆದರೆ ಉದ್ರೇಕಗೊಳಿಸುವ ಲೇಖನ ಇಲ್ಲವೆ ಭಾಷಣವನ್ನು ಮಾಡಲು ಬರುವುದಿಲ್ಲ.

ಸಂವಿಧಾನದಲ್ಲಿಯ ಸ್ವಾತಂತ್ರ್ಯದ ಹಕ್ಕು ನಮಗೆ ಕೇವಲ ಸಂಚಾರ ಮಾಡುವ ಅಥವಾ ಮಾತನಾಡುವ ಸ್ವಾತಂತ್ರವನ್ನಷ್ಟೇ ನೀಡಿಲ್ಲ. ಆದರೆ ನಾವು ಸುರಕ್ಷಿತವಾಗಿ ಇರಬೇಕು ಎಂಬುದಕ್ಕಾಗಿ ನಮಗೆ ಸಂರಕ್ಷಣೆಯನ್ನೂ ನೀಡಿದೆ. ಕಾನೂನಿನ ಈ ಸಂರಕ್ಷಣೆಯನ್ನು ಸರ್ವರಿಗೂ ಸಮಾನರೀತಿಯಿಂದ ನೀಡಿದೆ. ಅದನ್ನು ಯಾರಿಗೂ ನಿರಾಕರಿಸಲು ಬರುವುದಿಲ್ಲ. ಉದಾ. ನಮ್ಮೆಲ್ಲರಿಗೆ ಜೀವಿಸುವ ಹಕ್ಕು ಇದೆ. ಮೇಲು ಮೇಲೆ ಈ ಹಕ್ಕು ಸುಲಭವೆನಿಸುತ್ತದೆ. ಆದರೆ ಅದರಲ್ಲಿ ಬಹಳಷ್ಟು ಅರ್ಥ ಹುದುಗಿದೆ. ಜೀವಿಸುವ ಭರವಸೆ ದೊರೆಯುವುದು, ಜೀವಿಸುವುದಕ್ಕಾಗಿ ಪೋಷಕ ವಾತಾವರಣವಿರುವುದು ಎಂಬುದು ಇದರ ಅರ್ಥವಾಗಿದೆ. ಯಾವುದೇ ವ್ಯಕ್ತಿಯ ಜೀವನವನ್ನು ಯಾರಿಗೂ ಕಸಿದುಕೊಳ್ಳಲು ಬರುವುದಿಲ್ಲ. ಕಾರಣವಿಲ್ಲದೆ ಯಾವುದೇ ವ್ಯಕ್ತಿಯನ್ನು ಬಂಧಿಸಲು ಬರುವುದಿಲ್ಲ.

ಸ್ವಾತಂತ್ರದ ಹಕ್ಕುಗಳಲ್ಲಿ ಶಿಷವಾದ ಹಕ್ಕನ್ನೂ ಕೂಡಾ ಸಮಾವೇಶ ಮಾಡಲಾಗಿದೆ. 6 ರಿಂದ 14 ವಯೋಮಾನದಲ್ಲಿಯ ಎಲ್ಲ ಬಾಲಕ-ಬಾಲಕಿಯರಿಗೆ ಶಿಷನಾವನ್ನು ಪಡೆಯುವ ಮೂಲಭೂತ ಹಕ್ಕು ಇದೆ. ಈ ಹಕ್ಕಿನಿಂದಾಗಿ ಶಿಷನಾದಿಂದ ವಂಚಿತಯಮಾದಿಲ್ಲ.



**ಯೋಚನೆ ಮಾಡಿರಿ.**

ಜೀವನವನ್ನು ಕಸಿದುಕೊಳ್ಳಲು ಬರದೇ ಇರುವ ಈ ಹಕ್ಕಿಗೆ ಇನ್ನೂ ಕೆಲವು ಪೂರಕ ಹಕ್ಕುಗಳಿವೆ. ಉದಾ. ಒಂದೇ ಅಪರಾಧಕ್ಕಾಗಿ ಎರಡು ಸಲ ಶಿಕ್ಷೆಯಾಗುವುದಿಲ್ಲ. ಯಾವುದೇ ವ್ಯಕ್ತಿಯನ್ನು ಶಿಕ್ಷಿಸುವ ಮೊದಲು ಅವನ ಮೇಲಿರುವ ಅಪಾದನೆ ಸಿದ್ಧವಾಗಬೇಕಾಗುತ್ತದೆ. ಈ ಕಾರ್ಯವನ್ನು ನ್ಯಾಯಾಲಯವುಮಾಡುತ್ತದೆ. ಆಪಾದನೆಗೆ ಸಂಬಂಧಿಸಿದ ಪುರಾವೆಗಳನ್ನು ಸಂಗ್ರಹಿಸುವ ಮತ್ತು ಮೊಕದ್ದಮೆಯನ್ನು ಹೂಡುವ ಕೆಲಸವನ್ನು ಪೋಲೀಸರು ಮಾಡುತ್ತಾರೆ. 'ನಾನು ಅಫರಾಧ ಮಾಡಿದ್ದೇನೆ' ಎಂದು ಹೇಳುವ ವ್ಯಕ್ತಿಗೂ ತಕ್ಷಣ ಶಿಕ್ಷೆ ವಿಧಿಸಲಾಗು ತವುದಿಲ್ಲ. ಆ ವ್ಯಕ್ತಿಯ ಮೇಲಿರುವ ಆಪಾದನೆಗಳು ಕಾನೂನಿನಿಂದ ಸಿದ್ಧವಾಗಬೇಕಾಗುತ್ತವೆ. ನ್ಯಾಯಾಲಯದ ಈ ಪ್ರಕ್ರಿಯೆಗೆ ತುಂಬಾ ಅವಧಿ ತಗಲುತ್ತದೆ. ಆದರೆ ಯಾವುದೇ ನಿಷ್ಪಾಪ ಇಲ್ಲವೆ ಅಪರಾಧ ಮಾಡದ ವ್ಯಕ್ತಿಗೆ ಶಿಕ್ಷೆಯಾಗಬಾರದೆಂಬುವ ಸಲುವಾಗಿ ಇದು ಅವಶ್ಯಕವಾಗಿರುತ್ತದೆ.

**ಶೋಷಣೆಯ ವಿರುದ್ಧದ ಹಕ್ಕು:** ಶೋಷಣೆಯನ್ನು ನಿಲ್ಲಿಸುವ ಸಲುವಾಗಿ ಶೋಷಣೆಗೆ ಬಲಿಯಾಗಬಾರದೆನ್ನುವ, ನಮ್ಮ ಶೋಷಣೆಯಾಗ ಗೊಡಲಾರದ ಹಕ್ಕು ಎಂದರೆ ಶೋಷಣೆಯ ವಿರುದ್ಧದ ಹಕ್ಕು ಹೌದು.

ಸಂವಿಧಾನವು ಒಂದೆಡೆ ಶೋಷಣೆಯ ವಿರುದ್ಧದ ಹಕ್ಕಿನಿಂದ ಶೋಷಣೆ ಮಾಡುವ ಎಲ್ಲ ಪ್ರಕಾರಗಳನ್ನು ನಿಷೇಧಿಸಿದೆ. ಇನ್ನೊಂದೆಡೆ ಮಕ್ಕಳ ಶೋಷಣೆಯನ್ನು ನಿಲ್ಲಿಸುವ ಸಲುವಾಗಿ ವಿಶೇಷ ಏರ್ಪಾಟು ಮಾಡಿದೆ. ಅದಕ್ಕನುಸಾರವಾಗಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಅಪಾಯಕಾರಿ ಸ್ಥಳಗಳಲ್ಲಿ ದುಡಿಮೆಗೆ ಇಟ್ಟು ಕೊಳ್ಳುವುದನ್ನು ನಿರ್ಬಂಧಿಸಿದೆ. ಕಾರ್ಖಾನೆ, ಗಣಿ ಮುಂತಾದ ಸ್ಥಳಗಳಲ್ಲಿ ಮಕ್ಕಳನ್ನು ನೇಮಿಸಿ ಅವರಕಡೆಯಿಂದ ಕೆಲಸವನ್ನು ಮಾಡಿಸಿಕೊಳ್ಳಲು ಬರುವುದಿಲ್ಲ.

ಜೀತದಾಳಿನಂತೆ ಇಲ್ಲವೆ ಒತ್ತಾಯದಿಂದ ಯಾವುದೊಂದು ವ್ಯಕ್ತಿಯ ಕಡೆಯಿಂದ ಅವನ ಇಚ್ಛೆಯ ವಿರುದ್ಧ ಕೆಲಸ ಮಾಡಿಸಿಕೊಳ್ಳುವುದು, ಕೆಲವು ವ್ಯಕ್ತಿಗಳನ್ನು ಗುಲಾಮರಂತೆ ನಡೆಸಿಕೊಳ್ಳುವುದು, ಅವರಿಗೆ ಅವರ ಕೆಲಸದ ಯೋಗ್ಯ ಪ್ರತಿಫಲವನ್ನು ಕೊಡದೇ ಇರುವುದು, ಅವರನ್ನು ಅತಿಯಾಗಿ ದುಡಿಸಿಕೊಳುವುದು, ಅವರನ್ನು ಅರೆಹೊಟ್ಟೆ ಇಡುವುದು, ಇಲ್ಲವೆ ಅವರ ಮೇಲೆ ಅನ್ಯಾಯ, ಒತ್ತಾಯ ಮಾಡುವುದು. ಇದು ಶೋಷಣೆಯ ಪ್ರಕಾರಗಳಾಗಿವೆ. ಸಾಮಾನ್ಯವಾಗಿ ಮಹಿಳೆಯರ, ಮಕ್ಕಳ, ದುರ್ಬಲ ಸಮಾಜ ಘಟಕಗಳ ಮತ್ತು ಅಧಿಕಾರಹೀನ ಜನರ ಶೋಷಣೆಯಾಗುತ್ತದೆ. ಶೋಷಣೆ ಯಾವುದೇ ಪ್ರಕಾರದ್ದಿರಲಿ ಅದರ ವಿರುದ್ಧ ನಿಲ್ಲುವ ಹಕ್ಕು ಇದಾಗಿದೆ.



**ಬನ್ನಿ, ಚರ್ಚಿಸೋಣ.**

- ಇಲ್ಲಿ ಬಾಲಕಾರ್ಮಿಕರು ಕೆಲಸ ಮಾಡುವುದಿಲ್ಲ.
- ಇಲ್ಲಿ ಕಾರ್ಮಿಕರಿಗೆ ಪ್ರತಿದಿನ ವೇತನ ನೀಡಲಾಗುತ್ತದೆ.

ಇಂಥ ಫಲಕಗಳನ್ನು ನೀವು ಅಂಗಡಿಗಳಲ್ಲಿ ಮತ್ತು ಹೊಟೇಲುಗಳಲ್ಲಿ ನೋಡುತ್ತೀರಿ. ಆ ಫಲಕಗಳ ಮತ್ತು ಸಂವಿಧಾನದಲ್ಲಿಯ ಹಕ್ಕುಗಳ ಸಂಬಂಧ ಏನಿರಬಹುದು?



**ಬನ್ನಿ ಚರ್ಚಿಸೋಣ.**

ಶೋಷಣೆಯಾಗಬಾರದು ಮತ್ತು ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಸ್ವಾತಂತ್ರ್ಯವನ್ನು ಅನುಭವಿಸಲು ಬರಬೇಕೆಂದು ಸರಕಾರವು ಅನೇಕ ಕಾನೂನುಗಳನ್ನು ಮಾಡಿದೆ. ಕೆಲವು ಕಾನೂನುಗಳ ಉಲ್ಲೇಖವನ್ನು ಇಲ್ಲಿ ಮಾಡಲಾಗಿದೆ. ಇವುಗಳಲ್ಲದೆ ಮತ್ತೆ ಯಾವ ಕಾನೂನುಗಳಿವೆಂಬುದನ್ನು ಹುಡುಕಿರಿ ಮತ್ತು ಅವುಗಳ ಬಗ್ಗೆ ಚರ್ಚಿಸಿರಿ.

- ಕನಿಷ್ಠ ವೇತನ ಕಾನೂನು – ಕಾರ್ಖಾನೆಯಲ್ಲಿಯ ಕೆಲಸದ ತಾಸುಗಳು, ವಿಶ್ರಾಂತಿಯ ಸಮಯ – ಇವುಗಳ ಬಗೆಗಿರುವ ನಿಯಮಗಳು
- ಮಹಿಳೆಯರಿಗೆ ಕೌಟುಂಬಿಕ ಹಿಂಸೆಯಿಂದ ಸಂರಕ್ಷಣೆ ನೀಡುವ ಕಾನೂನು. ..................

ಭಾರತದ ಸಂವಿಧಾನದಲ್ಲಿಯ ಸಮಾನತೆಯ, ಸ್ವಾತಂತ್ರ್ಯದ ಮತ್ತು ಶೋಷಣೆಯ ವಿರುದ್ಧದ ಹಕ್ಕುಗಳ ಅಭ್ಯಾಸವನ್ನು ನಾವು ಇಲ್ಲಿ ಮಾಡಿದೆವು. ಮುಂದಿನ ಪಾಠದಲ್ಲಿ ನಾವು ಇನ್ನೂ ಕೆಲವು ಮೂಲಭೂತ ಹಕ್ಕುಗಳ ಅಭ್ಯಾಸ ಮಾಡುವವರಿದ್ದೇವೆ.

C12V8G



## ಅಭ್ಯಾಸ

**1. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) ಮೂಲಭೂತ ಹಕ್ಕು ಎಂದರೇನು?

(2) ವಿವಿಧ ಕ್ಷೇತ್ರಗಳಲ್ಲಿ ಗೌರವಾಸ್ಪದ ಕಾರ್ಯ ಮಾಡುವವರಿಗೆ ಸರಕಾರವು ಯಾವ ಯಾವ ಪದವಿ/ಪದಕಗಳನ್ನು ನೀಡುತ್ತದೆ?

(3) 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಅಪಾಯಕಾರಿ ಸ್ಥಳಗಳಲ್ಲಿ ದುಡಿಮೆಗೆ ಇಟ್ಟುಕೊಳ್ಳಲು ಏಕೆ ನಿರ್ಬಂಧಿಸಿದೆ?

(4) ಸಂವಿಧಾನವು ಭಾರತದಲ್ಲಿಯ ಸರ್ವನಾಗರಿಕರಿಗೆ ಸಮಾನ ಹಕ್ಕುಗಳನ್ನು ಏಕೆ ನೀಡಿದೆ?

**2.** 'ಸ್ವಾತಂತ್ರ್ಯದ ಹಕ್ಕು' ಈ ವಿಷಯದ ಮೇಲೆ ಒಂದು ಚಿತ್ರ ಪಟ್ಟಿಯನ್ನು ತಯಾರಿಸಿರಿ.

**3. ಕೆಳಗಿನ ವಾಕ್ಯಗಳನ್ನು ತಿದ್ದಿ ಮತ್ತೆ ಬರೆಯಿರಿ.**

(1) ಯಾವುದೇ ವ್ಯಕ್ತಿಗೆ ಹಕ್ಕುಗಳು ಜನ್ಮತಃ ಪ್ರಾಪ್ತವಾಗುವುದಿಲ್ಲ.

(2) ಸರಕಾರ ನೌಕರಿಗಳನ್ನು ನೀಡುವಾಗ ಸರಕಾರವು ಧರ್ಮ, ಲಿಂಗ ಜನ್ಮಸ್ಥಳ ಇವುಗಳ ಮೇಲೆ ಆಧಾರಿತ ಭೇದಭಾವ ಮಾಡಿ ನಿಮ್ಮನ್ನು ನೌಕರಿಯಿಂದ ದೂರವಿರಿಸಬಹುದು.

**4.** ಕೆಳಗಿನ ಕಲ್ಪನಾಚಿತ್ರವನ್ನು ಪೂರ್ಣಮಾಡಿರಿ.

ಸ್ವಾತಂತ್ರ್ಯದ ಹಕ್ಕು

| ಭಾಷಣ ಸ್ವಾತಂತ್ರ್ಯ | ........ | ........ | ಸಂಚಾರ ಸ್ವಾತಂತ್ರ್ಯ | ........ | ಉದ್ಯೋಗ ಸ್ವಾತಂತ್ರ್ಯ |
|---|---|---|---|---|---|

**ಉಪಕ್ರಮ:**

(1) ಮಾಹಿತಿಯ ಅಧಿಕಾರ, ಶಿಕ್ಷಣದ ಅಧಿಕಾರ ಮುಂತಾದ ಕೆಲವು ಮಹತ್ವದ ಅಧಿಕಾರಗಳ ಬಗ್ಗೆ ವರ್ತಮಾನ ಪತ್ರಗಳಲ್ಲಿ ಬಂದ ಸುದ್ದಿಗಳನ್ನು ಸಂಗ್ರಹಿಸಿರಿ.

(2) ನಿಮ್ಮ ಪರಿಸರದಲ್ಲಿ ಕಟ್ಟಡಗಳ ನಿರ್ಮಾಣಕಾರ್ಯ ನಡೆದಿರುವಾಗ ಒಂದುವೇಳೆ ಅಲ್ಲಿ ಚಿಕ್ಕಮಕ್ಕಳು ಕೆಲಸ ಮಾಡುತ್ತಿರುವುದು ಕಂಡುಬಂದರೆ ಆ ಮಕ್ಕಳ ಮತ್ತು ಅವರ ಪೋಷಕರ ಜೊತೆ ಮಾತನಾಡಿ ಅವರ ಸಮಸ್ಯೆಗಳನ್ನು ತಿಳಿದುಕೊಳ್ಳಿರಿ ಹಾಗೂ ಆ ಸಮಸ್ಯೆಗಳನ್ನು ವರ್ಗದಲ್ಲಿ ಸಾದರಪಡಿಸಿರಿ.

# 5. ಮೂಲಭೂತ ಹಕ್ಕುಗಳು ಭಾಗ – 2

ಹಿಂದಿನ ಪಾಠದಲ್ಲಿ ನಾವು ಭಾರತೀಯ ಸಂವಿಧಾನವು ನೀಡಿದ ಕೆಲವು ಮೂಲಭೂತ ಹಕ್ಕುಗಳ ಅಭ್ಯಾಸ ಮಾಡಿದೆವು. ಸ್ವಾತಂತ್ರ್ಯ, ಸಮಾನತೆಗಳ ಜೊತೆ ಶೋಷಣೆಯ ವಿರುದ್ಧದ ಹಕ್ಕನ್ನು ನಾವು ಅಭ್ಯಸಿಸಿದೇವು. ಈ ಪಾಠದಲ್ಲಿ ನಾವು ಧಾರ್ಮಿಕ ಸ್ವಾಂತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳಿಗಿರುವ ನ್ಯಾಯಾಲಯದ ಸಂರಕ್ಷಣೆಯ ಬಗ್ಗೆಯೂ ಮಾಹಿತಿ ಪಡೆಯುವರಿದ್ದೇವೆ.

**ಧಾರ್ಮಿಕ ಸ್ವಾತಂತ್ರ್ಯದ ಹಕ್ಕು:** ಭಾರತವು ಜಗತ್ತಿನಲ್ಲಿಯ ಒಂದು ಮಹತ್ವದ ಧರ್ಮನಿರಪೇಕ್ಷ ರಾಷ್ಟ್ರವಾಗಿದೆ ಯೆಂಬುದು ನಮಗೆ ಗೊತ್ತಿದೆ. ಹಿಂದಿನ ಇಯತ್ತೆ ಯಲ್ಲಿಯೂ ನಾವು ಇದನ್ನು ಅಭ್ಯಸಿಸಿದ್ದೇವೆ. ಆದರೆ ಆ ವಿಷಯದಲ್ಲಿ ಸಂವಿಧಾನದಲ್ಲಿ ಏನನ್ನು ಬರೆಯಲಾಗಿದೆಯೆಂಬುದನ್ನು ತಿಳಿದುಕೊಳ್ಳುವ ಉತ್ಸುಕತೆ ನಿಮಗೆ ಇರುವುದಲ್ಲವೇ? ಆ ಉಲ್ಲೇಖವು ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನಿಲ್ಲಿದೆ. ಅದಕ್ಕನುಸಾರವಾಗಿ ಭಾರತದಲ್ಲಿಯ ಪ್ರತಿಯೊಬ್ಬ ನಾಗರಿಕನಿಗೆ ಯಾವುದೇ ಧರ್ಮದ ಉಪಾಸನೆ ಮಾಡುವ ಹಾಗೂ ಧಾರ್ಮಿಕ ಕಾರಣಗಳಿಗಾಗಿ ಸಂಸ್ಥೆ ಸ್ಥಾಪಿಸುವ ಹಕ್ಕು ಇದೆ.

ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಇನ್ನೂ ವ್ಯಾಪಕಗೊಳಿಸುವುದಕ್ಕಾಗಿ ಧಾರ್ಮಿಕ ವಿಷಯದಲ್ಲಿ ಇನ್ನೂ ಎರಡು ಸಂಗತಿಗಳಿಗೆ ಸಂವಿಧಾನವು ಅನುಮತಿ ನೀಡಲಿಲ್ಲ. (1) ವಿಶಿಷ್ಟ ಧರ್ಮಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಯಾವ ತೆರಿಗೆಯ ಉಪಯೋಗ ಮಾಡಲಾಗುವುದೋ ಅಂಥ ತೆರಿಗೆಯನ್ನು ಸರಕಾರಕ್ಕೆ ಹೇರಲು ಬರುವುದಿಲ್ಲ, ಸ್ವಲ್ಪದರಲ್ಲಿ ಹೇಳುವುದಾದರೆ ಧಾರ್ಮಿಕ ತೆರಿಗೆಯನ್ನು ಹೆರಲು ಸಂವಿಧಾನವು ಪ್ರತಿಬಂಧಿಸುತ್ತದೆ. (2) ಸರಕಾರದ ಆರ್ಥಿಕ ನೆರವನ್ನು ಪಡೆಯುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕಡ್ಡಾಯ ಮಾಡಲು ಬರುವುದಿಲ್ಲ.

**ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು:** ಹಬ್ಬ, ಉತ್ಸವ, ಆಹಾರ ಮತ್ತು ಜೀವನಶೈಲಿ ಮುಂತಾದವುಗಳ ವಿಷಯದಲ್ಲಿ ನಮ್ಮ ದೇಶದಲ್ಲಿ ಸಾಕಷ್ಟು ವಿವಿಧತೆ ಇದೆಯೆಂಬುದನ್ನು ನಾವು ನೋಡುತ್ತೇವೆ. ನೀವು ಲಗ್ನ ಸಮಾರಂಭಗಳನ್ನು ನೋಡಿದ್ದೀರಿ. ಅವುಗಳಲ್ಲಿಯ ಭಿನ್ನತೆಯು ನಿಮ್ಮ ಗಮನಕ್ಕೆ ಬಂದಿರಬಹುದು. ಈ ಎಲ್ಲ ಸಂಗತಿಗಳು ಆಯಾ ಜನಸಮೂಹಗಳ ಸಂಸ್ಕೃತಿಯ ಭಾಗವಾಗಿರುತ್ತವೆ. ನಮ್ಮ ಸಂವಿಧಾನವು ವಿವಿಧ ಜನಸಮೂಹಗಳಿಗೆ ತಮ್ಮ ಸಾಂಸ್ಕೃತಿಕ ಭಿನ್ನತೆಯನ್ನು ಕಾಪಾಡುವ ಹಕ್ಕನ್ನು ನೀಡಿದೆ. ಅದಕ್ಕನುಸಾರವಾಗಿ ನಮ್ಮ ಭಾಷೆ, ಲಿಪಿ, ಸಾಹಿತ್ಯ ಇವುಗಳನ್ನು ಕಾಪಾಡಲು ಬರುತ್ತದಷ್ಟೇ ಅಲ್ಲ, ಅದರ ಜೊತೆಗೆ ಅವುಗಳ ಸಂವಿಧಾನಕ್ಕಾಗಿ ಪ್ರಯತ್ನವನ್ನೂ ಮಾಡಲು ಬರುತ್ತದೆ. ಭಾಷೆಯ ವಿಕಾಸಕಸ್ಕಾಗಿ ಸಂಸ್ಥೆಗಳನ್ನು ಸ್ಥಾಪಿಸಲು ಬರುತ್ತದೆ.

**ಹುಡುಕಿರಿ ಹಾಗೂ ಚರ್ಚಿಸಿರಿ.**

- ಸಂವಿಧಾನವು ಎಷ್ಟು ಭಾಷೆಗಳಿಗೆ ಮಾನ್ಯತೆ ನೀಡಿದೆ.
- ಮರಾಠಿ ಭಾಷೆಯ ಏಳಿಗೆಗಾಗಿ ಮಹಾರಾಷ್ಟ್ರ ಸರಕಾರವು ಯಾವ ಸಂಸ್ಥೆಗಳನ್ನು ನಿರ್ಮಿಸಿದೆ?



**ಬನ್ನಿ, ಚರ್ಚಿಸೋಣ.**

ಮಹಾರಾಷ್ಟ್ರದಲ್ಲಿ ಸರಕಾರದ ಮತ್ತು ನ್ಯಾಯಾಲಯದ ಎಲ್ಲ ಕಾರ್ಯಕಲಾಪಗಳನ್ನು ಮರಾಠಿಯಲ್ಲಿ ನಡೆಸಬೇಕೆಂದು ನಿಮಗೆ ಅನಿಸುತ್ತದೆಯೇ? ಅದಕ್ಕಾಗಿ ಏನು ಮಾಡಬೇಕಾಗುತ್ತದೆ?

**ಸಂವಿಧಾನಾತ್ಮಕ ಉಪಾಯಯೋಜನೆಗಳ ಹಕ್ಕು:** ಹಕ್ಕುಗಳ ಭಂಗವಾದರೆ ನ್ಯಾಯಾಲಯದಿಂದ ಪರಿಹಾರ ಪಡೆಯುವ ಹಕ್ಕಿದೆ. ಇದುಕೂಡಾ ಮೂಲಭೂತ ಹಕ್ಕಾಗಿದೆ. ಅದಕ್ಕೆ ಸಂವಿಧಾನಾತ್ಮಕ ಉಪಾಯ ಯೋಜನೆಗಳ ಹಕ್ಕು ಎಂದು ಕರೆಯುತ್ತಾರೆ. ಇದರರ್ಥ ಹಕ್ಕುಭಂಗದ ವಿರುದ್ಧ ನ್ಯಾಯಾಲಯದಿಂದ ಪರಿಹಾರವನ್ನು ಪಡೆಯುವ ವಿಷಯದಲ್ಲಿಯ ಏರ್ಪಾಟನ್ನು ಸಂವಿಧಾನವೇ ಮಾಡಿದೆ. ಅದಕ್ಕನುಸಾರ ನ್ಯಾಯಾಲಯಕ್ಕೂ ಹಕ್ಕುಗಳ ಸಂರಕ್ಷಣೆ ಮಾಡುವುದು ಬಂಧನಕಾರಕವಾಗುತ್ತದೆ.

ಸಂವಿಧಾನವು ನೀಡಿದ ಹಕ್ಕುಗಳ ಮೇಲೆ ಕೆಲವೊಮ್ಮೆ ಅತಿಕ್ರಮಣವಾಗಬಹುದು ಹಾಗೂ ಆ ಹಕ್ಕುಗಳನ್ನು ನಮಗೆ ಉಪಯೋಗಿಸಲು ಬರುವುದಿಲ್ಲ, ಇದಕ್ಕೇನೆ ನಾವು ನಮ್ಮ ಹಕ್ಕುಗಳ ಭಂಗವಾಯಿತು ಎನ್ನುತ್ತೇವೆ. ಹಕ್ಕುಭಂಗ ವಿಷಯದ ನಮ್ಮ ದೂರನ್ನು ನ್ಯಾಯಾಲಯವು ಗಮನಿಸುತ್ತದೆ. ಅದನ್ನು ಪ್ರಮಾಣೀಕರಿಸುತ್ತದೆ. ನಿಜವಾಗಿಯೂ ಹಕ್ಕುಭಂಗವಾಗಿದೆ ಅಥವಾ ಸಂಬಂಧಿತ ವ್ಯಕ್ತಿಯ ಮೇಲೆ ಅನ್ಯಾಯವಾಗಿದೆಯೆಂದು ನ್ಯಾಯಾಲಯಕ್ಕೆ ಅನಿಸಿದರೆ ನ್ಯಾಯಾಲಯವು ಯೋಗ್ಯ ತೀರ್ಪು ನೀಡುತ್ತದೆ.

**ಹಕ್ಕುಭಂಗದ ಕೆಲವು ಪ್ರಕಾರಗಳು :**

- ವಿನಾಕಾರಣ ಯಾವುದೊಬ್ಬ ವ್ಯಕ್ತಿಯನ್ನು ಬಂಧಿಸುವುದು.
- ಯೋಗ್ಯಕಾರಣವಿಲ್ಲದೆ ಯಾವುದೊಬ್ಬ ವ್ಯಕ್ತಿಗೆ ಪಟ್ಟಣವನ್ನು/ಊರನ್ನು ಬಿಡಲು ಪ್ರತಿಬಂಧಿಸುವುದು.
- ಸೆರೆಮನೆಯಲ್ಲಿಯ ಕೈದಿಗಳಿಗೆ ಅನ್ನ, ನೀರು ಹಾಗೂ ಔಷಧೋಪಚಾರಗಳನ್ನು ನಿರಾಕರಿಸುವುದು.

**ಹಕ್ಕುಭಂಗವನ್ನು ದೂರ ಮಾಡುವ ಸಲುವಾಗಿ ನ್ಯಾಯಾಲಯದ ಆದೇಶ:**

ನಾಗರಿಕರ ಹಕ್ಕುಗಳ ಸಂರಕ್ಷಣೆ ಮಾಡುವ ಸಲುವಾಗಿ ವಿವಿಧ ಆದೇಶಗಳನ್ನು ನೀಡುವ ಅಧಿಕಾರವು ನ್ಯಾಯಾಲಯಕ್ಕಿದೆ.

(1) **ಬಂಧೀಪ್ರತ್ಯಕ್ಷೀಕರಣ (Habeas Corpus)** ಕಾನೂನು ಬಾಹಿರ ಬಂಧನ ಮತ್ತು ಸ್ಥಾನಬದ್ಧತೆ ಇವುಗಳಿಂದ ಸಂರಕ್ಷಣೆ.

(2) **ಪರಮಾದೇಶ (Mandamus)** ಜನಹಿತಕ್ಕಾಗಿ ಯಾವುದೊಂದು ಕೃತಿಯನ್ನು ಮಾಡುವ ಸಲುವಾಗಿ ನೀಡಲಾಗುವ ನ್ಯಾಯಾಲಯದ ಆಜ್ಞೆ

(3) **ಪ್ರತಿಬಂಧಕಾಜ್ಞೆ / (Prohibition):** ಕನಿಷ್ಠ ನ್ಯಾಯಾಲಯವು ತನ್ನ ಅಧಿಕಾರ ಕ್ಷೇತ್ರವನ್ನು ಬಿಟ್ಟು ವರ್ತಿಸಿದಂತೆ ಕೊಡುವ ಆಜ್ಞೆ

(4) **ಅಧಿಕಾರ ಪೃಚ್ಛಾ (Quo Warranto)** ಯಾವ ಅಧಿಕಾರಿಯು ಈ ಕೃತಿ ಮಾಡಿದನು. ಆ ಸರಕಾರಿ ಅಧಿಕಾರಿಯ ಕಡೆಗೆ ಸ್ಪಷ್ಟೀಕರಣ ಬೇಡುವ ನಾಯಾಲಯದ ಆದೇಶ.

(5) **ಉತ್ಪ್ರೇಕ್ಷಣ (Certiorari):** ಕನಿಷ್ಠ ನ್ಯಾಯಾಲಯವು ನೀಡಿದ ತೀರ್ಪನ್ನು ರದ್ದಗೊಳಿಸಿ ವರಿಷ್ಠ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ದಾಖಲು ಮಾಡುವ ಆದೇಶ

**ಸರಕಾರಿ ಅಧಿಕಾರಿಯ ಈ ಪ್ರತಿಕ್ರಿಯೆ ಯೋಗ್ಯವೊ, ಅಯೋಗ್ಯವೋ?**

ಯಾವುದೇ ಆಧಾರ ಇಲ್ಲದವರ ಸಲುವಾಗಿ ಇರುವ ಒಂದು ಯೋಜನೆಯ ಲಾಭವು ತನಗೆ ದೊರೆಯಬೇಕೆಂದು ಎಲ್ಲ ಅವಶ್ಯಕ ಕಾಗದಪತ್ರಗಳನ್ನು ಸಾದರಪಡಿಸುವ ಮಹಿಳೆಗೆ, 'ನೀನು ನಿರಾಧಾರ ಇದ್ದಂತೆ ಕಾಣಿಸುವುದಿಲ್ಲ, ಎಂದು ಹೇಳಿ ಅವಳಿಗೆ ದೊರೆಯುವ ಲಾಭವನ್ನು ನಿರಾಕರಿಸುವ ಸರಕಾರಿ ಅಧಿಕಾರಿಯ ಈ ಕೃತಿ ಯೋಗ್ಯವೋ, ಅಯೋಗ್ಯವೋ?

ಮೇಲಿನ ಪ್ರಸಂಗದಲ್ಲಿ ಮಹಿಳೆಯ ಹಕ್ಕುಭಂಗವಾಗಿದೆ ಎಂದು ನಿಮಗೆ ಅನಿಸುತ್ತದೆಯೇ? ಅವಳು ಪರಿಹಾರವನ್ನು ಪಡೆಯಬೇಕಾದರೆ ಎಲ್ಲಿ ಹೋಗಬೇಕು?



ನ್ಯಾಯಾಲಯದ ಕಾರ್ಯಕಲಾಪಗಳು

ಮೂಲಭೂತ ಹಕ್ಕುಗಳಿಗೆ ಈ ರೀತಿ ನ್ಯಾಯಾಲಯದ ಸಂರಕ್ಷಣೆ ಇರುವುದರಿಂದ ನಾಗರಿಕರಿಗೆ ತಮ್ಮ ಹಕ್ಕುಗಳನ್ನು ಯೋಗ್ಯರೀತಿಯಿಂದ ಉಪಯೋಗಿಸಲು ಬರುತ್ತದೆ. ಅವರು ಅಧಿಕ ಜಾಗರೂಕ, ಜವಾಬ್ದಾರ ಮತ್ತು ಕ್ರಿಯಾಶೀಲ ನಾಗರಿಕರೆಂದು ತಮ್ಮ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯವಾಗುತ್ತದೆ. ಮೂಲಭೂತ ಹಕ್ಕುಗಳ ವಿಚಾರ ಮಾಡುವಾಗ ನಾವು ನಮ್ಮ ಕರ್ತವ್ಯಗಳ ಕಡೆಗೆ ಗಮನವಿಡಬೇಕಾಗುತ್ತದೆ. ಅವುಗಳ ಅಭ್ಯಾಸವನ್ನು ನಾವು ಮುಂದಿನ ಪಾಠದಲ್ಲಿ ಮಾಡುವವರಿದ್ದೇವೆ.



## ಅಭ್ಯಾಸ

**1. ಉತ್ತರ ಬರೆಯಿರಿ.**

(1) ಧಾರ್ಮಿಕ ತೆರಿಗೆಯನ್ನು ಹೇರಲು ಸಂವಿಧಾನವು ಪ್ರತಿಬಂಧಿಸುತ್ತದೆ.

(2) ಸಂವಿಧಾನಾತ್ಮಕ ಉಪಾಯ ಯೋಜನೆಗಳ ಹಕ್ಕು ಎಂದರೇನು?

**2. ಯೋಗ್ಯ ಶಬ್ದವನ್ನು ಬರೆಯಿರಿ.**

(1) ಕಾನೂನು ವಿರುದ್ಧ ಬಂಧನ ಮತ್ತು ಸ್ಥಾನಬದ್ಧತೆ ಇವುಗಳಿಂದ ಸಂರಕ್ಷಣೆ –

(2) ಯಾವ ಸರಕಾರಿ ಅಧಿಕಾರಿಯು ಈ ಕೃತಿ ಮಾಡಿದನೋ ಈ ಸರಕಾರಿ ಅಧಿಕಾರಿಯ ಕಡೆಗೆ ಸ್ಪಷ್ಟೀಕರಿಣ ಬೇಡುವ ನ್ಯಾಯಾಲಯದ ಆದೇಶ –

(3) ಜನಹಿತಕ್ಕಾಗಿ ಯಾವುದೇ ಕೃತಿಯನ್ನು ಮಾಡುವ ಸಲುವಾಗಿ ನೀಡಲಾಗುವ ನ್ಯಾಯಾಲಯದ ಆಜ್ಞೆ –

(4) ಕನಿಷ್ಠ ನ್ಯಾಯಾಲಯವು ತನ್ನ ಅಧಿಕಾರ ಕ್ಷೇತ್ರವನ್ನು ಬಿಟ್ಟು ವರ್ತಿಸದಂತೆ ನೀಡುವ ಆಜ್ಞೆ –

**3. ನಾವು ಇದನ್ನು ಮಾಡುಬಹುದು, ಇದರ ಕಾರಣವನ್ನು ಮುಂದೆ ಬರೆಯಿರಿ.**

(1) ಸರ್ವ ಭಾರತೀಯ ನಾಗರಿಕರಿಗೆ ಎಲ್ಲ ಹಬ್ಬಗಳನ್ನು ಆನಂದಿಂದ ಆಚರಿಸಲು ಬರುತ್ತದೆ ಏಕೆಂದರೆ ........

(2) ನನಗೆ ಕನ್ನಡ ಭಾಷೆಯಲ್ಲಿ ಶಿಕ್ಷಣ ಪಡೆಯಲು ಬರುತ್ತದೆ. ಏಕೆಂದರೆ .............

**4. ಬಿಟ್ಟ ಸ್ಥಳಗಳಲ್ಲಿ ಯಾವ ಶಬ್ದಗಳನ್ನು ಬರೆಯಬೇಕು?**

(1) ಹಕ್ಕುಭಂಗ ವಿಷಯದ ನಮ್ಮ ದೂರನ್ನು........... ಗಮನಿಸುತ್ತದೆ.

(2) ಸರಕಾರದ ಆರ್ಥಿಕ ನೆರವನ್ನು ಪಡೆಯುವ ಕಾಲೆಗಳಲ್ಲಿ ............ ಶಿಕ್ಷಣ ವನ್ನು ಮಾಡಲು ಬರುವುದಿಲ್ಲ.

**ಉಪಕ್ರಮ:**

ನಿಮ್ಮ ಶಾಲೆಯಲ್ಲಿ ನ್ಯಾಯಾಧೀಶ, ವಕೀಲ ಮತ್ತು ಪೋಲೀಸ ಅಧಿಕಾರಿಗಳ ಸಂದರ್ಶನಗಳನ್ನು ಏರ್ಪಡಿಸಿರಿ.

C184P7

# 6. ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಕರ್ತವ್ಯಗಳು

ಹಿಂದಿನ ಪಾಠದಲ್ಲಿ ನಾವು ಸಂವಿಧಾನವು ನೀಡಿದ ಹಕ್ಕುಗಳ ಅಭ್ಯಾಸಮಾಡಿದೆವು. ಅದರಿಂದ ಭಾರತೀಯ ನಾಗರಿಕರಿಗೆ ಯಾವ ಹಕ್ಕುಗಳಿರುತ್ತವೆಯೆಂಬುದು ತಿಳಿಯಿತು. ಇಷ್ಟೇ ಅಲ್ಲದೆ ಹಕ್ಕುಗಳಿಗೆ ನ್ಯಾಯಾಲಯದ ಸಂರಕ್ಷಣೆ ಇರುತ್ತದೆಯೆಂಬುದನ್ನೂ ನಾವು ಕಲಿತೆವು. ನಮ್ಮ ವೈಯಕ್ತಿಕ ಮತ್ತು ಸಾರ್ವಜನಿಕ ಜೀವನದಲ್ಲಿಯ ಮೂಲಭೂತ ಹಕ್ಕುಗಳ ಮಹತ್ವವನ್ನೂ ನಾವು ಗಮನಿಸಿದೆವು. ಈ ಹಿನ್ನೆಲೆಯಲ್ಲಿ ನಾವು ನಿರ್ದೇಶಕ ತತ್ವಗಳಿಂದರೇನು ಎಂಬುದನ್ನು ತಿಳಿದುಕೊಳ್ಳೋಣ.

ಮೂಲಭೂತ ಹಕ್ಕುಗಳು ಸರಕಾರದ ಅಧಿಕಾರಗಳ ಮೇಲೆ ನಿರ್ಬಂಧ ಹಾಕುತ್ತವೆ. ಕೆಳಗಿನ ಸೂಚಿಕೆಯನ್ನು ಓದಿದರೆ ಸರಕಾರದ ಮೇಲೆ ಯಾವ ನಿರ್ಬಂಧಗಳಿರುತ್ತವೆಯೆಂಬುದು ತಿಳಿಯುವುದು ಉದಾ.

- ಸರಕಾರವು ನಾಗರಿಕರಲ್ಲಿ ಜಾತಿ, ಧರ್ಮ, ವಂಶ, ಭಾಷೆ ಮತ್ತು ಲಿಂಗ ಇವುಗಳ ಆಧಾರದ ಮೇಲೆ ಭೇದ ಮಾಡಬಾರದು.
- ಕಾನೂನಿನ ಎದುರಿಗಿನ ಸಮಾನತೆ ಮತ್ತು ಕಾನೂನಿನ ಸಮಾನ ಸಂರಕ್ಷಣೆಯನ್ನು ಯಾರಿಗೂ ನಿರಾಕರಿಸಬಾರದು.
- ಯಾವುದೇ ವ್ಯಕ್ತಿಯ ಜೀವನವನ್ನು ಕಸಿದುಕೊಳ್ಳಬಾರದು.
- ಧಾರ್ಮಿಕ ತೆರಿಗೆಗಳನ್ನು ಹೇರಬಾರದು.

ಸರಕಾರವು ಏನು ಮಾಡಬೇಕು ಎಂಬ ವಿಷಯದಲ್ಲಿಯ ಕೆಲವು ಸೂಚನೆಗಳನ್ನು ಸಂವಿಧಾನವು ಸ್ಪಷ್ಟಪಡಿಸಿದೆ. ಈ ಸೂಚನೆಗಳ ಉದ್ದೇಶವೇನೆಂದರೆ ಸಂವಿಧಾನದ ಉದ್ದೇಶಪತ್ರಿಕೆಯಲ್ಲಿ ಸ್ಪಷ್ಟಪಡಿಸಲಾದ ಉದ್ದೇಶಗಳನ್ನು ಪ್ರಾಪ್ತಮಾಡಿಕೊಳ್ಳುವ ಸಲುವಾಗಿ ಇರುವ ಮಾರ್ಗದರ್ಶನ ಹೌದು. ಆದ್ದರಿಂದಲೇ ಈ ಸೂಚನೆಗಳಿಗೆ 'ನಿರ್ದೇಶಕ ತತ್ವಗಳು' ಎಂದು ಕರೆಯಲಾಗುತ್ತದೆ.

### ನಿರ್ದೇಶಕ ತತ್ವಗಳನ್ನು ಏಕೆ ಸಮಾವೇಶಗೊಳಿಸಲಾಗಿದೆ?

ಭಾರತಕ್ಕೆ ಸ್ವಾತಂತ್ರ್ಯ ದೊರೆತ ಸಮಯದಲ್ಲಿ ಈ ದೇಶದಲ್ಲಿ ಸುವ್ಯವಸ್ಥೆಯನ್ನು ನಿರ್ಮಿಸುವ ಮತ್ತು ಸುಸೂತ್ರವಾಗಿ ರಾಜ್ಯಾಡಳಿತವನ್ನು ಮಾಡುವ ದೊಡ್ಡ ಆಹ್ವಾನವು ನಮ್ಮ ಮುಂದೆ ಇತ್ತು. ದಾರಿದ್ರ್ಯ, ಹಿಂದುಳಿಯುವಿಕೆ, ನಿರಕ್ಷರತೆಗಳನ್ನು ದೂರಮಾಡಿ ದೇಶವನ್ನು ಸುವ್ಯವಸ್ಥಿತಗೊಳಿಸಬೇಕಾಗಿತ್ತು. ರಾಷ್ಟ್ರನಿರ್ಮಾಣದ ಕಾರ್ಯ ಮಾಡಬೇಕಾಗಿತ್ತು. ಅದಕ್ಕಾಗಿ ಹೊಸಹೊಸ ನೀತಿಗಳನ್ನು ರೂಪಿಸುವುದು ಹಾಗೂ ಅವುಗಳನ್ನು ಜಾರಿಗೆ ತರುವುದು ಆವಶ್ಯಕವಾಗಿತ್ತು. ಜನತೆಯ ಕಲ್ಯಾಣದ ಉದ್ದೇಶವನ್ನು ಸಾಧಿಸಬೇಕಾಗಿತ್ತು. ಸ್ವಲ್ಪದರಲ್ಲಿ ಹೇಳುವುದಾದರೆ ಭಾರತವನ್ನು ಒಂದು ಹೊಸ ವಿಕಸಿತ ಮತ್ತು ಪ್ರಗತಿಶೀಲ ದೇಶವನ್ನಾಗಿ ರೂಪಾಂತರಗೊಳಿಸಬೇಕಾಗಿತ್ತು. ಅದರ ಸಲುವಾಗಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಯಾವ ವಿಷಯಗಳಿಗೆ ಪ್ರಾಧಾನ್ಯ ನೀಡಬೇಕು, ಜನತೆಯ ಕಲ್ಯಾಣಕ್ಕಾಗಿ ಯಾವ ಉಪಾಯ ಯೋಜನೆಗಳನ್ನು ಮಾಡಬೇಕು ಎಂಬುದನ್ನು ಸಂವಿಧಾನವು ನಿರ್ದೇಶಕ ತತ್ವಗಳ ಮೂಲಕ ಸ್ಪಷ್ಟಪಡಿಸಿದೆ. ಅವುಗಳನ್ನು ರಾಜ್ಯದ ನೀತಿಯ ಆಧಾರವನ್ನಾಗಿ ಮಾಡಿತು. ಪ್ರತಿಯೊಂದು ನಿರ್ದೇಶಕ ತತ್ವದಲ್ಲಿ ರಾಜ್ಯದ ನೀತಿಗಾಗಿ ಒಂದು ವಿಷಯವಿದೆ. ಆ ವಿಷಯಕ್ಕೆ ಸಂಬಂಧಿಸಿದಂತೆ ಹೊಸ ನೀತಿಗಳನ್ನು ರೂಪಿಸಬೇಕು ಎಂಬ ಅಪೇಕ್ಷೆಯನ್ನು ಸಂವಿಧಾನಕಾರರು ವ್ಯಕ್ತಪಡಿಸಿದ್ದಾರೆ. ಈ ಎಲ್ಲ ನೀತಿಗಳನ್ನು ಒಮ್ಮೆಲೇ ಮತ್ತು ಒಂದೇ ಕಾಲಕ್ಕೆ ಹಮ್ಮಿಕೊಳ್ಳುವುದಾದರೆ ಅದಕ್ಕಾಗಿ ಸಾಕಷ್ಟು ಆರ್ಥಿಕ ಬೆಂಬಲವಿರಬೇಕೆಂಬುದನ್ನು ಸಂವಿಧಾನಕಾರರು ಅರಿತ್ತಿದ್ದರು. ಆದ್ದರಿಂದಲೇ ಅವರು ಮೂಲಭೂತ ಹಕ್ಕುಗಳಂತೆ ನಿರ್ದೇಶಕ ತತ್ವಗಳನ್ನು ಸರಕಾರದ ಮೇಲೆ ಬಂಧನಕಾರಕವನ್ನಾಗಿ ಮಾಡಲ್ಲ, ರಾಜ್ಯಗಳು ನಿಧಾನವಾಗಿ ಹಾಗೂ ದೃಢವಾಗಿ ಅವುಗಳನ್ನು ಜಾರಿಗೊಳಿಸಬೇಕು ಎಂಬ ಅಪೇಕ್ಷೆಯನ್ನು ಅವರು ವ್ಯಕ್ತಪಡಿಸಿದರು.

### ಕೆಲವು ಮಹತ್ವದ ಮಾರ್ಗದರ್ಶಕ ತತ್ವಗಳು:

- ಸರಕಾರವು ಸಾರ್ವಜಕರಿಗೆ ಉಪಜೀವನದ ಸಾಧನವನ್ನು ದೊರಕಿಸಿಕೊಡಬೇಕು. ಆ ವಿಷಯದಲ್ಲಿ ಸ್ತ್ರೀ ಮತ್ತು ಪುರುಷ ಎಂಬ ಭೇದವನ್ನು ಮಾಡಬಾರದು.
- ಸ್ತ್ರೀ ಮತ್ತು ಪುರುಷರಿಬ್ಬರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು.
- ಜನತೆಯ ಆರೋಗ್ಯವನ್ನು ಸುಧಾರಿಸುವ ಸಲುವಾಗಿ ಉಪಾಯ ಯೋಜನೆ ಮಾಡಬೇಕು.
- ಪರಿಸರದ ರಕ್ಷಣೆ ಮಾಡಬೇಕು.
- ರಾಷ್ಟ್ರದ ದೃಷ್ಟಿಯಿಂದ ಮಹತ್ವದ ಸ್ಥಳಗಳ ಅಂದರೆ ಸ್ಮಾರಕಗಳ ಮತ್ತು ಕಟ್ಟಗಳ ಸಂರಕ್ಷಣೆ ಮಾಡಬೇಕು.
- ಸಮಾಜದಲ್ಲಿಯ ದುರ್ಬಲ ಘಟಕಗಳಿಗೆ ವಿಶೇಷ ಸಂರಕ್ಷಣೆ ನೀಡಿ ಅವರಿಗೆ ವಿಕಾಸದ ಅವಕಾಶಗಳನ್ನು ಉಪಲಬ್ಧ ಮಾಡಿ ಕೊಡಬೇಕು.
- ವೃದ್ಧಾಪ್ಯ, ದೌರ್ಬಲ್ಯ, ನಿರುದ್ಯೋಗ ಇತ್ಯಾದಿಗಳಿಂದ ನಾಗರಿಕರ ಸಂರಕ್ಷಣೆ ಮಾಡುವುದು.
- ಭಾರತದಲ್ಲಿಯ ಸರ್ವ ನಾಗರಿಕರಿಗಾಗಿ ಸಮಾನ ನಾಗರಿಕ ಕಾನೂನನ್ನು ಮಾಡಬೇಕು.



**ಹೇಳಿ ನೋಡೋಣ!**

ವೇತನದ ಸಂದರ್ಭದಲ್ಲಿ ‘ಸಮಾನ ಕೆಲಸಕ್ಕೆ ಸಮಾನ ವೇತನ’ ಎಂಬ ನಿರ್ದೇಶಕ ತತ್ವವಿದೆ. ಇದರಿಂದ ಸಂವಿಧಾನದಲ್ಲಿಯ ಯಾವ ಉದ್ದೇಶಗಳು ಸಾಧಿಸಲ್ಪಡುತ್ತವೆ. ಎಂದು ನಿಮಗೆ ಅನಿಸುತ್ತದೆ? ಸ್ತ್ರೀ-ಪುರುಷರು ಸಮಾನ ಕೆಲಸ ಮಾಡಿದರೂ ಪುರುಷರಿಗಿಂತ ಸ್ತ್ರೀಯರಿಗೆ ಕಡಿಮೆ ವೇತನವನ್ನು ನೀಡುವ ಪ್ರಕಾರಗಳು ಏಕೆ ಕಂಡುಬರುತ್ತವೆ?



**ಮಾಡಿ ನೋಡಿರಿ.**

ಮೇಲಿನ ನಿರ್ದೇಶಕ ತತ್ವಗಳನ್ನು ಬಿಟ್ಟು ಉಳಿದ ನಿರ್ದೇಶಕ ತತ್ವಗಳು ಸರಕಾರವು ಜನತೆಯ ಕಲ್ಯಾಣಕ್ಕಾಗಿ ಏನು ಮಾಡಬೇಕು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಕೆಳಗೆ ಕೆಲವು ವಿಷಯಗಳನ್ನು ಕೊಡಲಾಗಿದೆ. ಅವುಗಳಲ್ಲಿ ಯಾವ ನಿರ್ದೇಶಕ ತತ್ವಗಳಿವೆಯೆಂಬುದನ್ನು ಶಿಕ್ಷಕರ ಸಹಾಯದಿಂದ ಹುಡುಕಿರಿ.

ಉದಾ . ವಿದೇಶ ನೀತಿ: ಜಾಗತಿಕ ಶಾಂತಿ ಮತ್ತು ಸೌಹಾರ್ದಕ್ಕೆ ಪ್ರಾಧಾನ್ಯ.

(ಅ) ಹುಡುಗಿಯರ ಶಿಕ್ಷಣ : ..........................

(ಬ) ಆರೋಗ್ಯಕರ ಮತ್ತು ಆನಂದಮಯ ವಾತಾವರಣದಲ್ಲಿ ಮಕ್ಕಳ ಪಾಲನೆ-ಪೋಷಣೆ :...........

(ಕ) ಕೃಷಿ ಸುಧಾರಣೆ : ................................

ಮಾರ್ಗದರ್ಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳು ಒಂದೇ ನಾಣ್ಯದ ಎರಡು ಬದಿಗಳಾಗಿವೆ. ಮೂಲಭೂತ ಹಕ್ಕುಗಳಿಂದಾಗಿ ನಾಗರಿಕರಿಗೆ ಅತ್ಯಾವಶ್ಯಕವಾದ ಸ್ವಾತಂತ್ರ್ಯ ದೊರೆಯುತ್ತದೆ. ಆದರೆ ನಿರ್ದೇಶಕ ತತ್ವಗಳು ಪ್ರಜಾಪ್ರಭುತ್ವ ವೃದ್ಧಿಹೊಂದಲು ಪೋಷಕ ವಾತಾವರಣವನ್ನು ನಿರ್ಮಿಸುತ್ತವೆ. ಇದರರ್ಥ ಯಾವುದಾದರೊಂದು ನಿರ್ದೇಶಕ ತತ್ವವನ್ನು ಸರಕಾರವು ಜಾರಿಗೊಳಿಸದಿದ್ದರೆ ಅದರ ವಿರುದ್ಧ ನಮಗೆ ನ್ಯಾಯಾಲಯಕ್ಕೆ ಹೋಗಲು ಬರುವುದಿಲ್ಲ, ಆದರೆ ವಿವಿಧ ಮಾರ್ಗಗಳಿಂದ ಸರಕಾರದ ಮೇಲೆ ಒತ್ತಡ ತಂದು ನೀತಿಯನ್ನು ರೂಪಿಸುವ ಆಗ್ರಹವನ್ನು ನಾವು ಮಾಡಬಹುದು.

ಸರಕಾರವು ವಿದ್ಯಾರ್ಥಿಗಳಿಗಾಗಿ ಇನ್ನೂ ಏನು ಮಾಡಬೇಕೆಂದು ನಿಮಗೆ ಅನಿಸುತ್ತದೆ? ನಿಮ್ಮ ಬೇಡಿಕೆಗಳ ಒಂದು ಸೂಚಿಕೆಯನ್ನು ತಯಾರಿಸಿರಿ. ನೀವು ಮಾಡಿರುವ ಬೇಡಿಕೆಗಳು ಯೋಗ್ಯವಾಗಿವೆಂಬುದನ್ನು ನೀವು ಹೇಗೆ ಮನದಟ್ಟು ಮಾಡಿಕೊಡುವಿರಿ?

ಸರಕಾರದ ಈ ಸೌಲಭ್ಯಗಳಿಂದಾಗಿ ಯಾವ ಸುಧಾರಣೆಗಳಾಗಬಹುದೆಂದು ನಿಮಗೆ ಅನಿಸುತ್ತದೆ?

(ಅ) ಸಾರ್ವಜನಿಕ ಸ್ವಚ್ಛತಾಗೃಹಗಳು

(ಬ) ಸ್ವಚ್ಛ ನೀರಿನ ಪೂರೈಕೆ

(ಕ) ಮಕ್ಕಳಿಗೆ ಲಸಿಕೆ ಹಾಕುವುದು

**ಮೂಲಭೂತ ಕರ್ತವ್ಯಗಳು:**

ಪ್ರಜಾಪ್ರಭುತ್ವದಲ್ಲಿ ನಾಗರಿಕರ ಮೇಲೆ ಇಬ್ಬಗೆಯ ಜವಾಬ್ದಾರಿ ಇರುತ್ತದೆ. ಒಂದೆಡೆ ಅವರಿಗೆ ಸಂವಿಧಾನವು ನೀಡಿದ ಹಕ್ಕುಗಳ ವಿಷಯದಲ್ಲಿ ಜಾಗರೂಕರಾಗಿರಬೇಕಾಗುತ್ತದೆ. ಹಕ್ಕುಗಳ ಮೇಲೆ ಅಯೋಗ್ಯ ನಿರ್ಬಂಧಗಳು ಬರಲಾರವು ಎಂಬುದರ ವಿಷಯದಲ್ಲಿ ದಕ್ಷರಾಗಿರಬೇಕಾಗುತ್ತದೆ. ಆದರೆ ಇನ್ನೊಂದೆಡೆ ಅವರಿಗೆ ಕೆಲವು ಕರ್ತವ್ಯ ಮತ್ತು ಜವಾಬ್ದಾರಿಗಳನ್ನೂ ನಿರ್ವಹಿಸಬೇಕಾಗುತ್ತದೆ. ಸರ್ವ ಭಾರತೀಯರ ಕಲ್ಯಾಣವಾಗಬೇಕೆಂದು ಸಂವಿಧಾನವು ಮೂಲಭೂತ ಹಕ್ಕು ಮತ್ತು ನಿರ್ದೇಶಕ ತತ್ವ ಇವುಗಳ ಮೂಲಕ ಅನೇಕ ಏರ್ಪಾಟುಗಳನ್ನು ಮಾಡಿದೆ. ಆದರೆ ನಾಗರಿಕರು ಎಲ್ಲಿಯ ವರೆಗೆ ತಮ್ಮ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸುವುದಿಲ್ಲವೋ ಅಲ್ಲಿಯ ವರೆಗೆ ಸರಕಾರವು ಮಾಡಿದ ಸುಧಾರಣೆಗಳ ಲಾಭವು ಎಲ್ಲರಿಗೂ ದೊರೆಯುವುದಿಲ್ಲ, ಉದಾ. ‘ಸ್ವಚ್ಛಭಾರತ’ ಚಳುವಳಿಯ ಮೂಲಕ ಸರಕಾರವು ಸ್ವಚ್ಛತೆಯ ಅನೇಕ ಉಪಕ್ರಮಗಳನ್ನು ಕೈಕೊಂಡಿತು. ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಅಸ್ವಚ್ಛತೆಯನ್ನು ನಿರ್ಮಾಣಮಾಡುವ ರೂಢಿಯನ್ನು ಜನರು ಬದಲಾಯಿಸಬೇಕು. ಅದು ಅವರ ಕರ್ತವ್ಯವಾಗಿರುತ್ತದೆ. ಸ್ವಚ್ಛತೆಯನ್ನು ಕಾಪಾಡುವ ಜವಾಬ್ದಾರಿಯು ನಾಗರಿಕರ ಮೇಲೆಯೂ ಇರುತ್ತದೆ. ಭಾರತೀಯ ನಾಗರಿಕರಿಗೆ ಅವರ ಜವಾಬ್ದಾರಿಯ ಅರಿವಾಗಬೇಕೆಂದು ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳ ಸಮಾವೇಶ ಮಾಡಲಾಗಿದೆ. ಭಾರತೀಯ ನಾಗರಿಕರ ಕೆಲವು ಮೂಲಭೂತ ಕರ್ತವ್ಯಗಳು ಕೆಳಗಿನಂತಿವೆ:

- ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು.

- ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.
- ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸುಲುವಾಗಿ ಪ್ರಯತ್ನಶೀಲರಾಗಿರಬೇಕು.
- ನಮ್ಮ ದೇಶದ ರಕ್ಷಣೆ ಮಾಡಬೇಕು, ದೇಶದ ಸೇವೆ ಮಾಡಬೇಕು.
- ಎಲ್ಲ ಪ್ರಕಾರದ ಭೇದ-ಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವವನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು. ಸ್ತ್ರೀಯರ ಪ್ರತಿಷ್ಠೆಗೆ ಧಕ್ಕೆ ತರುವಂತಹ ರೂಢಿಯನ್ನು ತ್ಯಜಿಸಬೇಕು.
- ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.
- ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಬೇಕು.
- ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.
- ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.
- ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಕಾರ್ಯಗಳಲ್ಲಿ ಉನ್ನತ ಮಟ್ಟವನ್ನು ತಲುಪುವಂತೆ ಪ್ರಯತ್ನ ಮಾಡಬೇಕು.
- 6 - 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

**ಸೂಚಿಕೆಯನ್ನು ತಯಾರಿಸಿರಿ.**

- ಮನೆಯಲ್ಲಿ ನೀವು ಯಾವ ಹಕ್ಕುಗಳನ್ನು ಬೇಡುತ್ತೀರಿ ಮತ್ತು ಯಾವ ಕರ್ತವ್ಯಗಳನ್ನು ಪಾಲಿಸುತ್ತೀರಿ.
- ಶಾಲೆಯಲ್ಲಿ ನೀವು ಯಾವ ಜವಾಬ್ದಾರಿಯನ್ನು ನಿರ್ವಹಿಸುತ್ತೀರಿ? ಅಲ್ಲಿ ಯಾವ ಜವಾಬ್ದಾರಿ ನಿಮಗೆ ಬೇಡವೆನಿಸುತ್ತದೆ?



ಕಟ್ಟಡಗಳ ಮೇಲೆ ಹೆಸರು ಬರೆಯುತ್ತಿರುವ ಹುಡುಗ



ಲಿಂಬೆಹಣ್ಣು ಮೆಣಸಿನಕಾಯಿ ತೂಗುಹಾಕುವುದು



ಬಸ್ಸನ್ನು ಒಡೆದು ಹಾಕುವುದು



ರಸ್ತೆಯಲ್ಲಿ ಕಸವನ್ನು ಚೆಲ್ಲುವ ಸ್ತ್ರೀ

**ಈ ಚಿತ್ರಗಳಲ್ಲಿ ಯಾವ ಕರ್ತವ್ಯದ ಪಾಲನೆಯಾಗುತ್ತಿಲ್ಲವೆಂದು ನಿಮಗೆನಿಸುತ್ತದೆ?**




ಮೇಲಿನ ಸಂವಾದದಿಂದ ನಮಗೆ ಯಾವ ಕರ್ತವ್ಯಗಳ ಅರಿವಾಗುತ್ತದೆ? ಹಕ್ಕು ಮತ್ತು ಕರ್ತವ್ಯಗಳಲ್ಲಿ ಪರಸ್ಪರ ಸಂಬಂಧವಿರುತ್ತದೆಯೇ? ಕರ್ತವ್ಯಗಳನ್ನು ಪಾಲಿಸುವುದರಿಂದ ಏನು ಆಗುತ್ತದೆ ಎಂದು ನಿಮಗೆ ಅನಿಸುತ್ತದೆ?

**ನಿಮಗೆ ಏನು ಅನಿಸುತ್ತದೆ?**

6 ರಿಂದ 14 ವರ್ಷ ವಯೋಮಾನದಲ್ಲಿಯ ಹುಡುಗ-ಹುಡುಗಿಯರಿಗೆ ಪ್ರಾಥಮಿಕ ಶಿಕ್ಷಣದ ಹಕ್ಕು ದೊರಕಿದೆ. ಈ ವಯೋಮಾನದಲ್ಲಿಯ ಎಲ್ಲ ಹುಡುಗ- ಹುಡುಗಿಯರು ಶಾಲೆಗೆ ಹೋಗುವುದು ಅವಶ್ಯಕವಾಗಿದೆ. ಆದರೂ ಅನೇಕ ಕಾರಣಗಳಿಂದ ಹುಡುಗ-ಹುಡುಗಿಯರು ಶಾಲೆಗೆ ಹೋಗುವುದು ಸಾಧ್ಯವಾಗುವುದಿಲ್ಲ, ತಾಯಿ- ತಂದೆಗಳಿಗೆ ಆರ್ಥಿಕ ಸಹಾಯ ಮಾಡುವುದಕ್ಕಾಗಿ ಅವರಿಗೆ ಕೆಲಸ ಮಾಡುಬೇಕಾಗುತ್ತದೆ. ಇಂಥ ಮಕ್ಕಳನ್ನು ಶಾಲೆಗೆ ತರಲು ಆಗ್ರಹ ಮಾಡುವುದೆಂದರೆ ಅವರ ಮೇಲೆ ಅನ್ಯಾಯ ಮಾಡಿದಂತೆ ಎಂದು ನಿಮಗೆ ಅನಿಸುತ್ತದೆಯೇ?

ಈ ಪಠ್ಯಪುಸ್ತಕದ ಆರಂಭದ ಪ್ರಕರಣಗಳಲ್ಲಿ ನಮಗೆ ಭಾರತೀಯ ಸಂವಿಧಾನದ ಉದ್ದೇಶಗಳ ಮತ್ತು ವೈಶಿಷ್ಟ್ಯಗಳಿಗಿರುವ ಸಂರಕ್ಷಣೆ ಇವುಗಳ ವಿಚಾರವನ್ನೂ ನಾವು ಮಾಡಿದೆವು. ನಮ್ಮ ಮೂಲಭೂತ ಕರ್ತವ್ಯಗಳು ಯಾವವು ಎಂಬುದೂ ನಮಗೆ ತಿಳಿಯಿತು. ಮುಂದಿನ ವರ್ಷ ನಾವು ನಮ್ಮ ದೇಶದಲ್ಲಿಯ ರಾಜ್ಯಾಡಳಿತವನ್ನು ಹೇಗೆ ನಡೆಸಲಾಗುತ್ತದೆ ಎಂಬುದರ ಅಭ್ಯಾಸವನ್ನು ಮಾಡುವವರಿದ್ದೇವೆ.

C1BRD4



## ಅಭ್ಯಾಸ

**1. ಸರಕಾರದ ಮೇಲೆ ಯಾವ ನಿರ್ಬಂಧಗಳಿರುತ್ತವೆಯೆಂಬುದರ ಬಗ್ಗೆ ಕೆಳಗಿನ ಚೌಕಟ್ಟಿನಲ್ಲಿ ಕೋಷ್ಟಕವನ್ನು ತಯಾರಿಸಿರಿ.**

- ..................................................
- ..................................................
- ..................................................

**2. ಕೆಳಗಿನ ವಾಕ್ಯಗಳನ್ನು ಓದಿರಿ ಹಾಗೂ ಹೌದು/ಇಲ್ಲ ಎಂದು ಉತ್ತರ ಬರೆಯಿರಿ.**

(1) ವರ್ತಮಾನ ಪತ್ರದಲ್ಲಿ ಕೊಟ್ಟ ನೌಕರಿಯ ಜಾಹೀರಾತಿನಲ್ಲಿ ಮಹಿಳಾ ಮತ್ತು ಪುರುಷರಿಬ್ಬರಿಗಾಗಿ ಜಾಗೆಗಳು ಇರುತ್ತವೆ .....

(2) ಒಂದೇ ಕಾರ್ಖಾನೆಯಲ್ಲಿ ಒಂದೇ ಕೆಲಸ ಮಾಡುವ ಸ್ತ್ರೀ-ಪುರುಷರಿಗೆ ಬೇರೆ ಬೇರೆ ವೇತನ ದೊರೆಯುತ್ತದೆ. ...

(3) ಸರಕಾರದ ವತಿಯಿಂದ ಆರೋಗ್ಯ ಸುಧಾರಣೆಗಾಗಿ ವಿವಿಧ ಉಪಾಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತದೆ ......

(4) ರಾಷ್ಟ್ರದ ದೃಷ್ಟಿಯಿಂದ ಮಹತ್ವದ ಕಟ್ಟಡ ಮತ್ತು ಸ್ಮಾರಕಗಳ ಸಂರಕ್ಷಣೆ ಮಾಡಬೇಕು ......

**3. ಏಕೆ ಎಂಬುದನ್ನು ಹೇಳಿರಿ.**

(1) ಐತಿಹಾಸಿಕ ಕಟ್ಟಡಗಳು ಮತ್ತು ಸ್ಮಾರಕಗಳ ಸಂರಕ್ಷಣೆ ಮಾಡಬೇಕು.

(2) ವೃದ್ಧರಿಗಾಗಿ ನಿವೃತ್ತಿವೇತನ ಯೋಜನೆಯನ್ನು ನಡೆಸಲಾಗುತ್ತದೆ.

(3) 6 ರಿಂದ 14 ವರ್ಷ ವಯೋಮಾನದಲ್ಲಿಯ ಮಕ್ಕಳಿಗೆ ಶಿಕ್ಷಣದ ಅವಕಾಶವನ್ನು ಉಪಲಬ್ಧಮಾಡಿಕೊಡಲಾಗಿದೆ.

**4. ಯೋಗ್ಯವೋ, ಅಯೋಗ್ಯವೊ ಎಂಬುದನ್ನು ಹೇಳಿರಿ. ಆಯೋಗ್ಯ ವಿಧಾನವನ್ನು ತಿದ್ದಿ ಬರೆಯಿರಿ.**

(1) ರಾಷ್ಟ್ರಧ್ವಜವನ್ನು ನೆಲದ ಮೇಲೆ ಬೀಳಗೊಡದಿರುವುದು.

(2) ರಾಷ್ಟ್ರಗೀತೆಯು ನಡೆದಿರುವಾಗ ಸಾವಧಾನ ಸ್ಥಿತಿಯಲ್ಲಿ ಎದ್ದು ನಿಲ್ಲುವುದು.

(3) ನಮ್ಮ ಐತಿಹಾಸಿಕ ಕಟ್ಟಡಗಳ ಮೇಲೆ ನಮ್ಮ ಹೆಸರನ್ನು ಬರೆಯುವುದು, ಕೊರೆಯುವದು.

(4) ಸಮಾನ ಕೆಲಸಕ್ಕಾಗಿ ಪುರುಷರಿಗಿಂತ ಸ್ತ್ರೀಯರಿಗೆ ಕಡಿಮೆ ವೇತನವನ್ನು ಕೊಡುವುದು.

(5) ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡುವುದು.

**5. ಉತ್ತರ ಬರೆಯೋಣ.**

(1) ಸಂವಿಧಾನದಲ್ಲಿಯ ಕೆಲವು ನಿರ್ದೇಶಕ ತತ್ವಗಳನ್ನು ಪಠ್ಯಪುಸ್ತಕದಲ್ಲಿ ಕೊಡಲಾಗಿದೆ, ಅವು ಯಾವವು?

(2) ಭಾರತೀಯ ಸಂವಿಧಾನದಲ್ಲಿಯ ನಿರ್ದೇಶಕ ತತ್ವಗಳಲ್ಲಿ - ಸರ್ವ ನಾಗರಿಕರಿಗಾಗಿ ಸಮಾನ ನಾಗರಿಕ ಕಾನೂನಿನ ಏರ್ಪಾಟನ್ನು ಏಕೆ ಮಾಡಿರಬೇಕು.

(3) ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳು ಒಂದೇ ನಾಣ್ಯದ ಎರಡು ಬದಿಗಳಾಗಿವೆ, ಎಂದು ಏಕೆ ಹೇಳಲಾಗುತ್ತದೆ?

**6. ಪರಿಸರದ ಪಾಲನೆ ಮತ್ತು ಸಂರಕ್ಷಣೆಯನ್ನು ನಾಗರಿಕರು ಯಾವ ಪ್ರಕಾರದಿಂದ ಮಾಡಬಹುದೆಂಬುದನ್ನು ಉದಾಹರಣೆ ಸಹಿತ ಬರೆಯಿರಿ.**

**ಉಪಕ್ರಮ:**

(1) ಶಿಕ್ಷಣವು ನಮ್ಮ ಹಕ್ಕಾಗಿದೆ, ಆದರೆ ಆ ಸಂದರ್ಭದಲ್ಲಿಯ ನಮ್ಮ ಕರ್ತವ್ಯಗಳು ಯಾವವು ಎಂಬುದರ ಬಗ್ಗೆ ಗುಂಪು ಚರ್ಚೆ ಮಾಡಿರಿ.

(2) ರಾಷ್ಟ್ರದ ದೃಷ್ಟಿಯಿಂದ ಮಹತ್ವದ ಕಟ್ಟಡ ಮತ್ತು ಸ್ಮಾರಕಗಳ ಸಂರಕ್ಷಣೆ ಮಾಡುವ ಸಲುವಾಗಿ ರಾಜ್ಯವು ಉಪಾಯಯೋಜನೆಗಳನ್ನು ಮಾಡಬೇಕು ಎಂಬುನಿರ್ದೇಶಕ ತತ್ವವಿದೆ. ಕೋಟೆಗಳ ಸಂರಕ್ಷಣೆಗಾಗಿ ರಾಜ್ಯವು ಏನು ಮಾಡಿದೆಯೆಂಬುದನ್ನು ಹುಡುಕಿರಿ ಮತ್ತು ಸೂಚಿಕೆಯನ್ನು ತಯಾರಿಸಿರಿ.

(3) ಮಕ್ಕಳ ಆರೋಗ್ಯದ ಸಲುವಾಗಿ ಸರಕಾರವು ಯಾವ ಯೋಜನೆಯನ್ನು ಹಮ್ಮಿಕೊಂಡಿದೆಯೆಂಬುದರ ಮಾಹಿತಿ ಪಡೆಯಿರಿ.

## ಕಾಲಸೂಚಿ - 8ನೆಯ ಶತಮಾನದಿಂದ 19ನೆಯ ಶತಮಾನದ ಪ್ರಮುಖ ಘಟನೆಗಳ ಮಾಹಿತಿ

ಘಟನಾಕ್ರಮಗಳನ್ನು ಕೆಳಗಿನಿಂದ ಮೇಲ್ಗಡೆ ಓದಿರಿ.

**8ನೆಯ ಶತಕ**
- ಮುಹಮ್ಮದ ಬಿನ ಕಾಸಿಮನ ಸಿಂಧಮೇಲೆ ದಾಳಿ
- ರಾಜಪೂತ, ಗಾಹಡವಾಲ, ಪರಮಾರ ಮನೆತನಗಳು
- ಗುರ್ಜರ ಪ್ರತಿಹಾರ ಆಡಳಿತ
- ಪಾಲಮನೆತನಗಳು
- ರಾಷ್ಟ್ರಕೂಟ ಮನೆತನಗಳು
- ಪಾಂಡ್ಯ ಮನೆತನಗಳು

**9ನೆಯ ಶತಕ**
- ಶಿಲಾಹಾರ ಮನೆತನಗಳು
- ಚೋಳ ಮನೆತನಗಳು

**10ನೆಯ ಶತಕ**
- ರಾಜಾ ಜಯಪಾಲ ಸಬಕ್ತಗೀನ ಸಂಘರ್ಷ

**11ನೆಯ ಶತಕ**
- ಗಝನೀಯ ಮಹಮೂದನ ಭಾರತದ ಮೇಲೆದಾಳಿ
- ತುರ್ಕರ ಭಾರತದ ಮೇಲೆ ಆಕ್ರಮಣ
- ಹೊಯ್ಸಳ ಮನೆತನಗಳು

**12ನೆಯ ಶತಕ**
- ಮುಹಮ್ಮದ ಘೋರಿ ಭಾರತದ ಮೇಲೆ ಆಕ್ರಮಣ ಮತ್ತು ಪೃಥ್ವಿರಾಜ ಚೌಹಾನ ಇವರ ಕಾಲಖಂಡದ ಕೊನೆ
- ಯಾದವ ಮನೆತನಗಳು

**13ನೆಯ ಶತಕ**
- ವಾರಕರಿ ಪಂಥ
- ಮಹಾನುಭಾವ ಪಂಥ
- ಖಿಲ್ಜೀ ಮನೆತನದ ರಾಜ್ಯಾಡಳಿತ
- ಬಲ್ಬನ ಸುಲತಾನ ರಝಿಯಾ ಅಲ್ತಿಮಶ ಇವರ ಕಾಲಖಂಡ ಕುತುಬುದ್ದೀನ ಐಬಕದಿಲ್ಲಿಯ ಸುಲತಾನ

**14ನೆಯ ಶತಕ**
- ಬಹಮನಿ ರಾಜ್ಯದ ಸ್ಥಾಪನೆ
- ವಿಜಯನಗರ ರಾಜ್ಯದ ಸ್ಥಾಪನೆ
- ದಿಲ್ಲಿಯ ಮೇಲೆ ತುಘಲಕನ ಆಡಳಿತ ದಿಲ್ಲಿಯಲ್ಲಿಯ ರಾಜಧಾನಿಯನ್ನು ದೇವಗಿರಿಗೆ ಮತ್ತು ದೇವಗಿರಿಂದ ದಿಲ್ಲಿಗೆ ತೈಮೂರಲಿಂಗನು ಭಾರತದ ಮೇಲೆ ದಾಳಿ

**15 ನೆಯ ಶತಕ**
- ಆದಿಲಶಾಹಿ, ನಿಜಾಮಶಾಹಿ, ಕುತುಬಶಾಹಿ, ಬರೀದಶಾಹಿ, ಇಮಾದಶಾಹಿ ಇವರ ರಾಜ್ಯಾಡಳಿತ

**16ನೆಯ ಶತಕ**
- ಸಾಮ್ರಾಟ ಆಕಬರ ಮಹಾರಾಣಾ ಪ್ರತಾಪ, ಚಾಂದಬಿಬಿ, ರಾಣಿದುರ್ಗಾವತಿ ಇವರೊಂದಿಗೆ ಸಂಘರ್ಷ
- ಮುಘಲ ಆಡಳಿತ ಆರಂಭಬಾಬರ ಹುಮಾಯೂನ ಇವರ ಕಾಲಖಂಡ
- ದಿಲ್ಲಿ ಮೇಲಿನ ಸುಲತಾನ ಶಾಹಿಯ ರಾಜ್ಯಾಡಳಿತದ ಕೊನೆ


**17ನೆಯ ಶತಕ**
- ಮಹಾರಾಣಿ ತಾರಾಬಾಯಿ ಇವರ ಕಾಲಖಂಡ
- ಛತ್ರಪತಿ ರಾಜಾರಾಮ ಮಹಾರಾಜ
- ಛತ್ರಪತಿ ಸಂಭಾಜಿ ಮಹಾರಾಜ
- ಛತ್ರಪತಿ ಶಿವಾಜಿ ಮಹಾರಾಜರ ರಾಜ್ಯಾಭಿಷೇಕ
- ಸ್ವರಾಜ್ಯ ಸ್ಥಾಪನೆ
- ಛತ್ರಪತಿ ಶಿವಾಜಿಮಹಾ ರಾಜರ ಕಾಲಖಂಡ
- ಮಹಾರಾಷ್ಟ್ರದಲ್ಲಿ ಬರಗಾಲ
- ಮೊಗಲ-ಶೀಖರ ಸಂಘರ್ಷ
- ಔರಂಗಜೇಬ
- ಶಹಾಜಹಾನ
- ಜಹಾಂಗೀರ


**18 ನೆಯ ಶತಕ**
- ಎರಡನೆಯ ಬಾಜೀರಾವ ಪೇಶ್ವೆಯವರ ಕಾಲಖಂಡ
- ಸ್ವರಾಜ್ಯದಿಂದ ಸಾಮ್ರಾಜ್ಯ
- ಸವಾಯಿ ಮಾಧವರಾವ
- ನಾರಾಯಣರಾವ
- ಹಿರಿಯ ಮಾಧವರಾವ
- ಪಾಣಿಪತ ಹೋರಾಟ
- ನಾನಾಸಾಹೇಬ ಪೇಶ್ವೆ
- ಮರಾಠರಿಂದ ಪೋರ್ತುಗಿಜರ ಪರಾಭವ
- ಮೊದಲನೆಯ ಬಾಜೀರಾವ ಪೇಶ್ವೆಯವರ ಕಾಲಖಂಡ
- ಛತ್ರಪತಿ ಶಾಹು ಮಹಾರಾಜರ ಕಾಲಖಂಡ


**19ನೆಯ ಶತಕ**
- ಇಂಗ್ಲಿಷರಿಂದ ಮರಾಠರ ಪರಾಭವ

# छत्रपती शिवाजी महाराज स्मृतिग्रंथ

- सामान्य रयतेच्या कल्याणासाठी स्थापन केलेल्या स्वराज्य स्थापनेची कथा उलगडणारे पुस्तक.
- छत्रपती शिवाजी महाराजांच्या उत्तुंग कार्य व त्यामागची तेवढीच उत्तुंग व उदात्त भूमिका वाचकांसमोर आणणारे प्रेरणादायी वाचन साहित्य.
- इतिहास वाचनासाठी पूरक असे संदर्भ पुस्तक.








- इतिहास वाचनासाठी पूरक अशी संदर्भ पुस्तके.
- निवडक लेखक, इतिहासकारांचे प्रेरणादायी लेख.

**पुस्तक मागणीसाठी www.ebalbharati.in, www.balbharati.in संकेतस्थळावर भेट द्या.**

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५






ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

इतिहास व नागरिकशास्त्र इ. ७ वी (कन्नड माध्यम)

₹ 40.00